ಕನ್ನಡ ವಿಶ್ವವಿದ್ಯಾಲಯ ಹಂಪಿ

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
[illegible] ಎ.
(ನೋಂದಣಿ ಸಂಖ್ಯೆ: KVMBKS-00163)

ಮಾರ್ಗದರ್ಶಕರು
ಡಾ. [illegible]
ಸಹಾಯಕ ಪ್ರಾಧ್ಯಾಪಕರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯತಾ ಸಂಸ್ಥೆ
ಕಾವ್ಯಮಂಡಲ,
ಬೆಂಗಳೂರು

2017

ಕನ್ನಡ ವಿಶ್ವವಿದ್ಯಾಲಯ ಹಂಪಿ

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಕೃಪ ಎ.
(ನೋಂದಣಿ ಸಂಖ್ಯೆ: **KVMBKS-00163**)

ಮಾರ್ಗದರ್ಶಕರು
ಡಾ. ವಡ್ಡೆ ಹೇಮಲತಾ
ಸಹಾಯಕ ಪ್ರಾಧ್ಯಾಪಕರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯತಾ ಸಂಸ್ಥೆ
ಕಾವ್ಯಮಂಡಲ,
ಬೆಂಗಳೂರು

2017

ಮಾರ್ಗದರ್ಶಕರ ಪ್ರಮಾಣಪತ್ರ

ಕೃಪ ಎ. ಇವರು ನನ್ನ ಮಾರ್ಗದರ್ಶನದಲ್ಲಿ **ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ** ಎಂಬ ಶೀರ್ಷಿಕೆಯಡಿ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಸಾಹಿತ್ಯ ಅಧ್ಯಯನ** ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಶೋಧನಾ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಸ್ಥಳ : ಬೆಂಗಳೂರು

ದಿನಾಂಕ : 29/7/17

ಡಾ. ವಡ್ಡೆ ಹೇಮಲತಾ
ಸಹಾಯಕ ಪ್ರಾಧ್ಯಾಪಕರು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

29/07/17
ಸಂಯೋಜನಾಧಿಕಾರಿ
ಕಾವ್ಯ ಮಂಡಲ
ಬೆಂಗಳೂರು

ಘೋಷಣಾ ಪತ್ರ

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು **ಡಾ. ವಡ್ಡೆ ಹೇಮಲತಾ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟವಾಗಿಲ್ಲ ಎಂದು ದೃಢೀಕರಿಸುತ್ತೇನೆ.

ಸಂಶೋದಕರು

ಕೃಪ ಎ.

ಕೃಪ ಎ.
ಕಾವ್ಯಮಂಡಲ
ಬೆಂಗಳೂರು

ಸ್ಥಳ : ಬೆಂಗಳೂರು
ದಿನಾಂಕ 29/7/2017

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

ಅಧ್ಯಾಯ – 1

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

ಪ್ರವೇಶಿಕೆ :

ಜಗತ್ತಿನಲ್ಲಿ ನಡೆಯುವ, ನಡೆದಿರುವ ಎಲ್ಲಾ ಹೋರಾಟಗಳು ಮಾನವೀಯ ಮೌಲ್ಯಗಳನ್ನು ಕಾಣುವ ಹಂಬಲಕ್ಕಾಗಿಯೇ, ನೊಂದವರು, ಕಳೆದುಕೊಂಡವರು ಬೆಳಕನ್ನು ಕಾಣಲು ನ್ಯಾಯಗಳಿಸಲು, ನಡೆಸುವ ಹೋರಾಟ, ಆ ಹೋರಾಟಕ್ಕೆ ಪುಷ್ಠಿ ನೀಡುವುದು ಸಿದ್ಧಾಂತಗಳು. ಸಿದ್ಧಾಂತಗಳ ಬೆಳವಣಿಗೆಗೆ ಆಧುನಿಕ ಚಿಂತನೆ ಕಾರಣವಾಯಿತು. ಆಧುನಿಕೋತ್ತರ ಚಿಂತನೆಯ ಫಲವಾಗಿ ಬೌದ್ಧಿಕವಾಗಿ ಹಲವಾರು ಶಾಖೆಗಳಲ್ಲಿ ಜ್ಞಾನ ವಿಸ್ತಾರವಾಯಿತು. ಆ ಕಾಲದ ಒತ್ತಡದಂತೆ ಭಾರತದಲ್ಲಿ ಸಾಂಸ್ಕೃತಿಕವಾಗಿ ಬದಲಾವಣೆ ಆಯಿತು. ಜಾಗತೀಕರಣದ ಪರಿಣಾಮವಾಗಿ ಸಾಂಪ್ರದಾಯಿಕ ಮನೋಭಾವ ಮಗ್ಗುಲಾಯಿತು. ಏನೇ ಬದಲಾವಣೆ ಆದರೂ ಪುರುಷ ಪ್ರಧಾನ ವ್ಯವಸ್ಥೆ ಇಂದಿಗೂ ಇದೆ. ಹಿಂದಿನ ಜಾಡು ಹೆಣ್ಣಿನ ಬದುಕಿಗೆ ಕಡಿವಾಣವನ್ನು ಹಾಕುತ್ತಲೇ ವ್ಯವಸ್ಥೆಯಲ್ಲಿ ಅಪೇಕ್ಷಣೀಯವಾಗಿ ಹೆಣ್ಣನ್ನು ನಡೆಸಿಕೊಳ್ಳುತ್ತಲೇ ಬಂದಿದೆ.

ಇದು ಕೇವಲ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾದ ಸಂದರ್ಭವಲ್ಲ. ಸ್ತ್ರೀ ಸಮೂಹದ ಜೀವನ ಕ್ರಮ. ಅವರ ನಿತ್ಯದ ಅನುಭವ ಆಗಿದೆ. ಬದುಕು ಕಟ್ಟಿಕೊಡುವ ಅನುಭವವೇ ಸಾಹಿತ್ಯವಾಗಿದೆ. ಇದೊಂದು ಬೌದ್ಧಿಕ ಕ್ರಿಯೆ. ಇಂತಹ ಅನುಭವ ತೀವ್ರತೆಯಿಂದ ಹುಟ್ಟಿಕೊಂಡ ಸಾಹಿತ್ಯ ಕೇವಲ ಪುಸ್ತಕದಲ್ಲಿ ದಾಖಲೆಯಾದರೆ ಸಾಲದು. ಭಿನ್ನ ಪರಿಸರಗಳ ಸಂದರ್ಭದ ತೌಲನಿಕ ಅಧ್ಯಯನ ಮಹತ್ವದ ಪಾತ್ರವಹಿಸುತ್ತದೆ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಭಿನ್ನತೆಯೊಟ್ಟಿಗೆ ಹೆಣ್ಣಿನ ಬದುಕು ನಡೆದು ಬಂದ ಹಾದಿಯ ಸ್ವಾರಸ್ಯಕರ ಸಂಗತಿಯನ್ನು ಅರಿಯಲು ಭಿನ್ನ ಪರಿಸರಗಳ ಅಧ್ಯಯನ ಅನಿವಾರ್ಯವೆನಿಸುತ್ತದೆ. ಕುತೂಹಲವಾಗಿಯೂ ಇರುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಎರಡನೆಯ ದರ್ಜೆಯ ಪ್ರಜೆಯಾಗಿಯೇ ಬದುಕುತ್ತಿದ್ದಾಳೆ. ಹಾಗೆಯೇ ಕಾಲದಿಂದ ಕಾಲಕ್ಕೆ ಹೆಣ್ಣಿನ ಬದುಕಿನಲ್ಲಿ ಬದಲಾವಣೆ ಕಂಡು ಬಂದರೂ ಸಮಾನತೆ ಸುಲಭವಾಗಿ ದಕ್ಕುವುದಲ್ಲ. ಮೇಲ್ನೋಟಕ್ಕೆ ಕಾಣುವಂತ ಪರಿಸರವಿರುವುದಿಲ್ಲ. ಸಾಮಾಜಿಕ ಸಂದರ್ಭಗಳ ಭಿನ್ನ ಸ್ವರೂಪದ ಅಧ್ಯಯನ ಸವಾಲಿನದಾಗಿರುತ್ತದೆ.

'ಸ್ತ್ರೀ ವಾದ' ಎಂಬ ಚಿಂತನೆಯ ಕಿಡಿ ಹೊತ್ತಿದಕ್ಕೆ ನಿರ್ದಿಷ್ಟ ಸಾಕ್ಷಿಗಳಿಲ್ಲ. ಯಾವುದೇ ಕೊರತೆಯುಂಟಾದರೂ ಆ ಕೊರತೆಯನ್ನು ತುಂಬುವ ಪ್ರಯತ್ನ ನಡೆಯುತ್ತದೆ. ಸ್ತ್ರೀವಾದ ಎಂಬುದು ಸಿದ್ಧಾಂತವಾಗುವುದಕ್ಕೆ ಮುನ್ನ ಹೆಣ್ಣಿಗಿದ್ದ ಸಾಂಸ್ಕೃತಿಕ ಸಂದಿಗ್ಧತೆಗಳು ಕೊರತೆಗಳನ್ನು ನೀಗಿಸಿಕೊಳ್ಳುವುದಕ್ಕೆ ಪ್ರತಿಕ್ರಿಯೆ ನೀಡಬೇಕಾದ ಅನಿವಾರ್ಯತೆ ಇತ್ತು. ಈ ಪ್ರತಿಕ್ರಿಯೆ ನೀಡುವುದು ತೀವ್ರವಾದಾಗ ಸ್ತ್ರೀಪ್ರಜ್ಞೆ ಇಡೀ ಪ್ರಪಂಚವನ್ನು ಆವರಿಸಿತು. ಪ್ರಜ್ಞೆ ಅಕ್ಷರರೂಪ ಪಡೆಯಿತು. ಸ್ತ್ರೀವಾದ ನಿರ್ದಿಷ್ಟ ಪ್ರದೇಶಕ್ಕೆ ಕಾಲಕ್ಕೆ ಸೀಮಿತವಾದುದಲ್ಲ. ಸಮಾನತೆಯನ್ನು ಬಯಸುವುದು ಅದಕ್ಕಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಒದಗಿ ಬಂದದ್ದು ಚಿಂತನೆ ಮಾಡುವಂತಹ ವಿಷಯ. ಸಮಾನತೆ ಎನ್ನುವುದು ಆದಿಮ ಒತ್ತಡ. ಈ ಒತ್ತಡದ ಫಲವಾಗಿ ಹೊರಹೊಮ್ಮುವುದೇ ಸ್ತ್ರೀವಾದ, ಸ್ತ್ರೀತ್ವ, ಸ್ತ್ರೀವಾದಿ ಚಿಂತನೆ.

ಹೆಣ್ಣು ಬಯಸುವುದು ಸಮಾನತೆಯನ್ನು ಎಂಬ ಸತ್ಯ ಜಾಗತಿಕ ಮಟ್ಟದ್ದಾಗಿದೆ. ಸ್ತ್ರೀವಾದ ನಿರ್ದಿಷ್ಟವಾಗಿ ಇಂದೇ ಆರಂಭವಾಯಿತು ಎನ್ನುವುದಕ್ಕಿಂತ ಸಮಾಜದಲ್ಲಿ ಒಂದು ಅಘೋಷಿತ ಮೌನ ಸಂಗ್ರಾಮವಾಗಿ ಬೆಳೆಯುತ್ತಾ ಬಂದಿದೆ. ವಿಮೋಚನೆಯ ಆಶಯ ಎಲ್ಲೆಡೆ ಸಹಜವಾಗಿ ಕಂಡು ಬಂದಿದೆ. ಆದರೆ ವಿಮೋಚನೆ ಪಡೆಯಲು ಸ್ತ್ರೀಯರು ಆರಿಸಿಕೊಂಡ ಮಾರ್ಗಗಳು ಭಿನ್ನ. ಕಳೆದುಕೊಂಡದ್ದನ್ನು ಗಳಿಸುವ ಪ್ರಯತ್ನ ಮಾಡಿದರು. ತಾಳುವಿಕೆಗಿಂತ ತಪವಿಲ್ಲ ಎಂದು ಮೌನವಾಗಿ ಸುಮ್ಮನಿರುವ ಮಹಿಳೆಯರೊಂದೆಡೆ ಇದ್ದರೆ, ಸಮಸ್ಯೆಗಳನ್ನು ನೇರವಾಗಿ ಮುಖಾಮುಖಿಯಾಗುವರು ಒಂದೆಡೆ ಇದ್ದಾರೆ. ಕನ್ನಡದ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯು ಕಳೆದ ನಾಲ್ಕು ದಶಕಗಳಿಂದ ಚರ್ಚಿತವಾಗುತ್ತಿರುವ ವಿಷಯ. ಸ್ತ್ರೀವಾದ ಅಬ್ಬರದ ಹೋರಾಟವಾಗದೆ, ಅಕ್ಷರ ಮಾಧ್ಯಮದ ಮೂಲಕ ತನಗಿರುವ ಮಿತಿಯಲ್ಲೇ ಪ್ರತಿಕ್ರಿಯೆ ಪಡೆದು ಸಾಗುತ್ತಿದೆ. ಸೃಜನಶೀಲ ಸಾಹಿತ್ಯದ ಮೂಲಕವೂ, ಸಾಹಿತ್ಯ ವಿಮರ್ಶೆಯ ಮೂಲಕವೂ ಸೈದ್ಧಾಂತಿಕ ತಿರುವನ್ನು ಪಡೆಯುತ್ತಾ ಸಾಗಿದೆ.

ಸ್ತ್ರೀವಾದ ಎನ್ನುವುದು ಎಂದು ಆರಂಭಗೊಂಡಿತೆಂದು ಹುಡುಕಾಟ ಮಾಡಲು ಹೊರಟರೆ, ಪುರುಷವಾದ ಎಂದು ಆರಂಭಗೊಂಡಿತೋ ಅಂದೇ ಸ್ತ್ರೀವಾದವು ಆರಂಭವಾಯಿತು. ಇದೊಂದು ವಿಶ್ವಾತ್ಮಕವಾಗಿ ವಿಮೋಚನೆ ಬಯಸುವ ಪರಿಸ್ಥಿತಿ ಎನ್ನಬಹುದು. ಇಡೀ ವಿಶ್ವದಲ್ಲಿ ವಿಮೋಚನೆಯ ಆಶಯ ಸಹಜವಾಗಿಯೇ ಇದೆ. ಆದರೆ ಸ್ತ್ರೀವಾದವನ್ನು ಅಭಿವ್ಯಕ್ತಿಸುವ, ಸಿದ್ಧಾಂತವಾಗಿ ರೂಪಿಸುವ ಶೈಲಿಗಳು ಬೇರೆ. ಎಲ್ಲ ಹೋರಾಟಗಳ ಹಿನ್ನೆಲೆಯಲ್ಲೂ ಮನಸ್ಸು ಬಹಳ ಪ್ರಮುಖವಾದ ಕಾರ್ಯ ನಿರ್ವಹಿಸುತ್ತದೆ. ಮನಸ್ಸು ಪೂರ್ವಾಗ್ರಹ ನಿರ್ದೇಶಿಸುವಂತೆ

ನಡೆದುಕೊಳ್ಳುತ್ತದೆ. ಹುಟ್ಟು, ಬೆಳವಣಿಗೆ, ಬಾಲ್ಯ, ಯೌವನ, ಮುಪ್ಪು ಈ ಘಟ್ಟಗಳು ಸಹಜವಾದುದು. ಆ ಸಂದರ್ಭದಲ್ಲಿ ದೈಹಿಕವಾದ ಬದಲಾವಣೆಯೂ ಸಹಜ. ಪರಂಪರೆಯ ಒಪ್ಪಿತ ಸಂಗತಿಗಳ ಜೊತೆಗೆ ಹೆಣ್ಣು ತನಗರಿವಿಲ್ಲದಂತೆಯೇ ಹೆಣ್ಣೆಂಬ ಆರೋಪವನ್ನು ಹೇರಿಕೊಂಡು ನಿರ್ದಿಷ್ಟ ಮಿತಿಯೊಳಗೆ ಬದುಕುತ್ತಿದ್ದಾಳೆ. ದೈಹಿಕವಾಗಿ, ಮಾನಸಿಕವಾಗಿ ಸಂದರ್ಭಕ್ಕನುಗುಣವಾಗಿ ಮಿತಿಯೊಳಗೆ ಬದಲಾಗುತ್ತಿದ್ದಾಳೆ. ಜೈವಿಕವಾಗಿ ಹೆಣ್ಣು ಪುರುಷನಿಗಿಂತ ಕಡಿಮೆ ಬಲ ಉಳ್ಳವಳು ಎಂಬ ಆರೋಪ ಸಂಪೂರ್ಣವಾಗಿ ಒಪ್ಪಿತವಾದುದಲ್ಲ. ಪುರುಷನಿಗಿಂತ ಭಿನ್ನವಾದ ದೇಹ ರಚನೆ ಉಳ್ಳವಳು ಎನ್ನಬಹುದು ಅದಕ್ಕೆ ಸಾಕ್ಷಿಯಾಗಿ ಈ ಆಧುನಿಕ ಯುಗದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ತನ್ನನ್ನು ತಾನು ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ. ಕೌಟುಂಬಿಕ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿರುವುದು ಸವಾಲಿನ ಸಂಗತಿ. ಹೆಣ್ಣಿನ ಶ್ರಮ ವ್ಯರ್ಥವಾದುದಲ್ಲ. ಆಕೆಯ ಶ್ರಮಕ್ಕೂ ಸಾರ್ಥಕತೆಯನ್ನು ಹೊಂದುವ ಶಕ್ತಿ ಇದೆ ಎಂಬುದು ಮನವರಿಕೆಯಾಗಬೇಕಿರುವ ಅಂಶವಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಹಲವು ಭಾರಿ ಸಂದಿಗ್ಧವಾಗಿ ಬದುಕು ಸಾಗಿಸಬೇಕಾಗಿ ಬಂದಾಗ ಮಾನವ ಸಂಬಂಧಗಳಲ್ಲಿ ಅಸಹಜತೆ ಉಂಟಾಗಿ ಹೆಣ್ಣಿನ ಬದುಕಿನ ಅಸಮನತೋಲನಕ್ಕೆ ಕಾರಣವಾಗಿದೆ. ಈ ಅಸಮತೋಲನತೆ ಸಮಾಜದಲ್ಲಿ ಅರಿವಿಗೆ ಬಾರದಷ್ಟು ಬೆರೆತು ಹೋಗಿದೆ. ಅಸಮಾನತೆಯ ಮೂಲ ಜಾಡನ್ನು ಹಿಡಿಯಲಾರದಷ್ಟು ಮುಂದೆ ಸಾಗಿದ್ದೇವೆ. ಮಾನವೀಯ ಮೌಲ್ಯಗಳನ್ನು ಮರೆಯುವ ವಿಕಾರ ಸ್ಥಿತಿಗೂ ತಲುಪುತ್ತೇವೆ. ಮನುಷ್ಯರೆಲ್ಲರೂ ಒಂದೇ ಎನ್ನುವ ಮೂಲತನದ ತತ್ವವನ್ನೇ ಮರೆಸುವಂತೆ ಮಾಡಿರುವ ಹಾದಿ ಬಹು ದೂರದ್ದು. ಸೈದ್ಧಾಂತಿಕವಾಗಿ ಚಿಂತನೆಯ ಕ್ರಮ ಆರಂಭವಾದ ಮೇಲೆ ಹೆಣ್ಣಿನ ಸ್ಥಾನಮಾನ ಅವಳೆದುರಿಸುವ ಅನೇಕ ಸಂದರ್ಭಗಳು ಸಡಿಲಗೊಂಡಿದುದರಿಂದ ಬದಲಾವಣೆ ಕಾಣಲು ಸಾಧ್ಯವಾಯಿತು.

ಪುರುಷ ಲೋಕ ನಿರ್ಮಾಣ ಕಾರ್ಯಗಳನ್ನು ಕೈಗೊಂಡರೆ, ಹೆಣ್ಣು ತನಗೆ ತಾನೇ ಚರಿತ್ರೆಯೊಂದನ್ನು ನಿರ್ಮಿಸಿಕೊಂಡಿದ್ದಾಳೆ. ಕೇವಲ ಅಡುಗೆ ಮನೆಯ ನಾಲ್ಕು ಗೋಡೆಯ ಮಧ್ಯದಲ್ಲಿ ಇದ್ದ ಹೆಣ್ಣು ಅಕ್ಷರ ಜ್ಞಾನ ಪಡೆದು ಸಾಹಿತ್ಯ ರಚನೆಯ ಮೂಲಕ ತನ್ನ ತುಮುಲಗಳನ್ನು, ತಾಕಲಾಟಗಳನ್ನು ವ್ಯಕ್ತ ಪಡಿಸಿದ್ದು ಮಹತ್ವದ ಸಂಗತಿ. ಆಕೆ ಬರೆದದ್ದು ಅಡುಗೆ ಮನೆಯ ಸಾಹಿತ್ಯ, ಜನಪ್ರಿಯ ಸಾಹಿತ್ಯವೆಂಬ ಅವಗಣನೆಗೆ ಒಳಗಾದರೂ, ಆಕೆಯ ಅನುಭವ ಅನನ್ಯ. ಏಕೆಂದರೆ ಪುರುಷ ಲೇಖಕರ ಬರವಣಿಗೆಯಲ್ಲಿ ಹೆಣ್ಣು ಕೇವಲ ಪಡಿಯಚ್ಚಿನ

ಪಾತ್ರಗಳಾಗಿ, ಪುರುಷ ಪ್ರಧಾನತೆಯ ಚೌಕಟ್ಟಿನಲ್ಲಿಯೇ ಮೂಡಿ ಬಂದಿದ್ದಾಳೆ. ಸಾಂಪ್ರದಾಯಿಕ ನೋಟ ಕ್ರಮಗಳೇ ಮುಖ್ಯವಾಗಿ ಮೂಡಿ ಬಂದಿದೆ.

ಸಿಮೋನ್ ದಿ ಬೋವಾಳ ಚಿಂತನೆಯಲ್ಲಿ "ಹೆಣ್ಣು ಒಂದು ಜೈವಿಕ ಘಟಕವೇ ಹೊರತು ಚಾರಿತ್ರಿಕ ಘಟಕವಲ್ಲ. ಅವಳಿಗೆ ತನ್ನದೇ ಆದ ಗತವಿಲ್ಲ. ವರ್ತಮಾನವಾಗಲಿ ಭವಿಷ್ಯವಾಗಲಿ ಇಲ್ಲ. ಅವಳಿಗೆ ಸ್ವಂತ ವ್ಯಕ್ತಿತ್ವ ಇಲ್ಲದ ಕಾರಣ ಅವಳಿಗೆ ತನ್ನದೆ ಆದ ಧರ್ಮ, ಸಂಘಟನೆ, ಭಾಷೆ ಯಾವುದೂ ಇಲ್ಲ ಹಾಗಾಗಿ ಅವಳು ಗಂಡಿಗೆ ಅಧೀನಳಾಗಿದ್ದಾಳೆ". (ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಮಂಗಳ ಪ್ರಿಯದರ್ಶಿನಿ:42) ಅಧೀನತ್ವದ ಸಂದರ್ಭದಲ್ಲಿ ಆಕೆಯ ಬರವಣಿಗೆಗೆ ಅವಕಾಶವಿಲ್ಲ ಆದಾಗ್ಯೂ ಹೆಣ್ಣು ಬರವಣಿಗೆಗೆ ತೊಡಗಿ ಆಕೆಯ ಮನಸಿನ ತುಮುಲಗಳನ್ನು, ಅನುಭವಗಳನ್ನು ಬರವಣಿಗೆಗೆ ತಂದಾಗ ಪುರುಷ ಸಮಾಜ ಅದನ್ನು ಸ್ತ್ರೀ ಬರವಣಿಗೆಯೆಂದೂ, ಹೆಣ್ಣಿನ ಮನಸಿನ ಭಾವನೆಯಷ್ಟೆ ಎಂಬ ಅಸಡ್ಡೆಯನ್ನು ತೋರಿದ್ದುಂಟು. ಮತ್ತೆ ಅದು ಬುದ್ಧಿಗೆ ಸಂಬಂಧಿಸಿದ ಕ್ರಿಯೆ. ಹೆಣ್ಣೊಬ್ಬಳು ಮನುಷ್ಯ ಸಂಬಂಧಗಳಿಗೆ, ಬುದ್ಧಿ ಭಾವಕ್ಕೆ ನೀಡುವ ಪ್ರಾಶಸ್ತ್ಯವನ್ನು ಗಂಡು ನೀಡುವುದಿಲ್ಲ ಎಂಬುದು ಪ್ರಸ್ತುತ ಪ್ರಬಂಧದಲ್ಲಿ ಚರ್ಚೆಯಗುವ ಮಹತ್ವದ ಪ್ರಶ್ನೆಯಾಗಿದೆ.

ಹೆಣ್ಣು ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ಸಂಬಂಧವನ್ನು ತೆಲುಗು ಕವಯಿತ್ರಿ 'ವಿಮಲಾ' ಅವರು ತಮ್ಮ 'ವಂಟಿಲ್ಲು' ಎಂಬ ಕವನದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ.

"ನಮ್ಮ ಅಡುಗೆ ಮನೆ ಶವಪೆಟ್ಟಿಗೆಯಂತೆ ಕಾಣುತ್ತದೆ
ನಮ್ಮಮ್ಮ ಅಲ್ಲಿ ತೇಲಾಡುವ ದೆವ್ವದಂತೆ ಕಾಣುತ್ತಾಳೆ
ನಮ್ಮಮ್ಮ ಅಡುಗೆ ಮನೆಯ ರಾಣಿ
ಆದರೆ ಅಲ್ಲಿರುವ ಪಾತ್ರೆಗಳ ಮೇಲೆ ಕೆತ್ತಿರುವ
ಹೆಸರು ನಮ್ಮಪ್ಪನದು"

(ದಕ್ಷಿಣ ಭಾರತೀಯ ಭಾಷೆಗಳಲ್ಲಿನ ಆಧುನಿಕ ಲೇಖಕಿಯರ ತೌಲನಿಕ ಅಧ್ಯಯನ, ಮೀರಾ ಎಲ್.ಜಿ.:72,ವಿಮಲಾ–ತೆಲುಗು ಕವಿತೆ 'ವಂಟಿಲ್ಲು' ಅನುವಾದದ ಸಾಲುಗಳು)

ಹೀಗೆ ಅಡುಗೆ ಮನೆಯನ್ನು ಸೃಷ್ಟಿಸಿ ಅದರ ರಾಣಿಯಾಗಿ ಮಾತ್ರ ಹೆಣ್ಣನ್ನು ಕಾಣಬಯಸುವ ಪುರುಷ ಸಮಾಜಕ್ಕೆ ಉತ್ತರವಾಗಿ ಹೆಣ್ಣು ಅಡುಗೆ ಮನೆಯಾಚೆಗಿನ ಲೋಕಕ್ಕೆ ತೆರೆದುಕೊಂಡದ್ದು ಪ್ರಮುಖ ಘಟನೆ ಎನ್ನಬಹುದು. ಹಾಗೆಂದ ಮಾತ್ರಕ್ಕೆ ಅಡುಗೆ ಮನೆಯನ್ನು ನಿರಾಕರಿಸಿ ತಿಂಗಳ ವೇತನ ಎಣಿಸಿ ಆಧುನಿಕ ಬದುಕಿಗೆ ತೆರೆದುಕೊಂಡು ಸ್ವತಂತ್ರವಾಗಿ ಬದುಕು ನಡೆಸಿದರೆ ಸ್ತ್ರೀವಾದದ ಉದ್ದೇಶ ಸಾಫಲ್ಯಗೊಳ್ಳುವುದಿಲ್ಲ. ಸ್ವೇಚ್ಛೆಯ ಹೆಸರಿನಲ್ಲಿ ಒಂಟಿಯಾಗಿ

ಬದುಕಿ ತೋರಿಸುತ್ತೇನೆಂಬ ಛಲವೂ ಗೆಲ್ಲುವಲ್ಲ. ಹಾಗಾದರೆ ಸ್ತ್ರೀವಾದ, ಸ್ತ್ರೀವಾದಿ ಚಿಂತನೆಗಳು ಸಾಧಿಸಬೇಕಾದದ್ದು ಏನನ್ನು? ಮಹಿಳಾ ಸಾಹಿತ್ಯ ಅಭಿವ್ಯಕ್ತಿಸಿರುವುದು ಏನನ್ನು? ಮಹಿಳಾ ಸಾಹಿತ್ಯದ ಅಧ್ಯಯನದ ದಿಕ್ಕು ಚಲಿಸುತ್ತಿರುವುದೆತ್ತಕಡೆಗೆ? ಓದಿನ ಮೂಲಕ ಕಂಡುಕೊಳ್ಳುವ ಸತ್ಯವಾದರೂ ಯಾವುದು? ಇಂದು ಹೆಣ್ಣಿನ ಬದುಕಿಗೂ ಸಾಹಿತ್ಯಕ್ಕೂ ನಡುವೆ ಇರುವ ಸಂಬಂಧವಾದರೂ ಎಂಥದ್ದು? ಹೆಣ್ಣು ಬರೆದದ್ದು ಕೇವಲ ಆಕೆಗೆ ನಿಲುಕುವ ಸೀಮಿತ ಅನುಭವವೋ? ಆಕೆಯ ಬದುಕು ಸಾಗಲು ಸಾಧಿಸಬೇಕಾದುದೇನು ಎನ್ನುವ ಪ್ರಶ್ನೆಗಳು ಸಾಹಿತ್ಯದಲ್ಲಿ ಮತ್ತೆ ಮತ್ತೆ ಮೂಡಿ ಬರುತ್ತಿರುವುದಕ್ಕೆ ಕಾರಣವೇನಿದೆ? ಆ ಕಾಲದ ತಾತ್ವಿಕ ಸಂಗತಿಗಳು ಮಹಿಳಾ ಬರವಣಿಗೆಯ ಮೇಲೆ ಉಂಟು ಮಾಡಿರುವ ಪರಿಣಾಮ ಎಂಥದ್ದು? ಎಂದು ಚರ್ಚಿಸಬೇಕಿದೆ.

ಹೀಗೆ ಕಾಡುವ ಪ್ರಶ್ನೆಗಳಿಗೆ ಉತ್ತರವಾಗಿ ಹೆಣ್ಣಿನ ವಿಭಿನ್ನ ಅನುಭವಗಳು ಸಾಹಿತ್ಯದ ಮುಖೇನ ಬಿತ್ತರಗೊಳ್ಳುತ್ತಿದೆ. ಆ ಸಾಹಿತ್ಯವನ್ನು ಕಡೆಗಣಿಸದೆ ಗಂಭೀರವಾಗಿ ಅಭ್ಯಸಿಸಿದಾಗ ಹೊಸ ಹೊಳಹುಗಳು ಕಾಣಬರುತ್ತದೆ. ಸೂಕ್ಷ್ಮ ಸಂವೇದನೆಯೊಟ್ಟಿಗೆ ಭಿನ್ನ ಲೇಖಕಿಯರ ಸಾಹಿತ್ಯಾಧ್ಯಾಯನ ಕುತೂಹಲವಾಗಿಯೂ ಇರುತ್ತದೆಂದು ಅಧ್ಯಯನದ ಮೂಲಕ ಸಾಬೀತು ಮಾಡುವ ಗುರಿಯನ್ನು ಈ ಪ್ರಬಂಧ ಹೊಂದಿರುತ್ತದೆ. ಇಪ್ಪತ್ತನೆಯ ಶತಮಾನದಲ್ಲಿ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದಾಗ ಹೊಸ ಆಲೋಚನಾ ಕ್ರಮಗಳು, ಹೊಸ ಸವಾಲುಗಳು ಎದುರಾದವು. ಹೆಣ್ಣಿನ ಅಸ್ಮಿತೆಯ ಭಿನ್ನ ಆಯಾಮಗಳು ವ್ಯವಸ್ಥೆಯ ಕ್ರೌರ್ಯದೊಟ್ಟಿಗೆ ತನ್ನತನವನ್ನು ಉಳಿಸಿಕೊಳ್ಳಲು ತಾಕಲಾಟ ನಡೆಸಿದವು. ಪುರುಷ ಪ್ರಧಾನ ಮೂಸೆಯಲ್ಲಿ ಸಿದ್ಧವಿದ್ದ ಸಾಮಾಜಿಕ ವ್ಯವಸ್ಥೆಗೆ ಹೆಣ್ಣಿನ ಬದುಕು, ಬದುಕಿನ ಶೈಲಿ, ಮುಖಾಮುಖಿಯಾದವು. ಮಹಿಳಾ ಸಾಹಿತ್ಯಕ್ಕೆ ಹೊಸ ನೋಟ ಕ್ರಮಗಳು ದೊರಕಬೇಕಾದರೆ ಸಂಶೋಧನೆ ಅನಿವಾರ್ಯ. ಇದುವರೆವಿಗೂ ಸ್ತ್ರೀ ಸಂವೇದನೆ ಅನನ್ಯವೆಂಬ ಹುಡುಕಾಟ ನಡೆಯುತ್ತಲೇ ಇದೆಯೆ ಹೊರತು ಪುರುಷ ಸಂವೇದನೆಯಲ್ಲ. ಪುರುಷ ಪ್ರಧಾನ ನಿಲುವುಗಳು ತನಗರಿವಿಲ್ಲದಂತೆಯೇ ಬದುಕಿನಲ್ಲಿ, ಸಾಹಿತ್ಯದಲ್ಲಿ ಆವರಿಸಿಕೊಂಡಿರುವುದಕ್ಕೆ ಸಾಹಿತ್ಯದ ಮುಖೇನ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಹಿಳೆಯರಿಂದಲೇ ಆಯಿತು. ಪುರುಷ ಅಧಿಕಾರದ ಕೇಂದ್ರ ರಚನೆಗೆ ಪ್ರತಿರೋಧ ತೋರಲು ಸಾಹಿತ್ಯ ಮಾಧ್ಯಮವಾಯಿತು.

ಅಧ್ಯಯನದ ಮಹತ್ವ :

ಭಾರತ ಬಹುಭಾಷೆಯ ರಾಷ್ಟ್ರ, ವೈವಿಧ್ಯಮಯವಾದ ಸಂಸ್ಕೃತಿಯಲ್ಲೂ ಐಕ್ಯತೆಯನ್ನು ಕಾಣ ಬಯಸುವ ದೇಶ. ದಕ್ಷಿಣ ಭಾರತದಲ್ಲಿ ತಮಿಳು, ಕನ್ನಡ, ತೆಲುಗು, ಮಲಯಾಳಂ ಪ್ರಮುಖ ಭಾಷೆಗಳು. ಭಿನ್ನ ಭಾಷಿಗರ ಸಂಸ್ಕೃತಿಯನ್ನು ಅರಿಯುವುದಕ್ಕೆ ಸಾಹಿತ್ಯದ ಅನುವಾದ ವಾಹಕವಾಗುತ್ತದೆ. ಭಾರತದಲ್ಲಿ ಬ್ರಿಟಿಷರ ಆಡಳಿತ. ಮಿಶಿನರಿ ಶಾಲೆಗಳ ವಿದ್ಯಾಭ್ಯಾಸ, ನಿಘಂಟು ರಚನೆ, ಹೊಸ ಸಂಶೋಧನೆಗಳು, ಇಂಗ್ಲೀಷ್ ಭಾಷೆಯ ಅಧ್ಯಯನ ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟಿತು. ನಿರ್ದಿಷ್ಟ ಪ್ರದೇಶಕ್ಕೆ ಭೌಗೋಳಿಕ ಗಡಿಗಳಿವೆಯೇ ಹೊರತು ಸಂಸ್ಕೃತಿಗೆ ಯಾವ ಗಡಿಯಿಲ್ಲ. ಆ ಪ್ರದೇಶದ ಅಗತ್ಯಕ್ಕೆ ತಕ್ಕಂತೆ ಆಯಾ ಕಾಲದ ಸಂಸ್ಕೃತಿ ವಿಸ್ತಾರಗೊಳ್ಳುತ್ತದೆ.

ಮನು ಸೃಷ್ಟಿಸಿದ ಪರಂಪರೆಯ ಸ್ತ್ರೀ ಪಾತ್ರಗಳಿಗೆ ಆಧುನಿಕತೆಯ ಒತ್ತಡಗಳು ಹೊಸ ನೋಟಗಳನ್ನು ಕೊಟ್ಟವು. ತನಗರಿಯದೆ ಅಧೀನವಾಗುವ ಸಂದರ್ಭಕ್ಕೆ ವಿರೋಧ, ತನ್ನ ಇರುವಿಕೆಯನ್ನು ಸಾಬೀತು ಮಾಡುವ ಸಂದರ್ಭ ಹೆಣ್ಣಿಗೆ ಅನಿವಾರ್ಯವಾಯಿತು. ಹೆಣ್ಣು ತನಗರಿವಿಲ್ಲದಂತೆಯೇ ಒಪ್ಪಿಕೊಳ್ಳುವ ಪುರುಷಾಧಿಪತ್ಯದ ಮೌಲ್ಯಗಳು ಬಲಿಷ್ಠ ಬೇರುಗಳಾದವು. ಹೆಣ್ಣು ತನ್ನನ್ನೇ ಕೇಂದ್ರವಾಗಿಸಿಕೊಳ್ಳುವ, ವ್ಯಕ್ತಿತ್ವದ ಸ್ಪಷ್ಟ ಗ್ರಹಿಕೆಯ ಅರಿವು ಬರವಣಿಗೆಯಲ್ಲಿ ಒಡಮೂಡಿ ಬಂದಿದ್ದು ಹೇಗೆ ಎಂಬ ಶೋಧ ಮುಖ್ಯವಾಗಿ ಕಂಡು ಬಂದಿತು. ಸ್ವ-ಅನುಭವ, ಮಾನಸಿಕ ಸ್ಥಿತಿ, ವಾಸ್ತವ ಸಮಾಜದ ದುರಾಚಾರಗಳು, ಪುರುಷ ಸ್ವಭಾವಗಳು, ವಿಲಕ್ಷಣ ಮನಸ್ಥಿತಿ ಸಾಹಿತ್ಯ ಮುಖೇನ ಚರ್ಚೆಯಾಗ ತೊಡಗಿದ್ದು ಮಹತ್ವದ ಸಂಗತಿ.

ಅಧ್ಯಯನದ ವಿಧಾನ :

ಪ್ರಸ್ತುತ ಪಿಎಚ್.ಡಿ ಅಧ್ಯಯನಕ್ಕೆ ಕನ್ನಡದ ಕತೆಗಾರ್ತಿ ವೀಣಾ ಶಾಂತೇಶ್ವರ ಮತ್ತು ಮಲಯಾಳಂನ ಕಮಲಾದಾಸ್‌ರವರ ಕಥನ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ತೌಲನಿಕ ಅಧ್ಯಯನ ವಿಧಾನವನ್ನು ಅನುಸರಿಸಲಾಗುತ್ತದೆ. ಇದು ಕೇವಲ ಇಬ್ಬರು ಲೇಖಕಿಯರ ಸಾಹಿತ್ಯದ ಅಧ್ಯಯನ ಮಾತ್ರವಲ್ಲ— ಮಹಿಳಾ ಸಾಹಿತ್ಯ, ಎರಡು ಸಾಂಸ್ಕೃತಿಕ ಸಂದರ್ಭಗಳ ಅಧ್ಯಯನವಾಗಿದೆ. ಸಾಹಿತ್ಯವನ್ನು ವಿಶ್ಲೇಷಣಾತ್ಮಕ ವಿಧಾನದಲ್ಲಿ, ಸ್ತ್ರೀವಾದಿ ಅಧ್ಯಯನಕ್ಕೊಳಪಡಿಸಿ ನೋಡುವಾಗ, ಅಧ್ಯಯನಕ್ಕೆ ಪೂರಕವಾಗುವಂತೆ ಕೆಲವು ಪ್ರಾಥಮಿಕ ವಿಧಾನಗಳನ್ನು ಅನುಸರಿಸುತ್ತಿದ್ದೇನೆ.

ಅ. ತೌಲನಿಕ ಅಧ್ಯಯನ ವಿಧಾನ.

ಆ. ವಿಶ್ಲೇಷಣಾತ್ಮಕ ವಿಧಾನ.

ಇ. ಸ್ತ್ರೀವಾದಿ ಅಧ್ಯಯನ ವಿಧಾನ.

ಈ. ಪರಿಕಲ್ಪನಾತ್ಮಕ ವಿಧಾನ.

ಉ. ಸಂದರ್ಶನಾತ್ಮಕ ವಿಧಾನ.

ಅ. ತೌಲನಿಕ ಅಧ್ಯಯನ ವಿಧಾನ :

ಪ್ರಬಂಧದ ಉದ್ದೇಶ ಇಬ್ಬರು ಲೇಖಕಿಯರ ಸಾಹಿತ್ಯದ ಅಧ್ಯಯನ. ಆದ್ದರಿಂದ ವೀಣಾಶಾಂತೇಶ್ವರ ಮತ್ತು ಕಮಲಾದಾಸ್‌ರವರ ಸಾಹಿತ್ಯವನ್ನು ತೌಲನಿಕವಾಗಿಟ್ಟು ನೋಡುವ ಸಾಮ್ಯತೆ, ಭಿನ್ನತೆಯನ್ನು ಪರಿಶೀಲಿಸುವ ಮೂಲಕ ಈ ವಿಧಾನವನ್ನು ಬಳಸಿಕೊಳ್ಳುತ್ತೇನೆ.

ಆ. ವಿಶ್ಲೇಷಣಾತ್ಮಕ ವಿಧಾನ :

ಪಠ್ಯಗಳ ವಿಶ್ಲೇಷಣೆಯ ಮೂಲಕ ಇಬ್ಬರು ಲೇಖಕಿಯರ ಸಾಹಿತ್ಯದ ಸೂಕ್ಷ್ಮ ಅಧ್ಯಯನ ನಡೆಸಲಾಗುವುದು.

ಇ. ಸ್ತ್ರೀವಾದಿ ಅಧ್ಯಯನ ವಿಧಾನ :

ಇಬ್ಬರು ಲೇಖಕಿಯರು ಪುರುಷ ಲೋಕದ ಕ್ರೌರ್ಯ, ಪಿತೃಪ್ರಧಾನತೆಯ ಸಂದರ್ಭಕ್ಕೆ ಪ್ರತಿಕ್ರಿಯೆ ನೀಡುವಂತೆ ಬರೆದಿರುವುದರಿಂದ ಸಹಜವಾಗಿಯೇ ಸ್ತ್ರೀವಾದಿ ಅಧ್ಯಯನ ವಿಧಾನವನ್ನು ಅನುಸರಿಸಲಾಗುವುದು.

ಈ. ಪರಿಕಲ್ಪನಾತ್ಮಕ ವಿಧಾನ :

ಆಕರ ಕೇಂದ್ರಿತ ಅಧ್ಯಯನದ ಸಂದರ್ಭದಲ್ಲಿ ಪರಿಕಲ್ಪನೆಗಳನ್ನು ಆಧರಿಸಿ ಆ ಮೂಲಕ ಪಠ್ಯದಲ್ಲಿನ ಸಾಧ್ಯತೆಗಳನ್ನು ಚರ್ಚಿಸಲಾಗುವುದು.

ಉ. ಸಂದರ್ಶನಾತ್ಮಕ ವಿಧಾನ :

ಅಧ್ಯಯನಕ್ಕೆ ಪೂರಕವಾಗುವಂತೆ ಮುಂದುವರೆದ ಭಾಗವಾಗಿ ಸಂದರ್ಶನವನ್ನು ಬಳಸಿಕೊಳ್ಳಲಾಗುವುದು.

ಈ ಮೇಲಿನ ನೆಲೆಗಳಲ್ಲಿ ಸಾಹಿತ್ಯದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಎರಡು ಭಿನ್ನ ಪರಿಸರದ ಲೇಖಕಿಯರನ್ನು ತೌಲನಿಕವಾಗಿ ಅಧ್ಯಯನ ನಡೆಸುವಾಗ ಬೇರೆ ಬೇರೆ ರಾಜ್ಯಗಳಲ್ಲಿರುವ ಮಹಿಳೆಯರ ಸ್ಥಿತಿಗತಿಯ ಬಗೆಗೆ ಅರಿವುಂಟಾಗುತ್ತದೆ. ಭಾರತೀಯ ಮಹಿಳೆಯರ ಸಂದರ್ಭಗಳು ಏಕರೀತಿಯವೆ. ಭಿನ್ನವಾಗಿರುವವೇ, ಎಂಬ ಅಂಶವೂ ಬೆಳಕಿಗೆ

ಬರುತ್ತದೆ. ಹೆಣ್ಣು-ಗಂಡಿನ ನಡುವೆ ಮೂಡಿರುವ ಅಸಮಾನತೆಗಳ ಬಗ್ಗೆಯೂ ಅಧ್ಯಯನ ನಡೆಸುವ ಆಶಯ ಹೊಂದಿದೆ. ಈ ರೀತಿಯ ಅಧ್ಯಯನ ಎರಡು ಭಿನ್ನ ಭಾಷೆಗಳ ಕತೆಗಾರ್ತಿಯರ ಧೋರಣೆ, ನಿಲುವು ಅವರೆದುರಿಸುತ್ತಿರುವ ಸವಾಲುಗಳ ವಿವೇಚನೆಯಾಗಿದೆ. ಸ್ಥಾಪಿತ ಮೌಲ್ಯಗಳನ್ನು ಶೋಧಿಸುವ, ಸ್ತ್ರೀವಾದಿ ಅಧ್ಯಯನದ ಹಿನ್ನೆಲೆಯಿಂದ ಲೇಖಕಿಯರು ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನು ಹೇಗೆ ದುಡಿಸಿಕೊಂಡಿದ್ದಾರೆ ಎಂಬುದರ ಅಧ್ಯಯನ ಇದಾಗಿದೆ.

1. ಇಬ್ಬರು ಲೇಖಕಿಯರಿಂದ ರಚನೆಯಾಗಿರುವ ಆಯ್ದ ಕಥನ ಸಾಹಿತ್ಯದ ಸೂಕ್ಷ್ಮ ಓದು.

2. ಈಗಾಗಲೇ ನಡೆದಿರುವ ವಿಮರ್ಶೆಗಳು, ಚರ್ಚೆಗಳನ್ನು ನನ್ನ ಅಧ್ಯಯನದಲ್ಲಿ ಪೂರಕವಾಗುವಂತೆ ಬಳಸಿಕೊಳ್ಳುವುದು.

3. ಅಗತ್ಯ ಬಿದ್ದ ಕಡೆ ಸಂಪನ್ಮೂಲ ವ್ಯಕ್ತಿಗಳ ಜೊತೆ ಚರ್ಚೆ ನಡೆಸಿ ಪ್ರಬಂಧಕ್ಕೆ ಪೂರಕವಾಗುವಂತಹ ಮಾಹಿತಿಯನ್ನು ಪಡೆಯುವುದು.

4. ಸ್ತ್ರೀಯ ಅಸ್ಮಿತೆಯ ವಿಷಯವನ್ನು ಇಬ್ಬರು ಲೇಖಕಿಯರು ನಿರ್ವಹಿಸಿರುವ ಬಗೆ ಹೇಗೆ ಎಂಬ ವಿಚಾರ.

5. ಪುರುಷ ಪ್ರಧಾನ ಸಮಾಜ ಮತ್ತು ಅಧಿಕಾರ ರಚನೆಗಳು ಮತ್ತು ಪ್ರತಿರೋಧದ ಕ್ರಮಗಳ ಅಧ್ಯಯನ.

ಹೆಣ್ಣಿನ ಸ್ವಪ್ರಜ್ಞೆಯ ಅರಿವು ಕಥನ ಪ್ರಕಾರದಲ್ಲಿ ಮೂಡಿ ಬಂದಿರುವುದಾದರೂ ಹೇಗೆ? ಹೆಣ್ಣಿನ ಪ್ರಜ್ಞಾಪ್ರವಾಹ, ತಂತ್ರ ಸಾಗಿರಿವುದಾದರೂ ಎತ್ತ ಕಡೆ, ಕಾವ್ಯ ಪ್ರಕಾರಕ್ಕಿಂತ ಕಥನ ಪ್ರಕಾರ ಪರಿಣಾಮಕಾರಿಯಾಗಿ ಮೂಡಿ ಬಂದಿರುವುದು ಹೇಗೆ, ಕಥನ ಸಾಹಿತ್ಯದ ಪ್ರಾಮುಖ್ಯತೆ, ಕಥನ ಸಾಹಿತ್ಯದ ಪ್ರಸ್ತುತತೆಯ ಬಗೆಗಿನ ಚರ್ಚೆ ನಡೆಸುವ ಉದ್ದೇಶ ಹೊಂದಿದ್ದೇನೆ. ಕನ್ನಡ ಮತ್ತು ಮಲಯಾಳಂ ಸಾಂಸ್ಕೃತಿಕ ವಾತಾವರಣ ಹಾಗೂ ಸ್ತ್ರೀ ಬರವಣಿಗೆಗಳ ಅಂತರ್ ಸಂಬಂಧವನ್ನು, ಇಬ್ಬರು ಕತೆಗಾರ್ತಿಯ ವಿಭಿನ್ನ ಆಯಾಮಗಳನ್ನು ತೌಲನಿಕವಾಗಿ ಅಧ್ಯಯನ ನಡೆಸಲಾಗುತ್ತದೆ. ಕಥನ ಸಾಹಿತ್ಯದಲ್ಲಿ ಮೂಡಿ ಬಂದಿರುವ ಸ್ತ್ರೀಪರ ಖಾಳಜಿಯನ್ನು ಅಭ್ಯಸಿಸಲಾಗುತ್ತದೆ.

ಇಬ್ಬರು ಭಾರತೀಯ ಕತೆಗಾರ್ತಿಯರು ಏಕಕಾಲದಲ್ಲಿ ಭಿನ್ನ ಪರಿಸರದಲ್ಲಿ ಹೆಣ್ಣಿನ ಅಸ್ಮಿತೆಯನ್ನು ಯಾವ ರೀತಿಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಕುಟುಂಬ-ದಾಂಪತ್ಯಕ್ಕೆ ಇಬ್ಬರು ಲೇಖಕಿಯರು ಕೊಟ್ಟಿರುವ ರೂಪ, ಹೆಣ್ಣಿನ ಕುಟುಂಬದ ಕಲ್ಪನೆ, ಆಧುನಿಕತೆಯ ಪ್ರಶ್ನೆ,

ಜೀವನ ವಿಧಾನಗಳು ಹೆಣ್ಣಿನ ಬದುಕಿನ ಮೇಲೆ ಉಂಟು ಮಾಡಿರುವ ಪರಿಣಾಮಗಳು ಎಂಥದ್ದು, ಸಮಾಜದೊಟ್ಟಿಗೆ ಹೆಣ್ಣು ಹೊಂದಿರುವ ಸಂಬಂಧ, ಪಿತೃ ಪ್ರಧಾನ ಸಂಸ್ಕೃತಿ ಹೆಣ್ಣಿನ ಬದುಕನ್ನು ನಿಯಂತ್ರಿಸುತ್ತಿರುವ ಬಗೆ, ಸಾಮಾಜಿಕ ಒತ್ತಡಗಳನ್ನು ಹೆಣ್ಣು ಸಾಹಿತ್ಯದ ಮೂಲಕ ನಿಬಾಯಿಸಲು ಹೊರಟಿರುವ ಕ್ರಮ ಎಂಥದ್ದು ಎಂಬುದನ್ನು, ಇಬ್ಬರು ಕತೆಗಾರ್ತಿಯರನ್ನು ತೌಲನಿಕವಾಗಿ ಅಭ್ಯಸಿಸುವ ಉದ್ದೇಶ ಹೊಂದಿದೆ.

ಅಧ್ಯಯನದ ಉದ್ದೇಶ :

ಭಾರತದ ಪ್ರಮುಖ ಭಾಷೆಗಳಲ್ಲಿ ಕನ್ನಡ ಮತ್ತು ಮಲಯಾಳಂ ಪ್ರಮುಖವಾದವು. ಕರ್ನಾಟಕ ಮತ್ತು ಕೇರಳ ನೆರೆಹೊರೆ ರಾಜ್ಯಗಳು. ಈ ನೆರೆಹೊರೆ ರಾಜ್ಯಗಳಲ್ಲಿ ಏಕಕಾಲ ಘಟ್ಟದಲ್ಲಿ ಬರೆದ ಇಬ್ಬರು ಕತೆಗಾರ್ತಿಯರ ಸಾಹಿತ್ಯದ ವೈಶಿಷ್ಟ್ಯತೆಯನ್ನು ಗುರತಿಸುವ ಆಶಯವನ್ನು ಹೊಂದಿದ್ದೇನೆ. ಕನ್ನಡದ ಸಂದರ್ಭದಲ್ಲಿ ಬರೆದ ವೀಣಾಶಾಂತೇಶ್ವರ ಅವರನ್ನು, ಮಲಯಾಳಂನ ಕಮಲಾದಾಸ್‌ರವರ ಕಥನ ಸಾಹಿತ್ಯವನ್ನು ಸಂಶೋಧನೆಗೆ ಪರಿಗಣಿಸಿದ್ದೇನೆ.

ಕಥನ ಪ್ರಕಾರವು ಗಂಭೀರವಾಗಿ ನೆಲೆಗೊಂಡಿದ್ದು ಇಪ್ಪತ್ತನೆಯ ಶತಮಾನದಲ್ಲಿ, ಅತಿ ಕಡಿಮೆ ಕಾಲಾವಕಾಶದಲ್ಲಿ ಬಹುಮುಖ್ಯ ಪ್ರಕಾರವಾಗಿ ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡು ಬಂದಿದೆ. ಬದುಕಿನ ಅಮೂರ್ತ ಚಿಂತನೆಗಳನ್ನು ಕಾವ್ಯ ಕಟ್ಟಿಕೊಟ್ಟರೆ ವ್ಯಕ್ತಿತ್ವದ ಸ್ಪಷ್ಟ ಗ್ರಹಿಕೆ ಮನೋವ್ಯಾಪಾರಗಳು ಕಥನ ಪ್ರಕಾರದಿಂದ ಅರಿವಂತಾಯಿತು. ವೈವಿಧ್ಯಮಯ ಆಲೋಚನೆಯನ್ನು ಸರಳವಾಗಿ, ಸಮರ್ಥವಾಗಿ ಮುಟ್ಟಿಸುವಲ್ಲಿ ಕಥನ ಸಾಹಿತ್ಯಕ್ಕೆ ಅಗ್ರಸ್ಥಾನ. ತಮ್ಮ ಮನದ ತುಡಿತ ಆಲೋಚನೆಗಳನ್ನು ಕೊರತೆ ಸಂತೋಷಗಳನ್ನು ಅಭಿವ್ಯಕ್ತಿಸುವಲ್ಲಿ ಅರಿವು ಆಯ್ಕೆ ಮಾಡಿಕೊಂಡಿದ್ದು ಕಥನ ಪ್ರಕಾರವನ್ನೇ ಎನ್ನಬಹುದು.

ನವ್ಯ ಸಾಹಿತ್ಯ ಘಟ್ಟದಲ್ಲಿ ಲೇಖಕರು ಸಾಹಿತ್ಯದ ಮೂಲಕ ನಿತ್ಯ ಬದುಕಿನ ಅನಾವರಣ ಮಾಡಿದರು. ಜೀವನಾನುಭವವನ್ನೇ ಸಾಹಿತ್ಯವಾಗಿಸಿದರು. ನವ್ಯ ಸಾಹಿತ್ಯ ಸಂದರ್ಭದಲ್ಲಿ ಪುರುಷ ಪ್ರಧಾನ ಸಮಾಜದಲ್ಲಿ ನಿಂತು ಬದುಕಿನ ಮೌಲ್ಯಗಳನ್ನು ಪ್ರಶ್ನೆ ಮಾಡುವ, ಚರ್ಚೆ ನಡೆಸುವಂತ ಸಾಹಿತ್ಯವನ್ನು ವೀಣಾ ಬರೆದರು. ಸ್ವತಃ ವೀಣಾ ಅವರೆ ನವ್ಯ ಸಂದರ್ಭ ಮತ್ತು ಅವರ ಬರವಣಿಗೆಯ ಬಗ್ಗೆ ಹೇಳುವ ಮಾತುಗಳು ಇಂತಿವೆ. “ಸ್ವಾತಂತ್ರ್ಯೋತ್ತರ ಕಾಲದ ಸಂವೇದನಾಶೀಲ ಮನಸ್ಸು ಸ್ವತಂತ್ರ ಭಾರತದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವಾಸ್ತವದ ನೆಲೆಗಳನ್ನು ಶೋಧಿಸುವ ಪ್ರಯತ್ನ ನವ್ಯ ಸಾಹಿತ್ಯದ ಮುಖ್ಯ ಗುಣಲಕ್ಷಣಗಳಲ್ಲೊಂದಾಗಿತ್ತು. ಜೊತೆಗೆ ಮನುಷ್ಯನ ವ್ಯಕ್ತಿತ್ವದ ಆಳದಲ್ಲಿ ನಡೆಯುವ ಮಾನಸಿಕ ತಾಕಲಾಟಗಳನ್ನು ಆತನ ಆಂತರಿಕ

ದ್ವಂದ್ವಗಳನ್ನು, ವಿಶ್ಲೇಷಿಸುವ ಪ್ರಯತ್ನವೂ ಅಷ್ಟೇ ಮುಖ್ಯವಾಗಿತ್ತು ಹಾಗೆ ನೋಡಿದರೆ 'ನವ್ಯತೆ'ಯೆಂಬ ಅಂಶ ಪ್ರತಿಯೊಂದು ಘಟ್ಟದ ಸಾಹಿತ್ಯದಲ್ಲೂ ಇದ್ದೇ ಇರುತ್ತದೆ. ಆದರೆ ನಾನು ಎಂದೂ ನವ್ಯತೆಯ ಆಶಯಗಳನ್ನಾಗಲೀ ಧೋರಣೆಗಳನ್ನಾಗಲೀ ಪ್ರಜ್ಞಾಪೂರ್ವಕವಾಗಿ ಎತ್ತಿ ಹಿಡಿಯುವ ಉದ್ದೇಶದಿಂದ ಬರೆಯಲಿಲ್ಲ. ನನಗೆ ಪ್ರಾಮಾಣಿಕವಾಗಿ ಅನಿಸಿದ್ದನ್ನು ಬರೆದೆ ಅಷ್ಟೇ. ನನ್ನ ಅನಿಸಿಕೆಗಳು ನವ್ಯದ ಆಶಯಗಳಿಗೆ ಅಷ್ಟು ಆಪ್ತವಾಗಿ ಹೊಂದಿಕೊಂಡಿದ್ದು ಆ ಕಾಲಘಟ್ಟದ ಸಾಹಿತ್ಯದ ಸ್ಪಿರಿಟ್ನ ಪ್ರಭಾವವೇ ಇರಬೇಕು". (ವೀಣಾಶಾಂತೇಶ್ವರ ವಾಚಿಕೆ, ಸಂ.ಆಶಾದೇವಿ ಎಂ.ಎಸ್.:135) ನವ್ಯದ ಕಟ್ಟನ್ನು ಮೀರುವ ಸಹಜ ಸಂದರ್ಭಕ್ಕೆ ಉದಾಹರಣೆಯಾಗಿ ಮೇಲಿನ ಮಾತನ್ನು ಗ್ರಹಿಸಬಹುದು.

ವೀಣಾರವರು ಭಾವನೆಗಳನ್ನು ಸ್ಪಂದಿಸಲು ವಿಚಾರವನ್ನು ಪ್ರಕಟಿಸಲು ಅವರಿಗಿದ್ದ ಪೂರ್ಣ ಸ್ವಾತಂತ್ರ್ಯ ಸಹಾಯಕವಾಯಿತು. ಅನಿಷ್ಟ ಸಂಪ್ರದಾಯವನ್ನು ಎದುರಿಸಲು ಹಿನ್ನೆಲೆಯೊಂದು ಸಿದ್ಧವಾಗಿತ್ತು. ಮೂಲತಃ ಇಂಗ್ಲಿಷ್ ಸಾಹಿತ್ಯ ಅಭ್ಯಸಿಸಿದ ವೀಣಾರವರಿಗೆ ಇಬ್ಸನ್, ಎಲಿಯಟ್, ಸಾರ್ತೆ, ಕಮು ಪ್ರಭಾವ ಬೀರಿದ್ದರು. ಜೊತೆಗೆ ಮರಾಠಿ ಭಾಷೆಯ ಜ್ಞಾನ, ಮಾಸ್ತಿ, ನಿರಂಜನ, ಅಡಿಗರು, ದೇಸಾಯಿಯವರ ಪ್ರಭಾವವು ವೀಣಾರವರ ಬರವಣಿಗೆಯ ಮೇಲೆ ಪ್ರಭಾವಬೀರಿತ್ತು. ಅನುಭವ ತೀವ್ರತೆಯಲ್ಲಿ ಕಥೆಗಳನ್ನು ಬರೆಯುತ್ತಾ, ಪಾತ್ರಗಳಿಗೆ ಜೀವ ತುಂಬುವ ಸಹಜ ಚಿತ್ರಣವನ್ನು ಕಥನ ಸಾಹಿತ್ಯದ ಮೂಲಕ ತರುವ ಪ್ರಯತ್ನ ಮಾಡಿದರು. ಹೆಂಗಸರು ಎದುರಿಸಬೇಕಾದ ಸಾಮಾಜಿಕ, ವೈಯಕ್ತಿಕ, ವೈಚಾರಿಕ ಮತ್ತು ಮಾನಸಿಕ ಸಮಸ್ಯೆಗಳು ಕತೆಯ ವಸ್ತುವಾಗಿರುತ್ತಿತ್ತು. ಇದರೊಟ್ಟಿಗೆ ವ್ಯವಸ್ಥೆಯಲ್ಲಿನ ಅವಸ್ಥೆಯನ್ನು ಪ್ರಶ್ನಿಸುವ ದೋಷಗಳನ್ನು ಹಿಡಿದೆತ್ತಿ ತೋರಿಸುವ ಅನಿಷ್ಟ ಸಂಪ್ರದಾಯಕ್ಕೆ ಪ್ರತಿರೋಧ ತೋರುವ ಪಾತ್ರಗಳು ಮೂಡಿದವು. ಜೀವನದ ಅಗಾಧ ಅರಿವು ಸ್ಥಿತ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾ ಹೋದಂತ ಅರಿವಿನ ವಿಸ್ತಾರ ಬರವಣಿಗೆಗೆ ಹೊಸತನವನ್ನು ತಂದಿತ್ತು. ಹೀಗೆ ಅನುಭವ ಸ್ವಪ್ರಜ್ಞೆಯ ಅರಿವು ಸಾಹಿತ್ಯದ ಮುಖೇನ ವಿಸ್ತೃತವಾಗುತ್ತಾ ಸಾಗಿತು.

ಕಮಲಾದಾಸ್, ಮಾಧವಿಕುಟ್ಟಿ, ಸುರೈಯಾ ಎಂಬ ಹೆಸರುಗಳಿಂದ ವಿಖ್ಯಾತಿ ಪಡೆದ ಇವರು ಮಲಯಾಳ ಸಾಹಿತ್ಯದ ಅಪರೂಪದ ಪ್ರತಿಭೆ ಮಾತ್ರವಲ್ಲ, ಇಡೀ ಸ್ತ್ರೀ ಸಮೂಹದ ದನಿ, ನಾಲಪ್ಪಾಟ್ ಬಾಲಮಣಿಯಮ್ಮ ಮತ್ತು ಎಂ.ವಿ. ನಾಯರರ ಮಗಳಾಗಿ ಪುನ್ನಯೂರ್ಕುಳದಲ್ಲಿ ಜನಿಸಿದರು. ಇಂಗ್ಲಿಷ್ ಮತ್ತು ಮಲಯಾಳಂ ಭಾಷೆಯಲ್ಲಿ ಬರೆಯಬಲ್ಲ ಭಾರತೀಯ ಕವಯಿತ್ರಿ, ಕಾದಂಬರಿಗಾರ್ತಿ, ಕಮಲಾದಾಸ್‌ರವರ ಮಾತಿನಲ್ಲೇ ಹೇಳುವುದಾದರೆ "ಲೇಖಕಿಯು ಬೆಳಕು

ತುಂಬಿದ ಗಾಜಿನ ಪಾತ್ರೆಯಲ್ಲಿನ ಮೀನಿನಂತೆ. ಏನನ್ನೂ ಮುಚ್ಚಿಟ್ಟುಕೊಳ್ಳಲಾರಳು". (ನನ್ನ ಕಥೆ, ಅನು:ಪೂರ್ಣಿಮಾ ಭಟ್:184) ಎಂದು ಹೇಳುತ್ತಾ ಸಮಾಜದಲ್ಲಿನ ಸ್ತ್ರೀಯೊಬ್ಬಳ ವೈಯಕ್ತಿಕ, ಸಾಮಾಜಿಕ, ರಾಜಕೀಯ ಒತ್ತಡಗಳಿಗೆ ಸಾಹಿತ್ಯ ರೂಪವನ್ನು ಕಮಲಾದಾಸ್‌ರವರು ಕೊಟ್ಟರು.

ವಸಾಹತುಶಾಹಿಯ ಪ್ರಭಾವ, ಕೇರಳ ಸಂಸ್ಕೃತಿ, ಜೀವನಾನುಭವ ಪಾಠಗಳು, ಅಜ್ಜಿ ನೀಡಿದ ಪ್ರೀತಿ, ಅಪಾರ ಜೀವನಾನುಭವಗಳು ಕಮಲಾದಾಸ್‌ರ ಸಾಹಿತ್ಯದ ಮೇಲಾಗಿದೆ. ಸ್ತ್ರೀಯೊಬ್ಬಳ ಆಸೆಯನ್ನು ಗಾಢವಾಗಿ ಗ್ರಹಿಸಬಲ್ಲ ಶಕ್ತಿ ಆಕೆಯಲ್ಲಿತ್ತು. ಆರಂಭದಿಂದಲೂ ಮಾತೃ ವಂಶಾವಳಿ ಪದ್ಧತಿಯಲ್ಲಿ ಇದ್ದ ಕೇರಳ ಸಮಾಜ ಇಪ್ಪತ್ತನೇ ಶತಮಾನದಿಂದೀಚೆಗೆ ಪಿತೃ ಪ್ರಧಾನತೆಯ ಕಡೆ ಹೊರಳಿತು. ಮಲಯಾಳಂ ಸಂಸ್ಕೃತಿ, ಬೆಂಗಾಳಿ ಭಾಷೆ, ವಸಾಹತುಶಾಹಿ ಸಂದರ್ಭಗಳು ಬಾಲ್ಯದಲ್ಲಿ ಕಮಲಾದಾಸ್‌ರವರ ಬೌದ್ಧಿಕ ಬೆಳವಣಿಗೆಗೆ ಸಹಾಯಕವಾಯಿತು. ಹೆಣ್ಣಿನ ಅಂತರಂಗವನ್ನು ಎಳೆಎಳೆಯಾಗಿ ಸಾಹಿತ್ಯದ ಮೂಲಕ ಅನಾವರಣಗೊಳಿಸುವ ಪ್ರಯತ್ನ ಮಾಡಿದ್ದಾರೆ. ಹದಿಹರೆಯದ ದಿನಗಳಿಂದ ಹಿಡಿದು ಬದುಕಿನ ಅನೇಕ ಘಟ್ಟಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ.

ಸ್ತ್ರೀಪುರುಷ ಸಂಬಂಧದ ಸುವಾಸನೆ, ಮನುಷ್ಯ ಪ್ರಕೃತಿಯ ಗಂಧ ಅನಶ್ವರ ಪ್ರಜ್ಞೆ, ಕಾಲ್ಪನಿಕ ಪ್ರೇಮವನ್ನು ಕಮಲಾದಾಸ್‌ರವರು ವಿಶಿಷ್ಟವಾಗಿ ಚಿತ್ರಿಸುತ್ತಾರೆ. ಪ್ರೇಮ ಮನುಷ್ಯನ ಬದುಕಿನ ಅಮೂಲ್ಯ ಅನುಭವ ಎಂದರು. ಕಮಲಾದಾಸ್‌ರವರ ತಾಯಿಯಾದ ಬಾಲಮಣಿ ಅಮ್ಮ ಸ್ವತಃ ಕವಯತ್ರಿ, ಲಲಿತಾಂಬಿಕಾ ಅಂತರ್ಜನ, ಕೆ. ಸರಸ್ವತಿ ಅಮ್ಮ, ರಾಜಲಕ್ಷ್ಮಿ, ಸುಗತ ಕುಮಾರಿ, ಸಾ.ರಾ. ಜೋಸೆಫ್, ಗ್ರೇಸಿ, ಚಂದ್ರಮತಿ ಇವರ ನಡುವೆ ಸಾಹಿತ್ಯ ರಚಿಸಿದರೂ ತಮ್ಮದೇ ಆದ ಅನನ್ಯತೆಯನ್ನು ಕಮಲಾದಾಸ್ ಉಳಿಸಿಕೊಂಡಿದ್ದಾರೆ. ಬಷೀರ್, ಎಂ.ಟಿ. ವಾಸುದೇವ ನಾಯರ್, ನೀಲಕಂಠ ಪಿಳ್ಳೈ, ಟಿ.ಪದ್ಮನಾಭನ್, ಕುರೂಪ್, ವೆಟ್ಟೂರ್‌ರಂತಹ ಪುರುಷ ಲೇಖಕರ ಮಧ್ಯೆ ಬರವಣಿಗೆಯ ಮೂಲಕ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದ್ದಾರೆ.

ಉಭಯ ರಾಜ್ಯಗಳ ಸಂಸ್ಕೃತಿ ಸಂವರ್ಧನೆಯ ಆಶಯದೊಟ್ಟಿಗೆ ಇಬ್ಬರು ಲೇಖಕಿಯರನ್ನು ಹೋಲಿಸುವ ಮೂಲಕ ಸಾಂಸ್ಕೃತಿಕ ಸಂಗತಿಗಳ ಅನಾವರಣ ಸಾಧ್ಯ. ಇಬ್ಬರು ಲೇಖಕಿಯರ ಸಾಹಿತ್ಯದಲ್ಲಿ ಸ್ತ್ರೀ ಪುರುಷ ಆದರ್ಶ ಸಂಬಂಧದ ಮೂಲಕ ಮಾನವೀಕರಣದ ಅನುಸಂಧಾನ ಸಾಧ್ಯವೇ ಎಂಬುದರ ಹುಟುಕಾಟವಾಗಬೇಕಿದೆ. ಪಿತೃಪ್ರಧಾನತೆಯ ಪ್ರಭುತ್ವದಲ್ಲಿ, ಸಂಪ್ರದಾಯದ ಹೆಸರಿನಲ್ಲಿ ಹೆಣ್ಣು ನಲುಗಿ ಹೋದದ್ದನ್ನು ಮೌನವಾಗಿ ಪ್ರಶ್ನಿಸುವುದು, ಬದುಕಿನಲ್ಲಿ

ಹೆಣ್ಣು ಗಂಡಿನಿಂದ ಬಯಸುವುದೇನು? ಒಡನಾಟ ರೂಪಿ ಪ್ರೀತಿಯನ್ನೋ? ಮಾನಸಿಕ ಸಖ್ಯವನ್ನೋ? ಎಂಬ ಮುಖ್ಯ ಪ್ರಶ್ನೆಗಳೇಳುತ್ತವೆ.

ಕಮಲಾದಾಸ್ ರಾಧಾಕೃಷ್ಣರನ್ನು ತಮ್ಮ ಬರವಣಿಗೆಯಲ್ಲಿ ಸದಾ ಪ್ರಸ್ತಾಪಿಸುತ್ತಾರೆ. ಕೃಷ್ಣನನ್ನು ಕಮಲಾದಾಸ್‌ರವರು 'ನನ್ನ ಕೃಷ್ಣ' ಎಂದು ಕನವರಿಸಿದ್ದು ಎಷ್ಟೋ ಭಾರಿ. ನಾನು ಕೃಷ್ಣನ ದಾಸಿ ಎಂದು ರಾಧೆ ಎಂದು ಪ್ರಸ್ತಾಪಿಸಿರುವುದು ಸಹೃದಯರಿಗೂ ತಿಳಿದಿದೆ. ತಮ್ಮ ಸಾಹಿತ್ಯದ ಮೂಲಕ ಪ್ರೇಮದ ಹಂಬಲವನ್ನು, ಪ್ರೀತಿಯ ಉದಾರತೆಯನ್ನು, ಮಾನವೀಯತೆಯನ್ನು ಮಿಡಿಯುವಂತೆ ಮಾಡಿದವರು ಕಮಲಾದಾಸ್. ಹೀಗೆ ಭಾರತದ ಇಬ್ಬರು ಪ್ರಮುಖ ಕತೆಗಾರ್ತಿಯರ ಭಿನ್ನ ಆಯಾಮಗಳು ಕಥನ ಸಾಹಿತ್ಯದಲ್ಲಿ ಮೂಡಿ ಬಂದಿರುವುದರ ಹುಡುಕಾಟವೇ ಈ ಪ್ರಬಂಧದ ಮುಖ್ಯ ಆಶಯವಾಗಿದೆ.

ಅಧ್ಯಯನದ ವ್ಯಾಪ್ತಿ :

ವೀಣಾಶಾಂತೇಶ್ವರ ಅವರ ಸಮಗ್ರ ಕಥಾ ಸಂಕಲನವನ್ನು ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ. ಇಷ್ಟೆಲ್ಲ ಅಧ್ಯಯನ ನಡೆಯಬೇಕಾದರೆ ನನ್ನ ಮುಂದಿರುವ ದೊಡ್ಡ ಸವಾಲೆಂದರೆ ಮಲಯಾಳಂ ಭಾಷೆಯ ಜ್ಞಾನದ ಕೊರತೆ, ಅನುವಾದದ ಮೂಲಕ ಬೇಕಾದ ಕಮಲಾದಾಸ್‌ರವರ ಕಥನಗಳನ್ನು ಬಳಸಿಕೊಳ್ಳಲಾಗಿದೆ. ಕಮಲಾದಾಸ್‌ರವರ ಆಯ್ದಕಥೆಗಳನ್ನು ಪರಿಕಲ್ಪನಾಧಾರಿತವಾಗಿ ಅಭ್ಯಸಿಸಲಾಗುತ್ತದೆ. ಕಮಲಾದಾಸ್‌ರವರ ಕಥನ ಸಾಹಿತ್ಯವನ್ನು ಅನುವಾದದ ಮಿತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ವೀಣಾಶಾಂತೇಶ್ವರ ಅವರ ಆತ್ಮಕಥನ ಇಲ್ಲದಿರುವುದರಿಂದ ಆತ್ಮಕಥಾನಕ ಅಂಶಗಳನ್ನು ಅಧ್ಯಯನಕ್ಕೆ ಪರಿಗಣಿಸಲಾಗಿದೆ. ಕಮಲಾದಾಸ್‌ರವರ ಹದಿಹರೆಯದ ಕಾಲದ ಆತ್ಮಕಥನವಾದ 'ಬಾಲ್ಯ ಕಾಲದ ಸ್ಮರಣೆಗಳು', 'ನೀರ್‌ಮಾದಳ ಹೂ ಬಿಟ್ಟ ಕಾಲ' ಮತ್ತು 'ನನ್ನ ಕತೆ'ಯನ್ನು ಅಧ್ಯಯನಕ್ಕೆ ಪ್ರಾತಿನಿಧಿಕವಾಗಿ ಪರಿಗಣಿಸಿದ್ದೇನೆ. ಆ ಮೂಲಕ ಲೇಖಕಿಯ ಸ್ವಗತದ ಆತ್ಮಕಥಾನಕ ಅಂಶಗಳು, ಬರವಣಿಗೆಗೆ ಹಿನ್ನೆಲೆಯಾಗುವ ಬದುಕು, ಬರಹಕ್ಕಿರುವ ಅಂತರ್ ಸಂಬಂಧವನ್ನು ಅರಿಯುವ ಉದ್ದೇಶವನ್ನು ಹೊಂದಿದ್ದೇನೆ. ಇವುಗಳನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಂಡಿದ್ದೇನೆ. ಕಮಲಾದಾಸ್‌ರವರ ಕನ್ನಡ ಅನುವಾದಿತ 3 ಆತ್ಮಕಥನಗಳನ್ನು ಪರಿಗಣಿಸಿದ್ದೇನೆ. ವೀಣಾಶಾಂತೇಶ್ವರ ಅವರ 'ನಡೆದದ್ದೆ ದಾರಿ' ಸಮಗ್ರ ಕಥಾ ಗುಚ್ಛವನ್ನು ಮೂಲ ಆಕರವಾಗಿ ಬಳಸಿದ್ದೇನೆ.

ಅಧ್ಯಾಯ ೨

ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ – 2

ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

"ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಹಿತ್ಯದ ತೌಲನಿಕ ಅಧ್ಯಯನ" ಈ ಶೀರ್ಷಿಕೆಯ ಅಧ್ಯಯನ ನಡೆಸುವ ಸಂದರ್ಭದ ಪ್ರಸ್ತುತ ಇಬ್ಬರು ಲೇಖಕಿಯರ ಕಥನ ಸಾಹಿತ್ಯ ಕುರಿತ ತಾತ್ವಿಕ ಚರ್ಚೆಯನ್ನು ಈ ಅಧ್ಯಾಯದಲ್ಲಿ ನಡೆಸಿದ್ದೇನೆ. ನವ್ಯ ಸಂದರ್ಭದ ಬಹುಮುಖ್ಯ ಮಹಿಳಾ ಧನಿಯಾಗಿ ವೀಣಾಶಾಂತೇಶ್ವರ ಅವರ ಬರಹಗಳು ಕನ್ನಡ ಲೋಕಕ್ಕೆ ಪರಿಚಿತವಾಗಿದೆ. ಜೊತೆಗೆ ಹಲವು ಪ್ರಮುಖ ವಿಮರ್ಶಕರು ಇವರ ಕಥನ ಸಾಹಿತ್ಯವನ್ನು ಭಿನ್ನ ನೆಲೆಗಳಲ್ಲಿ ಗ್ರಹಿಸಿರುವ ಕ್ರಮವನ್ನು ಈ ಮೂಲಕ ಗಮನಿಸಲಾಗಿದೆ. ವೀಣಾ ಕಥನ ಸಾಹಿತ್ಯದ ಹಲವು ನೆಲೆಗಳನ್ನು ಈ ಹಂತದಲ್ಲಿ ಚರ್ಚಿಸುವ ಮೂಲಕ ಹೊಸ ಆಶಯವು ಭಿನ್ನ ನೋಟ ಕ್ರಮವು ಪ್ರಸ್ತುತ ಪ್ರಬಂಧದ ಅಧ್ಯಯನ ಫಲಿತದ ಮಂಡನೆಯನ್ನು ನಡೆಸುವ ಸಂದರ್ಭಕ್ಕೆ ಪೂರಕವಾಗುತ್ತದೆ. ಹೊಸ ನಿಲುವಿನ ಗ್ರಹಿಕೆಗೆ ಸಹಾಯಕವಾಗುತ್ತದೆ.

ಈಗಾಗಲೇ ಪ್ರಸ್ತಾಪಿಸಿರುವಂತೆ 'ಕಮಲಾದಾಸ್' ಕನ್ನಡಕ್ಕೆ ಅನುವಾದದ ಮೂಲಕ ಪರಿಚಿತರು. ಪಾರ್ವತಿ ಐತಾಳ್, ಡಾ. ಪೂರ್ಣಿಮಾ ಭಟ್, ಕೆ.ಕೆ. ಗಂಗಾಧರನ್ ಹಾಗೂ ಡಾ. ಅಶೋಕ್‌ಕುಮಾರ್ ಇವರುಗಳು ಕಮಲಾದಾಸ್‌ರವರ ಕಥನವನ್ನು ಮಲಯಾಳಂನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಲಂಕೇಶ್ ಪ್ರಕಾಶನ, ಹೇಮಂತ ಪ್ರಕಾಶನದ ಮನೋಹರ ಗ್ರಂಥಮಾಲ ಮೂಲಕ ಇವರ ಸಾಹಿತ್ಯ ಪ್ರಕಟಗೊಂಡಿವೆ. ಅಂತರ್ಜಾಲದಲ್ಲಿ ಕಮಲಾದಾಸ್‌ರವರ ಪರಿಚಯಾತ್ಮಕ ಮಾಹಿತಿ ವಿಕಿಪಿಡಿಯಾದಲ್ಲಿ ಲಭ್ಯವಿದೆ. ಹಲವು ವಿಮರ್ಶಾತ್ಮಕ ಬರಹಗಳನ್ನು ಸಹ ಜಾಲತಾಣದಲ್ಲಿ ಕಾಣಲು ಸಾಧ್ಯವಿದೆ. ಆ ಬರಹಗಳ ಆಶಯದ ತಾತ್ವಿಕ ಚರ್ಚೆಯನ್ನು ಮುಂದೆ ನಡೆಸಲಾಗಿದೆ.

ಶಾಂತಾ ಇಮ್ರಾಪುರ ಅವರು ವೀಣಾಶಾಂತೇಶ್ವರ ಅಭಿನಂದನ ಗ್ರಂಥ 'ನಿರ್ದಿಗಂತ' ಸಂಪಟು–1, 2 ಸಂಪಾದಿಸಿದ್ದಾರೆ. ವೀಣಾರವರ ವ್ಯಕ್ತಿತ್ವ ಪರಿಚಯ, ಸಮಗ್ರ ಸಾಹಿತ್ಯ ಸಮಾಲೋಚನೆ ಈ ಗ್ರಂಥದ ಮುಖ್ಯ ಆಶಯವಾಗಿದೆ. 'ಸಮಗ್ರಕಥಾ ಸಾಹಿತ್ಯದ ವಿಭಿನ್ನ ಓದುಗಳು; ಈ ಶೀರ್ಷಿಕೆಯಡಿಯಲ್ಲಿ ಎಚ್.ಎಸ್. ರಾಘವೇಂದ್ರರಾವ್, ಕುಂ. ವೀರಭದ್ರಪ್ಪ, ರವಿ ಉಪಾಧ್ಯ, ಡಾ. ವಿನಯ, ಎಮ್.ಎಸ್. ಆಶಾದೇವಿ, ಬಸು ಬೇವಿನಗಿಡದ ಇವರು

ಲೇಖನಗಳನ್ನು ಬರೆದಿದ್ದಾರೆ. 'ಕಥನ ಸಾಹಿತ್ಯ ಸಮಾಲೋಚನೆ' ಎಂಬ ಶೀರ್ಷಿಕೆಯಡಿಯಲ್ಲಿ ಡಾ.ಎಂ. ಉಷಾ, ಪ್ರೀತಿ ಶುಭಚಂದ್ರ, ಡಾ. ಕೇಶವ ಶರ್ಮ, ಎಲ್.ಜಿ. ಮೀರಾ, ಡಾ. ಜಿ.ಎಂ. ಹೆಗಡೆ ಇವರುಗಳು ವೀಣಾಶಾಂತೇಶ್ವರ ಅವರ ಕಥನ ಸಾಹಿತ್ಯ ಸಮಾಲೋಚನೆ ನಡೆಸಿದ್ದಾರೆ. ಜಿ.ಎಸ್. ಆಮೂರ ಅವರ ಮುನ್ನುಡಿ, ಶಾಂತಿನಾಥ ದೇಸಾಯಿ, ಎಲ್.ಸಿ. ಸುಮಿತ್ರಾ ಅವರ ಆಶಯಗಳು 'ನಡದದ್ದೆ ದಾರಿ' ಕಥಾ ಸಂಕಲನದಲ್ಲಿ ದಾಖಲಾಗಿದೆ.

ನಿರ್ಭಿಡೆಯ ಲೇಖಕಿಯಾಗಿಯೇ ಬೆಳೆದು ವಿವಾದಗಳ ಬೆನ್ನ ಹಿಂದೆಯೇ ಕಟ್ಟಿಕೊಂಡು ಬದುಕನ್ನು ಮುಗಿಸಿದ ಸಾಹಿತಿ ಡಾ. ಕಮಲಾದಾಸ್ ಸುರೈಯಾ ಎನ್ನುತ್ತಾರೆ ಅನುವಾದಕರಾದ ಕೆ.ಕೆ. ಗಂಗಾಧರನ್‌ರವರು. ಖ್ಯಾತ ಕತೆಗಾರರಾದ ವೈಕಂಮಹಮ್ಮದ್ ಬಷೀರ್, ತಗಳಿ ಶಿವಶಂಕರ್ ಪಿಳ್ಳೈ, ಎಂ.ಟಿ. ವಾಸುದೇವ ನಾಯರ್, ಟಿ. ಪದ್ಮನಾಭನ್‌ರವರು ಬರೆಯುತ್ತಿದ್ದ ಕಾಲದಲ್ಲಿ ಕಮಲಾದಾಸ್ ಬರವಣಿಗೆ ಮಾಡಿದ್ದಾರೆ. ಅವರ 'ಎಂಡೆಕತ' (ನನ್ನ ಕತೆ) ಅತಿ ಪ್ರಸಿದ್ಧ ಆತ್ಮಕತೆ, ಬಹುಚರ್ಚೆಗೊಳಗಾದ ಕತೆ. 'ಕನ್‌ಪೆಷನಲ್ ಪೊಯಿಟ್ರಿ' ಹೊಸ ಮಾದರಿಯ ಕವಿತಾ ಪ್ರಯೋಗ ಎನ್ನಲಾಗಿದೆ. ಮಲಯಾಳಂನಲ್ಲಿ 245 ಕತೆಗಳು, 102 ಕವಿತೆಗಳು, 11 ಕಾದಂಬರಿಗಳು, 2 ನಾಟಕಗಳು, 5 ಆತ್ಮಕತೆಗಳು, 2 ಪ್ರವಾಸ ಕಥನಗಳು, 123 ಲೇಖನಗಳು, 8 ಟಿಪ್ಪಣಿಗಳನ್ನು ಬರೆಯುವ ಮೂಲಕ ಮಲಯಾಳಂ ಸಾಹಿತ್ಯ ಲೋಕಕ್ಕೆ ಪರಿಚಿತರು.

ವೀಣಾಶಾಂತೇಶ್ವರ ಕಥನ ಸಾಹಿತ್ಯ ಕುರಿತು ಪ್ರೊ. ಕೇಶವಶರ್ಮರ ಅಭಿಪ್ರಾಯಗಳು ಹೀಗಿವೆ. "ಮಹಿಳೆಯರನ್ನು ಒಂದು ಪ್ರತ್ಯೇಕ; ವ್ಯಕ್ತಿವಾದಿ ಘಟಕವಾಗಿ ನೋಡುವ ಕ್ರಮ. ಇದರಲ್ಲಿ ಹೆಣ್ಣಿನ ಅಸ್ತಿತ್ವವು ವ್ಯಕ್ತಿಕೇಂದ್ರಿತವಾಗಿರುತ್ತದೆ. ಸ್ವಯಂ ಕೇಂದ್ರಿತ ಮೌಲ್ಯಗಳು ಮುಖ್ಯವಾಗಿರುತ್ತದೆ. ವ್ಯಕ್ತಿಯಾಗಿ ಹೆಣ್ಣಿಗೆ ಪ್ರತ್ಯೇಕ ಅಸ್ತಿತ್ವವಿದೆ. ಸ್ವಾತಂತ್ರ್ಯವೂ ವ್ಯಕ್ತಿಕೇಂದ್ರಿತವಾಗಿರಬೇಕೆಂಬುದು ಈ ಮಾದರಿಯ ಚಿಂತನೆಯಲ್ಲಿ ಹೆಚ್ಚು ಮುಖ್ಯ. ವೀಣಾಶಾಂತೇಶ್ವರ, ವೈದೇಹಿ ಮೊದಲಾದವರ ಕತೆಗಳಲ್ಲಿ ಈ ಹಿನ್ನೆಲೆಯನ್ನು ಗಮನಿಸಬಹುದು". (ಕೇಶವ ಶರ್ಮಾ ಸ್ತ್ರೀವಾದಿ ಚಿಂತನೆಗಳು:631) ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಹೆಣ್ಣು ಬರೆಯಬಲ್ಲಳು ಎಂಬುದನ್ನು ನವ್ಯ ಸಂದರ್ಭದಲ್ಲಿ ವೀಣಾರವರು ಸಾಧಿಸಿದ್ದಾರೆ, ಎಂಬುದು ಈ ಮೂಲಕ ಸ್ಪಷ್ಟವಾಗುತ್ತದೆ. ಕನ್ನಡದ ಸಂದರ್ಭದಲ್ಲಿ ಹೆಣ್ಣಿನ ವ್ಯಕ್ತಿಕೇಂದ್ರಿತ ಚಿಂತನೆಯ ಮೊದಲ ಹೆಜ್ಜೆಯೆಂದು ಗುರುತಿಸಲಾಗಿದೆ.

ವೀಣಾರವರ 'ಬಿಡುಗಡೆ' ಕತೆಯನ್ನು ಸ್ತ್ರೀತ್ವದ ಹೊಸ ವ್ಯಾಖ್ಯಾನ ಎಂದು ಪ್ರಸ್ತಾಪಿಸುತ್ತಾ 'ಕನ್ನಡದ ನವ್ಯಕತೆಗಾರ್ತಿ' ಎಂದು ಬೇರೆ ಯಾವ ಲೇಖಕಿಯನ್ನು ಗುರುತಿಸ ಬರುವುದಿಲ್ಲ ಎನ್ನುತ್ತಾರೆ. ಮುಕ್ತಾಯವೇ ಮಹತ್ವದ್ದಾದ ಕತೆ ಬಿಡುಗಡೆ. ಸರೋಜಳ ಗಂಡನ ಸಾವು

ಜೀವನದಲ್ಲಿ ಕಂಡ ಬಿಡುಗಡೆಯಾಗುತ್ತದೆ. ಈ ಬಿಡುಗಡೆಯೇ ಮಹತ್ವಪೂರ್ಣವಾದುದು. ರವಿ ಉಪಾಧ್ಯ 'ಬಿಡುಗಡೆ' ಕತೆಯನ್ನು ಕುರಿತು ಹೀಗೆ ಹೇಳುತ್ತಾರೆ. "ಬಿಡುಗಡೆ ಒಂದು ಮಹತ್ವದ ಕಥೆ. ವೀಣಾ ಅವರ ಬಹುತೇಕ ಕತೆಗಳ ಆಶಯವೇ ಇದರಲ್ಲಿ ಘನೀಭೂತಗೊಂಡಿದೆ." (ನಿರ್ದಿಗಂತ:179) ನಾಲ್ಕು ದಶಕಗಳ ನಿರಂತರ ಬರವಣಿಗೆಯ ಸಾರವು ಈ ಕತೆಯಲ್ಲಿ ಸ್ಪಷ್ಟವಾಗಿ ಬಿಡುಗಡೆಹೊಂದಿದೆ. ಇದೊಂದು ಬಹುಚರ್ಚಿತ ಕತೆ "ವೀಣಾ ಅವರ ಮನೋವಿಶ್ಲೇಷಣಾ ವೈಖರಿ ಅಂದರೆ ವಿಭಿನ್ನ ಸ್ವಭಾವದ ಸೂಕ್ಷ್ಮಾತಿಸೂಕ್ಷ್ಮಗಳನ್ನು, ಅದರ ವೈಪರೀತ್ಯಗಳನ್ನು, ಪಟ್ಟು ಬಿಡದ ಸಮಜಾಯಿಷಿಯನ್ನು ಹೇರುವ ಮೂಲಕ ವ್ಯಕ್ತ-ಅವ್ಯಕ್ತ, ಆನಂದ ಪಡುವುದನ್ನು ದೌರ್ಜನ್ಯ ಕೂಪದಿಂದ ಕೊನೆಗೂ ಎದ್ದು ಬರುವ ಛಲವನ್ನು ಅಭಿವ್ಯಕ್ತಿಸುವಲ್ಲಿ ಯಾವ ವರ್ಗದ ಓದುಗನೇ ಆಗಲಿ ಬೆರಳು ಕಚ್ಚುವ ಪರಿಯನ್ನು ಇಲ್ಲಿ ಕಾಣುವಂತಾಗಿದೆ. ಸಮಕಾಲೀನ ಸಂದರ್ಭದಲ್ಲಿ ಉದ್ಯೋಗಸ್ಥ ಕೆಳಮಧ್ಯಮ ವರ್ಗದ ಮಹಿಳೆಯರು ಹೆಚ್ಚು ದೈಹಿಕ, ಮಾನಸಿಕ ಒತ್ತಡಗಳಿಂದ ಬಳಲುವ ಬದುಕಿನ ಏಕತಾನತೆಯಲ್ಲಿ ತಳಮಳಿಸುವ ಚಿತ್ರಗಳಿಗೆ ಈ ಕಥೆ ಕನ್ನಡಿ ಹಿಡಿಯುತ್ತದೆ". (ನಿರ್ದಿಗಂತ:182) ಸಾಮಾಜಿಕ ಜೀವನದಲ್ಲಾದ ಬದಲಾವಣೆ ಹೆಣ್ಣಿಗೆ ಮತ್ತೂ ಒತ್ತಡವನ್ನು ತಂದಿದೆ. ಸಮತೋಲನ ಸ್ಥಿತಿ ಕಾಯ್ದುಕೊಳ್ಳುವಲ್ಲಿ ಹೆಣ್ಣಿನ ತಲ್ಲಣಗಳನ್ನು ವೀಣಾರವರ ಕತೆಗಳು ವಸ್ತುವಾಗಿಸಿಕೊಂಡಿದೆ.

'ಬಿಡುಗಡೆ' ಕತೆಯ ಕುರಿತು ಆಶಾದೇವಿಯವರು ಹೀಗೆ ಪ್ರಸ್ತಾಪಿಸುತ್ತಾರೆ. "ಈ ಕಥೆಯ ಸರೋಜನಿಯ ಬದುಕಿನ ವಿವರಗಳನ್ನು, ಹೆಣ್ಣಿನ ಒಳಲೋಕದನಿಪರಗಳೆಂದು ಗುರುತಿಸಬೇಕೆ? ಗಂಡು ಹೆಣ್ಣಿನ ಸಂಬಂಧದ ಅಧಿಕಾರ ಸಂಬಂಧ ತೀವ್ರ ಪ್ರಶ್ನೆಗೊಳಗಾಗುತ್ತಿರುವ ಈ ಕಾಲಘಟ್ಟದಲ್ಲಿ ವಿದ್ಯಾಭ್ಯಾಸ, ಆರ್ಥಿಕ ಸ್ವಾತಂತ್ರ್ಯ ಹಾಗೂ ಉದ್ಯೋಗಗಳನ್ನು ಮಹಿಳೆ ಮತ್ತು ದಲಿತರ ಮಟ್ಟಿಗೆ ಬಿಡುಗಡೆಯ ಮೂರು ದಾರಿಗಳೆಂದು ತಿಳಿಯಲಾಗಿದೆ. ಆ ಮೂರು ಇದ್ದರೂ ಹಿಂದೆಂದಿಗಿಂತಲೂ ಆಳವಾಗಿ ಕೌಟುಂಬಿಕ ವಲಯದಲ್ಲಿ ಉಡುಗಿ ಹೋಗುವ ಹೋಗುತ್ತಿರುವ ಲಕ್ಷಾಂತರ ಹೆಣ್ಣುಮಕ್ಕಳ ಪ್ರತಿನಿಧಿ ಸರೋಜಿನಿ". (ನಿರ್ದಿಗಂತ:208) ಇದು ಕೇವಲ ಸರೋಜಾಳ ಪ್ರಶ್ನೆ ಅಲ್ಲ ಇಡೀ ಸ್ತ್ರೀ ಸಮುದಾಯದ ಪ್ರಶ್ನೆಯಾಗಿ ಇಂದಿಗೂ ಪ್ರಸ್ತುತವಾಗಿದೆ.

'ಬಿಡುಗಡೆ' ಕಥಾಸಂಕಲನದ ಮೊದಲ ಕತೆ 'ಬಿಡುಗಡೆ' ಗಂಡನ ಸಾವು ನಾಯಕಿ ಸರೋಜಳ ಅಂತರಂಗದ ಮೂಲಕ ವಿವಿಧ ಭಾವನೆಗಳ ಮೂಲಕ ತೆರೆದುಕೊಳ್ಳುತ್ತದೆ. ಗಂಡನ ಸಾವು ಸರೋಜಗೆ ಒಂದು ರೀತಿಯ ಆತಂಕ ಹುಟ್ಟಿಸಿರಬೇಕೆಂದು ಮಕ್ಕಳು ಯೋಚಿಸಿರುತ್ತಾರೆ. ಬಂದ ಹಿರಿಯರು ಅದನ್ನೇ ಯೋಚಿಸುತ್ತಾರೆ. ಆದರೆ ಹಾಗಲ್ಲ ವಾಸ್ತವದ ಪರಿಸ್ಥಿತಿಯೇ

ಬೇರೆಯಿದೆ. ಬಿಡುಗಡೆ ಬಯಸಿದ ಸರೋಜಾಳ ವರ್ತನೆ ಹಲವು ನೆಲೆಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ವೀಣಾರವರ ಕತೆಗಳ ಪೈಕಿ ಈ ಕತೆಯು ಬಹು ಚರ್ಚೆಗೆ ಒಳಗಾಗಿರುವ ಕತೆಯಾಗಿದೆ.

"ಯಾವ ಸ್ತ್ರೀ ಮನವೇ ಮೂಲವಾಗಿ ಭಿನ್ನ ಸಾಹಿತ್ಯ ಸಂವೇದನೆಯನ್ನು ರೂಪಿಸಬಹುದೋ ಆ ಸಂವೇದನೆಯನ್ನೇ ಗೌಣವಾಗಿಸುವ ರೀತಿ ಒಂದು ಕಡೆಯಾದರೆ, ಹೀಗೆ ಮಾಡುವುದರ ಮೂಲಕವೇ ಎಂದರೆ ಅವರ ಕಥನ ರೀತಿಯೇ ವಿಮರ್ಶಕರಿಗೆ ಮುಖ್ಯ ಎಂದು ನೋಡುವುದರಲ್ಲಿಯೇ ಪ್ರಧಾನ ವಿಮರ್ಶೆಯ ಚೌಕಟ್ಟಿಗೆ ವೀಣಾ ಅವರ ಸಾಹಿತ್ಯವನ್ನು ಅಳವಡಿಸುವ ರೀತಿ ಇನ್ನೊಂದು ನೆಲೆಯಲ್ಲಿ ಆಮೂರರಂತಹವರು ಹೆಣ್ಣು ಬದುಕಿರುವ ಬದುಕಿರಲೇಬೇಕಾದ ಸಾಮಾಜಿಕ ಪರಿಸ್ಥಿತಿಯಿಂದ ಹುಟ್ಟಿದ್ದು ಎನ್ನುವ ಕಾರಣಕ್ಕೆ ವೀಣಾ ಅವರ ಬರವಣಿಗೆಯನ್ನು ಪ್ರಬುದ್ಧ ಸ್ತ್ರೀವಾದ ಎಂದು ಕರೆಯುತ್ತಾರೆ." (ಸ್ತ್ರೀ ಮತವನುತ್ತರಿಸಲಾಗದೆ? ಪು.ಸಂ. 57) ಬದುಕಿನ ಭಾಗವಾಗಿ ಸಾಮಾಜಿಕ ಸಂಗತಿಯೊಡನೆ ಬೆರೆತು ಹೊಸ ಕಥನ ಶೈಲಿಯನ್ನು ಕಾಣಿಕೆಯಾಗಿಸಿರುವ ವೀಣಾ ಅವರ ಬರವಣಿಗೆ ಹೊಸಲಯ ತಂದಿದೆಂಬುದು ಮೇಲಿನ ಮಾತುಗಳ ಮೂಲಕ ತಿಳಿದು ಬರುತ್ತದೆ.

ವೀಣಾ ಅವರ ಕಥನವನ್ನು ವಿಮರ್ಶಿಸುವಾಗ ಎಚ್.ಎಸ್. ರಾಘವೇಂದ್ರರಾವ್–ರವರು 'ನೊಂದು ಮಾಗುವ ಹಾದಿ, ಮತ್ತೆ ನೋಯುವ ಹಾದಿ' ಎನ್ನುತ್ತಾರೆ.

"ಗಾಳಿ ಬೀಸುವ ದಿಕ್ಕಿನಲ್ಲಿ ಸಾಗಬಹುದು ಅದರ ವಿರುದ್ಧ ಚಲಿಸಲು ಆಗುವುದಿಲ್ಲ. ಅದೊಂದು ಸವಾಲು, ಸಮಕಾಲೀನ ವಾತಾವರಣವನ್ನು ಅದರ ಒತ್ತಡವನ್ನು ಎದುರಿಸಿ ಬರೆಯ ಹೊರಟವರು ವೀಣಾ" ಎನ್ನುತ್ತಾರೆ ಎಚ್.ಎಸ್.ಆರ್.ರವರು. ಸಮಕಾಲೀನ ಲೇಖಕಿಯರಿಗಿಂತ ಭಿನ್ನವಾದ ಬರವಣಿಗೆ. ನವ್ಯ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಂಡು ಹೊಸ ಶೈಲಿ, ತಂತ್ರವನ್ನು ರೂಪಿಸಿದ್ದಾರೆ. ಸ್ತ್ರೀ ಪ್ರತೀಕದ ಹೊಸ ರೂಪ ನಿರೂಪಿತವಾಗಿದ್ದು ವೀಣಾರವರ ಕಥನ ಸಾಹಿತ್ಯದ ಮೂಲಕವೇ ಆಗಿದೆ.

"ಅಲ್ಲಿಯವರೆಗಿನ ಹೆಣ್ಣುಗಳು ದೇಹರಹಿತ ಹೃದಯಗಳು ಇಲ್ಲವೇ ಮನಸ್ಸುಗಳು. ದೇಹವೇನಿದ್ದರೂ ಗಂಡಸರು ಕಂಡದ್ದು ಮಾತ್ರ. ಹೆಂಗಸರನ್ನು ಅವರು ಇದ್ದ ಹಾಗೆ, ಯಾರ ನಿರೀಕ್ಷೆಗಳಿಗೂ ತಲೆಬಗ್ಗದೆ, ಯಾವ ರಿಯಾಯಿತಿಯನ್ನೂ ತೋರಿಸದೆ ಚಿತ್ರಿಸಿದ್ದು ವೀಣಾ ಅವರ ಬಹು ದೊಡ್ಡ ಸಾಧನೆ." (ನಿರ್ದಿಗಂತ:144) ದೇಹ ಮತ್ತು ಅಂತರಂಗದ ಅನುಬಂಧವನ್ನು ತೆರೆದು ತೋರಿಸಿದ್ದು ವೀಣಾಶಾಂತೇಶ್ವರರವರು.

ವೀಣಾ ಅವರ ಕಥೆಯ ನಾಯಕಿಯರು ಆಧುನಿಕತೆಗೆ ತೆರೆದುಕೊಂಡ ಉದ್ಯೋಗಸ್ಥ, ವಿದ್ಯಾವಂತರಾಗಿದ್ದಾರೆ. ಗಂಡು ಹೆಣ್ಣಿನ ಸಂಬಂಧವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ದುರಂತವಿಲ್ಲದ ಸಂಬಂಧಗಳು ಬಯಸುವುದಾದರೂ ಏನನ್ನು? ಪಾತ್ರಗಳ ಸೃಷ್ಟಿಯಲ್ಲೂ ಲೇಖಕಿಯು ಎಚ್ಚರಿಕೆ ವಹಿಸಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳದ ದಿಟ್ಟ ಹೆಣ್ಣಿನ ಪಾತ್ರಗಳನ್ನು ಇವರು ಸೃಷ್ಟಿಸಿದ್ದಾರೆ. ಭಾವನಾತ್ಮಕ ಸೆಲೆಯೇ ಮೂಲ. ಭಾವನೆಗಳ ಸಾಮರ್ಥ್ಯವೇ ಪಾತ್ರಗಳಿಗೆ ಹೊಸ ಚೈತನ್ಯವನ್ನು ತಂದಿದೆ. ವಾಸ್ತವತೆಯನ್ನು ಇವರ ಕತೆಗಳು ಎತ್ತಿ ಹಿಡಿಯುತ್ತವೆ. ಭಾವಸ್ಥಿತಿಗಳನ್ನು ಹಿಡಿದಿಟ್ಟು, ನಿರೂಪಣೆಯ ಪ್ರಾಮಾಣಿಕತೆ ಉಳಿಸಿಕೊಳ್ಳುವುದು ವಿಶೇಷ. ಒಟ್ಟಾರೆಯಾಗಿ ವೀಣಾ ಅವರ ಬರವಣಿಗೆ ನಿರಂತರತೆಯಾಗಿ ಸಾಗುವ ಕುರಿತು ಎಚ್.ಎಸ್. ರಾಘವೇಂದ್ರರಾವ್ ಚರ್ಚಿಸಿದ್ದಾರೆ.

ವೀಣಾಶಾಂತೇಶ್ವರ ಅವರ ಕಥೆಗಳನ್ನು ಕುರಿತು ಕುಂ. ವೀರಭದ್ರಪ್ಪನವರ ಅಭಿಪ್ರಾಯಗಳು ಇಂತಿವೆ. ಆಧುನಿಕ ಸಂವೇದನೆಯ ಬಹುಮುಖ್ಯ ಕಥೆಗಾರ್ತಿ. ಕಡಿಮೆ ಬರೆದು ಹೆಚ್ಚು ಜನಪ್ರಿಯತೆಯನ್ನುಗಳಿಸಿಕೊಂಡ ಕನ್ನಡದ ಅಪರೂಪದ ಕತೆಗಾರ್ತಿ. ದೈನಂದಿನ ಸೂಕ್ಷ್ಮ ವಿವರಗಳ ಹಂದರ, ಇವರ ಕಥೆಗಳಲ್ಲಿವೆ. "ಪ್ರತಿಯೊಂದು ಕಥೆಯ ಜೀವವ್ಯಾಪಾರದ ಆಂತರಿಕ ಕಾಳಜಿ ಮತ್ತು ಆಸ್ಥೆಗಳು ಸುಶಿಕ್ಷಿತ, ಉದ್ಯೋಗಸ್ಥೆ ಮಹಿಳೆಯ ಅನುಭವದ ಎಲ್ಲ ಮಗ್ಗುಲುಗಳನ್ನು ವೈಚಾರಿಕವಾಗಿ ತೆರೆದಿಡುತ್ತವೆ, ಲಿಂಗತಾರತಮ್ಯದ ಸೂಕ್ಷ್ಮಗಳನ್ನು ತಾತ್ವಿಕವಾಗಿ ಚರ್ಚಿಸುತ್ತವೆ". (ನಿರ್ದಿಗಂತ:156) ಮಾನವೀಯ ಗ್ರಹಿಕೆಯೇ ಮುಖ್ಯವಾಗಿ ಪ್ರತಿ ಓದಿಗೂ ಹೊಸ ಅರ್ಥವ್ಯಾಪಿಸುತ್ತಾ ಹೋಗುತ್ತದೆ.

ಇವರ ಬಹುತೇಕ ಕಥೆಗಳು ಸಂಭವಿಸಿರುವುದು ನಗರಗಳಲ್ಲಿ ಸುಸಂಸ್ಕೃತ ಕೌಟುಂಬಿಕ ಹಿನ್ನಲೆಯ ಹೆಣ್ಣಿನ ಪಾತ್ರಗಳು ಹೆಚ್ಚಾಗಿವೆ. ನಿಸ್ಸಂಕೋಚತೆಯಿಂದ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುತ್ತವೆ. ಕತೆಗಳಲ್ಲಿ ಒಂದು ರೀತಿಯ ವಿಷಾದವಿದೆ. "ಗಂಡಸಿನಲ್ಲಿ ಕ್ಷುಲ್ಲಕತೆ ಮತ್ತು ಸ್ವಾರ್ಥ ತುಂಬಿಕೊಂಡಿರುವುದೇ ಹೊರತು ಉದಾತ್ತ ಮನುಷ್ಯ ಮಾದರಿಗಳಿಲ್ಲ. ಯಾವ ಕಥೆಯಲ್ಲೂ ಭಾವುಕತೆ ಆದರ್ಶಪ್ರಿಯತೆ ಇಲ್ಲ. ಸ್ತ್ರೀಪರ ಸ್ವಭಾವದ ನಿಗೂಢತೆಯ ಹುಡುಕಾಟಕ್ಕೆ ತೊಡಗುವ ಬದಲು ಕೌಟುಂಬಿಕ ಚೌಕಟ್ಟಿನ ಅಪಾಯಕಾರಿ ಅಂಶಗಳ ಕಡೆಗೆ ಪ್ರತಿಯೊಂದು ಪಾತ್ರವೂ ಬೊಟ್ಟು ಮಾಡುತ್ತದೆ" (ನಿರ್ದಿಗಂತ:157) ಎನ್ನುತ್ತಾರೆ.

"ಪ್ರತಿ ಸ್ತ್ರೀ ಪಾತ್ರಗಳು ಅಪೂರ್ಣ ಪುಟಗಳೇ, ಕೌಟುಂಬಿಕ ಹಿಂಸೆ ಎಂದರೆ ನೇರ ಹಲ್ಲೆಯಲ್ಲ, ಪರಂಪರಾಗತ ಕೌಟುಂಬಿಕ ವ್ಯವಸ್ಥೆಯ ಆಳದ ಒಳಗೆ ಹುದುಗಿರುವ

ಕ್ರೌರ್ಯವಾಗಿದೆ. ಅತೃಪ್ತ ಮಹಿಳಾ ಮನಸ್ಸುಗಳ ಉಗ್ರಾಣವೇ ವೀಣಾರವರ ಕತೆಗಳು. ಆದರೆ ಈ ಪಾತ್ರಗಳು ಅಳುಬರುಕಿಯರಾಗಲೀ, ಪಲಾಯನವಾದಿಗಳಾಗಲೀ ಅಲ್ಲ". ಹೀಗೆ ವೀಣಾ ಅವರ ಕತೆಗಳ ಅವಲೋಕನ ನಡೆಸುವ ಸಂದರ್ಭದಲ್ಲಿ ಕುಂ.ವಿ. ಅವರು ತಮ್ಮ ಗ್ರಹಿಕೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

'ಶೀತಲ ಸಮರದ ಗಜಗಮನ' ಎಂದು 'ರವಿ ಉಪಾಧ್ಯ' ವೀಣಾರವರ ಕತೆಗಳನ್ನು ವಿವರಿಸುತ್ತಾರೆ. 'ಮುಳ್ಳುಗಳು' ಕತೆಯ ಬಗೆಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ. "ಇಲ್ಲಿ ವೀಣಾ ಅವರು ದಿಟ್ಟತನವನ್ನೇನೂ ತೋರಿದ್ದಾರೆ, ಸ್ತ್ರೀವಾದಿ ಚಿಂತನೆಯ ಮೂಸೆಯಲ್ಲಿ ಯಾಜಮಾನಿಕೆಯ ವಿರುದ್ಧದ ಸಮಾನತೆಯನ್ನು ಎತ್ತಿಕಟ್ಟಲು ನೋಡಿದ್ದಾರೇನೋ ನಿಜ. ಆದರೆ ಯಾವೆಲ್ಲ ಗಂಡಸರು ಶೋಷಕರು ಎಂಬ ಅಭಿಪ್ರಾಯ ಪಡುತ್ತಾರಲ್ಲಾ, ಇದ್ಯಾಕೋ ವಿಪರೀತವೆನಿಸುತ್ತದೆ. One Sided ಎನಿಸುತ್ತದೆ." (ನಿರ್ದಿಗಂತ:187) ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ವೀಣಾರವರ ಕತೆಗಳ ಬಗ್ಗೆ ಶಾಂತಾ ಇಮ್ರಾಪುರ ಅವರ ಅಭಿಪ್ರಾಯ ಹೀಗಿದೆ. "..ಮನುಷ್ಯ ಸಂಬಂಧಗಳು ವ್ಯವಸ್ಥೆಯ ತರತಮಗಳಿಗೊಡ್ಡಿಕೊಳ್ಳುತ್ತ, ಕೃತಕಗೊಳ್ಳುತ್ತ, ಉಸಿರುಗಟ್ಟಿಸಿ ನಿರ್ಜೀವಗೊಳಿಸುತ್ತಿರುವ ವಾಸ್ತವಕ್ಕೆ ಅತ್ಯಂತ ಸೂಕ್ಷ್ಮವಾಗಿ ಸಂವೇದನಾಶೀಲವಾಗಿ ಪ್ರತಿಕ್ರಿಯಿಸುವ ವೀಣಾ ಅವರಿಗೆ, ಯಜಮಾನ ವ್ಯವಸ್ಥೆಯ ಸ್ತ್ರೀ ವಿರೋಧಿ ಧೋರಣೆಗಳ ಬಗ್ಗೆ ಹೆಣ್ಣನ್ನು ಬರೀ ದೇಹವಾಗಿ ಭಾವಿಸಿ ಮನುಷ್ಯ ಸಹಜವಾದ ಆಕೆಯ ಭಾವನಾ ಬದುಕನ್ನು ನಿರ್ಜೀವಗೊಳಿಸುವ ಸಾಂಪ್ರದಾಯಿಕ ದ್ವಿಮುಖ ನೀತಿಯ ಬಗ್ಗೆ ತೀವ್ರಕರ ತಿರಸ್ಕಾರವಿದೆ. ಕಥೆಗಳುದ್ದಕ್ಕೂ ವ್ಯಕ್ತವಾಗುವ ನವಿರಾದ ವ್ಯಂಗ್ಯ – ವಿಡಂಬನೆ, ಸಮಯಸಾಧಕ ಗೋಸುಂಬೆಗಳ ಬಗೆಗಿನ ಪ್ರತಿಭಟನೆ – ಇವು ಅವರ ಸ್ತ್ರೀವಾದೀ ನಿಲುವನ್ನು ಸ್ಪಷ್ಟಪಡಿಸುತ್ತವೆ". (ನಿರ್ದಿಗಂತ:196)

ಡಾ. ವಿನಯಾ ಅವರು ವೀಣಾರವರ ಕತೆಗಳನ್ನು "ಕೊಂಡ ಹಾಯುವ ಕತೆಗಳು ಎಂದು ಕರೆಯುತ್ತಾರೆ. ದೇಹಕಾಮದ ನಿರಾಕರಣೆಯನ್ನು ಪ್ರತಿಪಾದಿಸುತ್ತ ಹೆಣ್ಣು ಗಂಡಿನ ಸಖ್ಯದ ಸಹವರ್ತಿತನವನ್ನು ಪ್ರತಿಪಾದಿಸುತ್ತದೆ". (ನಿರ್ದಿಗಂತ:201) ಗಂಡಿನಿಂದ ಹೆಣ್ಣು ಬಯಸುವುದೇನನ್ನು? ಎಂಬ ಪ್ರಶ್ನೆರೂಪಿಸಿಕೊಂಡಿದ್ದು ವಿಶೇಷವಾಗಿದೆ. ಸ್ತ್ರೀ ಅಸ್ಮಿತೆಯ ಕುರಿತ ಚರ್ಚೆ ನಡೆದಿದೆ.

'ತಾತ್ವಿಕ ಬದ್ಧತೆ ಮತ್ತು ಸೃಜನಶೀಲ ಶೋಧದ ಅನನ್ಯ ಮಾದರಿ' ವೀಣಾರವರ ಕತೆಗಳು ಎಂದು ಎಂ.ಎಸ್. ಆಶಾದೇವಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ನವ್ಯ ಸಂಬಂಧದ ಶಕ್ತ ಪ್ರಾತಿನಿಧಿಕ

ಕತೆಗಾರ್ತಿಯೆಂದು ಗುರುತಿಸುತ್ತಾರೆ. ವೀಣಾ ಶಾಂತೇಶ್ವರ ಅವರ ಕತೆಗಳನ್ನು ಮೂಲತಃ 'ಪ್ರತಿಲೋಕ' ನಿರ್ಮಾಣದ ನೆಲೆಯಲ್ಲಿ ನೋಡಲಾಗಿದೆ. ವೀಣಾರವರ ಕಥೆಗಳ ಕೇಂದ್ರಕಾಳಜಿಯೆಂದರೆ 'ಆತ್ಮಶೋಧ'. ಸ್ವಮರುಕದ ಘಟ್ಟವನ್ನು ಮೀರಿದ ಸ್ಥಿತಿಯು ಕಾಣಬಹುದು. ಲಿಂಗವ್ಯತ್ಯಾಸವನ್ನು ಮೀರಿದ ವ್ಯಕ್ತಿತ್ವದ ಹುಡುಕಾಟ ಕತೆಗಳಲ್ಲಿ ನಡೆದಿದೆ.

"ಕಾಲದ ಅಗತ್ಯ, ತವಕ ತಲ್ಲಣಗಳ ಸಮರ್ಥ ಅಭಿವ್ಯಕ್ತಿ, ಹೊಸ ಅನುಭವ ಲೋಕದ ಶೋಧ, ವ್ಯಕ್ತಿತ್ವದ ಹುಡುಕಾಟ, ಬದುಕಿನ ಕಾಲಾತೀತ ನಿಗೂಢದ ಬಗೆಗಿನ ಬೆರಗು, ಹೊಚ್ಚ ಹೊಸದಾಗಿ ಕಾಣುವ ಭಾಷೆ ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ವೀಣಾ ಕನ್ನಡದ ಮಹತ್ತರ ಕಥೆಗಾರ್ತಿ. ಹೊಸ ಪೀಳಿಗೆಯ ಬರಹಗಾರರಿಗೆ ಸ್ಫೂರ್ತಿ ಮತ್ತು ಮಾದರಿಯಾಗುವುದರ ಮೂಲಕವೇ ಕನ್ನಡದ ಕಥಾ ಪರಂಪರೆಯ ಮೈಲಿಗಲ್ಲಾದ ಲೇಖಕಿ ವೀಣಾ ಶಾಂತೇಶ್ವರ". (ನಿರ್ದಿಗಂತ:208)

ಬಸುಬೇವಿನಗಿಡದ ವೀಣಾರವರ ಹಲವು ಕತೆಗಳ ಬಗ್ಗೆ ಚರ್ಚೆ ನಡೆಸುತ್ತಾರೆ. ವೀಣಾ ಕಥನದ ನಾಯಕಿಯರನ್ನು ಕುರಿತು ಹೀಗೆ ನುಡಿಯುತ್ತಾರೆ. "ಡಾ. ವೀಣಾಶಾಂತೇಶ್ವರರ ನಾಯಕಿಯರು ಬದುಕಿನ ಮೌಲ್ಯಗಳ ಆವಿಷ್ಕಾರದಲ್ಲಿ ತೊಡಗಿದ್ದಾರೆ. ಮನುಷ್ಯನ ವಿಕಾಸಕ್ಕೆ ಮೂಲಭೂತವಾಗಿ ಬೇಕಾಗುವಂತಹ ಪ್ರೀತಿ, ಅಂತಃಕರಣ, ಸಮಾನತೆ, ವ್ಯಕ್ತಿ ಸ್ವಾತಂತ್ರ್ಯ, ಸತ್ಯ, ಶ್ರದ್ಧೆ, ನಂಬಿಕೆಗಳಂಥ ಅಮೂಲ್ಯ ಅಂಶಗಳನ್ನು ಬೆಳೆಸುವಲ್ಲಿ ವೀಣಾ ಕಥಾಲೋಕದ ಹೆಂಗೆಳೆಯರು ನಿರತರಾಗಿದ್ದಾರೆ". (ನಿರ್ದಿಗಂತ:210) 'ಡಾ. ಎಂ. ಉಷಾ' ಕನ್ನಡ ಸಾಹಿತ್ಯಕ್ಕೆ ಸ್ತ್ರೀವಾದಿ ವಾಗ್ವಾದದ ಬಿಸಿಯೇರಿಸಿದ 'ಮುಳ್ಳುಗಳು' ಎಂಬ ಸಂಕಲನವನ್ನು ಕುರಿತು ಚರ್ಚಿಸಿದ್ದಾರೆ.

ಡಾ. ಎಂ. ಉಷಾ ಅವರ ಅಭಿಪ್ರಾಯ ಪಡುವಂತೆ ಸ್ತ್ರೀ ಮನವನ್ನು ಚಿತ್ರಿಸುವಲ್ಲಿ ವೀಣಾರವರಿಗೆ ಆಸಕ್ತಿ. ಕಥನ ಕಲೆಯ ಸ್ವರೂಪ ಮತ್ತು ಅಭಿವ್ಯಕ್ತಿಯ ರೀತಿ ಬಹಳ ಮುಖ್ಯವಾದುದು. ಆದರ್ಶನಾರಿಯ ಮಾದರಿಯನ್ನು ಭಗ್ನಗೊಳಿಸಿದರು. ಗಂಡು-ಹೆಣ್ಣಿನ ಸಂಬಂಧದೊಂದಿಗೆ ತಮ್ಮ ಅಸ್ತಿತ್ವದ ಪ್ರಶ್ನೆಯನ್ನಿಟ್ಟು ಪರಿಶೀಲಿಸುತ್ತಾರೆ.

'ಮುಳ್ಳುಗಳು' ಕಥಾ ಸಂಕಲನದ ವಸ್ತು ಗಂಡು-ಹೆಣ್ಣಿನ ಸಂಬಂಧ "ಲೌಕಿಕ ಗಂಡಂದಿರ ಒಲೆಯೊಳಗಿಕ್ಕಿ ಸುಡು, ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗಬೇಕು ಎನ್ನುವ ಅಭಿವ್ಯಕ್ತಿಯ ನಂತರ ಕನ್ನಡ ಸಾಹಿತ್ಯದಲ್ಲಿ ದಾಖಲುಗೊಳ್ಳುವ 'ಸೆನ್ಸೇಷನಲ್' ಆದ ಮಾತುಗಳಿವು. ಆದ್ದರಿಂದಲೇ ಇವರ ಬರಹ 'ಗಂಡು ಓದಲು ಬೆಚ್ಚುವಂತಹ ಬರಹ' ಎನ್ನುವ ವಿವರಣೆಯನ್ನೂ

ಪಡೆದಿದೆ". (ನಿರ್ದಿಗಂತ:225) ಕತೆಗಳಲ್ಲಿ ಆದರ್ಶ ನಾರಿಯನ್ನು ಹುಡುಕಾಟ ನಡೆಸುತ್ತಾ ಪಾತ್ರಗಳು 'ನೆಗೆಟಿವ್' ಆಗಿ ಕಂಡು ಬಂದಿತು. ಪುರುಷ ಸಮಾಜದ ಸಂಕಥನವನ್ನು ಅಣಕಿಸುವಂತಾಯಿತು.

ಪ್ರೀತಿ ಶುಭಚಂದ್ರ ಅವರು 'ನಡೆದದ್ದೇ ದಾರಿ' ಕಥಾ ಸಂಕಲನವನ್ನು ಕುರಿತು 'ಮಾನವ ಅಸ್ಥಿತ್ವದ ಅನಿವಾರ್ಯತೆ' ಎಂಬುದನ್ನು ಧ್ವನಿಸುತ್ತದೆ ಎನ್ನುತ್ತಾರೆ. ನವ್ಯ ಸಂದರ್ಭದ ಅಸಂಗತ, ಅಸ್ಥಿತ್ವವಾದಿ ಚಿಂತನೆಗಳು ವೀಣಾರವರ ಕತೆಗಳಲ್ಲಿ ಅಡಕಗೊಂಡಿರುವುದನ್ನು ಗುರುತಿಸುತ್ತಾರೆ. ತನ್ನ ಸ್ವಂತಿಕೆ ಜಾಗೃತವಾಗಿರುವ ಪಾತ್ರಗಳನ್ನು ವೀಣಾರವರು ಸೃಷ್ಟಿಸಿರುವ ಶೈಲಿಯನ್ನು ಗ್ರಹಿಸಿದ್ದಾರೆ. ಆಧುನಿಕೋತ್ತರ ನೆಲೆಯಲ್ಲಿ ಮಾನವ ವಿಕಾರ–ವಿಕಾಸಗಳನ್ನು ಸಮರ್ಥವಾಗಿ ಒಳಗೊಳ್ಳುವ ಸಾಧ್ಯತೆಯನ್ನು ಕುರಿತು ಶುಭಚಂದ್ರ ಪ್ರಸ್ತಾಪಿಸುತ್ತಾರೆ.

ಎಲ್.ಜಿ. ಮೀರಾ ಅವರು ವೀಣಾ ಕಥನವನ್ನು ಕುರಿತು ಹೀಗೆ ಹೇಳುತ್ತಾರೆ. "ವೀಣಾ ಅವರ ಶಕ್ತಿ ಇರುವುದು ಸ್ತ್ರೀಗೇನುಬೇಕು (ನಿಜಪ್ರೇಮ, ಸಂಪೂರ್ಣ ಸ್ವಾತಂತ್ರ್ಯ, ಸ್ವಂತಕ್ಕೆ ನಿರ್ಧಾರ ತೆಗೆದುಕೊಳ್ಳುವ ಅವಕಾಶ) ಎಂಬುದರ ಬಗ್ಗೆ ಆಳವಾಗಿ ಯೋಚಿಸಿ, ಅದನ್ನು ಮುಕ್ತವಾಗಿ ಹೇಳುವ ಪಾತ್ರಗಳನ್ನು ಸೃಷ್ಟಿಸುವಲ್ಲಿ" (ನಿರ್ದಿಗಂತ:201)ಎನ್ನುತ್ತಾರೆ. ನಿಜವಾದ ಪ್ರೇಮ, ಸಂಪೂರ್ಣ ಸ್ವಾತಂತ್ರ್ಯವನ್ನು ಸಾಹಿತ್ಯದ ಮೂಲಕ ಹುಡುಕುವ ಪ್ರಯತ್ನ ನಡೆಸಿದ್ದಾರೆ.

ವಿಮರ್ಶಕ ಜಿ.ಎಸ್. ಆಮೂರ ಅವರು ವೀಣಾ ಅವರ ಕತೆಗಳ ಕುರಿತು "ಕತೆಯನ್ನು ಕೇವಲ ಮನೋರಂಜನೆಗಾಗಲೀ ಸಾಮಾಜಿಕ ಜಾಗೃತಿಗಾಗಲಿ ಬಳಸದೆ ಅದನ್ನು ಸತ್ಯದ ಶೋಧದಂತಹ ಗಂಭೀರ ಪ್ರಯತ್ನದಲ್ಲಿ ತೊಡಗಿಸಿದರು, ಹಾಗೂ ಅದನ್ನು ಪ್ರಬುದ್ಧ ಸಾಹಿತ್ಯ ಮಾಧ್ಯಮವಾಗಿ ಬಳಸಿಕೊಂಡರು" (ನಿರ್ದಿಗಂತ:196) ಎನ್ನುತ್ತಾರೆ.

ಹೀಗೆ ವೀಣಾಶಾಂತೇಶ್ವರ ಅವರ ಕತೆಗಳನ್ನು ಸ್ತ್ರೀವಾದಿ ದೃಷ್ಟಿಕೋನದ ಹಲವು ಬಗೆಯ ಚರ್ಚೆಯ ಮೂಲಕ ಗ್ರಹಿಸಬಹುದಾಗಿದೆ. ಹಲವು ಪ್ರಮುಖ ವಿಮರ್ಶಕರು ವೀಣಾರವರ ಕತೆಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಬಹುತೇಕ ಸ್ತ್ರೀ ಪರವಾದ ದೃಷ್ಟಿಕೋನಗಳಲ್ಲಿ ವೀಣಾರವರ ಕತೆಗಳು ಕಾಣಬರುತ್ತದೆ. ಕಥಾ ನಾಯಕಿಯರ ಬಗ್ಗೆ ಚರ್ಚೆಯಾಗಿದೆ. ಪುರುಷ ಪಾತ್ರ ಚಿತ್ರಣ, ವ್ಯವಸ್ಥೆಯೊಳಗಿನ ಹಲವು ತಲ್ಲಣಗಳನ್ನು ಲೇಖಕಿ ನಿರ್ವಹಿಸಿರುವ ಬಗೆಯು ಬಹುಮುಖ್ಯವಾಗುತ್ತದೆ. ಈಗಾಗಲೇ ಸ್ಥಾಪಿತವಾಗಿರುವ ಲೇಖಕಿಯ ಬರಹದ ಮೌಲ್ಯಗಳಾಚೆಗಿನ ಅಧ್ಯಯನ ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

"ಜಾತೀಯತೆ, ಪರಿಸರನಾಶ, ಭ್ರಷ್ಟಾಚಾರ ಹೀಗೆ ಬೇರೆ ಬೇರೆ ಸಮಸ್ಯೆಗಳ ಬಗೆಗೂ ವೀಣಾ ಅವರು ಕಥೆಗಳನ್ನು ಬರೆದಿದ್ದರೂ ಅವರ 'ನಡೆದದ್ದೇ ದಾರಿ'ಯಲ್ಲಿ ಸ್ತ್ರೀವಾದಿ ಚಿಂತನೆಗಳೇ ಮುಖ್ಯವಾಗಿವೆ. ವೀಣಾ ಅವರ ಸಮಗ್ರ ಕಥೆಗಳು ಕನ್ನಡ ಮಹಿಳಾ ಕಥಾ ಸಾಹಿತ್ಯದಲ್ಲೇ ವಿಶಿಷ್ಟವಾದ ಸ್ತ್ರೀ ಅನುಭವ ಲೋಕವನ್ನು ಕಟ್ಟಿಕೊಡುವಲ್ಲಿ ತುಂಬ ಯಶಸ್ವಿಯಾಗಿದೆ." (ನಿರ್ದಿಗಂತ:257)

"ಯಾವುದನ್ನು ಸ್ತ್ರೀ ವಿಶಿಷ್ಟ ಅನುಭವ ಲೋಕವೆಂದು ಹೇಳಲಾಗುತ್ತದೆಯೋ ಅದನ್ನು ಬದುಕಿನ ಸಾಮುದಾಯಿಕ ರಚನೆಯ ಮೂಲವಿನ್ಯಾಸದಲ್ಲಿ ಮತ್ತು ಇದನ್ನು ಮೀರಿ ಬದುಕಿನ ನಿಗೂಢ ಸಾಧ್ಯತೆಗಳ ಹಾಗೂ ಮನುಷ್ಯ ವ್ಯಕ್ತಿತ್ವದ ಅನೂಹ್ಯ ನೆಲೆಗಳ ವಿಸ್ತಾರದಲ್ಲಿಟ್ಟು ಪರಿಶೀಲಿಸುವುದೇ ವೀಣಾ ಅವರ ಶಕ್ತಿಕೇಂದ್ರವಾಗಿ ತೋರುತ್ತದೆ" ಎಂದು ಎಂ.ಎಸ್.ಆಶಾದೇವಿಯವರು ಅಭಿಪ್ರಾಯ ಪಡುತ್ತಾರೆ. (ನಡುವೆ ಸುಳಿವ ಆತ್ಮ:92)

ವೀಣಾರವರು ತಮ್ಮ ಕಥಾನಾಯಕಿಯರನ್ನು ಕುರಿತು ಹೀಗೆ ಹೇಳಿಕೊಳ್ಳುತ್ತಾರೆ. "ಅನ್ಯಾಯ ಎಸಗುವ ಸಮಾಜವನ್ನು ಅಥವಾ ಗಂಡಸನ್ನು ವಿರೋಧಿಸುವ ಅವರ ಸೊಕ್ಕನ್ನು ಸಮೂಲ ಕಿತ್ತೆಸೆಯುವ ಕೆಚ್ಚನ್ನುಳ್ಳ ಹೆಂಗಸೊಬ್ಬಳು ಕಥಾನಾಯಕಿಯಾಗಿರುತ್ತಿದ್ದಳು. ಅನೇಕ ಸಲ ಅವಳಿಗೆ ಸೋಲು, ಅಪನಿಂದೆ ಅವಮಾನಗಳೇ ಎದುರಾಗುತ್ತಿದ್ದರೂ, ಸ್ಥೈರ್ಯಗೆಡದ ಹೆಂಗಸರು ಈ ಕತೆಗಳ ನಾಯಕಿಯರು" (ಇಲ್ಲಿಂದ ಮುಂದೆಲ್ಲಿಗೆ ಪು.ಸಂ. 62) ಅವರು ತಮ್ಮ ಕತೆಗಳ ಮೂಲಕ ಹೊಸ ಸ್ತ್ರೀ ಪ್ರತಿನಿಧೀಕರಣವನ್ನು ನಿರೂಪಿಸುತ್ತಾರೆ.

ಕೇವಲ ಸ್ತ್ರೀಪರ ಕಾಳಜಿಯ ಕತೆಗಳು ಇವರದಾಗಿರದೆ ಸಾಮಾಜಿಕ ಸಂಗತಿಗಳನ್ನು ಕೂಡ ಕತೆಗಳು ಒಳಗೊಂಡಿದೆ. ಮುಂದಿನ ಭಾಗದಲ್ಲಿ ವೀಣಾ ಶಾಂತೇಶ್ವರ ಅವರನ್ನು ಕುರಿತಾದ ಎಂ.ಫಿಲ್ (ಅಪ್ರಕಟಿತ) ಪ್ರಬಂದದ ಪ್ರಮುಖ ಅಂಶಗಳನ್ನು ಚರ್ಚಿಸಲಾಗಿದೆ.

'ವೀಣಾಶಾಂತೇಶ್ವರ ಕೃತಿಗಳಲ್ಲಿ ಸ್ತ್ರೀ ವಿಮೋಚನೆ' ಡಾ. ವಡ್ಡೆ ಹೇಮಲತಾ ಇವರ ಮಾರ್ಗದರ್ಶನದಲ್ಲಿ ರೂಪ ಕೆ.ಪಿ. ಇವರು ಹಂಪಿ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ್ದ ಅಪ್ರಕಟಿತ ನಿಬಂಧವಾಗಿದೆ. ಈ ಪ್ರಬಂಧದಲ್ಲಿ ವೀಣಾಶಾಂತೇಶ್ವರ ಕತೆಗಳನ್ನು ಕುರಿತು ನಡೆಸಿರುವ ಚರ್ಚೆಯಲ್ಲಿ ಪ್ರಮುಖ ಅಂಶಗಳನ್ನು ಚರ್ಚಿಸಲಾಗಿದೆ.

ನಿರ್ಭೀತಿಯಿಂದ ಬರೆದ ಹಲವಾರು ವಿಮರ್ಶಕರ ವಿಮರ್ಶೆಗೆ ಗುರಿಯಾದ ಲೇಖಕಿ ವೀಣಾಶಾಂತೇಶ್ವರ. ಪುರುಷ ಪ್ರಧಾನಧಾರೆಯಿಂದ ದೂರ ಸರಿದು ತಮ್ಮನ್ನು ಬೇರ್ಪಡಿಸಿಕೊಂಡು ಬರೆದವರು ವೀಣಾ. ಇವರು ಅನುಸರಿಸಿದ ವಿಭಿನ್ನ ತಂತ್ರಗಾರಿಕೆಯೇ ಮುಖ್ಯವಾದುದು. ಕೇವಲ

ಹೆಣ್ಣಿನ ಖಾಸಗಿ ಲೋಕವನ್ನು ಈಕೆ ಚಿತ್ರಿಸಿಲ್ಲ ಸಾಮಾಜಿಕ ಸಂದರ್ಭದೊಂದಿಗೆ ಬೆಸೆದ ವಿಭಿನ್ನ ಆಶಯದ ಕತೆಗಳು ಮುಖ್ಯವಾಗಿದೆ.

ಇವರ ಕಥನದ ನಾಯಕಿಯರಿಗೆ ಆಯ್ಕೆ ಸ್ವಂತದ ಗುರಿ ಇದೆ. ಜೀವನದ ಅರಿವಿದೆ. ಸ್ವತಂತ್ರ ಮನೋಭಾವದಿಂದ ಮುನ್ನಡೆಯುವ ಛಲವಿದೆ. ಸೋತು ಸೋತು ಬದುಕನ್ನು ಕಟ್ಟಲೆಳೆಸುವ ಹೆಣ್ಣಿನಲ್ಲಿ ವೈಚಾರಿಕ ಕಿಚ್ಚು ಹಚ್ಚಿ ಬದಲಾವಣೆಗೆ ಸಿದ್ಧಗೊಂಡಿರುವ ಪಾತ್ರಗಳಿವೆ. ಪ್ರತಿ ಹಂತದಲ್ಲೂ ಸ್ತ್ರೀಯ ಅಸ್ಮಿತೆಯ ಹುಡುಕಾಟ ನಡೆದಿದೆ. ಪುರುಷ ಸಮಾಜದ ಹಲವು ತೊಡಕು ಶೋಷಣೆಗಳನ್ನು ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುತ್ತಾ ಸಾಗುತ್ತದೆ.

ವೀಣಾಶಾಂತೇಶ್ವರ 'ಗಂಡಸರು' ಕಾದಂಬರಿಯಲ್ಲಿ ಪ್ರಾಮಾಣಿಕತೆ ಕಾಣದ ಪ್ರೀತಿಯ ಹುಡುಕಾಟವಿದೆ. ಪುರುಷನಾದವನು ತನಗೆ ದಕ್ಕಿದ ಹೆಣ್ಣು ತಾನು ಹೇಳಿದಂತೆಯೇ ಕೇಳಬೇಕೆಂಬ ಸರ್ವಾಧಿಕಾರದ ಚಿಂತನೆಯಲ್ಲಿ ಪುರುಷ ಮುಳುಗಿರುತ್ತಾನೆ. ಕಾದಂಬರಿಯಲ್ಲಿ ನಾಯಕಿ ದೈಹಿಕವಾಗಿ ಹೊಂದಾಣಿಕೆಯಾದರೂ ಮಾನಸಿಕವಾಗಿ ಹೊಂದಾಣಿಕೆ ಸಾಧಿಸಲಾಗದ ಸ್ಥಿತಿಯು ವ್ಯಕ್ತವಾಗಿದೆ.

ಪ್ರೀತಿ ಇಲ್ಲದೆಯೂ ಗಂಡಿನೊಡನೆ ಬೆರೆಯಬಹುದೆಂಬ ಯಾಂತ್ರಿಕ ಸ್ಥಿತಿ (ನಿರ್ಭಾವುಕ ಸ್ಥಿತಿ)ಗೆ ಹೆಣ್ಣು ತಲುಪಿರುವುದು ತಿಳಿದು ಬರುತ್ತದೆ. ಆದರೂ ಹೆಣ್ಣಿಗೊಂದು ಆಸರೆ ಬೇಕೇ ಬೇಕು ಎನ್ನುವ ಅಂಶ ಪ್ರತಿಪಾದಿತವಾಗುತ್ತದೆ. ತನ್ನ ಆಯ್ಕೆಯ ದಾರಿಯಿದೆ. ಗಂಡು, ಹೆಣ್ಣಿನ ಆಕರ್ಷಣೆಯ ವಿಕರ್ಷಣೆಯ ಶೋಧವಿದೆ. ಒಟ್ಟಾರೆಯಾಗಿ ಮಹಿಳೆ ಅಸಹಾಯಕಳಲ್ಲ ಎಂದು ಸ್ಪಷ್ಟಪಡಿಸುತ್ತಾ ಪುರುಷರ ಆಂತರಿಕ ಸ್ವಭಾವವು ಶೋಧಗೊಂಡಿದೆ. ವ್ಯವಸ್ಥೆಯ ಆಶಯಗಳಿಗೆ ಮಹಿಳೆಯ ಬದಲಾದ ಮನೋಧರ್ಮವು ವ್ಯಕ್ತವಾಗುವ ಬಗೆಯನ್ನು ತಿಳಿಯಲು ಸಾಧ್ಯವಿದೆ.

"ಡಾ. ವೀಣಾಶಾಂತೇಶ್ವರ ಅವರ ಕಥೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು" ಎಂಬ ಎಂ.ಫಿಲ್ ಪ್ರಬಂಧವನ್ನು ಡಾ. ಡಿ. ಮಂಗಳಾ ಪ್ರಿಯದರ್ಶಿನಿ ಅವರ ಮಾರ್ಗದರ್ಶನದಲ್ಲಿ ಪುನೀತ ಎಂ. ಇವರು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇವರು ವೀಣಾಶಾಂತೇಶ್ವರ ಕಥೆಗಳನ್ನು ಕುರಿತು ಹೀಗೆ ಹೇಳುತ್ತಾರೆ. ಪುರುಷ ಜಗತ್ತಿನ ಸ್ವಾಮ್ಯವನ್ನು ತನ್ನ ನೆಲೆಯಲ್ಲಿ ಹೋರಾಟ ಮಾಡುವ ಮೂಲಕ ನಿರೂಪಿಸುತ್ತದೆ. ತಾಯ್ತನದ ಆಯ್ಕೆಯ ಹಕ್ಕನ್ನು ಕುರಿತು ಕತೆಗಳು ನಿರೂಪಿತವಾಗುತ್ತದೆ. ಘೋಷಣೆಯ ರೂಪ ತಾಳದ ಕಥನವಾಗಿದೆ. ಹೆಣ್ಣಿನ ಕ್ರಿಯಾಶೀಲತೆ ಕುಂಠಿತಗೊಳ್ಳಲು ಕಾರಣವಾದ ಸಂಗತಿಗಳನ್ನು ಕುರಿತು ಚರ್ಚಿಸುತ್ತಾರೆ. ಹೆಣ್ಣಿನ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುವ ಪುರುಷ ವರ್ಗವನ್ನು ಟೀಕೆ ಮಾಡುತ್ತಾರೆ.

ಸಮಾಜದಲ್ಲಿ ಬಾಳಿ ಬದುಕುತ್ತಿರುವ ಹೆಣ್ಣಿನ ಸ್ಥಾನಮಾನದ ಬಗ್ಗೆ ಪ್ರಸ್ತಾಪಿಸುತ್ತಾರೆ. ಹೆಣ್ಣಿನ ಹೃದಯದ ಆತಂಕಗಳನ್ನು ಕುರಿತು ವೀಣಾ ಅವರು ಚರ್ಚೆಯನ್ನು ನಿರೂಪಿಸುತ್ತಾರೆ.

ಒಟ್ಟಾರೆಯಾಗಿ ವೀಣಾರವರ ಬರವಣಿಗೆಯ ಆಶಯವನ್ನು ಚಂದ್ರಶೇಖರ ಆಲೂರು ಅವರು ಹೀಗೆ ಹೇಳುತ್ತಾರೆ. "ಬಹುಶಃ ವೀಣಾ ನವ್ಯ ಪುರುಷ ಲೇಖಕರು ಸೃಷ್ಟಿಸಿದ ಹೆಣ್ಣಿನ ಪಾತ್ರಗಳಿಗೆ ತದ್ವಿರುದ್ಧವಾದ ಪಾತ್ರಗಳನ್ನು ಹಠದಿಂದ ಬರೆದಂತೆ ಕಾಣುತ್ತದೆ" (ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ:112)

ಲಲಿತಾಂಬಿಕ ಅಂತರ್ಜನಂ ಅವರು ಆರಂಭದಲ್ಲಿ ಬರೆದ ಕತೆಗಳು ಮಾತ್ರ ಸಂಸ್ಕೃತಿಯಲ್ಲಿ ಕನಲಿದ ಎಷ್ಟೋ ಮಹಿಳೆಯರಿಗೆ ಹೊಸ ಬಿಡುಗಡೆಯನ್ನು ತಂದೊಡ್ಡಿತು.

ಕಮಲಾದಾಸ್‌ರವರನ್ನು ಕುರಿತ ಪ್ರೊ.ಪಾರ್ವತಿ ಐತಾಳ್‌ರ ವಿಚಾರಗಳು ಇಂತಿವೆ. ಮನುಷ್ಯ ಮನಸ್ಸಿನ ಸೂಕ್ಷ್ಮಗಳನ್ನು ಅಭಿವ್ಯಕ್ತಿಸಿದ ಕತೆಗಾರ್ತಿ. ತೀವ್ರಭಾವುಕಳಾಗಿ ಸಮಾಜವನ್ನು ಬದುಕನ್ನು ಕಂಡವರು ಕಮಲಾದಾಸ್ ಅದನ್ನು ಸಾಹಿತ್ಯದಲ್ಲೂ ತಂದಿದ್ದಾರೆ. ಅಪ್ರಿಯವಾದದನ್ನು ಹೇಳುತ್ತಾ ವಿವಾದಕ್ಕೆ ಸಿಲುಕಿದ ಸೂಕ್ಷ್ಮ ಲೇಖಕಿ ಇವರಾಗಿದ್ದಾರೆ.

ಹಲವು ಬಗೆಯ ಮಾನಸಿಕ ಸ್ಥಿತಿಗಳನ್ನು ವ್ಯಕ್ತಪಡಿಸುತ್ತಾ ಕತೆಗಳ ಮೂಲಕ ಸತ್ಯಶೋಧ ಮಾಡ ಹೊರಟಿದ್ದಾರೆ. ಘಟನೆಗಿಂತ ಭಾವಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ. ಮುಗ್ಧತೆ, ಒಡೆದ ಬದುಕಿನ ಚಿತ್ರಣಗಳು, ದೌರ್ಬಲ್ಯಗಳು, ಕತೆಗಳಲ್ಲಿ ವ್ಯಕ್ತವಾಗಿದೆ. ಸ್ತ್ರೀ ಪುರುಷ ಸಂಬಂಧದ ಹಲವು ಮಜಲುಗಳು ಶೋಧಗೊಂಡಿದೆ.

"1971ರ ನಂತರ ಬರೆದ ಕಥೆಗಳಲ್ಲಿ ಮಾಧವಿ ಕುಟ್ಟಿಯವರು ಭಾವ ಪ್ರಾಧಾನ್ಯಕ್ಕೆ ಬದಲಾಗಿ ವಸ್ತುವಿಗೆ ಪ್ರಾಮುಖ್ಯ ಕೊಡಲಾರಂಭಿಸಿದರು. ಆ ಕಥೆಗಳನ್ನು ಅಧ್ಯಯನ ಮಾಡಿದರೆ ಅಲ್ಲಿ ಬಾಹ್ಯ ಮತ್ತು ಆಂತರಿಕವಾದ ಶಿಲ್ಪ ಸೌಂದರ್ಯ ಮಾತ್ರವಲ್ಲದೆ ಸ್ತ್ರೀವಾದ, ಸ್ವಾತಂತ್ರ್ಯ ಘೋಷಣೆ, ಪ್ರೀತಿಯ ಪರ ಮತ್ತು ವಿರೋಧ ಭಾವಗಳು, ವಿಗ್ರಹ ಭಂಜಕ ಗುಣ, ನೀತಿ–ನಿಯಮಗಳ ಉಲ್ಲಂಘನೆ, ಬರಹಗಾರ್ತಿಯಾಗಿ ಸ್ತ್ರೀ, ಕಾಮ, ಪ್ರತಿಮೆಯ ಕಲ್ಪನೆ, ಬಣ್ಣಗಳ ಮನಃಶಾಸ್ತ್ರ, ಆಧುನಿಕತೆ ಇತ್ಯಾದಿ ವೈವಿಧ್ಯಮಯ ಚಿತ್ರಗಳು ನಮಗೆ ಕಾಣಸಿಗುತ್ತವೆ. ಮಾತು ಸನ್ನೆಗಳನ್ನು ಎಚ್ಚರಿಕೆಯಿಂದ ಜೋಡಿಸಿ ನಿಗೂಢವಾದ ಮಾನಸಿಕ ವ್ಯಾಪಾರಗಳನ್ನು ಸಾಕ್ಷತ್ಕರಿಸಲು ಅನುಕೂಲವಾಗುವಂತಹ ನಿರೂಪಣಾ ಶೈಲಿ ಮತ್ತು ಗ್ರಾಮ್ಯ ಭಾಷಾ ಪ್ರಯೋಗಗಳು ಮಾಧವಿ ಕುಟ್ಟಿಯವರ ಸೃಜನಶೀಲತೆಯ ವೈಶಿಷ್ಟ್ಯಗಳು." (ನಿರ್ದಿಗಂತ:383)

ಕೇಶವಶರ್ಮ ಅವರು 'ವಸಾಹತೋತ್ತರ ಕಾಲದ ಸಮಸ್ಯೆ : ಮಹಿಳಾ ಕತೆಗಳು ಮತ್ತು ಪ್ರಾದೇಶಿಕತೆ' ಎಂಬ ವಿಷಯವನ್ನು ಪ್ರಸ್ತಾಪಿಸುವ ಸಂದರ್ಭದಲ್ಲಿ 'ಬೇಸಿಗೆರಜೆ', 'ಗಂಧದ ಮರದ ಚಿತೆ'ಯನ್ನು ಪ್ರಸ್ತಾಪಿಸುತ್ತಾರೆ.

ಕಮಲಾದಾಸ್ ಅವರ 'ಸ್ವಾತಂತ್ರ್ಯ ಹೋರಾಟಗಾರನ ಮಗಳು' ನೆನಪಿಸಿಕೊಳ್ಳಬಹುದು. "ಅನೇಕ ಕತೆಗಾರ್ತಿಯರಿಗೆ ಗಂಡು ಹೆಣ್ಣಿನ ಸಂಬಂಧದ ರಾಜಕಾರಣವು ಹುಸಿಯಾದ ಮತ್ತು ಹಸಿಯಾದ ರೂಪವಲ್ಲ. ಅದಕ್ಕೆ ಸಂಕೀರ್ಣ ಮುಖವಿದೆ. ಲೈಂಗಿಕ ರಾಜಕಾರಣಕ್ಕೆ ಮನೆಯ ಮೂಲವಿದೆ. ಸಾಮಾಜಿಕ ಮೂಲವೂ ಇದೆ. ಅದನ್ನು ಅವರು ಕತೆಗಳಲ್ಲಿ ಹೇಳುತ್ತಾರೆ. ಪ್ರತಿಭಟನೆಯೂ ಅವರಿಗೆ ವಾಚ್ಯವಲ್ಲ." (ನಿರ್ದಿಗಂತ:230)

Wikipedia.org ಈ ಜಾಲತಾಣದಲ್ಲಿ ಕಮಲಾದಾಸ್‌ರವರ ಪರಿಚಯವಿದೆ. 'ಮಾಧವಿಕುಟ್ಟಿ' ಎಂಬ ಕಾವ್ಯನಾಮದಿಂದ ಇವರು ಪ್ರಖ್ಯಾತರಾಗಿದ್ದಾರೆ. ಈಕೆ ಮಲಯಾಳಿ ಮತ್ತು ಇಂಗ್ಲಿಷ್ ಲೇಖಕಿ 'ವಿವಾದಾತ್ಮಕ ನಿಷ್ಠುರ ಲೇಖಕಿ ಎಂಬ ಶೀರ್ಷಿಕೆ ಇದೆ. ಭಾವುಕತೆಯಿಂದ ಕಿರುಗತೆಗಳನ್ನು ಬರೆಯುತ್ತಿದ್ದ ಕಾಲದಲ್ಲಿ ಕಾದಂಬರಿಗಳನ್ನು ರಚಿಸಿದರು. ವಿವಾದಗಳ ಅಗ್ನಿಪರೀಕ್ಷೆಯಲ್ಲಿ ಸಾಕಷ್ಟು ಕಠಿಣ ಹಾದಿಯನ್ನು ಇವರು ದಾಟಬೇಕಾಯಿತು. "ಸೋದರಮಾವ, ತಂದೆ, ತಾಯಿ ಮುಂತಾದವರು ಹೇಳಿದ ದಟ್ಟವಾದ ಜೀವನಾನುಭವಗಳಿಗೆ ಅವರು ಅಕ್ಷರ ರೂಪವನ್ನು ಕೊಟ್ಟರು. ಪ್ರಣಯ ಪ್ರೀತಿ, ಪ್ರೇಮ, ವಾತ್ಸಲ್ಯ ಹಾಗೂ ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳ ಕುರಿತಾದ ಅವರ ರಚನೆಗಳು ಈಗಲು ಪ್ರಸ್ತುತ. ಕೇರಳದ ಗ್ರಾಮೀಣ ಬದುಕಿನ ಮುಗ್ಧತೆಗಳನ್ನು ಅವರು ಹಿಡಿದಿಟ್ಟಿದ್ದಾರೆ. ನಗರದ ಸಂಘರ್ಷಯುಕ್ತ ಆತಂಕಕಾರಿ ಬದುಕನ್ನು ಮನುಷ್ಯ ಮನಸ್ಸುಗಳ ಸಂಕೀರ್ಣತೆಗಳನ್ನು ಅವರು ತೆರೆದಿಟ್ಟಿದ್ದಾರೆ". (Wikipedia.org)

'ಸಮರ್ ಇನ್ ಕಲ್ಕತ್ತಾ' ಇವರ ಕವನ ಸಂಕಲನ, ಈ ಸಂಕಲನದ ಮೂಲಕ ಜಗತ್ತಿನ ಸಾಹಿತ್ಯಾಸಕ್ತರ ಗಮನ ಸೆಳೆದರು. ಅವರು ಬರೆದ 'ಎಂಡೆಕತ' (ನನ್ನ ಕತೆ) ಪತ್ರಿಕೆಯೊಂದರಲ್ಲಿ ಧಾರವಾಹಿಯಾಗಿ ಪ್ರಕಟವಾಗುತ್ತಿತ್ತು. ಕೇರಳ ಜನತೆಯ ಟೀಕೆಗೆ ಗುರಿಯಾಗಿತ್ತು. ನನ್ನ ಕತೆ ಇಂಗ್ಲೀಷಿಗೆ ಭಾಷಾಂತರವಾಗುವುದರ ಜೊತೆಗೆ ಹದಿನೈದು ವಿದೇಶಿ ಭಾಷೆಗಳಿಗೆ ಅನುವಾದಗೊಂಡಿದೆ. 'ಕನ್‌ಫೆಷನಲ್ ಪೊಯೆಟ್ರಿ ಎಂಬ ನವೀನ ಮಾದರಿಯ ಪದ ಸಂಕುಲ, ಶೈಲಿಗಳು, ಹೆಣ್ಣಿನ ಮನಸ್ಸಿನ ಒಳತೋಟಿಯನ್ನು ಅನಾವರಣಗೊಳಿಸಿದೆ' ಕಮಲಾದಾಸ್‌ರವರು ಕವಿತೆ ಬರೆಯುವುದು ಸತ್ಯಶೋಧ ಎನ್ನುತ್ತಿದ್ದರು. ಮುಕ್ತ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು.

Poemhunter.com ಇಲ್ಲಿಯೂ ಕಮಲಾದಾಸ್‌ರವರ ಬಗ್ಗೆ ಮಾಹಿತಿ ಇದೆ. ಸಣ್ಣಕತೆ, ಆತ್ಮಚರಿತ್ರೆಯ ಮೂಲಕವೇ ತಮ್ಮನ್ನು ತಾವು ಗುರುತಿಸಿಕೊಂಡವರು. 'ಸಮರ್ ಇನ್ ಕಲ್ಕತ್ತಾ' ಭಾರತೀಯ ಇಂಗ್ಲಿಷ್ ಸಾಹಿತ್ಯ ಸಂದರ್ಭದಲ್ಲಿ ತಾಜತನವನ್ನು ತಂದೊಡ್ಡಿತು. ಕಮಲಾದಾಸ್‌ರವರ ಕೆಲವು ಪ್ರಮುಖ ಕತೆಗಳನ್ನು ಹೆಸರಿಸುತ್ತಾರೆ. 'ಪಕ್ಷಿಯುಡೆ ಮನಮ್', 'ನಯಪಾಯಸಮ್', 'ತಣಪ್ಪು', 'ಚಂದನದ ಮರಂಗಳ್' ಮುಂತಾದವು. ಕಾವ್ಯದಲ್ಲಿನ ಸ್ತ್ರೀತ್ವ ಶೃಂಗಾರ ರಸವನ್ನು ಅಭಿವ್ಯಕ್ತಿಸುವ ಕಾವ್ಯಗಳನ್ನು ಬರೆದಿದ್ದಾರೆ.

'ಕಮಲಾದಾಸ್' ರವರ 'ನನ್ನ ಕತೆ'ಯನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ಟಿ. ಸುಜನಿ ಅವರು ಸಂಶೋಧನಾ ಲೇಖನವು www.rjelal.com ನಲ್ಲಿ ದೊರೆಯುತ್ತದೆ. ಅದರ ಉದ್ದೇಶ, ಆಶಯವನ್ನು ಇಲ್ಲಿ ಚರ್ಚಿಸುತ್ತೇನೆ. ಯಾವುದೇ ಅಳುಕಿಲ್ಲದೆ ನಿರ್ಭಯವಾಗಿ ಪುರುಷ ಸಮಾಜದ ಓರೆಕೋರೆಯನ್ನು ಬರವಣಿಗೆಗೆ ತಂದಿದ್ದಾರೆ. ಅವರ ಬದುಕು ತೆರೆದ ಪುಸ್ತಕದಂತೆ, ವಸಾಹತು ಮನಸ್ಥಿತಿಗೆ ಬಾಲ್ಯದಿಂದಲೂ ಪ್ರತಿರೋಧ ತೋರುತ್ತ ಬಂದವರು ಕಮಲಾದಾಸ್. ತಂದೆಯ ಪ್ರಭುತ್ವವನ್ನು ಗಂಡನ ಪ್ರೀತಿಯಿಲ್ಲದ ವರ್ತನೆಯನ್ನು ತನ್ನದೇ ಆದ ದಾರಿಯಲ್ಲಿ ನಿರಾಕರಿಸುತ್ತಾ ಬಂದವರು. ಯಾವುದೇ ಆತಂಕವಿಲ್ಲದೆ ಬದುಕಿನ ಖಾಸಗಿತನವನ್ನು ವ್ಯಕ್ತಪಡಿಸುತ್ತಾ ಬಂದವರು ಕಮಲಾದಾಸ್.

ಬುದ್ಧಿಗೆ ತೋಚಿದ್ದನ್ನು ಬರಹಕ್ಕಿಳಿಸುವುದು ಎಲ್ಲರಿಂದಲೂ ಸಾಧ್ಯವಿಲ್ಲ, ಹಾಗೆ ಬರೆದವರನ್ನು ಸಮಾಜ ಒಪ್ಪುವುದಿಲ್ಲ. ಇಂತ ಎಲ್ಲ ಅಡೆತಡೆಗಳನ್ನು ಮೀರಿ ಬರೆದವರು ಕಮಲಾದಾಸ್.

'ನನ್ನಕತೆ'ಯಲ್ಲಿ ತನ್ನತನದ ಶೋಧ' ಎಂಬ ವಿಷಯವನ್ನು ಕುರಿತು ಅನುಪಮ ಎಲ್. ಅವರ ಸಂಶೋಧನಾ ಲೇಖನ www.the-criterion.com ಲಭ್ಯವಿದೆ. ಮುಕ್ತ ಮತ್ತು ವಿವಾದಾಸ್ಪದ ಆತ್ಮಕಥನ ಎನ್ನುತ್ತಾರೆ. ಸಾಹಿತ್ಯ ಲೋಕದಲ್ಲಿ ಸಂಚಲನವನ್ನು ತಂದೊಡ್ಡಿದೆ. ಮಹಿಳಾ ಬದುಕಿನ ಹಲವು ಸ್ತರಗಳನ್ನು ಪರಿಚಯಿಸುತ್ತದೆ. ಹಲವು ಕಾವ್ಯಗಳ ಮತ್ತು 'ನನ್ನಕತೆ' ಇವುಗಳ ಕುರಿತ ಚರ್ಚೆಯಿದೆ. ಹಲವು ವಿಮರ್ಶಕರ ಅಭಿಪ್ರಾಯಗಳಿವೆ.

ಕಮಲಾದಾಸ್‌ರವರ ಬರವಣಿಗೆಯನ್ನು ಕುರಿತು ಶೂದ್ರ ಶ್ರೀನಿವಾಸ್ ಹೀಗೆ ಹೇಳುತ್ತಾರೆ. "ಕಮಲಾದಾಸ್‌ರವರ ಸಾಹಿತ್ಯವನ್ನು ಮೂರುವರೆ ದಶಕಗಳಿಂದ ಅನುವಾದದ ಮೂಲಕ ಓದುತ್ತಾ ಬಂದಿದ್ದೇನೆ. ಪ್ರತಿಯೊಂದು ಬಾರಿ ಆಕೆಯ ಕಥೆಯನ್ನೋ, ಕವನವನ್ನೋ ಓದಿದಾಗ ವಿಷಾದಪೂರಿತ ಒಂದು ರೀತಿಯ ಥ್ರಿಲ್‌ನ್ನು ಅನುಭವಿಸುತ್ತ ಬಂದಿದ್ದೇನೆ" (ಶೂದ್ರ ಸೆಪ್ಟೆಂಬರ್ –

ಡಿಸೆಂಬರ್ 2010, ಪು.ಸಂ. 99) ಕಮಲಾದಾಸ್‌ರವರ ಸಾಹಿತ್ಯದ ಗಾಂಭೀರ್ಯತೆಯು ಈ ಮೇಲಿನ ಮಾತುಗಳಿಂದ ಅರಿವಿಗೆ ಬರುತ್ತದೆ.

www.entoes.com ಕಮಲಾದಾಸ್‌ರವರ ಬರಹಗಳ ಪರಿಚಯ, ಜೀವನ ಚರಿತ್ರೆಯ ಬಗೆಗಿನ ಸಂಗತಿಗಳು ಸಂದರ್ಶನದ ರೂಪದಲ್ಲಿ ಚರ್ಚೆಯಾಗಿದೆ.

lincoln.ac.uk ಬರ್‌ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದ ಫ್ಲೋರಿಯನ್ ಡಿಮಾಂಟ್ ಕಮಲಾದಾಸ್‌ರವರನ್ನು 'ಸ್ವಪ್ರಜ್ಞೆಯ ಅಭಿವ್ಯಕ್ತಿ' ಎಂಬ ಹೆಸರಿನಲ್ಲಿ ವಿವರಿಸುತ್ತಾರೆ. ಭಾರತದಲ್ಲಿ ಕಮಲಾದಾಸ್‌ರವರು ಪ್ರಸಿದ್ಧಿ ಪಡೆಯಲು ಮುಖ್ಯ ಕಾರಣವನ್ನು ಹೀಗೆ ಹೇಳುತ್ತಾರೆ. ಅವರು ಕಾವ್ಯದಲ್ಲಿ ತಮ್ಮ ಸ್ವಪ್ರಜ್ಞೆಯನ್ನು ಅಭಿವ್ಯಕ್ತಿಸುವುದೇ ಕಾರಣ ಎನ್ನುತ್ತಾರೆ. ಕಾವ್ಯವನ್ನು ಕುರಿತಾದ ದೀರ್ಘ ಚರ್ಚೆಯನ್ನು ಇಲ್ಲಿ ಕಾಣಬಹುದಾಗಿದೆ.

blogspot.com - ಅವರೇ ಹೇಳಿಕೊಳ್ಳುವಂತೆ ಕಮಲಾದಾಸ್ ತ್ರಿಭಾಷಿಗರು, ಎರಡು ಭಾಷೆಯಲ್ಲಿ ಬರೆಯುತ್ತಾರೆ, ಒಂದು ಭಾಷೆಯಲ್ಲಿ ಕನಸು ಕಾಣುತ್ತಾರೆ. ಬರವಣಿಗೆಯಲ್ಲಿ ಸೂಕ್ಷ್ಮತೆ, ಮೋಹವು ಕಾಣ ಬರುತ್ತದೆ. ಕಮಲಾದಾಸ್‌ರವರ ಕಾವ್ಯವನ್ನು ಕುರಿತು ಹಲವು ವಿಮರ್ಶಕರ ಚರ್ಚೆಯೂ ಇದೆ. ಬಹುತೇಕರು 'ಕನ್‌ಫೆಶನಲ್ ಪೋಯೆಟ್' ಎಂಬ ಹಣೆ ಪಟ್ಟಿಯನ್ನು ಅಂಟಿಸಿದ್ದಾರೆ.

www.ijhssi.org - ಸಂಶೋಧನಾ ಪತ್ರಿಕೆಯಲ್ಲಿ ಕಮಲಾದಾಸ್‌ರವರ 'ಪುರುಷ ಪ್ರಧಾನತೆ, ಅಸ್ಮಿತೆ ಮತ್ತು ತಾಯ್ತನ' ಈ ವಿಷಯವನ್ನು ಕುರಿತು ಪ್ರೊ. ಶೆರ್ಲಿ ಸ್ಟೀವರ್ಟ್ ಮತ್ತು ಸಂಗೀತಾ ರಾಚಲ್ ಕೊರುತ್ ಇವರು ಅಧ್ಯಯನ ನಡೆಸಿದ್ದಾರೆ. ಮುಕ್ತ ಅಭಿವ್ಯಕ್ತಿಯ ಮೂಲಕ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಚಿತ್ರಣವನ್ನು ಇವರು ಕಟ್ಟಿಕೊಡುತ್ತಾರೆ. ಕೇರಳದಲ್ಲಿ ಹಲವು ಕವಿಗಳು ಮಹಿಳೆಯ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರಾದರೂ ಕಮಲಾದಾಸ್‌ರವರು ಹೆಣ್ಣಿನ ಮನಸು ಮತ್ತು ಕನಸಿನ ಚಿತ್ರಣವನ್ನು ನೀಡುತ್ತಾರೆ. ಕಮಲಾದಾಸ್‌ರವರ ಕತೆಗಳು ಹೆಣ್ಣಿನ ಖಾಸಗಿ ಬದುಕನ್ನು ತೆರೆದಿಡುವ ಪ್ರಯತ್ನವನ್ನು ಮಾಡುತ್ತಿಲ್ಲ, ನೈಜ ಹೆಣ್ಣಿನ ಚಿತ್ರಣವನ್ನು ಕಟ್ಟಿಕೊಡುವ ಮೂಲಕ ಹೆಣ್ಣು ಮನುಷ್ಯಳೆಂದು ಪ್ರೀತಿ, ವಾತ್ಸಲ್ಯಗಳ ನೈಜ ಚಿತ್ರಣವೆಂದು ಹೇಳುತ್ತಾರೆ. ಇವರ ಕಥನದಲ್ಲಿ ಹೆಣ್ಣಿನ ಭಾವುಕ ಲೋಕದ ಚಿತ್ರಣವೇ ಮುಖ್ಯ ಆಶಯ. ತನ್ನ ಬದುಕಿನ ಅನುಭವವನ್ನೇ ಸಾಹಿತ್ಯವಾಗಿಸಿದ್ದು ಓದುಗರಿಗೂ ಮತ್ತು ಕಮಲಾದಾಸ್‌ರವರ ನಡುವೆ ನಿಕಟವಾದ ಸಂಪರ್ಕವನ್ನು ಕಲ್ಪಿಸಿತು.

'ಪುಟ್ಟ ಹಾದರಗಿತ್ತಿಗೊಂದು ಗೊಂಬೆ' ಕತೆಯ ಬಗ್ಗೆ ಚರ್ಚೆಯಿದೆ ಹೆಣ್ಣಾಗಿ ಹುಟ್ಟಿದಕ್ಕೆ ಅನುಭವಿಸುವ ಶಿಕ್ಷೆ ಎಂದು ಅದನ್ನು ಒಪ್ಪಿಕೊಳ್ಳುವ ಕುರಿತು ಸೀತಾ ತಿರಸ್ಕರಿಸುವ ನಿಷ್ಕರ್ಷೆಯೂ ಇದೆ. ತನ್ನತನದ ಹುಡುಕಾಟದ ಮೂಲಕ ಪುರುಷ ಸಮಾಜದ ವಿರುದ್ಧ ಹೋರಾಡುವ ಅನಿವಾರ್ಯತೆಯನ್ನು ಈ ಲೇಖನ ತಿಳಿಸುತ್ತದೆ. ಜಾಲತಾಣದಲ್ಲಿ ಲೇಖನಗಳು, ಸಂಶೋಧನಾ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿದ್ದು ಅನುವಾದದ ಸಾರವನ್ನು, ಪ್ರಮುಖ ಅಂಶಗಳನ್ನು ತಾತ್ವಿಕ ಅಧ್ಯಯನದ ಈ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದೇನೆ.

ಕನ್ನಡದ ಸಂದರ್ಭದಲ್ಲಿ ಸೂಕ್ಷ್ಮವಾಗಿ ಮುಕ್ತವಾಗಿ ಬರೆದ ಕತೆಗಾರ್ತಿ ವೀಣಾಶಾಂತೇಶ್ವರ. 1960ರ ದಶಕದಲ್ಲಿ ಬರೆದ ಕತೆಗಳು ನವ್ಯ ಸಂದರ್ಭಕ್ಕೆ ಹೊಸ ಕಥನ ಶೈಲಿ, ತಂತ್ರವನ್ನು ತಮ್ಮದೇ ದಾಟಿಯಲ್ಲಿ ಮೂಡಿಸಿಕೊಂಡವರು. ಅದೇ ಸಂದರ್ಭದಲ್ಲಿ ಕಮಲಾದಾಸ್ 'ಕನ್‌ಫೆಷನಲ್ ಪೊಯಟ್ರಿ' ಬರೆದರು. ಇಬ್ಬರು ಲೇಖಕಿಯರೂ ಹೊಸ ಮಾದರಿಯಲ್ಲಿ, ಹೊಸ ತಂತ್ರಗಾರಿಕೆ, ಮುಖ್ಯವಾಗಿ ಅಭಿವ್ಯಕ್ತಿ ಕ್ರಮದ ಸ್ವರೂಪವನ್ನು ಮುಕ್ತವಾಗಿ ರೂಢಿಸಿಕೊಂಡವರು. ಇಬ್ಬರು ಲೇಖಕಿಯರ ಕೇಂದ್ರ ಕಾಳಜಿ ಹೆಣ್ಣಿನ ಬದುಕು, ಬದುಕಿನ ಕ್ರಮ, ಹೆಣ್ಣಿನ ಜೀವನ ಶೈಲಿ, ಸಮಾಜದೊಡನೆ ಹೆಣ್ಣಿನ ಸಂಬಂಧ, ಆಕೆಯ ಸ್ಥಾನಮಾನ ಕೌಟುಂಬಿಕ ಚಿತ್ರಣ ಇವೆಲ್ಲಕ್ಕೂ ಮೀರಿ ಹೆಣ್ಣಿನ ಭಾವಲೋಕದ ಚಿತ್ರಣದ ಅನಾವರಣ ಸಾಧ್ಯವಾಗಿರುವುದು ಇಬ್ಬರು ಲೇಖಕಿಯರಿಂದ ಎನ್ನಬಹುದು.

ಅಂತರ್ಜಾಲದಲ್ಲಿ ಬಹುತೇಕ ಚರ್ಚೆ ನಡೆದಿರುವುದು ಕಮಲಾದಾಸ್‌ರವರ ಕಾವ್ಯವನ್ನು ಕುರಿತು. ಮಲಯಾಳಂನಲ್ಲಿ ನಡೆದಿರುವ ಎಲ್ಲಾ ಚರ್ಚೆಗಳನ್ನು ಭಾಷಾ ಕೊರತೆಯ ಈ ಸಂದರ್ಭದಲ್ಲಿ ಅಭ್ಯಸಿಸಲು ಸಾಧ್ಯವಾಗಿಲ್ಲ. ಅದೇನೇ ಆದರೂ ಕನ್ನಡದ ಸಂದರ್ಭಕ್ಕೆ ಕಮಲಾದಾಸ್‌ರವರ ಕಥನವು ಕೆಲವು ಕಡೆಯಲ್ಲಿ ಮಾತ್ರ ಚರ್ಚೆಗೊಳಗಾಗಿದೆ. ಆದ್ದರಿಂದ ವೀಣಾರವರ ಮತ್ತು ಕಮಲಾದಾಸ್‌ರವರ ಕಥನವನ್ನು ಒಟ್ಟಾಗಿ ಗ್ರಹಿಸುವ ಆಶಯ ಇದಾಗಿದೆ.

ಕಮಲಾದಾಸ್‌ರವರ 'ನನ್ನಕತೆ' ಬಹು ಚರ್ಚಿತ ಕೃತಿಯಾಗಿದೆ. ಹಾಗೂ ಕಾವ್ಯವನ್ನು ಕುರಿತು ಹೆಚ್ಚು ಸಂಶೋಧನೆಗಳು ನಡೆದಿವೆ. ಆದರೆ ಕನ್ನಡದ ಸಂದರ್ಭದಲ್ಲಿ ಕೆಲವು ಕತೆಗಳು ಪ್ರಸ್ತಾಪವಾಗಿದೆ. ಆದುದರಿಂದ ಆಯ್ದ ಕತೆಗಳ ಸೂಕ್ಷ್ಮ ಅವಲೋಕನ ಹಾಗೂ 'ಬಾಲ್ಯಕಾಲದ ಸ್ಮರಣೆಗಳು', 'ನೀರ್‌ಮಾದಾಳ ಹೂ ಬಿಟ್ಟ ಕಾಲ', 'ನನ್ನ ಕತೆ' ಇವುಗಳನ್ನು ಪಿಎಚ್.ಡಿ. ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವುದು ಅಧ್ಯಯನಕ್ಕೆ ಪೂರಕವಾದ ಸಂದರ್ಭವನ್ನು ಸೃಷ್ಟಿಮಾಡಿದೆ. ಇದುವರೆಗೂ ಕನ್ನಡದಲ್ಲಿ ವೀಣಾ ಶಾಂತೇಶ್ವರ ಅವರ ಸಾಹಿತ್ಯದ ಬಗ್ಗೆ ಸಾಕಷ್ಟು

ಚರ್ಚೆಗಳು ನಡೆದಿದೆ. ಈ ಮೂಲಕ ಸರಿಸುಮಾರು ನಾಲ್ಕು ದಶಕಗಳಲ್ಲಿ ವೀಣಾ ಬರವಣಿಗೆ ಕನ್ನಡ ಸಾಹಿತ್ಯ ಲೋಕದಲ್ಲಿ ತಂದ ಹೊಸ ಆಶಯಗಳು ಚರ್ಚಿತವಾಗಿದೆ. ಸಂಶೋಧನಾ ಗ್ರಂಥಗಳು, ಲೇಖನಗಳು, ಒಪ್ಪಿಗೆ, ತಿರಸ್ಕಾರಗಳು ಲಭ್ಯವಾದರೂ ವೀಣಾಶಾಂತೇಶ್ವರ ಅವರ ಕತೆಗಳ ಸೂಕ್ಷ್ಮ ಅವಲೋಕನ ನಡೆಸುವ ಮತ್ತು ತಾತ್ವಿಕ ಚೌಕಟ್ಟನ್ನು ನಿರ್ಮಿಸುವ ಆಶಯ ಪ್ರಸ್ತುತ ಪ್ರಬಂಧದ್ದಾಗಿದೆ. ಕೇವಲ ವೀಣಾ ಸಾಹಿತ್ಯದ ಸೂಕ್ಷ್ಮ ಅವಲೋಕನ ಇದಾಗಿರದೆ ಕೇರಳಾ ಮೂಲದ ಲೇಖಕಿ ಕಮಲಾದಾಸ್‌ರವರ ಆಯ್ದ ಕಥನ ಸಾಹಿತ್ಯದ ಮತ್ತು ಅಲ್ಲಿನ ಸಾಂಸ್ಕೃತಿಕ ಸಂದರ್ಭದ ಚರ್ಚೆಯನ್ನು ಪ್ರಬಂಧದಲ್ಲಿ ನಡೆಸಲು ಅವಕಾಶವಿದೆ.

ಕನ್ನಡದ ಸಂದರ್ಭದಲ್ಲಿ ಕೇವಲ ಪರಿಚಯಾತ್ಮಕ ರೂಪ ಹೊಂದಿರುವ ಕಮಲಾದಾಸ್‌ರವರನ್ನು, ಅವರ ಸಾಹಿತ್ಯ ಸೂಕ್ಷ್ಮತೆಯನ್ನು ಕನ್ನಡಕ್ಕೆ ಒದಗಿಸುವ ಅವಕಾಶ ಈ ಮೂಲಕ ಆಗಿದೆ. ಈಗಾಗಲೇ ವೀಣಾ ಶಾಂತೇಶ್ವರ ಅವರನ್ನು ಕುರಿತ ಸ್ಥಾಪಿತ ಮೌಲ್ಯಗಳಿಗಿಂತ ಹೊಸ ಆಶಯಗಳ ಶೋಧ ನಡೆಸುವ, ಹೊಸ ಅಂಶಗಳ ಕಡೆಗೆ ಗಮನ ಹರಿಸುವ ಅವಕಾಶ ಈ ಮೂಲಕ ಸಾಧ್ಯವಾಗಿದೆ. ಏಕವ್ಯಕ್ತಿಗಳ ಸಾಹಿತ್ಯ ಅಧ್ಯಯನಕ್ಕಿಂತ ಭಿನ್ನವೆನಿಸುವ ತೌಲನಿಕ ಸಾಹಿತ್ಯದ ಹೊಳಹುಗಳು, ಸಾಂಸ್ಕೃತಿಕ ಸಂದರ್ಭವನ್ನು ಅವಲೋಕಿಸುವ ಮಾರ್ಗವಾಗಿದೆ. ಹೊಸ ನೋಟಕ್ರಮಗಳು ಮೂಡಿ ಬರುವಲ್ಲಿ ತೌಲನಿಕ ಅಧ್ಯಯನ ಸಹಾಯಕವಾಗಿದೆ. ಈಗಾಗಲೇ ಇಬ್ಬರು ಲೇಖಕಿಯರ ಸಾಹಿತ್ಯದ ಬಗೆಗೆ ತಾಳಿರುವ ನಿಲುವುಗಳ ಚರ್ಚೆಯನ್ನು ಈ ಅಧ್ಯಾಯದಲ್ಲಿ ನಡೆಸಲಾಗಿದೆ.

ಅಧ್ಯಾಯ ೩

ಕನ್ನಡ ಮತ್ತು ಮಲಯಾಳಂ ಮಹಿಳಾ ಬರವಣಿಗೆಯ ಅಂತರ್ ಸಂಬಂಧ

ಅಧ್ಯಾಯ – 3

ಕನ್ನಡ ಮತ್ತು ಮಲಯಾಳಂ ಮಹಿಳಾ ಬರವಣಿಗೆಯ ಅಂತರ್ ಸಂಬಂಧ

ಕಾವೇರಿಯಿಂದ ಗೋದಾವರಿವರೆಗೂ ಹಬ್ಬಿದ ಕನ್ನಡನಾಡು, ಕರುನಾಡು ವೀರ ಪರಂಪರೆಯ ನಾಡು, ವಚನ ವಾಙ್ಮಯರ, ದಾಸವರೇಣ್ಯರು ಸಾಹಿತ್ಯ ರಚಿಸಿದ ಬೀಡು, ವೇದ, ಪುರಾಣ, ಧರ್ಮಶಾಸ್ತ್ರ, ದರ್ಶನ ಜ್ಞಾನ ಸಿದ್ಧಾಂತಗಳ ಮೂಲಕ ಜ್ಞಾನವನ್ನು ಸದಾ ಪಸರಿಸುವಂತಿತ್ತು. ತತ್ವಜ್ಞಾನ, ಆಯುರ್ವೇದ, ರಾಜನೀತಿ, ಗಣಿತ, ವಿಜ್ಞಾನ, ಸಾಹಿತ್ಯ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಕರ್ನಾಟಕದ ಕೊಡುಗೆ ಅಪಾರವಾದುದು.

ಕೇರಳ ಪೌರಾಣಿಕ ಕಾಲದಲ್ಲೇ ಪ್ರಸಿದ್ಧವಾಗಿತ್ತು. ವಾಲ್ಮೀಕಿ ರಾಮಾಯಣದಲ್ಲಿ ಸುಗ್ರೀವನು ಸೀತಾನ್ವೇಷಣಕ್ಕಾಗಿ ಒಂದೊಂದೇ ಪ್ರದೇಶವನ್ನು ವಾನರರಿಗೆ ಹೆಸರಿಸುವಾಗ ಕೇರಳವನ್ನು ಉಚ್ಚರಿಸುತ್ತಾನೆ. ಮಹಾಭಾರತದಲ್ಲಿ ರಾಜಸೂಯಯಾಗಕ್ಕೆ ಸಿದ್ಧತೆ ನಡೆಸುವಲ್ಲಿ ಕೇರಳದ ಉಲ್ಲೇಖವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೇರಳದ ಪ್ರಸ್ತಾಪವಿದೆ. ರಾಮಾಯಣದ ಕಿಷ್ಕಿಂದಾ ಕಾಂಡದಲ್ಲಿ 41ನೆಯ ಸರ್ಗ 13ನೆಯ ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ.

"ಆಂಧ್ರವುಂ ಪುಂಡ್ರವುಂ ಚೋಳವುಂ
ಪಾಂಡ್ಯವುಂ ಮಲಯಾಳವುಂ
ಪುಗಣಂ ಧಾತುವರ್ಗತೆಯಣಿಯುಂ
ಸಹ್ಯ ಶೈವಂ.."
(ತುಷಾರ:21)

ದ್ರಾವಿಡ ಭಾಷಾ ಕುಟುಂಬದಲ್ಲಿ ಕನ್ನಡ ಮತ್ತು ಮಲಯಾಳಂ ಬಹು ಮುಖ್ಯ ಭಾಷೆಯಾಗಿದೆ. 95% ಮಲಯಾಳಂ ಮಾತನಾಡುವ ಜನ ಕೇರಳದಲ್ಲಿದ್ದಾರೆ. ಅದರದೇ ಆದ ಭಾಷಾ ಲಿಪಿ ಎರಡೂ (ಕನ್ನಡ–ಮಲಯಾಳಂ) ಭಾಷೆಗಳಿಗಿದೆ. ವಾಸ್ಕೋಡಿಗಾಮ 1498ರಲ್ಲಿ ಕೇರಳಾದ ಕ್ಯಾಲಿಕಟ್‌ವರೆಗೆ ಬಂದದ್ದು ಐತಿಹಾಸಿಕ ಸಂಗತಿ. ಬ್ರಿಟೀಷ್ ಕಾಲದಲ್ಲಿ ಮಿಷನರಿ ಮುದ್ರಣಾಲಯಗಳು ಸ್ಥಾಪನೆಯಾದವು. ಸಾಹಿತ್ಯ ದೃಷ್ಟಿಯಿಂದ ನೋಡುವುದಾದರೆ 'ಪಾಟ್ಟು' (ಕಾವ್ಯ ಪ್ರಕಾರ) ಪ್ರಕಾರ ಆರಂಭಗೊಂಡದ್ದು ಕ್ರಿ.ಶ. 12ನೇ ಶತಮಾನದ ರಾಮಚರಿತ ಪಾಟ್ಟು ಮೂಲಕವಾಗಿದೆ. ನಾಡನ್‌ಪಾಟ್ಟುಗಳು ಪುರಾಣಗಳ ಆಶಯಾನುವಾದಗಳಾದರೆ, ಸಂಘಕ್ಕಳಿಪಾಟ್ಟುಗಳು ಕಾಳೀ ಆರಾಧನೆಗೆ ಸಂಬಂಧಿಸಿದ್ದು. ಸಾಮಾಜಿಕ ಆಚರಣೆಗಳ ಹಾಡುಗಳು,

ಕೃಷಿ ಪಾಟ್ಟು, ಪುಳ್ಳವನ್ ಪಾಟ್ಟು, ವೇಲನ್ ಪಾಟ್ಟು, ಪಾಣನ್ ಪಾಟ್ಟು ವಡಕ್ಕನ್ ಪಾಟ್ಟುಗಳು, ತೆಕ್ಕನ್ ಪಾಟ್ಟುಗಳು, ಕೃಷ್ಣಗಾಥ (ಇದು ಸಾಹಿತ್ಯ ಮಟ್ಟಕ್ಕೇರಿದ ಜಾಪನದ ಹಾಡುಗಳು) ಹೀಗೆ ಹಲವು ಸ್ಥರಗಳಲ್ಲಿ ಕಾವ್ಯ ಪ್ರಕಾರ ಬೆಳೆದು ಬಂದರೆ, 'ಭಾಷಾ ಕೌಟಲೀಯ' 9–10ನೇ ಶತಮಾನದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ವಿವರಣಾತ್ಮಕ ಭಾಷಾಂತರ ಕೃತಿಯಾಗಿದೆ. ನಂತರದಲ್ಲಿ ಆಧುನಿಕತೆ ಬರವಣಿಗೆಗೆ ಹೊಸ ಲಯವನ್ನು ತಂದಿತು. 'ಮಲಬಾರ್' ಬ್ರಿಟೀಷ್ ನೇರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಯಿತು. ಮೈಸೂರು ಪ್ರಾಂತ್ಯವು ಸಹ ಬ್ರಿಟೀಷರ ಆಡಳಿತದಲ್ಲಿ ಹಲವು ಬದಲಾವಣೆಗಳನ್ನು ಕಂಡಿತು. ಆಧುನಿಕತೆಯ ಉದಯ ಬದುಕಿನಲ್ಲಿ ಹಲವು ಪಲ್ಲಟವನ್ನು ತರಲು ಕಾರಣವಾಯಿತು. ಏನೇ ಆದರೂ ದ್ರಾವಿಡ ಭಾಷಾ ಸಂದರ್ಭಗಳು ಒಟ್ಟೊಟ್ಟಾಗಿ ಸಾಗಿದ ಕಾಲದ ಭಿನ್ನ ನೆಲೆಗಳನ್ನು ಗುರುತಿಸಬಹುದು. "ಲೀಲಾ ತಿಲಕಂ ಎಂಬ ಹದಿನೈದನೆಯ ಶತಮಾನದ ಮಲಯಾಳಂ 'ಮಣಿಪ್ರವಾಳ ಸಾಹಿತ್ಯ ಅಲಂಕಾರ' ಗ್ರಂಥದಲ್ಲಿ ಕನ್ನಡದಲ್ಲಿ ನಿಘಂಟುಗಳೇ ಇಲ್ಲ ಎಂಬ ಹೇಳಿಕೆಯಿದೆ." (ಕೇರಳ ಕಥನ, ಮೋಹನ ಕುಂಟಾರ್:51) ಹೀಗೆ ನೆರೆಹೊರೆ ರಾಜ್ಯಗಳು ಒಂದಕ್ಕೊಂದು ಸಾಂಸ್ಕೃತಿಕ ಸಂಬಂಧ ಹೊಂದಿರುತ್ತದೆ. ಹಾಗೆ ಸಾಹಿತ್ಯವೂ ಅಂತರ್ ಸಂಬಂಧ ಉಳ್ಳದ್ದಾಗಿರುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ಹೊಸಲಯ ಕಂಡದ್ದು 20ನೇ ಶತಮಾನದಲ್ಲಿ. ರಾಜಕೀಯ, ಸಾಮಾಜಿಕ ಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ದೇಸಿ ಪರಿಕಲ್ಪನೆ, ಬಿಡುಗಡೆಯ ಆಶಯ, ಹೋರಾಟ, ಚಳವಳಿಗಳು, ಇಂಗ್ಲಿಷ್ ಭಾಷಾಜ್ಞಾನ, ಆಡಳಿತಕ್ರಮ, ಜೀವನ ಶೈಲಿ ಹಲವು ಪಲ್ಲಟಗಳಿಗೆ ಕಾರಣವಾಯಿತು. ಈ ಬದಲಾವಣೆ ಹೆಣ್ಣಿನ ಬದುಕಿನ ಕ್ರಮದ ಮೇಲೂ ಆಯಿತು. 19–20ನೇ ಶತಮಾನ ಭಾರತದಲ್ಲಿ ಗುರುತರವಾದ ಬದಲಾವಣೆಯಾಯಿತು. ಸಾಹಿತ್ಯ ರಚನೆಯಲ್ಲೂ ಬಹುಮುಖ್ಯ ಅಂಶಗಳು ಬೆಳಕಿಗೆ ಬಂದಿತು. ಇಡೀ ವಿಶ್ವದಲ್ಲೇ ಸ್ತ್ರೀ ವಿಮೋಚನೆಯ ಆಶಯ ಸಹಜವಾಗಿ ಮೂಡಿ ಬಂದಿತು.

ಇಪ್ಪತ್ತನೆ ಶತಮಾನದ ಆರಂಭದಲ್ಲಿ ನಡೆದ ಅನೇಕ ಚಳವಳಿಗಳು ಮಹಿಳೆಯರು ಒಗ್ಗೂಡಲಿಕ್ಕೆ ಸಹಕಾರಿಯಾಯಿತು. ಏನೇ ಸಂಘಟನೆ ಬದಲಾವಣೆ ಕಂಡು ಬಂದರೂ ಮಹಿಳೆಯರ ಬದುಕು ಅವಗಣನೆಗೆ ತಳ್ಳಲ್ಪಟ್ಟ ಸ್ಥಿತಿಯಾಗಿತ್ತು. ಸುಧಾರಣಾ ಮನೋಭಾವ ಒಂದೆಡೆ ಇತ್ತು. ಕೇರಳದಲ್ಲಿ "ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ನಡೆದ ಮುಷ್ಕರಗಳು, ನಂಬೂದರಿ–ನಾಯರ್–ಈಳವ–ಹೊಲೆಯ ಎಂಬೀ ಜಾತಿಗಳಿಗೆ ಸೇರಿದ ಎಲ್ಲರ ಅಭಿವೃದ್ಧಿಗಾಗಿ ಮತ್ತು ಆ ಜಾತಿಗಳೊಳಗಿನ ಅನಾಚಾರಗಳ ವಿರುದ್ಧ ನಡೆದ ಹೋರಾಟಗಳೆಲ್ಲವೂ ವಾಸ್ತವದಲ್ಲಿ

ಸ್ತ್ರೀ ವಿಮೋಚನಾ ಹೋರಾಟಗಳಾಗಿ ರೂಪುಗೊಂಡವು. ಶ್ರೀನಾರಾಯಣಗುರು, ಚಟ್ಟಂಬಿ ಸ್ವಾಮಿಗಳು, ವಿ.ಟಿ.ಭಟ್ಟಾತಿರಿಪ್ಪಾಡ್, ಅಯ್ಯಂಕಾಳಿ ಮೊದಲಾದ ಸಾಮಾಜಿಕ ನೇತಾರರ ಹೆಸರುಗಳು ಇಲ್ಲಿ ಸ್ಮರಣೀಯ." (ಕೇರಳದಲ್ಲಿ ಸ್ತ್ರೀ ಪರ ಹೋರಾಟ ನಡೆದು ಬಂದ ದಾರಿ(ಅಪ್ರಕಟಿತ ಲೇಖನ) ಪಾರ್ವತಿ ಐತಾಳ್:01) ಕರ್ನಾಟಕದಲ್ಲೂ ಮಹಿಳಾ ಸಂಘಟನೆ, ಚಳವಳಿಗಳು ಸಹಜವಾಗಿಯೇ ಆಯಿತು.

ಕೇರಳದಲ್ಲಿ ಸವರ್ಣೀಯರು ತಮ್ಮ ಆಚಾರ-ವಿಚಾರಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಿದ್ದರು. 13ನೇ ವಯಸ್ಸಿನ ಹೆಣ್ಣು ಮಕ್ಕಳು ಮನೆಯಲ್ಲೇ ಕುಳಿತಿರಬೇಕಿತ್ತು. ವಿದ್ಯಾಭ್ಯಾಸದ ಯಾವ ಸವಲತ್ತು ಇಲ್ಲದ ಸ್ಥಿತಿ ಅವರಿಗಿತ್ತು. ಇದೇ ರೀತಿ ಕರ್ನಾಟಕದಲ್ಲಿ 'ಬಾಲ್ಯವಿವಾಹ' ರೂಢಿಯಲ್ಲಿತ್ತು. ಹೆಣ್ಣು ಮಕ್ಕಳು ವಿಧವೆಯಾದ ಬಳಿಕ ನಾಲ್ಕು ಗೋಡೆಯ ಒಳಗೆ ಬಂದಿಸಿರುತ್ತಿದ್ದ ಸಂದರ್ಭವನ್ನು ನೆನೆಯಬಹುದು. 'ಬಹುಪತ್ನಿತ್ವ' ಪದ್ಧತಿ ಕೇರಳದ ಮಹಿಳೆಯರ ಸ್ಥಿತಿಯನ್ನು ಮತ್ತೂ ಕಂಗೆಡಿಸಿತ್ತು. ಕೇರಳದಲ್ಲಿ 'ಶಾಂಕರ ಸ್ಮೃತಿ'ಯ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಸ್ಥಿತಿ ಇತ್ತು. ಇದು ಕರ್ನಾಟಕದ ಮೇಲ್ವರ್ಗದ ಮಹಿಳೆಯರಿಗೂ ಅನ್ವಯವಾಗುತ್ತಿದ್ದ ಅಂಶ.

ಕೇರಳ ಸ್ತ್ರೀಯರ ಮುಗ್ಧತೆ, ಅವರು ಹೊರ ಪ್ರಪಂಚಕ್ಕೆ ತಮ್ಮನ್ನು ತಾವು ಒಡ್ಡಿಕೊಂಡವರಲ್ಲ ಎಂಬುದಕ್ಕೆ ಸಾಕ್ಷಿಯಾಗಿ ವಿ.ಟಿ. ಭಟ್ಟಾತಿರಿಪ್ಪಾಡ್ ಅವರ ಕಥೆಯನ್ನು ಉದಾಹರಿಸುತ್ತೇನೆ. 'ಸಮುದ್ರ ಅಂದರೇನು?' ಎಂದು ಕೇಳಿದ ಮಗನಿಗೆ "ದೇವಸ್ಥಾನದ ಕೊಳದ ನಾಲ್ಕು ಪಟ್ಟು ಹೆಚ್ಚು ನೀರಿರುವಂಥದ್ದು ಎಂದು ಹೇಳಿದ ತಾಯಿಯ ಕಥೆಯನ್ನು" (ಕೇರಳದಲ್ಲಿ ಸ್ತ್ರೀ ಪರ ಹೋರಾಟ ನಡೆದು ಬಂದ ದಾರಿ(ಅಪ್ರಕಟಿತ ಲೇಖನ) ಪಾರ್ವತಿ ಐತಾಳ್:05) ಇಲ್ಲಿ ನೆನಪಿಸಿಕೊಳ್ಳಬಹುದು. ಸ್ತ್ರೀ ಜೀವನಕ್ರಮ ಎರಡೂ ಸಂದರ್ಭದಲ್ಲಿ ಆಚರಣೆಯ ಅನುಸರಣೆಯ ಭಾರದಲ್ಲಿ ಕುಗ್ಗಿ ಹೋಗಿತ್ತು. ಕೇಶಮುಂಡನ, ವಿಧವಾ ಜೀವನಕ್ರಮ ಕೂಪದಂತೆ ಹೆಣ್ಣನ್ನು ಕಟ್ಟಿ ಹಾಕಿತ್ತು. ಸಾಮಾಜಿಕ ಆಚರಣೆಯ ವಿರುದ್ಧ 'ಕುರಿಯೇಡತ್ತ್ ತಾತ್ರಿ' ಎಂಬ ಹೆಣ್ಣು ಮಗಳ ಪ್ರತಿರೋಧ ಏಕಾಂಗಿಯಾಗಿ ನಡೆಸಿದ ಪ್ರತಿಭಟನೆ ಸಮಾಜದಲ್ಲಿ ಸಂಚಲನವನ್ನು ಉಂಟು ಮಾಡಿತ್ತು. ಕರ್ನಾಟಕದಲ್ಲಿ ಇಂತಹ ಏಕಮುಖ ಹೋರಾಟ ಕುಟುಂಬ ಮಟ್ಟದಲ್ಲಿ ನಡೆದಿರಬಹುದು, ಇಲ್ಲವೇ ಸಾಮಾಜಿಕ ಸಂಘಟನೆಯ ರೂಪದಲ್ಲಿ ನಡೆದಿರುವ ಸಾಕ್ಷಿಗಳು ಇವೆ. ಈ ಸಂದರ್ಭದಲ್ಲಿ ಹೋರಾಟದ ಹಾದಿ ತೆರೆದುಕೊಂಡಿದ್ದು ಹೆಣ್ಣಿಗೆ ಸಾಮಾಜಿಕ, ಕೌಟುಂಬಿಕ ಹಿಂಸೆಯ ಮೂಲಕವೇ.

ಫ್ರೆಂಚ್ ವಸಾಹತುವಾದಿಗಳಿಂದ ಹಿಂಸಿಸಲ್ಪಟ್ಟ ಓರ್ವ ಮಹಿಳೆ ಜೈಲುಗೋಡೆಗಳ ಮೇಲೆ ತನ್ನ ರಕ್ತದಿಂದ ತನ್ನ ಅನುಭವವನ್ನು ಒಂದು ಪದ್ಯದಲ್ಲಿ ಹೀಗೆ ಬರೆದಿದ್ದಾಳೆ.

"ಗುಲಾಬಿಗೆನ್ನೆಯ ಹೆಣ್ಣು ನಾನಾದರೂ ಭುಜ ಭುಜ ಬೆರೆಸಿ
ಪುರುಷರೊಡನೆ ಸಮಾನವಾಗಿ ಹೋರಾಡುತ್ತಿದ್ದೇನೆ.
ನನ್ನ ಭುಜಗಳ ಮೇಲೆ ನಮ್ಮೆಲ್ಲರ ದ್ವೇಷವನ್ನು
ಹೊರುತ್ತಿದ್ದೇನೆ. ಈ ಜೈಲೇ ನನ್ನ ಪಾಠಶಾಲೆ, ಅದರಲ್ಲಿನ
ಖೈದಿಗಳು ನನ್ನ ಗೆಳೆಯರು, ಕತ್ತಿ ನನ್ನ ಮಗು, ಬಂದೂಕು ನನ್ನ ಗಂಡ"
(ನಮಗೆ ಗೋಡೆಗಳಿಲ್ಲ ಸ್ತ್ರೀವಾದಿ ಪರಿಚಯ, 13)

ಭಾರತದಲ್ಲಿ ಹೀಗೆ ಕ್ರಾಂತಿಕಾರಿ ಘೋಷ ವಾಕ್ಯಗಳ ಪೂರ್ಣ ಪ್ರಮಾಣದ ಪ್ರತಿಭಟನೆಯಾಗಿರಲಿಲ್ಲ, ಬದಲಿಗೆ ಈ ಮಟ್ಟದ ಆಕ್ರೋಶ, ಬಿಡುಗಡೆಯ ಹಂಬಲ, ಹತಾಶೆಯಲ್ಲಿ ಮುಖ್ಯವೆನಿಸುವ ಧ್ವನಿ ಎಲ್ಲಾ ಸ್ತ್ರೀ ಸಮುದಾಯದಲ್ಲೂ ಎತ್ತಿದ ಕೂಗಾಗಿತ್ತು.

ಸಾಮಾಜಿಕವಾಗಿ ಕರ್ನಾಟಕ ಮತ್ತು ಕೇರಳ ರಾಜ್ಯದಲ್ಲಿ ಮಹಿಳೆಯರು ಶೋಷಣೆಗೊಳಪಟ್ಟವರೆ, ಆಚರಣೆ, ರೂಢಿ, ಸಂಪ್ರದಾಯದ ಭಾರ ಹೊತ್ತವರಾಗಿದ್ದರು. ಬ್ರಿಟೀಷ್ ವಿರುದ್ಧ ನಡೆದ ಚಳವಳಿಗಳು ಒಂದೆಡೆ ನಡೆಯುತ್ತಿದ್ದರೆ, ಸ್ತ್ರೀ ಸಮಾನತೆಯ, ಅಸ್ಥಿತ್ವದ ಉಳಿವಿನ ಹಂಬಲವೂ ಹೆಚ್ಚಾಯಿತು. ಕೇರಳದಲ್ಲಿ 'ಮರುಮಕ್ಕತ್ತಾಯ' ಪದ್ಧತಿಯ ಅಳಿವಿಗಾಗಿ ಹೋರಾಟ ನಡೆಯಿತು. ಮಾತೃಮೂಲ ಸಂಸ್ಕೃತಿಯ ಪ್ರಭಾವವೂ ಒಂದೆಡೆ ಇತ್ತು. 'ಸಂಬಂಧಮ್' ವಿವಾಹ ಪದ್ಧತಿ ನಿರ್ಮೂಲನೆಗಾಗಿ 1879ರಲ್ಲಿ ಮಲಬಾರ್ ಮ್ಯಾರೇಜ್ ಅಸೋಸಿಯೇಷನ್ ಸ್ಥಾಪಿಸಿ 'ನಾಯರ್ ವಿವಾಹ ಕಾಯಿದೆ ಜಾರಿ ಮಾಡಲು ಹೋರಾಟ ನಡೆಯಿತು. ನಾಯರ್ ಸ್ತ್ರೀಯರು ಸರಕಾರಕ್ಕೆ ಈ ಮನವಿ ಸಲ್ಲಿಸಿದ್ದರು. ಹಾಗೆಂದು ನಂಬುದರಿ ಸ್ತ್ರೀಯರ ಪರಿಸ್ಥಿತಿ ಉತ್ತಮವಾಗಿಯೇನು ಇರಲಿಲ್ಲ. ಮನೆಯೊಳಗೆ ನಾಲ್ಕು ಗೋಡೆಯ ಮಧ್ಯೆ ಸ್ತ್ರೀಯರು ಕಾಲ ಕಳೆಯಬೇಕಿತ್ತು.

ಶೋಷಣೆಗೊಳಪಟ್ಟ ಅಭದ್ರತೆಯ ಹೊಸ್ತಿಲಲ್ಲಿ ನಿಂತಿದ್ದ ಕೇರಳದ ಮಹಿಳೆಯರು 20ನೇ ಶತಮಾನದ ಆರಂಭದಲ್ಲಿ ಹೋರಾಟಕ್ಕೆ ಮುಂದಾದರು. ಅವರ ದುಃಸ್ಥಿತಿಯನ್ನು ಅರಿತದ್ದೇ ಮೊದಲ ಹೋರಾಟದ ಹೆಜ್ಜೆ ಎನ್ನಬಹುದಾಗಿದೆ. ಸಾಮಾಜಿಕ ಚಳವಳಿಯ ಬಿಸಿ ಇಡೀ ದೇಶವನ್ನೇ ಆವರಿಸಿತ್ತು. ಕರ್ನಾಟಕದಲ್ಲಿ ಬಾಲಕಿಯರ ಶಾಲೆ ತೆರೆಯಲ್ಪಟ್ಟಿತು. ಶಿಕ್ಷಣಕ್ಕೆ ಪ್ರಾಮುಖ್ಯತೆ ದೊರಕಿತು. ಸಂಪ್ರದಾಯದ ಆಚರಣೆ ಕಟ್ಟುನಿಟ್ಟಾಗಿದ್ದರೂ ಅಂತಹ ಸಂದರ್ಭದಲ್ಲೂ ದಿಟ್ಟವಾಗಿ ನಿಂತು ಬದುಕಿ ಬಾಳಿದ ಉದಾಹರಣೆಗಳಿವೆ. ಈ ಸಂದರ್ಭದಲ್ಲಿ ಕನ್ನಡದ ಲೇಖಕಿ

ನಂಜನಗೂಡು ತಿರುಮಲಾಂಬ ಅವರನ್ನು ನೆನಪಿಸಿಕೊಳ್ಳಬಹುದು. 10ನೇ ವಯಸ್ಸಿನಲ್ಲಿ ವಿವಾಹವಾಗಿ ನಾಲ್ಕು ವರ್ಷದಲ್ಲೇ ವೈಧವ್ಯ ಹೊಂದಿದರೂ ಬರಹಗಾರ್ತಿಯಾಗಿ ತನ್ನ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳನ್ನು ನಿರಾಕರಿಸಿದರು. ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿ 'ಸುಶೀಲೆ' ಯಂತಹ ಕಾದಂಬರಿ ಬರೆದರು.

"1982ರಲ್ಲಿ ತ್ರಿಶ್ಯೂರಿನ ಪಾವತ್ತೂರಿನ ಯು.ಪಿ. ಶಾಲೆಯಲ್ಲಿ ಮೊದಲ ಬಾರಿಗೆ ಕೇರಳದ ವಿವಿಧ ಭಾಗಗಳ ಸ್ತ್ರೀಯರು ಒಂದು ಸೇರಿದರು. ಅದರ ನಂತರ ಸ್ತ್ರೀಯರ ಸಮಸ್ಯೆಗಳು ಸಾಮಾನ್ಯ ಸಾಮಾಜಿಕ ಸಮಸ್ಯೆಗಳಿಗಿಂತ ಭಿನ್ನವಾದವುಗಳೆಂಬ ನೆಲೆಯಿಂದ ಚರ್ಚೆಗಳು ಆರಂಭವಾದವು" (ಕೇರಳದಲ್ಲಿ ಸ್ತ್ರೀ ಪರ ಹೋರಾಟ ನಡೆದು ಬಂದ ದಾರಿ(ಅಪ್ರಕಟಿತ ಲೇಖನ) ಪಾರ್ವತಿ ಐತಾಳ್:23) ಆ ಜಾಗೃತಿಯೇ ಮುಖ್ಯವಾಗಿ ಮಹಿಳಾ ಜೀವನಕ್ರಮಕ್ಕೊಂದು ಬದಲಾವಣೆಯನ್ನು ತಂದೊಡ್ಡಿತು. ಅತ್ಯಾಚಾರ, ವರದಕ್ಷಿಣೆಯ ಪ್ರಸಂಗಗಳು ಹಿಂಸಾತ್ಮಕವಾಗಿ, ಹೆಣ್ಣಿನ ಬದುಕು ಶೋಚನೀಯ ಸ್ಥಿತಿ ತಲುಪಿತು. ಕೇರಳದಲ್ಲಿ 'ಮಾನುಷಿ' ಎಂಬ ಸಂಘಟನೆ ಮಾಸಪತ್ರಿಕೆ ಆರಂಭಿಸಿತು. ಇಪ್ಪತ್ತು ಜನರ ಮಹಿಳಾ ನಾಟಕ ತಂಡ ಜಾಗೃತಿ ಮೂಡಿಸುವ ಸಲುವಾಗಿ ಬೀದಿ ನಾಟಕಗಳನ್ನು ಪ್ರದರ್ಶಿಸಿದರು. ಇದು ಬಹಳ ಪರಿಣಾಮಕಾರಿಯಾಗಿ ಆದ ಪ್ರಯೋಗವಾಗಿದೆ. ಮಾನುಷಿ, ಮಾನವಿ, ಬೋಧನಾ, ಸಮತಾ ಇಂತಹ ಸಂಘಟನೆಗಳು ಕೇರಳದಲ್ಲಿ ಮಹಿಳಾ ಜಾಗೃತಿ ಮೂಡಿಸಿದೆ. ಸಾ.ರಾ. ಜೋಸೆಫ್ (ಲೇಖಕಿ) ಈ ಎಲ್ಲಾ ಚಳವಳಿಗಳ ಮುಂಚುಣಿಯಲ್ಲಿದ್ದುದು ಗಮನಾರ್ಹ ಸಂಗತಿ.

ಮಲಯಾಳಂ ಭಾಷೆಯ ಮೇಲೆ ತಮಿಳಿನ ಪ್ರಭಾವ ಸಾಕಷ್ಟಿದೆ. ಕನ್ನಡ ಮತ್ತು ಮಲಯಾಳಂ ಎರಡೂ ಭಾಷೆಯ ಮೇಲೆ ಸಂಸ್ಕೃತ ಭಾಷೆಯ ಪ್ರಭಾವವಿದೆ. "ಕ್ರಿ.ಶ. 17ನೇ ಶತಮಾನದಲ್ಲಿ ಈ ಎರಡೂ ಭಾಷೆಯ ಸಾಹಿತ್ಯಗಳು ನಡುವೆ ಬೆಳೆದ ಸಂಬಂಧ ಮಾತ್ರ ಅತ್ಯಂತ ಕುತೂಹಲಕರವಾಗಿದೆ. ಪಾರ್ತಿಸುಬ್ಬ ವಿರಚಿತ 'ಯಕ್ಷಗಾನ ರಾಮಾಯಣ' ಪ್ರಸಂಗ ಮತ್ತು ಕೊಟ್ಟಾರಕರ ಮಹಾರಾಜನು ಬರೆದ 'ಕಥಕಳಿ ರಾಮಾಯಣ' ಪರಸ್ಪರ ಸಾದೃಶ್ಯವಿದೆ." (ಕೇರಳ ಕಥನ, ಮೋಹನ ಕುಂಟಾರ್:194) ಅನುವಾದ ಎನ್ನುವುದು ಕನ್ನಡ ಮತ್ತು ಮಲಯಾಳಂ ಭಾಷೆಯ ನಡುವೆ ಸಂಪರ್ಕ ಸೇತುವೆಯಾಗಿದೆ, ಅಷ್ಟೇ ಅಲ್ಲ ಸಾಂಸ್ಕೃತಿಕ ಸಂವರ್ಧನೆಯ ಮಹತ್ತರವಾದ ಕಾರ್ಯ ನಿರ್ವಹಿಸುತ್ತಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ, ದಕ್ಷಿಣ ಭಾರತೀಯ ಭಾಷಾ ಸಂಸ್ಥೆ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯ ಆಶಾನ್ ಮೆಮೊರಿಯಲ್ ಟ್ರಸ್ಟ್ ಅನುವಾದಕ್ಕೆ ಸಹಾಯಕವಾಗಿವೆ.

ಇನ್ನು ಸ್ತ್ರೀ ಬರವಣಿಗೆಯನ್ನು ಕುರಿತು ಚರ್ಚೆ ಮಾಡುವುದಾದರೆ ಅಲ್ಲೊಂದು ತೀವ್ರತೆ ಇದೆ. ಪ್ರತಿ ಬರವಣಿಗೆಯ ಸಂದರ್ಭದಲ್ಲಿ ತುರ್ತು ಮತ್ತು ತೀವ್ರತೆಯು ಕಾಡುತ್ತಿರುತ್ತದೆ. ಪೂರ್ವ ನಿರ್ಧರಿತ ನಿಬಂಧನೆಗಳು, ಆಲೋಚನಾ ಕ್ರಮ ಹೆಣ್ಣಿನ ಬರವಣಿಗೆಯ ಮೇಲೆ ಗಾಢವಾಗಿ ಪರಿಣಾಮ ಬೀರಿರುತ್ತದೆ. ಪ್ರದಾನಧಾರೆಯಿಂದ ಅಲಕ್ಷಿಸಲ್ಪಟ್ಟ ಧಮನಿತ ಗುಂಪಿನ ಬರವಣಿಗೆ ಎಂಬ ನಿರಾಕರಣೆಯೂ ಇದೆ. ಆದರೂ ತನಗೆ ತಾನೇ ಲಿಖಿತ ಚರಿತ್ರೆಯೊಂದನ್ನು ಕಟ್ಟಿಕೊಂಡ ಪರಂಪರೆ ಹೆಣ್ಣಿನದು. ಈ ಸಂದರ್ಭದಲ್ಲಿ ಕನ್ನಡ ಮತ್ತು ಮಲಯಾಳಂ ಮಹಿಳಾ ಬರವಣಿಗೆಯ ಅಂತರ್ ಸಂಬಂಧವನ್ನು ಚರ್ಚಿಸುವ ಅಗತ್ಯವಿದೆ. ಎರಡು ಭಿನ್ನ ಹಿನ್ನಲೆಗಳ ನಡುವೆ ಮಹಿಳಾ ಬರವಣಿಗೆ ಮೂಡಿ ಬಂದಿರುವ ಕ್ರಮವನ್ನು ಈ ಮೂಲಕ ಕಾಣಬಹುದಾಗಿದೆ. ಕೇರಳದಲ್ಲಿ ಸಾಹಿತ್ಯ ಕ್ಷೇತ್ರ ಮಹತ್ವದ ಬೆಳವಣಿಗೆ ಕಂಡಿದ್ದು 20ನೇ ಶತಮಾನದಲ್ಲಿ ಅದು 1930ರ ನಂತರ ಆಗಿದೆ. ಹೊಸ ಪ್ರಜ್ಞೆಯೊಂದು ಎರಡೂ ಭಾಷಾ ಸಂದರ್ಭದಲ್ಲಿ ಕೆಲಸ ಮಾಡಿದೆ. ರಾಷ್ಟ್ರೀಯತೆಯ ಬಿಸಿ ಇಡೀ ಭಾರತವನ್ನೇ ಆವರಿಸಿದ ಸಂದರ್ಭ ಅದಾಗಿತ್ತು. ಕೇರಳದಲ್ಲಿ ಸ್ವಾತಿ ತಿರುನಾಳರು ಇಂಗ್ಲಿಷ್ ಶಾಲೆಯನ್ನು ಆರಂಭಿಸಿದರು. ಪಾಶ್ಚಾತ್ಯ ಶಿಕ್ಷಣಕ್ರಮ, ಇಂಗ್ಲಿಷ್ ಭಾಷೆ, ಜೀವನ ಶೈಲಿಯಲ್ಲಾದ ಬದಲಾವಣೆ ಸ್ತ್ರೀ ಬದುಕಿನ ಮೇಲೆ ಮಹತ್ತರ ಪರಿಣಾಮ ಬೀರಿತು.

ಕನ್ನಡದ ಸಂದರ್ಭದಲ್ಲಿ 18ನೆಯ ಶತಮಾನದಲ್ಲಿ ಅಂತಹ ಬರವಣಿಗೆ ಮುನ್ನೆಲೆಗೆ ಬರಲಿಲ್ಲ. ಸಾಂಪ್ರದಾಯಿಕ ಆಲೋಚನಾಕ್ರಮದ ಕಾರಣ ಅಭದ್ರತೆ ಮನೆ ಮಾಡಿತ್ತು. 19ನೇ ಶತಮಾನದ ಕೊನೆಯ ಭಾಗ ಹೊಸ ಹುಟ್ಟಿಗೆ ನಾಂದಿಯಾಯಿತು. ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆಗಳು' ಪ್ರಕಟಗೊಳ್ಳುವ ಮೊದಲೇ ಬರವಣಿಗೆಗೊಂದು ಹೊಸ ಲಯ ಬುನಾದಿಯಾಗಿತ್ತು. ಕುವೆಂಪು, ಬೇಂದ್ರೆ, ವಿ.ಕೃ. ಗೋಕಾಕ್ ಮಧುರ ಚೆನ್ನರ ಸೃಜನಶೀಲ ಬರವಣಿಗೆ ಒಂದೆಡೆ, ಬಿ.ಎಲ್. ರೈಸ್ ಕಿಟಲ್, ಪ್ಲೀಟ್, ಆರ್. ನರಸಿಂಹಚಾರ್, ಫ.ಗು. ಹಳಕಟ್ಟಿ, ಡಿ.ಎಲ್.ಎನ್. ತೀ.ನಂ.ಶ್ರೀ ಇವರುಗಳ ಸಂಶೋಧನಾ ಬರವಣಿಗೆಗಳು, ಹಲವು ಬಗೆಯ ಪ್ರಕಾರಗಳ ಹುಟ್ಟು, ಇಂಗ್ಲಿಷ್‌ನ ರೊಮ್ಯಾಂಟಿಸಂನ ಪ್ರಭಾವ ಕನ್ನಡ ಬರವಣಿಗೆಗೆ ಹೊಸ ಲಯವನ್ನೇ ದೊರಕಿಸಿಕೊಟ್ಟಿತು.

ಕೇರಳದಲ್ಲಿ 1889ರಲ್ಲಿ ಚಂದು ಮೆನನ್ ರಚಿತ 'ಇಂದುಲೇಖ' ಕಾದಂಬರಿ ಪ್ರಕಟವಾಯಿತು. ಸಾಮಾಜಿಕ ನೈತಿಕತೆಯೇ ಈ ಕಾದಂಬರಿಯ ಮುಖ್ಯ ಅಂಶವಾಯಿತು. ಸಿ.ವಿ. ರಾಮನ್ ಪಿಳ್ಳೈ ಸಾಂಪ್ರದಾಯಿಕ ವಿಷಯ ಕುರಿತು, ಕುಮಾರ ಆಶಾನ್ ಅಸ್ಪೃಶ್ಯತೆಯ ಕುರಿತ ಬರವಣಿಗೆ ನಡೆಸಿದರು. ರಾಷ್ಟ್ರೀಯವಾದ, ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಇವು

ಕಾದಂಬರಿಯ ವಸ್ತು ಆಯಿತು. ಕೆ.ಎಂ. ಫಣಿಕ್ಕರ್ ಐತಿಹಾಸಿಕ ಕಾದಂಬರಿಗಳನ್ನು ಬರೆದರೆ ಕೆ. ರಾಮಕೃಷ್ಣ ಪಿಳ್ಳೈ ರಾಜಕೀಯ ಕಾದಂಬರಿಗಳನ್ನು ಬರೆದರು. ಹೀಗೆ ಮಲಯಾಳಂ ಸಾಹಿತ್ಯ ಚರಿತ್ರೆ ಬೆಳೆಯುತ್ತಾ ವೈ.ಕಂ, ಪಿ.ಸಿ. ಕುಟ್ಟಿ ಕೃಷ್ಣಂ, ಎಸ್.ಕೆ. ಪೊಟ್ಟಕ್ಕಾಡು, ಕೆ. ರಾಮಕೃಷ್ಣ ಪಿಳ್ಳೈ, ತಕಳಿ ಶಿವಶಂಕರ ಪಿಳ್ಳೈ, ಕೇಶವದಾಸ್ ಇನ್ನು ಮುಂತಾದವರು ಬರವಣಿಗೆಗೆ ಮುಂದಾಗಿದ್ದರು. ಇವರುಗಳ ನಡುವೆ ಮಹತ್ವದ ಹೆಸರು ಗಳಿಸಿದ ಆರಂಭ ಹಂತದ ಮಲಯಾಳಂ ಲೇಖಕಿಯರುಗಳೆಂದರೆ ಲಲಿತಾಂಬಿಕಾ ಅಂತರ್ಜನಂ, ಬಾಲಮಣಿ ಅಮ್ಮ, ಕೆ. ಸರಸ್ವತಿ ಅಮ್ಮ, ನಾಗವಲ್ಲಿ ಆರ್.ಎಸ್. ಕುರುಪ್, ರಾಜಲಕ್ಷ್ಮಿಯವರನ್ನು ಗುರುತಿಸಬಹುದು.

'ಅಂತರ್ಜನಂ' ಎಂದರೆ 'ನಂಬೂದರಿ' ಸ್ತ್ರೀ ಸಮಾಜದ ಹೆಂಗಸರಿಗಿದ್ದ ಸ್ಥಾನಮಾನ. ನಾಲ್ಕು ಗೋಡೆಯ ಮಧ್ಯೆಯೇ ಕಟ್ಟುಪಾಡುಗಳನ್ನು ಪಾಲಿಸಿ ಬದುಕಬೇಕಾಗಿದ್ದ ಸಂದರ್ಭ. 1930ರಲ್ಲಿ 'progressive literature movement' ನಡೆಯಿತು. ನಂತರದಲ್ಲಿ ಮಹಿಳಾ ಬರವಣಿಗೆ ಮಹತ್ತರವಾದ ಬದಲಾವಣೆ ಕಂಡಿತು. ನಂಬೂದರಿ ಸಮಾಜದಲ್ಲಿ ಮೂಡಿದ ಅರಿವಿನ ಪರಿಣಾಮವಾಗಿ ಲೇಖಕಿ ಲಲಿತಾಂಬಿಕಾ ಅಂತರ್ಜನಂ ಇವರು 'ಇದು ನ್ಯಾಯವೇ' ಎಂಬ ಅವರ ಕತೆ ಪುರುಷ ಸಮಾಜದ ವಿರುದ್ಧ ಎತ್ತಿದ ಧ್ವನಿಯಾಗಿದೆ.

ಲಲಿತಾಂಬಿಕಾ ಅಂತರ್ಜನಂ ಕುರಿತಂತೆ ಎಸ್. ಗುಪ್ತನ್ ನಾಯರ್‌ರವರು ಹೀಗೆ ಹೇಳುತ್ತಾರೆ. "ಅಂತರ್ಜನಂ ಓರ್ವ ಹುಟ್ಟು ಕವಯತ್ರಿ, ಅವರ ಭಾಷೆ ಹಾಗೂ ಕಲ್ಪನೆಗಳಲ್ಲಿ ಕವಿತೆ ತುಳುಕುತ್ತದೆ. ಮುಸುಕು ಮಂಜಿನೆಡೆಯಿಂದ ಸೂರ್ಯ ಪ್ರಕಾಶದ ಹಾಗೆ ಆ ಕತೆಗಾರ್ತಿಯರ ಗದ್ಯದ ಮೂಲಕ ಕವಿತೆಯ ಕನಕ ಕಿರಣಗಳು ತಲೆ ಹಾಕುತ್ತದೆ. ಸ್ತ್ರೀಗಷ್ಟೇ ಸಾಧ್ಯವಾಗಬಲ್ಲ ಒಂದು ಮಾರ್ಧವತೆಯ ಸೊಬಗು ಅವರ ಕತೆಗಳಲ್ಲಿ ಸಹಜವಾಗಿ ಇರುತ್ತದೆ" (ಆಯ್ದ ಮಲಯಾಳಂ ಸಣ್ಣ ಕತೆಗಳು, ಮುನ್ನುಡಿಯ ಸಾಲು)

ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ಆಕೆಯ ಬರವಣಿಗೆಯ ಪರಿಣಾಮ ತಿಳಿದು ಬರುತ್ತದೆ. ಇವರ ಕತೆಗಳೆಂದರೆ 'ಮೊದಲ ಕತೆಗಳು', 'ಕಾಲದ ಪುಟಗಳು', 'ಕಣ್ಣೀರಿನ ಮುಗುಳ್ನಗೆ', 'ಕುಸಿದು ಬಿದ್ದ ಪೀಳಿಗೆ', 'ಕಿಂಡಿಯ ಮೂಲಕ', ಇವರ ಕವನ ಸಂಕಲನ 'ನಿಶ್ಯಬ್ಧ ಸಂಗೀತ'

"ಆಧುನಿಕತೆ ಕನ್ನಡದಲ್ಲಿ ಕಾವ್ಯಕ್ಕಿಂತಲೂ ಮೊದಲು ಕಾದಂಬರಿಯಲ್ಲಿ ಕಾಣಿಸಿಕೊಂಡಿತೆನ್ನುವುದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ವದ್ದಾಗಿದೆ" (ಕನ್ನಡ ಕಥನ ಸಾಹಿತ್ಯ:19) ಎಂದು ಜಿ.ಎಸ್. ಆಮೂರರವರು ಅಭಿಪ್ರಾಯ ಪಡುತ್ತಾರೆ. ಪುರಾಣ ಪುಣ್ಯ

ಪ್ರತೀಕಗಳ, ಶೀಲವತಿ, ಪತಿಸೇವೆ, ಪಾತಿವ್ರತ್ಯದ ಮುಸುಕನ್ನು ಸರಿಸಿ ಸಾಮಾಜಿಕವಾಗಿ ಕರ್ನಾಟಕದಲ್ಲಿ ಹೆಣ್ಣು ತೊಡಗಿಕೊಳ್ಳಬೇಕಾದರೆ ಕಥನ ಪ್ರಕಾರ ಬಹು ಮುಖ್ಯ ಮಾಧ್ಯಮವಾಯಿತು. ಅದರಲ್ಲೂ ಮಲಯಾಳಂ ಭಾಷೆಯಲ್ಲಿ ಸಣ್ಣ ಕತೆ ಮಹತ್ವದ ಸ್ಥಾನ ಪಡೆದಿದೆ ಎನ್ನುವುದಕ್ಕೆ ಈ ಮಾತು ಸಾಕ್ಷಿಯಾಗಿದೆ. "The short story is a well-developed branch in Malayalam literature. It shows greater development than the novel" (The Peoples of India:159) (ಈ ಮಾತು ಹೊಸಗನ್ನಡ ಕಥನ ಕುರಿತದ್ದು) ಮಹಿಳಾ ಬರವಣಿಗೆಯು ಕಥನ ಪ್ರಕಾರದಲ್ಲಿ ಹೊಸ ಲಯವನ್ನು ಕಂಡಿದ್ದು ಈ ಮೂಲಕ ಸಾಬೀತಾಗಿದೆ. ಅದರಲ್ಲೂ ಕಾದಂಬರಿಗಿಂತ ಕಥಾ ಪ್ರಕಾರ ಬಹುಮುಖ್ಯ ಪಾತ್ರ ವಹಿಸಿದೆ. ಎಲ್ಲರಲ್ಲೂ ತಲುಪುವಲ್ಲಿ ಸಹಾಯಕವಾಗಿದೆ.

ನಂಜನಗೂಡು ತಿರುಮಲಾಂಬ ಅವರು ಕತೆ, ಕಾದಂಬರಿ, ನಾಟಕ ಕಾವ್ಯ ಅಷ್ಟೆ ಅಲ್ಲದೆ ಕನ್ನಡದ ಪ್ರಥಮ ಪ್ರಕಾಶಕಿಯಾಗಿ 'ಕರ್ನಾಟಕ ನಂದಿನಿ' ಮಾಸಪತ್ರಿಕೆಯನ್ನು ಹೊರತಂದಿದ್ದಾರೆ. ಇವರಂತೆಯೇ 9ನೇ ವಯಸ್ಸಿನಲ್ಲೇ ಬಾಲ ವಿಧವೆಯಾದ 'ಆರ್. ಕಲ್ಯಾಣಮ್ಮ' ಸ್ತ್ರೀಯರು ಎದುರಿಸುವ ಸಮಸ್ಯೆಗಳು, ಮನೋಧರ್ಮವನ್ನು ಕುರಿತು ಬರೆದರು. 1918ರಲ್ಲಿ 'ಪ್ರಿಯಂವದಾ' ಕಾದಂಬರಿ ಬರೆದರು. ಬಾಲ್ಯವಿವಾಹ, ವರದಕ್ಷಿಣೆಯ ಕರಾಳತೆ ಕುರಿತು ಸಾಹಿತ್ಯದಲ್ಲಿ ಪ್ರಸ್ತಾಪಿಸಿದರು. 'ನಿರ್ಮಲೆ' ಸ್ತ್ರೀ ವಿದ್ಯಾಭ್ಯಾಸದ ಮಹತ್ವವನ್ನು ಕುರಿತು ಬರೆದ ಕಾದಂಬರಿಯಾಗಿದೆ. ಇವರು 1917ರಲ್ಲಿ 'ಸರಸ್ವತಿ' ಪತ್ರಿಕೆಯನ್ನು ಹೊರತಂದರು.

'ಮಲಯಾಳಂ ಲೇಖಕಿ 'ಕೆ. ಸರಸ್ವತಿ ಅಮ್ಮ' ಅವರನ್ನು ಮತ್ತೋರ್ವ ಮಹತ್ವದ ಬರಹಗಾರ್ತಿಯಾಗಿ ಗುರುತಿಸಬಹುದಾಗಿದೆ. ಅವರ ಕಾಲ 1919–1975. ಸ್ತ್ರೀ ಸಂದರ್ಭವನ್ನು ಗುರುತಿಸಿ ಬರೆದ ಬರಹಗಾರ್ತಿ. ಇವರ ಮೊದಲ ಕೃತಿ 'ಪ್ರೇಮಭಾಜನ' (1994) ಇದೊಂದು ಲಘು ಮೊದಲ ಮಹಿಳಾ ಕಾದಂಬರಿಯಾಗಿದೆ. 'ಕೆಳನೌಕರಳು', 'ಹೆಣ್ಣು ಬುದ್ಧಿ ದಪ್ಪಗೋಡೆ', 'ಹೆಣ್ಣು ಜನ್ಮ', 'ಮದುವೆಯುಡುಗೊರೆ' ಇವರ ಕಥಾಸಂಕಲನಗಳಾಗಿವೆ. 'ದೇವದೂತಿ' ನಾಟಕವಾಗಿದೆ. ನಾಗವಳ್ಳಿ ಆರ್.ಎಸ್. ಕುರುಪ್ ಹಲವು ನಾಟಕಗಳನ್ನು ಬರೆದಿದ್ದಾರೆ ಅವುಗಳೆಂದರೆ 'ಗಂಟೆ ಗಡಿಯಾರ', 'ಮೂಕ ಪ್ರಾಣಿಗಳು', 'ದಲಮರ್ಮರ', 'ನಂದದೀಪ', 'ಮದುವೆಯೆಂದರೆ ಆಟವಲ್ಲ', 'ತೋಟಿ', 'ಗಂಡು ಮತ್ತು ಹೆಣ್ಣು' ಇವರ ಕಾದಂಬರಿಗಳಾಗಿವೆ.

ಕನ್ನಡದ ಸಂದರ್ಭದಲ್ಲಿ ವಿಶಿಷ್ಟ ಸಂವೇದನೆ ಎಂದರೆ ಮಹಿಳೆಯರು ಸಹ ಸ್ವದೇಶಿ ಚಳವಳಿಯಲ್ಲಿ ಪಾಲ್ಗೊಂಡದ್ದು. ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ ಇವರುಗಳನ್ನು

ಹೆಸರಿಸಬಹುದು ತಿರುಮಲೆ ರಾಜಮ್ಮ 'ಭಾರತಿ' ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದಾರೆ. ಸ್ವಾತಂತ್ರ್ಯ, ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿಯ ಕುರಿತು ಬರೆದರು. ರಾಷ್ಟ್ರೀಯತೆಗೆ ಸ್ಪಂದಿಸಿದ ಅಪರೂಪದ ಕತೆಗಾರ್ತಿ ಈಕೆ.

1993ರಷ್ಟು ಈಚೆಗೆ ಪ್ರಕಟವಾದ 'ತುಳಸಿ ವೇಣುಗೋಪಾಲ' ಅವರ 'ಮುಂಜಾವಿಗೆ ಕಾದವಳು' ಕಥಾಸಂಗ್ರಹಕ್ಕೆ ಮುನ್ನುಡಿ ಬರೆಯುತ್ತಾ ಶ್ರೀ ಯಶವಂತ ಚಿತ್ತಾಲರು "ಸ್ತ್ರೀಗೆ ಅವಳಿಗೆ ಆದ ಅನುಭವ ಲೋಕವಿದೆ, ಅವಳಿಗೆ ವಿಶಿಷ್ಟವಾದ ಪ್ರತ್ಯೇಕವಾದ ಸಂವೇದನೆಯಿಲ್ಲ.." (ಹೆಣ್ಣು ಹೆಂಗಸು, ಶ್ರೀಮತಿ ಹೆಚ್.ಎಸ್:30–31) ಎನ್ನುತ್ತಾರೆ. ಇಂತಹ ಸಂದರ್ಭದಲ್ಲೂ ಮಹಿಳೆ ತನ್ನ ಬರವಣಿಗೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಉದಾಹರಣೆ ಇದೆ. "ಡಾ. ಗಿರಡ್ಡಿ ಗೋವಿಂದರಾಜರಂಥ ಪ್ರಗತಿಪರ ವಿಮರ್ಶಕರೂ ಕೂಡ ನಮ್ಮ ಲೇಖಕಿಯರು ಗುರುತರವಾದ ಸಮಸ್ಯೆಗಳನ್ನು ವಸ್ತುವಾಗಿ ಆಯ್ಕೆ ಮಾಡಿದರೂ, ಸೂಕ್ತವಾಗಿ ಅವುಗಳನ್ನು ನಿರ್ವಹಿಸುವ ತಂತ್ರವನ್ನು ರೂಪಿಸದೆ ಸೋಲುತ್ತಾರೆ." (ಹೆಣ್ಣು ಹೆಂಗಸು, ಶ್ರೀಮತಿ ಹೆಚ್.ಎಸ್:31) ವಸ್ತು, ಸಂವೇದನೆ ಹೊಂದಿರುವ ಲೇಖಕಿಯರು ಬರವಣಿಗೆಯಲ್ಲಿ ತಂತ್ರ, ಶೈಲಿಯನ್ನು ರೂಪಿಸುವಲ್ಲಿ ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ ಮಹಿಳಾ ಸೃಜನಶೀಲ ಬರವಣಿಗೆ ಮತ್ತು ವಿಮರ್ಶೆ ವಿಫುಲವಾಗಿ ವೈವಿಧ್ಯಮಯವಾಗಿ ಬೆಳೆಯುತ್ತಾ ಸಾಗಿದೆ.

ಮಲಯಾಳಂನ ಮತ್ತೊಬ್ಬ ಪ್ರಮುಖ ಕತೆ/ಕಾದಂಬರಿಗಾರ್ತಿ ರಾಜಲಕ್ಷ್ಮಿ (1930–1965) ಇವರ ತಂದೆ ಸ್ವತಂತ್ರ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇವರ ಬರವಣಿಗೆಯಲ್ಲಿ ಆತ್ಮಚರಿತ್ರಾತ್ಮಕ ಅಂಶಗಳು ಕಾಣಬರುತ್ತದೆ. 'ಆತ್ಮಹತ್ಯಾ' 'ಒರು ವಳ್ಷಿಯಮ್ ಕುರೆ ನಿಜಾಲುಕಲುಮ್' (one path and a few shadows) ಬಾಲಮಣಿಯಮ್ಮ ಭಾವಗೀತೆಯ ಪ್ರಕಾರಕ್ಕೆ ಶಾಶ್ವತ ಕೊಡುಗೆ ನೀಡಿದ ಕವಯತ್ರಿ. 'ಕುಟುಂಬಿನಿ', 'ಧರ್ಮಮಾರ್ಗತ್ತಿಲ್', 'ಸ್ತ್ರೀ ಹೃದಯಂ', 'ಭಾವನಯಿಲ್', 'ಪ್ರಭಾಂಕುರಮ್' ಇವರ ಕೃತಿಗಳಾಗಿವೆ. ಕಾವ್ಯ ಪ್ರಕಾರದಲ್ಲಿ ಕೆ. ಮಾಧವಿಯಮ್ಮ, ಮೇರಿಜಾನ್ ತೋಟ್ಟಂ ಮೇರಿಜಾನ್ ಕೊತ್ತಾಟ್ಟುಕುಳಂ, ಮುದುಕುಳಂ, ಪಾರ್ವತಿ ಅಮ್ಮ ಹೀಗೆ ಹಲವು ಮಂದಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದರು.

ಸ್ವತಂತ್ರ ಪೂರ್ವದಲ್ಲಿ ಮಲಯಾಳಂ ಲೇಖಕಿಯರ ಸಂಖ್ಯೆ ಕನ್ನಡದ ಸಂದರ್ಭಕ್ಕಿಂತ ಕಡಿಮೆಯೇ, ಆದರೆ ಇತ್ತೀಚಿನ ದಿನಗಳಲ್ಲಿ ಮಲಯಾಳಂ ಮಹಿಳಾ ಸಾಹಿತ್ಯದ ದಿಕ್ಕು ಬದಲಾಗಿದೆ, ಬರೆಯುವ ಮಹಿಳೆಯರು, ವಿಷಯದ ಆಯ್ಕೆ, ವಸ್ತು ನಿರ್ವಹಣೆಯಲ್ಲೂ ಬದಲಾವಣೆಯಾಗಿರುವ ಅಂಶ ಈ ಸಂದರ್ಭದಲ್ಲಿ ತಿಳಿಯಬರುತ್ತದೆ. ಕನ್ನಡ ಸಂದರ್ಭದಲ್ಲಿ

ಲೇಖಕಿಯರ ಬಹು ದೊಡ್ಡ ಪರಂಪರೆ ಅಂದಿನ ಸಾಮಾಜಿಕ, ರಾಜಕೀಯ, ಕೌಟುಂಬಿಕ, ವೈಯಕ್ತಿಕ ಧಾರೆಗಳಲ್ಲಿ ಮೂಡಿ ಬಂದಿರುವುದಕ್ಕೆ ಹಲವು ಉದಾಹರಣೆಗಳಿವೆ.

ಶ್ಯಾಮಲಾದೇವಿ ಬೆಳಗಾಂವ್‌ಕರ್ ವೈಶ್ಯಾಕುಲ ಸಂಪ್ರದಾಯಗಳನ್ನು ಖಂಡಿಸಿ ಬರೆದವರು. 'ಹೊಂಬಿಸಿಲು', 'ಹೂಬಿಸಿಲು', 'ಕರುಳ ಕತ್ತರಿ' ಕಥಾ ಸಂಕಲನಗಳಾಗಿವೆ. ಆ ಕಾಲದ ಮತ್ತೊಬ್ಬ ಬರಹಗಾರ್ತಿ ಇಂಗ್ಲಿಷ್, ಕನ್ನಡ, ಮರಾಠಿ ಭಾಷೆ ಬಲ್ಲ ಅನುವಾದಕಿಯಾಗಿದ್ದರು. 'ಕೊಡಗಿನ ಗೌರಮ್ಮ', 'ಬೆಳಗೆರೆ ಜಾನಕಮ್ಮ', ಬದುಕಿದ್ದು ಕಡಿಮೆ ಅವಧಿಯಾದರೂ ನೆನಪಿನಲ್ಲಿ ಉಳಿಯುವ ಸಾಹಿತ್ಯ ಸೃಷ್ಟಿಸಿದ್ದಾರೆ. ಆ ಕಾಲದ ಮಹಿಳಾ ಸಮಸ್ಯೆಗಳ ಚಿತ್ರಣವೂ ಆಗಿದೆ. ವಿಧವೆಯರ ಸ್ಥಿತಿ, ಪ್ರಕೃತಿ, ದಾಂಪತ್ಯ ರಾಷ್ಟ್ರೀಯತೆ, ಗತ ಸಂಸ್ಕೃತಿ ಇವುಗಳ ಪ್ರಜ್ಞೆ ಬರವಣಿಗೆಯಲ್ಲಿ ಮೂಡಿ ಬಂದಿದೆ.

ಸರಸ್ವತಿ ಬಾಯಿ ರಾಜವಾಡೆ ಅವರು ಮನುಷ್ಯ ಸಂಬಂಧಗಳ ವಿಘಟನೆ, ತ್ಯಾಗ, ಪ್ರೀತಿ, ಹತಾಶೆಯ ಅಂಶಗಳನ್ನು ಕಥನದಲ್ಲಿ ಪ್ರಸ್ತಾಪಿಸುತ್ತಾರೆ. ವಾಣಿ ಎಂದೇ ಪ್ರಖ್ಯಾತರಾದ ಬಿ.ಎನ್. ಸುಬ್ಬಮ್ಮ ಹೆಣ್ಣಿನ ಮನೋಧರ್ಮ, ಪ್ರಣಯ, ಸ್ತ್ರೀಪುರುಷ ಸಂದರ್ಭ ಶೀಲದ ಪರಿಕಲ್ಪನೆ, ಹೊಂದಾಣಿಕೆಯ ಬದುಕನ್ನು ಕುರಿತು ಬರೆಯುತ್ತಾರೆ.

ಬಾಲಮ್ಮಾಳ್ ಎಂಬ ಕನ್ನಡದ ಲೇಖಕಿ 'ಭಾರತದ ಮಹಿಳೆಯರ ಅಭ್ಯುದಯ', ದೇಶಸೇವೆ, ಸ್ತ್ರೀ ಪುರುಷರ ವಿದ್ಯಾಭ್ಯಾಸ, ಈ ಕುರಿತು ಬರೆದಿದ್ದಾರೆ. ಪರಂಪರೆಯ ಬೆಚ್ಚಗಿನ ರಕ್ಷಣೆಯಲ್ಲೇ ಬರೆದ ಹಲವು ಉದಾಹರಣೆಯನ್ನು ನಾವು ಕಥನಸಾಹಿತ್ಯದಲ್ಲಿ ಕಾಣಬಹುದಾಗಿದೆ. ಎಸ್. ಸುಂದರಮ್ಮ ಸಾಂಪ್ರದಾಯಿಕ ಚೌಕಟ್ಟಿನ ಹೆಣ್ಣಿನ ಬದುಕಿನ ಅನಿವಾರ್ಯತೆಯನ್ನು, ವರದಕ್ಷಿಣೆ ಸಮಸ್ಯೆ, ಬಾಲ್ಯ ವಿವಾಹ, ವೈಧವ್ಯದಂತಹ ದುಃಸ್ಥಿತಿಯನ್ನು ಕುರಿತು ಬರೆದಿದ್ದಾರೆ. ಸೀತಾದೇವಿ ಮೈಸೂರಿನವರು. ರಾಜ್ಯಸುಖ, ಸ್ತ್ರೀ ಸ್ವಾತಂತ್ರ್ಯ, ಪ್ರಜಾಸುಖ ಇವುಗಳನ್ನು ಕುರಿತು ಕೃತಿ ರಚಿಸಿದ್ದಾರೆ.

ಕನ್ನಡದ ಸಂದರ್ಭದ ಎಲ್ಲ ಆರಂಭದ ಹಂತದ ಲೇಖಕಿಯರು ಅಂದಿನ ತುರ್ತನ್ನು ಕುರಿತು ಸಾಹಿತ್ಯ ರಚಿಸಿದ್ದಾರೆ. ಮಲಯಾಳಂ ಮಹಿಳೆಯರು ಸಾಮಾಜಿಕವಾಗಿ ತಮಗೊಂದು ಸ್ಥಾನಗಿಟ್ಟಿಸುವ ಸಲುವಾಗಿ ಹೋರಾಡಿದ್ದಾರೆ. ಕರ್ನಾಟಕದಲ್ಲಿ ಬರವಣಿಗೆಯ ಮಾಧ್ಯಮ ಮಹಿಳೆಯರಿಗೆ ಬಹುದೊಡ್ಡ ಮಾಧ್ಯಮವಾಗಿ ತಮ್ಮ ಸಂದರ್ಭದಿಂದ ಹೊರಬಿದ್ದ ಅನೇಕ ಅಂಶಗಳು ಮೂಡಿಬಂದಿದ್ದು ಸಾಹಿತ್ಯದ ಮೂಲಕ ಆಗಿದೆ. ಬರಹಗಾರ್ತಿಯರು ಎಣಿಕೆಯ ಸಂಖ್ಯೆಯಲ್ಲಿ ಕನ್ನಡದ ಆರಂಭ ಹಂತದಲ್ಲಿ ಹೆಚ್ಚಾಗಿ ಕಾಣಬರುತ್ತಾರೆ. ನಂತರ ಮುಂದಿನ

ಘಟ್ಟದಲ್ಲಿ ಮಲಯಾಳಂ ಮಹಿಳೆಯರ ಬರವಣಿಗೆಯಲ್ಲಿ ಗುರುತರವಾದ ಬದಲಾವಣೆ 60–70ರ ದಶಕದಲ್ಲಿ ಕಾಣಬರುತ್ತದೆ. ಏನೇ ಆದರೂ ಇಲ್ಲೊಂದು ಬದಲಾವಣೆಯ ಹಂಬಲ ತೀವ್ರವಾಗಿರುವ ಕ್ರಮವನ್ನು ಗುರುತಿಸಬಹುದಾಗಿದೆ. ಈ ಎಲ್ಲಾ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆ, ಬದುಕು–ಬರಹ, ಹೆಣ್ಣಿನಲ್ಲಿ ಮೂಡಿದ ಹೊಸ ಪ್ರಜ್ಞೆ, ಶಿಕ್ಷಣ ಕ್ರಮ, ಮಹಿಳಾ ಬರವಣಿಗೆಯ ದಿಕ್ಕನ್ನು ಬದಲಿಸಿರುವುದನ್ನು ಎರಡನೇ ಹಂತದಲ್ಲಿ ಕಾಣಬಹುದಾಗಿದೆ.

"Male domination is conspicuous in every branch of every literature-including Malayalam-not only in the production of literary works but even in the approach to literary and literary theories and perceptions. Certain aspects of grammar, idiomatic expression and symbols are so male oriented that women find it difficult to use them appropriately. However, there have been some significant literary efforts by Malayali women in the 19th and 20 centuries, both in discussive and creative writing. Both categories received afillip with an emergence of Malayalam periodicals (although may of these were edited by men) some general Magzines in Malayalam, too reserved space for women's writing" (ಮಲಯಾಳಂ ಕವಿಯತ್ರಿಯರು, ಮಹಿಳಾ ಸಾಹಿತ್ಯ:129)

ನಿಯತಕಾಲಿಕೆ, ದಿನಪತ್ರಿಕೆಗಳು ಪೂರ್ವಾಗ್ರಹ ಪೀಡಿತವಾದ ಸ್ತ್ರೀ ಸಂಕಥನಗಳನ್ನು ಬಿಡುಗಡೆಗೊಳಿಸುವಲ್ಲಿ ಸಹಾಯಕವಾಯಿತು. ಬದಲಾವಣೆಯ ಆಶಯ ಸ್ತ್ರೀ ಪುರುಷ ಭೇದವಿಲ್ಲದೆ ಸಮಾಜದ ಎಲ್ಲಾ ಸ್ಥರಗಳಲ್ಲೂ ಕಾಣುವ ಅವಕಾಶದಕ್ಕಿದುದಕ್ಕೆ ಇದು ಉದಾಹರಣೆ. ಅದರಲ್ಲೂ 20ನೇ ಶತಮಾನದ ಆರಂಭದಲ್ಲಿ ಪರಿಣಾಮಕಾರಿಯಾಗಿ ಈ ಅಂಶ ಬದಲಾವಣೆಗೆ ಕಾರಣವಾಯಿತು. ಗದ್ಯ ಪ್ರಕಾರ ಬೆಳವಣಿಗೆಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕತೆ, ಕವನಗಳು ಕಾರಣವಾಯಿತು.

ಕನ್ನಡದ ಮಹಿಳಾ ಬರವಣಿಗೆಯ ಎರಡನೆಯ ಹಂತವನ್ನು ಗಮನಿಸುವ ಸಂದರ್ಭದಲ್ಲಿ ಒಂದು ಮುಖ್ಯವಾದ ಅಂಶವನ್ನು ಗುರುತಿಸಿಕೊಳ್ಳಬೇಕಿದೆ. ಆ ಕಾಲದಲ್ಲಿ ಪುರುಷ ಬರವಣಿಗೆಯಲ್ಲಿ ಮೂಡಿ ಬಂದ ಸ್ತ್ರೀ ಬರವಣಿಗೆಯ ಅಭಿವ್ಯಕ್ತಿ ಕ್ರಮ ಯಾವುದಾಗಿದೆ ಎಂಬುದು ಬಹು ಮುಖ್ಯ ಸಂಗತಿ. ಸಾಹಿತ್ಯ ಸಂಕ್ರಮಣ ಕಾಲಘಟ್ಟದಲ್ಲಿ ಆದ ಮಹತ್ತರವಾದ ಬದಲಾವಣೆ ಎಂದರೆ ತಪ್ಪಾಗಲಾರದು. ಆದರ್ಶ ನಾರಿಯ ಕಲ್ಪನೆ, ಶ್ರಮಿಕ ವರ್ಗವಾಗಿ, ಗೃಹಿಣಿಯಾಗಿ ಕುಟುಂಬದಲ್ಲಿ, ಸಾಮಾಜಿಕ ಒಪ್ಪಂದಗಳನ್ನು ಒಪ್ಪಿ ನಡೆಯುವ ಹೆಣ್ಣಾಗಿ, ಶ್ರೇಣೀಕೃತ ವರ್ಗದ

ಎಲ್ಲಾ ಒತ್ತಡಗಳನ್ನು ಎದುರಿಸಿ ಮೌನವಾಗಿ ಸಹನೀಯವಾಗಿ ಪುರುಷ ಬರವಣಿಗೆಯಲ್ಲಿ ಮೂಡಿ ಬಂದ ಹೆಣ್ಣು, ಆದರೆ ಕಾಲಕ್ಕೆ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಮಹಿಳಾ ಬರವಣಿಗೆಯಿಂದ, ಇದು ಅತಿ ಮುಖ್ಯವಾದ ಬದಲಾವಣೆಯಾಗಿದೆ.

ಮಹಿಳೆಯರು ತಮ್ಮ ಬದುಕಿನ ಕ್ರಮವನ್ನು ಕೊರತೆಯನ್ನು ಸಾಹಿತ್ಯದಲ್ಲಿ ಮೂಡಿಸಿದ್ದಾರೆ ಎನ್ನುವುದನ್ನು ಅವಳ ಅಸಹಾಯಕತೆ ಎಂದು ತಿಳಿಯಬೇಕಿಲ್ಲ. ಇದ್ದ ಸ್ಥಿತಿಯಿಂದ ಬಿಡುಗಡೆ ಬಯಸುವ ಹಂಬಲವಾಗಿದೆ. ಈ ನಿಟ್ಟಿನಲ್ಲಿ ಕನ್ನಡದ ಮಹಿಳಾ ಬರವಣಿಗೆಯ ಎರಡನೆ ಹಂತ ಮುಖ್ಯ ಮಾಧ್ಯಮವಾಯಿತು. ಅದೇ ಕಾಲದಲ್ಲಿ ಬರೆದ ಪುರುಷ ರಚನೆಗೂ ಮಹಿಳಾ ಸಾಹಿತ್ಯ ರಚನೆಗೂ ಒಂದು ಅಂತರವಿರುತ್ತದೆ. ಅದು ಬಹು ಮುಖ್ಯವಾದ ಸಂಗತಿ. ಈ ಒಂದು ಬದಲಾವಣೆ ದ್ರಾವಿಡ ಭಾಷಾ ವರ್ಗದ ಒಂದು ಸವಾಲಾಗಿ ಪರಿಣಮಿಸಿದೆ. ಕೇವಲ ಮಹಿಳೆಯರಿಂದ ಸೃಷ್ಟಿಯಾಗಿರುವ ಪಠ್ಯಗಳ ಚರ್ಚೆಗಿಂತ ಆ ಕಾಲದ ಸಂದರ್ಭ, ಒತ್ತಡ, ಸಾಂಸ್ಕೃತಿಕ ಪಲ್ಲಟಕ್ಕೆ ಇದ್ದ ಕಾರಣಗಳು ಮುಖ್ಯವೆನಿಸುತ್ತದೆ. ಶಿಕ್ಷಣ, ಮುದ್ರಣ, ಪತ್ರಿಕೆಗಳು ಮಹಿಳಾ ಬರವಣಿಗೆಗೆ ಉಭಯ ಭಾಷಾ ಸಂದರ್ಭದಲ್ಲೂ ಸಹಕಾರವನ್ನು ಒದಗಿಸಿದೆ.

ಬರವಣಿಗೆಯ ಕುರಿತು ವ್ಯತ್ಯಾಸ ಗಮನಿಸಬೇಕೆ ಹೊರತು 'ಗಂಡು ಬರವಣಿಗೆ' 'ಹೆಣ್ಣು ಬರವಣಿಗೆ' ಎಂಬ ಲೇಬಲ್ ಅಂಟಿಸುವ ಅಗತ್ಯವಿಲ್ಲ. ಮಾಧವಿಕುಟ್ಟಿ ಅವರು 'ಮಹಿಳಾ ಸಾಹಿತ್ಯ' ಎಂಬ ವಿಂಗಡನೆಯನ್ನು ಕುರಿತು ಹೀಗೆ ಹೇಳುತ್ತಾರೆ. "ನನಗೆ ಆ ಶಬ್ದಗಳನ್ನು ಕೇಳಿದರಾಗುವುದಿಲ್ಲ. ಮಹಿಳಾ ಸಾಹಿತಿಗಳೆಲ್ಲರನ್ನೂ ಅಪಮಾನಿಸುವುದಕ್ಕಾಗಿಯೇ ಹುಟ್ಟಿದ ಒಂದು ಪ್ರಯೋಗವದು. ಸಾಹಿತ್ಯಕ್ಕೆ ಲಿಂಗವ್ಯತ್ಯಾಸವೇಕೆ? ಹೆಣ್ಣು ಎಂದು ನಿರ್ಧರಿಸುವ ಅಂಗಗಳಿವೆಯಲ್ಲ, ಅವುಗಳ ಸಹಾಯದಿಂದ ಬರೆಯುತ್ತಾರೇನು ಸ್ತ್ರೀಯರು?" (ಮಲಯಾಳದ ಹತ್ತು ಕತೆಗಾರ್ತಿಯರು:11) ಈ ಮಾತು ಸ್ವಲ್ಪ ಒರಟೆನಿಸಿದರೂ ಮಹಿಳಾ ಸಾಹಿತ್ಯ ಎಂಬ ಪ್ರತ್ಯೇಕ ಪರಿಗಣನೆ ಬೇಕಿಲ್ಲ. ಬದಲಿಗೆ ಸಾಹಿತ್ಯ ಸೃಜಿಸುವ, ವಸ್ತು, ವಿಷಯ, ತಂತ್ರ ಮುಖ್ಯವಾಗಿ ಗಮನಿಸಬೇಕಾಗುತ್ತದೆ. 'ಮಹಿಳಾ ಸಾಹಿತ್ಯ' ಎಂಬ ಪ್ರತ್ಯೇಕತೆ ಬೇಡವೆನಿಸಿದರೂ ಅಧ್ಯಯನದ ಶಿಸ್ತಾಗಿ ಸ್ತ್ರೀ ಕೇಂದ್ರಿತ ಅಧ್ಯಯನದ ತುರ್ತು ಭಾರತೀಯ ಸಂದರ್ಭದ ಎಲ್ಲಾ ಭಾಷೆಗೂ ಅನಿವಾರ್ಯವಾಗಿದೆ. ಗುರುತರವಾದ ಮಹಿಳಾ ಬರವಣಿಗೆಯ ದಿಕ್ಕು ಸಾಗುತ್ತಿರುವ ಬಗ್ಗೆ ಅರಿವು ಅಗತ್ಯವಾಗಿದೆ.

ಕನ್ನಡದ ಸಂದರ್ಭದಲ್ಲಿ ಪ್ರಗತಿಶೀಲ ಲೇಖಕರಾದ ಅ.ನ.ಕೃ., ತ.ರಾ.ಸು., ಕಟ್ಟೀಮನಿ, ಚದುರಂಗ, ನಿರಂಜನ ತಮ್ಮ ಕಥನದಲ್ಲಿ ಸ್ತ್ರೀ ಕೇಂದ್ರಿತವಾಗಿಯೇ ಬಿಂಬಿಸುತ್ತಾರೆ. ಇದೇ

ಸಂದರ್ಭದಲ್ಲಿ ಸಾಮಾಜಿಕ ಕಾಳಜಿಯ ಜೊತೆ ಬರೆದ ಮಹಿಳೆಯರು ಸಾಮಾಜಿಕ ಜೀವನದ ಭಾಗವಾಗಿ ಹೆಣ್ಣು ಅನುಭವಿಸುವ ಯಾತನೆಯನ್ನು ಚಿತ್ರಿಸುತ್ತಾರೆ. ಎಚ್.ವಿ. ಸಾವಿತ್ರಮ್ಮನವರ 'ನಿರಾಶ್ರಿತೆ' ಕತೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. "ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿನ ಚಟುವಟಿಕೆಗಳನ್ನು ಅನೇಕ ಲೇಖಕರು ದಾಖಲು ಮಾಡುತ್ತ ಸ್ವಾತಂತ್ರ್ಯವನ್ನು ಪಡೆದುಕೊಂಡ ವಿಜೃಂಭಣೆಯಲ್ಲಿ ಆ ಸಂದರ್ಭದಲ್ಲಿ ಘಟಿಸಿದ ಕಹಿ ನೆನಪುಗಳನ್ನು ಮರೆಯುತ್ತಾರೆ. ಆದರೆ ಸಾವಿತ್ರಮ್ಮನವರು ಈ ಸಂದರ್ಭದಲ್ಲಿ ಘಟಿಸಿದ ಕಹಿ ನೆನಪುಗಳನ್ನು, ಹೆಣ್ಣಿನ ಬದುಕಿನಲ್ಲಿ ಅದು ಉಂಟು ಮಾಡಿದ ಅಲ್ಲೋಲ ಕಲ್ಲೋಲಗಳನ್ನು ತಮ್ಮ ಕಥೆ ಪಾತ್ರಗಳ ಮೂಲಕ ವಿವರಿಸುತ್ತಾರೆ." (ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ:300) ಸಾಮಾಜಿಕ ಪಲ್ಲಟ, ಜಾಗೃತ ಪ್ರಜ್ಞೆ, ಮಹಿಳಾ ಬರವಣಿಗೆಯ ಮೇಲೆ ಉಂಟುಮಾಡಿರುವ ಪರಿಣಾಮವನ್ನು ಇಲ್ಲಿ ಗಮನಿಸಬಹುದಾಗಿದೆ.

ಮಲಯಾಳಂ ಮಹಿಳಾ ಸಾಹಿತ್ಯ ಸಂದರ್ಭ ಎರಡನೇ ಹಂತದಲ್ಲಿ ಕಂಡ ಬದಲಾವಣೆ ಮಹತ್ವದ್ದು. ಬಿಡುಗಡೆಯ ಹಂಬಲ ತೀವ್ರವಾದದ್ದು. ಅದಕ್ಕೆ ಹಿಡಿದ ಮಾರ್ಗಗಳು ಹಲವು. ಅನೇಕ ಸಾಮಾಜಿಕ ದುರಾಚಾರಗಳಲ್ಲಿ ಸಿಲುಕಿದ ಕೇರಳದ ಮಹಿಳೆಯರು ಸಾಮಾಜಿಕ, ಸಾಹಿತ್ಯಕ ಬದಲಾವಣೆ ಬಯಸಿದರು. ಆ ಬದಲಾವಣೆ ಸಾಹಿತ್ಯದ ಮೂಲಕವೂ ವ್ಯಕ್ತಗೊಂಡಿತು. 'ಗೀತಾ ಹಿರಣ್ಯನ್' ಎಂಬ ಲೇಖಕಿಯ ಕವಿತೆಯ ಸಾಲುಗಳು ಭಿನ್ನ ಅರ್ಥಸಾಧ್ಯತೆಯನ್ನು ಹೆಚ್ಚಿಸುತ್ತದೆ.

"ಕೊನೆಯಿಲ್ಲದ ಕನಸುಗಳ ಪಾತಾಳಕ್ಕೆ
ಬೇರಬಲೆ ಹರಡುವುದಿಲ್ಲ,
ನೀತಿಯ ಹಂತ ಖಡ್ಗ
ಆಗಾಗ ತಾಯಿ ಬೇರನ್ನು ಒಪ್ಪಗೊಳಿಸುತ್ತದೆ
ದೇಹದ ಆನಂದ ಕಾಮಪ್ರೇಮಗಳಲ್ಲಿ
ಪುಷ್ಟಿಸುವುದಿಲ್ಲ"
(ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ:132)

ಪರಂಪರೆಯ ನೆರಳಿನಲ್ಲೇ ಬರೆಯುತ್ತಿದ್ದ ಬರವಣಿಗೆಯ ದಿಕ್ಕು ಮಲಯಾಳಂ ಭಾಷೆಯಲ್ಲೂ ಬದಲಾವಣೆಗೊಂಡಿತು. ಕೌಟುಂಬಿಕ ವ್ಯವಸ್ಥೆ ಹೆಣ್ಣನ್ನು ಉಪಕರಣವಾಗಿಸಿ ನೋಡುವ ನಾಲ್ಕು ಗೋಡೆಯೊಳಗೆ ಬಂಧಿಯಾಗುವ ಸಂದರ್ಭವನ್ನು ಇನ್ನೊಬ್ಬ ಕವಯತ್ರಿ 'ಸಾವಿತ್ರಿ ರಾಜೀವನ್' ಕವಿತೆಯನ್ನು ಉದಾಹರಿಸುವ ಮೂಲಕ ಗುರುತಿಸಬಹುದು. ಮೊದಲ ಹಂತದ ಬರವಣಿಗೆಯ ನಂತರದ ಬದಲಾವಣೆ ಕನ್ನಡದ ಸಂದರ್ಭದಲ್ಲಿ ಆದಂತೆ ಮಲಯಾಳಂ

ಭಾಷೆಯಲ್ಲೂ ಆಯಿತು. ದಕ್ಷಿಣ ಭಾರತದ ನಾಲ್ಕು ಭಾಷೆಯಲ್ಲಿ ಮಹಿಳಾ ಬರವಣಿಗೆಯ ದಿಕ್ಕು ಸಾಗಿದ ಕ್ರಮವನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

"ಇದೆಲ್ಲಾ ಕೆಲವೊಮ್ಮೆ
ಆದರೆ ನಾನು ಬಲ್ಲೆ
ನಾನು ಗುಡಿಯಲ್ಲಿ ಪ್ರತಿಷ್ಠೆಗೊಂಡ
ಒಂದು ಮನೆಯುಪಕರಣ
ಅಡಿಗೆ ಮನೆಯಲ್ಲಿ
ಸವೆದು ಹೋಗುತ್ತಿರುವ ಒಂದು ಉಪಕರಣ ನಾನು"
(ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ:134)

ಅಡಿಗೆಮನೆಯ ಉಪಕರಣವಾಗಿ ಸವೆದು ಹೋಗುತ್ತಿರುವ ಪ್ರಶ್ನೆ ಇಂದಿಗೂ ಲೇಖಕಿಯರನ್ನು ಕಾಡುತ್ತಿದೆ. ಅದಕ್ಕೆ ಕನ್ನಡದ ಕವಯತ್ರಿ ಸಬೀಹಾ ಭೂಮಿಗೌಡ ಅವರ 'ನನ್ನ ಪ್ರೀತಿಯ ಕುಕ್ಕರ್' ಅಂತಹ ಕವಿತೆ ಸೃಜಿಸಿ ಬಂದಿರುವುದು. ವೈಯಕ್ತಿಕ ಪ್ರಶ್ನೆಗಳು ಸಾಹಿತ್ಯದಲ್ಲಿ ಮೂಡಿ ಬಂದಿದೆ. "ಪ್ರೀತಿ ಎನ್ನುವುದು ಒಂದು ಸ್ವತಂತ್ರವಾಗಿ ತೆಗೆದುಕೊಳ್ಳುವ ನಿರ್ಧಾರದ ಫಲ ಎಂಬ ಅರಿವಿಲ್ಲದೆ ನಿಜವಾದ ಪ್ರೀತಿಯನ್ನು ಅರಸುತ್ತಾ ತಮ್ಮ ಕಥಾ ಪಾತ್ರಗಳನ್ನು ಸೃಷ್ಟಿಸಿದ ಲೇಖಕಿ ಮಾಧವಿಕುಟ್ಟಿ (ಕಮಲಾದಾಸ್) ಮಲಯಾಳದ ಸ್ತ್ರೀ ಪ್ರಜ್ಞೆಯು ಪ್ರತಿಕ್ರಿಯೆ ಹಾಗೂ ಪ್ರತಿರೋಧಕ ಘಟ್ಟಗಳನ್ನು ದಾಟಿ ಹೋಗುವುದು ಪಿ. ವತ್ಸಲಾ ಅವರ ಕಥೆಗಳ ಮೂಲಕ ಮದುವೆಯೆನ್ನುವುದು ಮಾರುಕಟ್ಟೆಯಾಗಿ ಪರಿವರ್ತಿತವಾಗಿರುವುದರ ವಿರುದ್ಧ ಆಕೆ ಬರೆದ 'ಪರಶುಪುರದ ಸಂತೆ'ಯಂಥ ಕಥೆಗಳು ಬೇರೆ ಸಿಗಲಾರವು" (ಮಲಯಾಳಂ ಕವಯಿತ್ರಿಯರು, ಅಪ್ರಕಟಿತ ಲೇಖನ, ಪಾರ್ವತಿ ಐತಾಳ್:28)

ಕನ್ನಡದ ಸಂದರ್ಭದಲ್ಲಿ ಡಾ. ಅನುಪಮಾ ನಿರಂಜನ ವೃತ್ತಿಯಿಂದ ವೈದ್ಯೆಯಾಗಿದ್ದರು. ವೈದ್ಯವೃತ್ತಿ ಮತ್ತು ಸಾಹಿತ್ಯದ ಮೂಲಕ ಆಧುನಿಕತೆಯ ಹಲವು ಅಂಶಗಳನ್ನು ಬಿಂಬಿಸಿದರು. ಅನುಪಮಾ ನಿರಂಜನರವರು ಪ್ರಸ್ತುತ ವ್ಯವಸ್ಥೆಯಲ್ಲಿನ ಅನೇಕ ಸವಾಲುಗಳನ್ನು ಕಥನಗಳಿಗೆ ವಸ್ತುವಾಗಿಸಿಕೊಂಡರು. ಅಲಕ್ಷಿಸಲ್ಪಟ್ಟ 'ಮಾಧವಿ'ಯ ಪಾತ್ರಕ್ಕೆ ನ್ಯಾಯ ಒದಗಿಸಲು ಪ್ರಯತ್ನಿಸಿದರು. ಪುರಾಣ ಪಾತ್ರವಾದ ಯಯಾತಿಯ ಮಗಳಾದ 'ಮಾಧವಿ'ಯ ಬದುಕಿನ ಸಂದರ್ಭ ಹೆಣ್ಣಿಗೆ ಸಾಮಾಜಿಕವಾಗಿ ಎದುರಾಗುವ ಸವಾಲುಗಳ ಜೊತೆಗೆ ಆಕೆಯನ್ನು ಮಾನಸಿಕವಾಗಿ ಚಿತ್ರಿಸಿದರು. ಊಳಿಗಮಾನ್ಯ ವ್ಯವಸ್ಥೆ, ಬಾಡಿಗೆ ತಾಯಿಯ ಪರಿಕಲ್ಪನೆಗಳು ಅಂದೇ ಮೂಡಿ ಬಂದಿರುವ ಕ್ರಮವನ್ನು ಅರಿಯಬಹುದಾಗಿದೆ.

70ರ ದಶಕದಲ್ಲಿ ನಡೆದ ಜನಪರ ಸಂಘಟನೆಗಳು ಕೇವಲ ಬದುಕಿನಲ್ಲಿ ಅಲ್ಲ, ಸಾಮಾಜಿಕ, ಸಾಹಿತ್ಯಕ ಕ್ಷೇತ್ರದಲ್ಲಿ ಬದಲಾವಣೆಯನ್ನು ಉಂಟು ಮಾಡಿತು. ಶೋಷಿತ ವರ್ಗದ ಧ್ವನಿ ಬದಲಾವಣೆಯನ್ನು ಒತ್ತಾಯಿಸಿತು. ಕನ್ನಡದ ಮಹಿಳಾ ಬರವಣಿಗೆ ಆ ಸಂದರ್ಭದಲ್ಲಿಯೂ ಪ್ರತಿಕ್ರಿಯಿಸಿದ್ದುದಕ್ಕೆ ಉದಾಹರಣೆಯಾಗಿ ಗೀತಾನಾಗಭೂಷಣ, ಬಿ.ಟಿ.ಲಲಿತಾ ನಾಯಕ್, ಸರಸ್ವತಿ ಗೌಡ, ಮಲ್ಲಿಕಾಘಂಟಿ, ಶೈಲಜಾ ಉಡುಚಣ, ಎಂ.ಎಸ್. ವೇದಾ, ಉಮಾರಾವ್, ನೇಮಿಚಂದ್ರರ ಬರವಣಿಗೆಗಳನ್ನು ಕಾಣಬಹುದು.

ಬಿ.ಟಿ. ಲಲಿತಾನಾಯಕ್ ಇವರು ಅನಕ್ಷರಸ್ಥ ಲೋಕದಲ್ಲಿ ಬಡತನ, ಅಜ್ಞಾನಗಳು ಇರುವ ಪ್ರದೇಶದಲ್ಲಿ ನಡೆಸುವ ಆಚರಣೆಗಳು, ಹೆಣ್ಣಿನ ಮೇಲಿನ ದಬ್ಬಾಳಿಕೆ, ದೌರ್ಜನ್ಯ, ಲೈಂಗಿಕ ಶೋಷಣೆ, ಮೂಢನಂಬಿಕೆ ಅಮಾಯಕ ಹೆಣ್ಣು ಮಕ್ಕಳು ಬಲಿಯಾಗುತ್ತಿರುವ ಕ್ರಮವನ್ನು ಇವರ ಕಾದಂಬರಿಗಳು ಚಿತ್ರಿಸುತ್ತವೆ. ತಮ್ಮ ಜನಾಂಗದ ಜನರ ಕಷ್ಟ ಸುಖಗಳನ್ನು ವಸ್ತುವಾಗಿಸಿಕೊಂಡವರು. ಬುಡಕಟ್ಟಿನ ಜನರ ಮಹಿಳೆ ಶೋಷಿತಳಾಗುವುದನ್ನು, ತಮ್ಮ ಸುತ್ತಲಿನ ಸಮಾಜದಲ್ಲಿ ತಾಂಡವವಾಡುವ ಅನಕ್ಷರತೆ, ಅನಾರೋಗ್ಯ, ಬರಗಾಲ, ಹಸಿವು, ಬಡತನಗಳ ನೋವು ಸಂಕಟಗಳನ್ನು ಸಮೀಪದಿಂದ ಕಂಡು ಅದರ ವಿರುದ್ಧ ಹೋರಾಡಿದ್ದಾರೆ. ಬಂಡಾಯ ಸಾಹಿತ್ಯಕ್ಕೆ ಹೊಸ ಅರ್ಥ ವಿಸ್ತಾರವನ್ನು ಒದಗಿಸಿದ ಹೊಸ ಸಂವೇದನೆಯನ್ನು ಲೇಖಕಿಯರೆಂದರೆ ಸಾ.ರಾ. ಅಬೂಬಕರ ಮತ್ತು ಬಾನು ಮುಷ್ತಾಕ್. ಧರ್ಮದ ಕಟ್ಟಳೆಗಳಿಂದ ನಲುಗಿದ್ದ ಸ್ಥಿತಿ ಬಿಡುಗಡೆಯನ್ನು ಬಯಸಿದರು. ಹೀಗೆ ಇಂದಿನವರೆವಿಗೂ ಕನ್ನಡ ಮಹಿಳಾ ಸಾಹಿತ್ಯ ಹೊಸ ಸವಾಲುಗಳಿಗೆ ಪ್ರತಿಕ್ರಿಯೆ ನೀಡುತ್ತಾ ಸಾಗುತ್ತಿದೆ. ಚಲಿಸುತ್ತಿರುವ ಸಮಾಜದ ಗ್ರಹಿಕೆಗೆ ಸಾಹಿತ್ಯದ ಮೂಲಕ ಪ್ರತಿಕ್ರಿಯೆ ನೀಡಿದ್ದಾರೆ. 1960ರ ನಂತರ ಕನ್ನಡ ಮತ್ತು ಮಲಯಾಳಂ ಕಥನ ಸಾಹಿತ್ಯದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆ ನಿರಂತರವಾಗಿ ಹೊಸ ವಸ್ತು ವಿನ್ಯಾಸದೊಂದಿಗೆ ತಂತ್ರಗಳೊಂದಿಗೆ ಸಾಗುತ್ತಾ ಬಂದಿದೆ.

ಅಧ್ಯಾಯ ೪

ಕಥನ ಪ್ರಕಾರ ಮತ್ತು ಹೆಣ್ಣಿನ ಅರಿವು

ಅಧ್ಯಾಯ – 4

ಕಥನ ಪ್ರಕಾರ ಮತ್ತು ಹೆಣ್ಣಿನ ಅರಿವು

ಕಥನ ಸಾಹಿತ್ಯ ನೆಲೆಗೊಂಡಿದ್ದು ಇಪ್ಪತ್ತನೇ ಶತಮಾನದಲ್ಲಿ, ಕಾವ್ಯ, ನಾಟಕ, ವಿಮರ್ಶೆ, ಬಿಡಿ ಲೇಖನಗಳಿಗಿಂತಲೂ ಕತೆ, ಕಾದಂಬರಿ ಪ್ರಕಾರವು ಜನಪ್ರಿಯವಾಯಿತು. ನಾಗರೀಕತೆಯ ಅಸ್ಥಿತ್ವ ಆರಂಭವಾಗುವುದೇ ಕತೆಗಳ ಮೂಲಕ. ಆದಿ ಮಾನವನ ನಾಗರೀಕತೆಯ ಮೊದಲ ಕತೆ ಗಿಲ್‌ಮಿಶ್. ಸಮಾಜದ ಸಂರಚನೆಯಲ್ಲಿ ವೈದಿಕ ಸಂಹಿತೆಗಳು ಆಧರಿಸಿರುವುದು ಕಥೆಗಳನ್ನೇ ಪುರಾಣಗಳು, ಉಪನಿಷತ್ತು, ರಾಮಾಯಣ ಮಹಾಭಾರತ, ಮಿಥ್‌ಗಳು ಇರುವುದು ಕಥನ ರೂಪದಲ್ಲೆ. 1200ರಲ್ಲಿ ಬಂದ ಋಗ್ವೇದದ ವೈದಿಕ ಸಂಸ್ಕೃತಿಯ ಮೊದಲ ಕತೆ ಊರ್ವಶೀ ಮತ್ತು ರಾಜ ಪುರೂರವರ ಕತೆ, ಅಂತೆಯೇ ನಳದಮಯಂತಿ, ಸಾವಿತ್ರಿ ಸತ್ಯವಾನರ ಕತೆಗಳು ಪ್ರಾಚೀನ ಕತೆಗಳಾಗಿವೆ. ಮಹಾಕಾವ್ಯವು ಸಾಹಿತ್ಯದ ತಾಯಿ ಎಂಬಂತೆ ಪರಿಗಣಿತವಾದರೂ ಕತೆ ಹೇಳುವುದು ಮನುಷ್ಯನ ಮೂಲ ಪ್ರವೃತ್ತಿ. ಅದನ್ನೆಂದು ಮನುಷ್ಯ ಹೊಸ ಪ್ರಕಾರವೆಂಬಂತೆ ಸ್ವೀಕರಿಸಲಿಲ್ಲ. ಸ್ತ್ರೀ, ಪುರುಷರೆಂಬ ಅಂತರವಿಲ್ಲದೆ ಕತೆ ಹೆಣೆಯುವ ಪ್ರವೃತ್ತಿ ಜನಪದರಲ್ಲಿ ಬೆರೆತು ರೂಢಿಯಾಗುತ್ತಲೇ ಬಂದಿದೆ. ಕತೆಗಳನ್ನು ಕುರಿತು ಕಮಲೇಶ್ವರ ಅವರು ಹೀಗೆ ಹೇಳುತ್ತಾರೆ.

"ಭಾರತದೇಶವು ಕತೆಗಳ ಜನ್ಮಭೂಮಿ, ಇದು ಕತೆಗಳ ಆದಿದೇಶ ಮನುಷ್ಯನು ಈ ದೇಶದ ಭೂಮಿಯ ಮೇಲೆ ಮೊದಲ ಬಾರಿ ಕಾಲೂರಿದಾಗಿನಿಂದ ಬಹುಶಃ ನಮ್ಮಲ್ಲಿ ಕತೆಗಳು ಪ್ರಚಲಿತವಾಗಿರಬಹುದು. ಋಗ್ವೇದವು ವಿಶ್ವಸಾಹಿತ್ಯದ ಪ್ರಾಚೀನತೆಯ ಗ್ರಂಥ. ಅದರ ರಚನೆಯು ಕ್ರಿಪೂ. ಕೆಲವು ಸಾವಿರ ವರ್ಷಗಳಷ್ಟು ಮೊದಲೆ ಆಗಿತ್ತು. ಋಗ್ವೇದಿತ ಸಮಾಜದಲ್ಲಿ ಅನೇಕ ಮಿಥ್‌ಗಳು ಕಿಂವದಂತಿಗಳು ರೂಪುಗೊಂಡಿದ್ದವು". (ಕಥಾ ಸಂಸ್ಕೃತಿ:51)

ಮಾನವ ನಾಗರೀಕತೆ ಉಳಿದಿರುವುದು ಕತೆಗಳ ಮೂಲಕವೇ... ಕತೆ ಹೇಳದ ಸಂಸ್ಕೃತಿ ಎಷ್ಟೋ ಸಂಗತಿಗಳನ್ನು ಮುಚ್ಚಿ ಹಾಕುತ್ತದೆ. 'ಭಾರತದಲ್ಲಿ ಕಥೆ ಹೇಳುವ ಪರಂಪರೆಯೊಂದು ಬೆಳೆದುಬಂದಿದೆ. ಜನಪದ ಕಥೆಗಳ ಸುದೀರ್ಘ ಚರಿತ್ರೆ ಇದೆ. ಇತಿಹಾಸದ ಪಾತಳಿಯಲ್ಲಿ ಅನೇಕ ಕತೆಗಳು ಹುದುಗಿ ಹೋಗಿದೆ. ಆದರೂ ಕತೆಗಳು ನಿರ್ಜೀವವಾಗಿ ಉಳಿದಿಲ್ಲ. ಮನುಷ್ಯನ ನಿತ್ಯ ಜೀವನದಲ್ಲಿ ಜೀವಂತಿಕೆಯನ್ನು ಪಡೆದು ಕೊಳ್ಳುತ್ತಲೇ ಸಾಗುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ ಇಂದಿಗೂ ಮೌಖಿಕ ಪರಂಪರೆಯಲ್ಲಿ ಉಳಿದಿರುವ ಕರಪಾಲದ ಕಥೆಗಳು, ಕಂಸಾಳೆ ಕತೆಗಳು,

ಗುಡ್ಡರ ಕತೆಗಳು ಜುಂಜಪ್ಪನ ಕತೆಗಳು, ಮಂಟೆಸ್ವಾಮಿ, ಮಲೇಮಾದೇಶ್ವರನ ಕತೆಗಳು ಹೆಂಗಸರ ಹಾಡ್ಗತೆಗಳು ಕಥನಗೀತೆಗಳು ಮೊದಲಾದವು ಸಾಕ್ಷಿಯಾಗಿವೆ.

ಪಾಶ್ಚಾತ್ಯ ಸಾಹಿತ್ಯದಲ್ಲಿ ಕೂಡ ಕಥನ ಪರಂಪರೆ ಬೆಳೆದು ಬಂದಿರುವುದಕ್ಕೆ ಉದಾಹರಣೆಗಳಿವೆ. ಈಸೋಪನ ನೀತಿ ಕತೆಗಳು, ಜೆನ್ ಕತೆಗಳು, ಮುಲ್ಲ ನಸಿರುದ್ದೀನ್ ಕತೆ, ಅಲ್ಲಾವುದ್ದೀನ್ ಕತೆ ಮುಂತಾದವು. ಅಂತೆಯೇ ಕಥನ ಪ್ರಕಾರ ಬೆಳೆಯುತ್ತಾ ನೀಳ್ಗತೆ, ಕಿರುಗತೆ, ಲಘುಕತೆ, ಮಿನಿಗತೆ ಎಂಬಂತೆ ಅನೇಕ ಸ್ವರೂಪ ಪಡೆಯುತ್ತ ಭಾಷೆಯ ಎಗ್ಗಿಲ್ಲದೆ ಬೆಳೆಯುತ್ತಾ ಸಾಗಿದೆ. ಅಮೇರಿಕಾದ ಫ್ಲಾನೆರಿ ಒಕೋನೆರ್ ಎಂಬ ಕತೆಗಾರ್ತಿ ಹೀಗೆ ಹೇಳುತ್ತಾಳೆ. "ಸಣ್ಣ ಕಥೆಯ ಸಾತ್ವಿಕ ಸ್ವರೂಪ ವಿವರಿಸುತ್ತಾ "ಸಣ್ಣಕಥೆ ಒಂದು ಜೋಕಲ್ಲ ಸ್ವಾರಸ್ಯಕರವಾದ ಸಂಗತಿಯೂ ಅಲ್ಲ, ಗದ್ಯದಲ್ಲಿ ಬರೆದ ಭಾವಗೀತೆಯೂ ಅಲ್ಲ, ವರದಿ ಅಲ್ಲ ಇದು ಯಾವುದು ಸಣ್ಣ ಕಥೆ ಆಗುವುದಿಲ್ಲ. ಯಾಕೆಂದರೆ ಸಣ್ಣ ಕತೆಗೆ ಹೆಚ್ಚಿನ ಆಯಾಮಗಳಿವೆ. ನನಗೆ ಅನ್ನಿಸುವಂತೆ ಕಥೆಗಾರ ಯಾವುದೇ ಒಂದು ಮಾನವ ಚಟುವಟಿಕೆಯ ನಡುವೆ ನಮ್ಮನ್ನು ನಿಲ್ಲಿಸಿದಾಗ ಆ ಆಯಾಮಗಳು ಲಭ್ಯವಾಗುತ್ತದೆ" (ಸಾಹಿತ್ಯ ವಿಸ್ತಾರ:35) ಸಣ್ಣ ಕತೆ ಮನುಷ್ಯ ಬದುಕಿನ ಅನುಭವದ ಮೊತ್ತವಾಗಿ, ಅಪಾರ ಸಾಧ್ಯತೆಗಳನ್ನು ತೆರೆದಿಡುವಲ್ಲಿ ಸಹಕಾರಿಯಾಗಿದೆ. ವ್ಯಕ್ತಿ ಪ್ರಜ್ಞೆಯ ಶೋಧನೆಯ ಅಭಿವ್ಯಕ್ತಿಯಾಗಿ ಆರಂಭವಾಗಿ ಸಾಮಾಜಿಕದ ಕಡೆಗೆ ಕಥನ ಸಾಹಿತ್ಯ ಚಲಿಸುತ್ತದೆ. ಸುಲಲಿತ ಭಾಷೆಯಲ್ಲಿ ಛಂದಸ್ಸಿನ ಭಾರವಿಲ್ಲದೆ ಸಾಮಾನ್ಯರನ್ನು ತಲುಪುವಲ್ಲಿ ಕಥನ ಸಾಹಿತ್ಯ ತನ್ನ ಪ್ರಾಶಸ್ತ್ಯವನ್ನು ಉಳಿಸಿಕೊಳ್ಳುತ್ತ ಏಳಿಗೆಯ ಹಾದಿಯಲ್ಲಿ ಮೊದಲ ಸ್ಥಾನದಲ್ಲಿದೆ.

ಭಾರತೀಯ ಕಥಾ ಸಾಹಿತ್ಯಗಳ ಹಿಂದಿನ ಐವತ್ತು ಅರವತ್ತು ವರ್ಷಗಳಲ್ಲಿ ಲೇಖಕ ವರ್ಗವು ಸ್ವಾಧೀನತೆಯ ಆಂದೋಳನದ ಪ್ರೇರಣೆಗಳು ಸ್ವಾತಂತ್ರ್ಯ ಪ್ರಾಪ್ತಿ, ಹಳೆಯ-ಹೊಸ ಸರ್ಕಾರಗಳ, ವ್ಯವಸ್ಥೆಗಳ ಪರಿವರ್ತನೆ, ಮಹಿಳೆಯ ಶಿಕ್ಷಣ ಸ್ವಾತಂತ್ರ್ಯ, ಉದ್ಯೋಗದಲ್ಲಿ ಮಹಿಳೆಯರು ನಗರಗಳ ಶಾಪಗ್ರಸ್ತ ಜೀವನ, ಮೌಲ್ಯಗಳ ಸಂಕಟ ಮುಂತಾದ ಎಲ್ಲಾ ವಿಷಯಗಳೊಂದಿಗೆ ಹೋರಾಡುತ್ತಲೇ ಇದೆ. (ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು:208)

ಅರ್ಥವೇ ಪ್ರಧಾನವಾಗಿ, ಕಥೆಗಾರ್ತಿ/ಕಥೆಗಾರನಿಂದ ಸೃಜಿಸುವ ವಸ್ತುವೇ ಮುಖ್ಯವಾಗಿ, ಕೌಶಲದಿಂದ ಕಥಾ ಹಂದರವೊಂದು ಸೃಷ್ಟಿಯಾಗುತ್ತದೆ. ದೀರ್ಘ ಕಥಾ ಹಂದರ ಉಳ್ಳದ್ದು ಕಾದಂಬರಿಯಾಗಿ, ದಿಢೀರ್ ಅನುಭವಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರೆ ಸಣ್ಣಕತೆಯಾಗಿ ರೂಪ ಪಡೆಯುತ್ತಾ ಸಾಗುತ್ತದೆ. ಬದುಕಿನ ಒಟ್ಟು ಅನುಭವದ ನಿರೂಪಣೆ ಕಾದಂಬರಿಯಾಗಿ ಬಿಡಿ

ಅನುಭವಗಳು ಸಣ್ಣಕಥೆಯಾಗಿ ಸಾಹಿತ್ಯ ಪ್ರಕಾರದ ಅತಿ ಮುಖ್ಯ ಪ್ರಕಾರವಾಗಿ ಕಥನ ಸಾಹಿತ್ಯ ಬೆಳೆಯುತ್ತಾ ಬಂದಿದೆ. ಕಥನ ಸ್ಫುರಣವಾಗಬೇಕಾದರೆ ಅನೇಕ ಮಜಲುಗಳನ್ನು ಅನುಸರಿಸಬೇಕಾಗುತ್ತದೆ. ಕತೆಗಾರ್ತಿ/ಗಾರ ಬದುಕುತ್ತಿರುವ ವಾತಾವರಣ, ಅವರ ಮನೋಲೋಕ, ಅವರಿಗೆ ದಕ್ಕುವ ಅನುಭವಗಳ ಫಲಿತವಾಗಿ ಕತೆಯೊಂದು ಮೂಡಿ ಬರುತ್ತದೆ. ಆಯಾಮಗಳನ್ನು ಒಳಗೊಂಡಿರುತ್ತದೆ. "ಕನ್ನಡ ಮಹಿಳಾ ಸಾಹಿತ್ಯ ಪ್ರಪಂಚದಲ್ಲಿ ಅಭಿಮಾನ ಪಡಲು ಇಂದು ಇರುವ ಎರಡೇ ಕ್ಷೇತ್ರಗಳೆಂದರೆ ಒಂದು ಸಣ್ಣ ಕತೆ ಮತ್ತೊಂದು ಕಾದಂಬರಿ. ಸಣ್ಣ ಕತೆಗಳಿಂದ ಸಾಹಿತ್ಯ ರಂಗಕ್ಕೆ ಕಾಲಿರಿಸಿದ ಬಹುಪಾಲು ಮಹಿಳೆಯರು ಕೆಲಕಾಲದಲ್ಲಿಯೇ ಕಾದಂಬರಿ ಕ್ಷೇತ್ರಕ್ಕೂ ತಮ್ಮ ಸಾಹಿತ್ಯ ರಚನಾ ಕಾರ್ಯವನ್ನು ವಿಸ್ತರಿಸಿಕೊಂಡು ಹೋಗಿರುವುದು" (ಮಹಿಳೆ–ಸಾಹಿತ್ಯ ಸಂಸ್ಕೃತಿ: 98)

ಕತೆಗಾರ್ತಿ/ಗಾರ ಯಾವ ಕಾಲಕ್ಕೆ ಸೇರಿದವರೆಂಬ ಅಂಶ ಅವರ ಬರವಣಿಗೆಯಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಸುಳಿವು ಕೊಡುತ್ತಲೇ ನಿರೂಪಿತವಾಗಿರುತ್ತದೆ. ಯಾವುದೇ ಪೂರ್ವಾಗ್ರಹವಿಲ್ಲದೆ ಕತೆಯನ್ನು ಓದಲು ಪ್ರವೇಶಿಸಿದರೂ ಕಾಲದ ನಿರ್ವಹಣೆ ಕಥನದ ಮೂಲಕ ಅರಿವಿಗೆ ಬರುತ್ತದೆ. ಉದಾಹರಣೆಗೆ ನವೋದಯ ಕಾಲಘಟ್ಟದಲ್ಲಿ ಚಿತ್ರಣಗೊಂಡ ವಿಧವೆಯರು. ಹಾಗೆಯೇ ಪಾತ್ರಗಳ ಸೃಷ್ಟಿಗೂ ಕಾಲದ ನಿರ್ವಹಣೆಗೂ ನಿಕಟ ಸಂಬಂಧವಿರುತ್ತದೆ. ಕತೆಗಾರ್ತಿ/ಗಾರ ಕಾಲವನ್ನು ಮೀರಿ ಪಾತ್ರ ಸೃಷ್ಟಿಯನ್ನು ಮಾಡ ಹೊರಟರೂ ಕಥೆಯು ಅಂತ್ಯ ಹೊಂದುವುದು ಕಾಲದ ತಾತ್ವಿಕ ನೆರಳಿನಲ್ಲಿಯೇ. ಕತೆಯ ಬಂಧವೂ ಪಾತ್ರವೂ ಕೇಂದ್ರೀಕೃತವಾಗುವುದು ಕತೆಗಾರ್ತಿ/ಗಾರರ ವಾತಾವರಣವನ್ನು ಅನುಸರಿಸಿಯೆ ಸಮಾಜ ಹಲವು ಸ್ತರಗಳ ನಿರ್ಮಿತಿ ಎನ್ನುವಾಗ ಕತೆಗಾರ್ತಿ/ಗಾರ ತನಗೆ ದಕ್ಕುವ ಅನುಭವವನ್ನು ವಿವಿಧ ಸ್ತರಗಳಲ್ಲಿ ವ್ಯಕ್ತಪಡಿಸಲು ಹವಣಿಕೆ ನಡೆಸುತ್ತಿರುತ್ತಾರೆ. ಕಥೆಗಾರ್ತಿ/ಗಾರ ಬರೆಯುವುದಕ್ಕೆ ಆರಂಭಿಸುವುದು ಸ್ವಇಚ್ಛೆಯಿಂದಲೋ, ಆಕಸ್ಮಿಕವಾಗಿಯೋ, ಮಾನಸಿಕವಾಗಿ ಬಿಡುಗಡೆ ಹೊಂದುವ ಅತೀವ ಹಂಬಲವೋ ಅದ್ಯಾವುದೇ ಉದ್ದೇಶವಾಗಿರಲಿ ಆಕೆ/ಆತ ಕಾಲಕ್ಕೆ ಬದ್ಧವಾಗಿ ಕೇಂದ್ರೀಕೃತ ಪಾತ್ರಗಳನ್ನು ಸೃಷ್ಟಿಸುತ್ತಾ ವಿಭಿನ್ನ ಸ್ತರಗಳಲ್ಲಿ ಕಥನಕ್ರಿಯೆ ನಡೆಸುತ್ತಾ ಕಥನರೂಪಕೊಡುತ್ತಾ ಸಾಹಿತ್ಯ ಕೃಷಿ ನಡೆಸುತ್ತಿರುವುದರಿಂದಲೇ ಕಥನ ಪ್ರಕಾರ ವಿಪುಲ ಸಾಧ್ಯತೆಗಳ ಮೂಲಕ ಸಾಮಾನ್ಯರನ್ನು ಆಕರ್ಷಿಸುತ್ತಾ ವಿಶ್ವ ಸ್ವರೂಪ ಪಡೆಯುತ್ತಾ ಸಾಗುತ್ತಿದೆ. ಹೆಣ್ಣು ಮತ್ತು ಸಾಹಿತ್ಯಕ್ಕಿರುವ ಅವಿನಾಭಾವ ಸಂಬಂಧ ಇಂದಿನದಲ್ಲ. ವಿವಿಧ ಹಂತಗಳಲ್ಲಿ ಬರವಣಿಗೆ ಸಾಗುತ್ತಾ ಬಂದಿವೆ. ಹೆಣ್ಣು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಂಡದ್ದು ಇಂದಲ್ಲ. ವೇದಗಳ ಕಾಲದಿಂದಲೇ

ಸ್ತ್ರೀಯರು ಜ್ಞಾನವಲಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಆದರೆ ಸಾಂಪ್ರದಾಯಿಕ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಯರು ಬೆರಳಣಿಕೆಗೆ ಮಾತ್ರ ಕಾಣಬರುತ್ತಾರೆ.

ವಚನ ಕಾಲಘಟ್ಟದಲ್ಲಿ ಮಾತ್ರ ಅಕ್ಕನ ಹಾಗೂ ಬೆರಳಣಿಕೆಯ ವಚನಕಾರ್ತಿಯರ ಪ್ರಸ್ತಾಪ ಉಳಿದ ವಚನಕಾರ್ತಿಯರ ಪರಿಚಯ ಮಹಿಳಾ ಚರಿತ್ರೆಗೆ ಹೊಸ ನೋಟ ಕ್ರಮವನ್ನು ಒದಗಿಸಿತು. ಸಾಮಾಜಿಕ ಚೌಕಟ್ಟಿನಾಚೆ ಹೆಣ್ಣನ್ನು ಕಾಣಲು ಬಯಸಿದ್ದು ವಚನ ಯುಗದಲ್ಲಿ. ಸ್ತ್ರೀಯರ ಸ್ವತಂತ್ರ ಮನೋಧರ್ಮ, ಸ್ತ್ರೀ ಸಮಾನತೆ, ವೈಚಾರಿಕ ನಿಲುವುಗಳು, ಸ್ತ್ರೀಯರ ಸಾಮಾಜಿಕ ಕಾಳಜಿ ವ್ಯಕ್ತಗೊಂಡದ್ದು ಈ ಕಾಲದಲ್ಲಿ. 'ಅರಿವೇ ಗುರು' ಎನ್ನುವ ರಾಯಮ್ಮನ ಆದರ್ಶ ನಾನೇ ಗುರು, ನಾನೇ ಲಿಂಗ, ನಾನೇ ಜಂಗಮ ನನಗ್ಯಾವ ಹಂಗಿಲ್ಲ ಎನ್ನುವ ವಚನವನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು. ತನ್ನನ್ನು ತಾನು ಮೀರುವ ಅರಿಯುವ 'ಅರಿವು' ಅಂತಿಮ ಎಂದು ನಂಬುವಂತೆ ಇಡೀ ಸ್ತ್ರೀ ಕುಲ ರಚಿಸಿದ ಸಾಹಿತ್ಯ ತನ್ನನ್ನು ತಾನೇ ಅರಿಯುವ ಪ್ರಯತ್ನದ ಮಾರ್ಗವಾಗಿಯೇ ಕಾಣ ಬರುತ್ತದೆ. 'ಅರಿವು' ಕೇವಲ ವಚನಕಾರ್ತಿಯರಿಗೆ ಸಂಬಂಧಪಟ್ಟ ವಿಚಾರವಲ್ಲ. ಹೆಣ್ಣು ಸೃಷ್ಟಿಸಿದ ತನ್ನೆಲ್ಲ ಅನುಭವಗಳ ಲಹರಿ ಹರಿದು ಬಂದಿದ್ದು ಆಕೆಯ ಸ್ವಪ್ರಜ್ಞೆಯ ಅರಿವು ವಿಸ್ತಾರಗೊಂಡದ್ದಕ್ಕೆ ಎಂದು ಹೇಳಬಹುದು. ತನ್ನ ಸ್ವಾನುಭವದ ಮೂಲಕ ಜ್ಞಾನದ ಮಹತ್ವವನ್ನು ಸಾಹಿತ್ಯರೂಪ ಕೊಡಲು ಮುಂದಾದವಳು ಹೆಣ್ಣು, ಯಾವುದೇ ಸೀಮಿತ ಉದ್ದೇಶವಿಲ್ಲದೆ ವಿಸ್ತೃತವಾಗಿ ಸ್ತ್ರೀ ಬರವಣಿಗೆಯ ದಿಕ್ಕು ಅನೇಕ ಮಜಲುಗಳಲ್ಲಿ ವ್ಯಕ್ತವಾಗುತ್ತಾ ಬಂದಿದೆ.

12ನೇ ಶತಮಾನದ ವಚನ ಕ್ರಾಂತಿಯ ನಂತರ ಮಹಿಳೆ ಸಾಹಿತ್ಯ ರಚನೆಯಲ್ಲಿ ಇಂದಿನವರೆಗೆ ನಿರಂತರವಾಗಿ ತೊಡಗಿಕೊಂಡಿದ್ದಾಳೆ. ಮಹಿಳಾ ಬರವಣಿಗೆಯ ಸ್ವರೂಪ ಮಾತ್ರ ಬದಲಾಗುತ್ತಿದೆ. ಸಂಚಿಹೊನ್ನಮ್ಮ, ಶೃಂಗಾರಮ್ಮ, ಚೆಲುವಾಂಬೆ, ಗಿರಿಯಮ್ಮ, ಭೀಮವ್ವ ಪರಂಪರೆಯೊಳಗೆ ನಿಂತು ಪುರುಷ ಪ್ರಧಾನ ಚೌಕಟ್ಟಿನಲ್ಲಿಯೇ ತಮ್ಮ ಬದುಕಿಗೆ ದಕ್ಕಿದ ಅನೇಕ ಅನುಭವಗಳನ್ನು ಸಾಹಿತ್ಯ ರೂಪಕ್ಕೆ ತಂದರು. ವ್ರತ, ಪೂಜೆ, ನೇಮ, ನಿಷ್ಠೆ, ಪಾತಿವ್ರತ್ಯ, ಮುತ್ತೈದೆ ಭಾಗ್ಯ, ಪತಿ ಸೇವೆ, ಪುತ್ರ ಸಂತಾನ ಇವುಗಳ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು. ಆದ್ದರಿಂದ ಬಿಡುವಿನ ಸಮಯದಲ್ಲಿ ಲೌಕಿಕವಾಗಿ ಬದುಕಿಯೂ ಪಾರಮಾರ್ಥಿಕ ಜಗತ್ತಿಗೆ ಸಾಗುವಾಗ ಬೇಕಾಗುವ ಪೂರಕ ಅಂಶಗಳನ್ನು ಅನುಸರಿಸುತ್ತಾ ಹಾಡು, ಹಸೆ, ಮುಕ್ತಿ ಮಾರ್ಗವೆಂಬ ಆಶಯದೊಟ್ಟಿಗೆ ಸ್ತ್ರೀಯರು ಬರೆಯುತ್ತಿದ್ದರು. ಸ್ತ್ರೀಯರು ಬರವಣಿಗೆಗೆ ತೊಡಗಿದ್ದೇ ಮಹತ್ವದ ಸಂಗತಿ ಎಂಬ ಆ ಕಾಲದಲ್ಲಿ ಅವರ ಬರವಣಿಗೆ ಯಾವುದೇ ಆದರೂ ಅದನ್ನು ಸ್ವೀಕರಿಸುವ,

ಅನನ್ಯವಾಗಿ ಕಾಣುವ ಮನಸ್ಥಿತಿ ಇತ್ತು. ಆದರೆ ಪರಂಪರೆಯನ್ನು ಮೀರಲಾಗದ ಮತ್ತೆ ಮತ್ತೆ ಹೆಣ್ತನವನ್ನು ಆರೋಪಿಸಿಕೊಳ್ಳುವ ಸಾಹಿತ್ಯ ರೂಢಿಗತವಾಗಿಯೇ ಮೂಡಿ ಬಂದಿತು. ಚರಿತ್ರೆಯ ಪುನರ್ ವ್ಯಾಖ್ಯಾನ ಸುಲಭಕರ ಆದರೆ ಚಾರಿತ್ರಿಕ ಸಂದರ್ಭದಲ್ಲಿ ಉಂಟಾದ ಬದಲಾವಣೆ ಮಹತ್ವದಾಯಕ. ಹಾಗೆ ನೋಡಿದರೆ 19ನೇ ಶತಮಾನದ ಮಹಿಳಾ ಸಾಹಿತ್ಯಕ್ಕೆ ಹೊಸ ರೂಪ ದೊರಕಿಸಿಕೊಟ್ಟ ಘಟ್ಟ, ಮಹಿಳಾ ಬರವಣಿಗೆಯ ದಿಕ್ಕು ಪುರಾಣದ, ಸಂಪ್ರದಾಯದ ಸಂಕೋಲೆಯನ್ನು ಕಳಚಿ ವಾಸ್ತವದೆಡೆಗೆ ಸಾಗಿದ ಘಟ್ಟವಾಗಿ ಕಾಣ ಬರುತ್ತದೆ. ವಸಾಹತುಶಾಹಿ ಧೋರಣೆ, ಇಂಗ್ಲಿಷ್ ಶಿಕ್ಷಣ, ಅನ್ಯ ಆಕ್ರಮಣಕಾರಿ ನೀತಿ, ಮಹಿಳೆಯರ ಸಾಮಾಜಿಕ ಸ್ಥಿತಿಗತಿ, ಜೀವನ ಮಾರ್ಗವನ್ನೇ ಬದಲಾಯಿಸಿತು. ಮೋಕ್ಷ ಮಾರ್ಗವೇ ಪರಮ ಗುರಿಯಾಗಿಟ್ಟುಕೊಂಡ ಮಹಿಳೆಯರು ಭ್ರಮಾಲೋಕದಿಂದ ವಾಸ್ತವದೆಡೆಗೆ ಸರಿದುದು ಬಹು ಪ್ರಮುಖ ಸಂದರ್ಭ. 19ನೇ ಶತಮಾನ ಸಂಕ್ರಮಣ ಕಾಲವಾಗಿ ಕಾಣ ಬರುತ್ತದೆ. ಕೆಂಪು ನಾರಾಯಣ ತನ್ನ 'ಮುದ್ರಾಮಂಜೂಷ'ದ ಗದ್ಯಗ್ರಂಥದಲ್ಲಿ 'ಹಳೆಯವರೊಡನೆ ಸೇರಿ ಬಂದಿರುವ ಹೊಸಗನ್ನಡ ನುಡಿಕಟ್ಟು' ಎನ್ನುತ್ತಾನೆ.

ಕಾಲಾನುಕ್ರಮವಾದ ಘಟನೆಗಳ ಸರಮಾಲಿಕೆಯಾಗಿರುವ ಕಥೆಯನ್ನು ಒಳಗೊಂಡು ನಾವೆಲ್ ಮೌಲ್ಯಾತ್ಮಕ ಜೀವನವನ್ನು ಪ್ರತಿನಿಧಿಸುತ್ತದೆ. ಕಥೆ ಕೇವಲ ಘಟನೆಗಳ ಸರಮಾಲೆಯಾಗಿಲ್ಲ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕಾಲನಿಷ್ಠವಾಗಿರುವುದು ಆ ಕಾಲದ ಮೌಲ್ಯಗಳಿಗೆ ನಿಷ್ಠೆಯಾಗಿರುತ್ತದೆ. ಮನುಷ್ಯ ಕಾಲಕ್ಕೆ ತಕ್ಕ ಸರಮಾಲೆಗಳನ್ನು ಜೋಡಿಸಿ ಕಾಲದ ಮೌಲ್ಯಕ್ಕೆ ಬದ್ಧರಾಗಿಯೇ ಸಾಹಿತ್ಯ ಸೃಷ್ಟಿ ಸಾಧ್ಯವಾಗುತ್ತಿದೆ. ಅಂತೆಯೇ ಹೆಣ್ಣು ಕಾಲಕ್ಕೆ ಬದ್ಧವಾದ ಮೌಲ್ಯಯುತ ಸಾಹಿತ್ಯ ಭರಿತ ಸೃಷ್ಟಿಯಲ್ಲಿ ತೊಡಗುತ್ತಾ ಬಂದಿರುವುದು ಮಹತ್ವದ ಸಂಗತಿ.

ವಸಾಹತು ನಂತರದ ಘಟ್ಟದಲ್ಲಿ ಪರಂಪರೆಯ ಜಾಡನ್ನು ಮೈಕೊಡವಿ ಏಳಬೇಕಾದ ಸ್ಥಿತಿ ಹೆಣ್ಣಿಗಿತ್ತು. ಮಹಿಳೆಯರಿಗೆ ದೊರೆತ ಶಿಕ್ಷಣ, ಮಹಿಳಾ ಸಂಘಟನೆಗಳ ಬೆಂಬಲ, ಮಹಿಳಾ ಹಕ್ಕುಗಳು, ರಾಷ್ಟ್ರೀಯ ಚಳುವಳಿಯ ಪ್ರಭಾವ, ಪಾಲ್ಗೊಳ್ಳುವಿಕೆ, ದಿನ ನಿತ್ಯದ ಬದುಕಿನ ಮೇಲೆ ಪ್ರಭಾವ ಬೀರುವಂತಾಯಿತು. ಪುರುಷ ನಿರ್ಮಿತ ಸಮಾಜದಲ್ಲಿ ಸಾಂಸ್ಕೃತಿಕ ಸಂದಿಗ್ಧತೆಯ ಜೊತೆ ತನ್ನ ಬದುಕಿಗೆ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಹಿಳೆಯರಿಂದ ಆಯಿತು. ಹೆಣ್ಣಿನ 'ಅರಿವು' ಆ ಕಾಲಕ್ಕೆ ತಕ್ಕಂತೆ ವಿಸ್ತಾರಗೊಳ್ಳುತ್ತಾ ಹೋಯಿತು. 'ಅರಿವು' ಇದ್ದಕ್ಕಿದ್ದಂತೆ ಎಲ್ಲಿಂದಲೋ ಸ್ಫುರಿಸುವುದಿಲ್ಲ, ಸನ್ನಿಹಿತವಾಗುವುದಿಲ್ಲ. ಸುಪ್ತ ಪ್ರಜ್ಞೆ ಜಾಗೃತವಾಗಿ ಸ್ವ ಪ್ರಜ್ಞೆಯು ಮೂಡಿ ಚಿಂತನೆಗಳು ತನ್ಮೂಲಕ ಹೊಸ ಲೋಕವನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನದ ಮೂಲಕ

ಸಾಹಿತ್ಯ ಸೃಷ್ಟಿ ಆಯಿತು. ಹೆಣ್ಣಿಗೆ ಸಮಾಜಿಕ ಪ್ರಜ್ಞೆಯ ಕುರಿತು ಆಲೋಚಿಸುವುದಕ್ಕಿಂತ ಮೊದಲು ಆತ್ಮಪ್ರಜ್ಞೆಯೇ ಜಾಗೃತವಾಗುತ್ತಾ ಹೋಯಿತು. ಮಹಿಳೆಯ ಹೊಸ ಇತಿಹಾಸ ಶೋಧವಾಗಬೇಕೆಂಬ ಪ್ರಜ್ಞೆ ಬಿಡುಗಡೆಯ ಹಂಬಲ ಮೂಡಲು ಕಾರಣವಾಯಿತು.

ಆಧುನಿಕತೆಯ ಪ್ರವೇಶ ಮಹಿಳೆಯ ಬದುಕಿನ ಮೇಲೆ ನೇರವಾಗಿ ಪರೋಕ್ಷವಾಗಿಯೂ ಪರಿಣಾಮವನ್ನುಂಟು ಮಾಡಿತು. ಸಾಂಸ್ಕೃತಿಕ ಬದಲಾವಣೆಯಿಂದ ವೈಯಕ್ತಿಕ ಬದುಕಿನ ಮೇಲೆ ಮಹತ್ತರ ಪರಿಣಾಮ ಉಂಟಾಯಿತು. ಜಾತಿ, ವರ್ಗ, ವರ್ಣ, ಸ್ತ್ರೀ ಪುರುಷರ ನಡುವಿನ ಅಸಮಾನತೆ ಎನ್ನುವುದು ಕೇವಲ ಮಾನವ ನಿರ್ಮಿತ ಕೃತಕ ಪರಿಕಲ್ಪನೆ ಎಂಬ ಜಾಗೃತಿ ಮೂಡ ತೊಡಗಿತು. ಹೆಣ್ಣು, ಗಂಡು ಪ್ರಕೃತಿಯ ಭಾಗ. ಹೆಣ್ಣು ತನ್ನ ದೈಹಿಕ ಸ್ವರೂಪ ಭಿನ್ನ ಎಂಬುದಕ್ಕೆ ಕನಲಬೇಕಾಗಿಲ್ಲ. ಇದರಿಂದ ಮೇಲು ಕೀಳೆಂಬ ಕೀಳರಿಮೆ ಪಡಬೇಕಾದ ಅಗತ್ಯವಿಲ್ಲ ಎಂಬ ವಾಸ್ತವಗಳು ಮನವರಿಕೆಯಾಗಲು ಆರಂಭವಾಯಿತು. ಪುರುಷನಷ್ಟೇ ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ನಂಬಿಕೆಯನ್ನು ಯಥಾವತ್ತಾಗಿ ಒಪ್ಪಿಕೊಳ್ಳಲು ಯೋಚಿಸಬೇಕಾದ ಸ್ಥಿತಿ ಒದಗಿ ಬಂತು. ಹೆಣ್ಣು ಎರಡನೆಯ ದರ್ಜೆಯ ಪ್ರಜೆಯಾಗಿ ಬದುಕುತ್ತಾ ಬಂದಿರುವ ಸಂದರ್ಭವನ್ನು ಪರಿಶೀಲಿಸುವ ಪರಿಸ್ಥಿತಿ ಎದುರಾಯಿತು. ಆದರ್ಶದ ಹೆಸರಿನಲ್ಲಿ ಸ್ತ್ರೀಯನ್ನು ಸಂಕೋಲೆಯಲ್ಲಿ ಕಟ್ಟಿ ಹಾಕುವ ಬಗ್ಗೆ ಅನುಮಾನ ಉಂಟಾಯಿತು. ಭ್ರಮಾತ್ಮಕ ಜೀವನದ ಬಗ್ಗೆ ಚಿಂತನೆ ಆರಂಭವಾಯಿತು. ಅಧೀನ ಭಾವದಿಂದ ಕೊಸರಿಕೊಂಡು ಹೆಣ್ಣು ನೈಜತೆಯೆಡೆಗೆ ಹೊರಳಬೇಕೆಂಬ ಸಾಮಾಜಿಕ ಪ್ರಜ್ಞೆ ಮೂಡಿದ್ದು ಮಹತ್ವದ ಸಂಗತಿಯಾಯಿತು.

ವೀಣಾಶಾಂತೇಶ್ವರ ಅವರು ಸಣ್ಣಕತೆಗಳನ್ನು ಸಿಂಹಾವಲೋಕನ ಮಾಡುವಾಗ ಹೀಗೆನ್ನುತ್ತಾರೆ–'ಈ ಕತೆಗಳ ವಸ್ತು ಸೀಮಿತವಾಗಿದೆ. ಬಹಳಷ್ಟು ಕತೆಗಳಲ್ಲಿ ತುಂಬ ಸೆಂಟಿಮಂಟ್ಯಾಲಿಟಿ–ಅತಿಭಾವುಕತೆ ಇದೆ. ಅವಾಸ್ತವಿಕತೆ ಇದೆ. ತಂತ್ರವನ್ನು ಸರಿಯಾಗಿ ಬಳಸಿಲ್ಲ. ವೈಚಾರಿಕತೆಯ ಅಭಾವವಿದೆ ಇತ್ಯಾದಿ' (ಇಲ್ಲಿಂದ ಮುಂದೆಲ್ಲಿಗೆ, ಪು.ಸಂ. 45) ಈ ಎಲ್ಲಾ ಅನುಮಾನಗಳ ನಡುವೆ ಸಣ್ಣಕತೆ ಸಾಧಿಸಿರುವ ಸಾಧ್ಯತೆಗಳು ಏನು? ಕತೆಗಳು ಹೇಗೆ ಇಂದು ಮುಖ್ಯವಾದ ಪ್ರಕಾರವಾಗಿದೆ ಎಂಬುದರ ಕಡೆ ಗಮನ ಹರಿಸಬೇಕಿದೆ.

ಶಿಕ್ಷಣದ ಮೂಲಕ ಜಾಗೃತವಾದ ಪ್ರಜ್ಞೆ:

19ನೇ ಶತಮಾನ ಮಹಿಳೆಯರ ಸ್ಥಿತಿ–ಗತಿಗಳಲ್ಲಿ ಅನೇಕ ಬದಲಾವಣೆ ತಂದ ಘಟ್ಟವಾಗಿದೆ. ಶಿಕ್ಷಣ ಕಲಿಯಲು ಸಿಕ್ಕ ಪ್ರೇರಣೆ ಮಹಿಳೆಯರ ಸ್ಥಿತಿ–ಗತಿಗಳಲ್ಲಿ ಅನೇಕ ಸುಧಾರಣೆ ತಂದಿತು. ನಿತ್ಯ ಬದುಕಿನಲ್ಲಿ ಮಹಿಳೆಯರ ಪಾತ್ರಗಳು ಆಧುನೀಕರಣಗೊಂಡವು. ಹೆಣ್ಣಿನ ಬಾಲ್ಯ

ಸ್ವಚ್ಛಂದವಾಗಿರದೆ ಕೇವಲ ವಿವಾಹ ಪೂರ್ವ ಸಿದ್ಧತೆಗಾಗಿ ಹಾತೊರೆಯುತ್ತಿದ್ದ ಕಾಲವೊಂದಿತ್ತು. ಅದನ್ನು ಮೀರಿ ರೂಢಿಗತ ಹೆಣ್ಣಿನ ಬದುಕಿಗೆ ಹೊಸರೂಪ ಕೊಡುವ ಕಾಲವಾಗಿ ಕಂಡು ಬಂದಿತು. ಸಮಾಜ ಸುಧಾರಣಾ ಚಳವಳಿಗಳು ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಜೀವನ ಮಟ್ಟ ಸುಧಾರಿಸುವ ಅವಿರತ ಪ್ರಯತ್ನ ಮಾಡಿದವು. ಬಂಗಾಳದ ರಾಸ್ಸುಂದರಿ ದೇವರಿ ತನ್ನ ಮಗನ ಪುಸ್ತಕದಿಂದ ಹಾಳೆ ಕದ್ದು ಅಡುಗೆ ಮನೆಯಲ್ಲಿ ಬಚ್ಚಿಟ್ಟು ಬರೆದು ಅಭ್ಯಾಸ ಮಾಡಿದ ಘಟನೆ ನೆನಪಿಸಿಕೊಳ್ಳಬಹುದು. ತನ್ನ ಆಯ್ಕೆಯ ಸ್ವಾತಂತ್ರ್ಯ, ಬದುಕಿನ ಸ್ವಂತ ನಿರ್ಧಾರಗಳನ್ನು ತೆಗೆದು ಕೊಳ್ಳಲು ಹೆಣ್ಣು ಮುಂದಾದಳು. ಆದರೆ ಆ ಹಾದಿ ಸುಲಭವಾಗಿಯೇನು ಇರಲಿಲ್ಲ.

"ರಾಜಾರಾಮ್ ಮೋಹನರಾಯರಿಂದ ಆರಂಭವಾದ ಸಾಮಾಜಿಕ ಪುನರುಜ್ಜೀವನ, ಸ್ತ್ರೀಯರ ವಿಷಯ ಸಾಕ್ಷಾತ್ಕಾರವಾಗಿದ್ದು ಜ್ಯೋತಿ ರಾವ್ ಫುಲೆಯವರಿಂದ. ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸಿದರೆ ತಪ್ಪು. ಸ್ತ್ರೀ ವಿದ್ಯಾರ್ಜನೆಗೆ ಅನರ್ಹಳು ಎಂದು ನಂಬಿದ್ದ ಕಾಲದಲ್ಲಿ ಫುಲೆ 1848ರಲ್ಲಿ ಮೊದಲ ಕನ್ಯಾ ಶಾಲೆಯನ್ನು ಸ್ಥಾಪಿಸಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆಸರೆಯಾಗುತ್ತಾರೆ." (ಮಹಿಳಾ ಚಳವಳಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ:217) ಶಿಕ್ಷಣದಿಂದ ಮಹಿಳೆಯರ ಏಳಿಗೆಯ ದೆಸೆ ಆರಂಭವಾಗುತ್ತದೆ.

ಜ್ಞಾನ, ಸಾಮಾಜಿಕ ಸ್ಥಾನಮಾನಕ್ಕಾಗಿ, ಸಮಾನತೆಗಾಗಿ ಪರಿತಪಿಸುವ ಹಂಬಲವೂ ಅತೀವವಾಯಿತು. ಪರಂಪರೆಯೊಳಗೆ ಸಿಲುಕಿಯೂ ಶಿಕ್ಷಣದ ಮೂಲಕ ಒದಗಿದ ಸಂದಿಗ್ಧತೆಯನ್ನು ದೂರ ಮಾಡ ಬಯಸಿದರು. ಸ್ತ್ರೀಯರ ಆತ್ಮವಿಶ್ವಾಸ ಹೆಚ್ಚಿಸಲು ಶಿಕ್ಷಣವೇ ಮುಖ್ಯಮಾರ್ಗವಾಯಿತು. ಸಾಮಾಜಿಕವಾಗಿ ಸ್ತ್ರೀ ಪಾಲ್ಗೊಳ್ಳುತ್ತಿರುವುದೇ ಬಹು ಕುತೂಹಲದ ಸಂಗತಿಯಾಯಿತು. ವಸಾಹತು ಪ್ರಭುಗಳ ಆರ್ಥಿಕ ಮತ್ತು ನೈತಿಕ ಬೆಂಬಲ ಸ್ತ್ರೀ ಶಿಕ್ಷಣಕ್ಕೆ ಪೂರಕವಾದ ಸಹಾಯ ಒದಗಿಸಿತು. 1849ರಲ್ಲಿ ಕಲ್ಕತ್ತಾದಲ್ಲಿ ಹಿಂದೂ ಬಾಲಿಕಾ ವಿದ್ಯಾಲಯ ಆರಂಭವಾಯಿತು. ಬಂಗಾಲಿಯೇ ಶಿಕ್ಷಣ ಭಾಷೆಯಾಗಿ ಶಿಕ್ಷಣ ನೀಡಲಾರಂಭಿಸಿತು. ಹೆಣ್ಣು ಮಕ್ಕಳ ಶಿಕ್ಷಣ ಧಾರ್ಮಿಕ ಕರ್ತವ್ಯವೆಂಬಂತೆ ಪರಿಗಣಿತವಾಗಿ ಪ್ರೋತ್ಸಾಹಿಸಲಾಯಿತು. ಅಂತೆಯೇ ಸಮಾಜದಲ್ಲಿನ ರೂಢಿಗತ ಮೌಲ್ಯಗಳನ್ನು ಅಷ್ಟು ಸುಲಭವಾಗಿಯೇನು ಧಿಕ್ಕರಿಸಿ ಹೋಗಲು ಸಾಧ್ಯವಾಗುವಂತಿರಲಿಲ್ಲ. ಅಂತಹ ವಾತಾವರಣವಿರುವಾಗಲೇ ದಕ್ಷಿಣ ಭಾರತದಲ್ಲೂ ಚರ್ಚ್ ಮಿಷನರಿ ಶಾಲೆಗಳು ಫಲಕಾರಿಯಾಗಿದ್ದಕ್ಕೆ ಸಾಕಷ್ಟು ಉದಾಹರಣೆಗಳಿವೆ. 1821ರಲ್ಲಿ ತಿರುವನೇಲಿಯಲ್ಲಿ ಹೆಣ್ಣು ಮಕ್ಕಳಿಗಾಗಿ ಸ್ಥಾಪಿಸಿದ ವಸತಿಶಾಲೆ, 1840ರಲ್ಲಿ ಸ್ಕಾಟಿಷ್ ಚರ್ಚ್ ಸೊಸೈಟಿ 300 ಹಿಂದೂ ಶಾಲೆಯನ್ನು ಆರಂಭಿಸಿತು. ಖಾಸಗಿ ಬದುಕಿಗೆ ಮಾತ್ರ ಸೀಮಿತವಾಗಿದ್ದ

ಹೆಣ್ಣು ಸಾಮಾಜಿಕವಾಗಿ ತನ್ನನ್ನು ತಾನು ತೊಡಗಿಸಿಕೊಂಡಳು. ಇದಕ್ಕೆ ಶಿಕ್ಷಣ ಕಾರಣವಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಹೆಣ್ಣಿಗೆ ಕೌಟುಂಬಿಕ ಚೌಕಟ್ಟಿನಾಚೆಗಿನ ಲೋಕದ ಪರಿಚಯವಾಯಿತು. ಆದರೆ ಬದಲಾವಣೆ ಸುಲಭವಲ್ಲ. ಸುಲಭವಾಗಿ ಬದಲಾದ ಸಂಗತಿಯನ್ನು ಸಮಾಜ ಸ್ವೀಕರಿಸುವುದು ಇಲ್ಲ. ಪ್ರಾಥಮಿಕವಾಗಿ ಹೆಣ್ಣು ನಾಲ್ಕು ಗೋಡೆಗಳಿಂದ ಹೊರ ಬಂದು ಸಾಮಾಜಿಕವಾಗಿ ತೆರೆದುಕೊಳ್ಳಲು ಶೈಕ್ಷಣಿಕವಾಗಿ ಸಾಧಿಸಿದ ಪ್ರಗತಿಯೇ ಬುನಾದಿ ಆಯಿತು.

"ಇಂದಿನ ಭಾರತೀಯ ಮಹಿಳೆಯ ಸ್ಥಿತಿಯು ಈ ಹಿಂದೆ ಅವಳು ಅನುಭವಿಸಿದ ಬೌದ್ಧಿಕ ಹಾಗೂ ವಿವೇಚನಾಯುಕ್ತ ಶೋಷಣೀಯ ಧೋರಣೆಗಳಿಂದ ನೆಲಗಟ್ಟಿನ ಗಂಭೀರತೆಯನ್ನು ಪ್ರತಿಬಿಂಬಿಸುತ್ತವೆ". (ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಪು.ಸಂ. 51) ಮಹಿಳೆಯರ ಸ್ಥಿತಿ, ಬರವಣಿಗೆ ಆ ಕಾಲದ ಬದಲಾವಣೆಯ ಚಿತ್ರಣವನ್ನು ಗಂಭೀರವಾಗಿ ತಿಳಿಸುತ್ತದೆ.

ಹೊಸ ಸಾಮಾಜಿಕ ಪ್ರಜ್ಞೆ:

ಸಾಮಾಜಿಕವಾಗಿ ಹೆಣ್ಣು ಪಾಲ್ಗೊಂಡದ್ದು ಹೊಸ ಪ್ರಜ್ಞೆ ಮೂಡಲು ಕಾರಣವಾಯಿತು. ಕಲಿತ ಹೆಣ್ಣಿಗೆ ಇನ್ನೂ ಹೆಚ್ಚು ಕಲಿಯಬೇಕೆಂಬ ಬಯಕೆ ಮೂಡಿತು. ಉನ್ನತ ಶಿಕ್ಷಣ ಕಲಿಕೆ ಅಸಾಧ್ಯವೆನಿಸಿದರೂ ಕಲಿಯಬೇಕೆಂಬ ಛಲ ಮೂಡಿತು. ಆ ಕಾಲದಲ್ಲೇ ಇದ್ದ ಅನಿಷ್ಟ ಪದ್ಧತಿಗಳಾದ ಸತಿ ಪದ್ಧತಿ ಹೆಣ್ಣು ಶಿಶುಗಳ ಹತ್ಯೆ, ವೇಶ್ಯಾವಾಟಿಕೆ, ಸ್ತ್ರೀ ಶಿಕ್ಷಣಕ್ಕಿದ್ದ ತೊಡಕು, ಬಹುಪತ್ನಿತ್ವ, ವರದಕ್ಷಿಣೆ ಬಾಲ್ಯವಿವಾಹ, ವಿಧವೆರಾಗಿಯೇ ಬದುಕುವ ಸಂದರ್ಭ ಮಹಿಳೆಯರ ಬದುಕಿಗೆ ಕಡಿವಾಣವಾಯಿತ್ತು. ಎಲ್ಲಾ ಸಂಧಿಗ್ದತೆಯಿಂದ ಪಾರಾಗಬೇಕೆಂಬ ಭಾವನೆಯೂ ಜಾಗೃತವಾಯಿತು. ಸ್ತ್ರೀಯರ ಜೀವನ ಮಟ್ಟ ಸುಧಾರಣೆಯಾಗಬೇಕೆಂಬ ಹಂಬಲ ಸಾಮೂಹಿಕ ಒತ್ತಡವಾಯಿತು. ಎಷ್ಟೇ ಅಡೆತಡೆಯಿದ್ದರೂ ಗುರಿಸಾಧನೆಗೆ ಅಡೆತಡೆಗಳೇ ಪ್ರೇರಕವಾಯಿತು.

ಸ್ತ್ರೀಯರ ದುಸ್ಥಿತಿಗೆ ಮರುಗುವ ಸುಧಾರಣಾ ಮನೋಭಾವದ ಮನಸ್ಸು ಇತ್ತೇ ಹೊರತು ಬದುಕಿಗೊಂದು ಮಾರ್ಗ ದಕ್ಕಿಸುವ ದಾರಿಯಲ್ಲಿ ಸಾಗುತ್ತ ತನ್ನ ಮಾರ್ಗವನ್ನು ತಾನು ಆರಿಸಿಕೊಳ್ಳಬಲ್ಲಳು ಎಂಬ ಸ್ವತಂತ್ರ ಭಾವ ಸುಲಭವಾಗಿ ಮೂಡಲಿಲ್ಲ. ಈ ಪ್ರಯತ್ನದಲ್ಲಿ ಮಹಿಳೆಯಲ್ಲೇ ಜಾಗೃತವಾದ ಪ್ರಜ್ಞೆ ತನ್ನ ಏಳಿಗೆಗೆ ದಾರಿ ದಕ್ಕಿಸಿ ಕೊಟ್ಟಿತು. ವೈಯಕ್ತಿಕ ಬದುಕಿನ ಕಷ್ಟ ಕೋಟಲೆಗಳನ್ನು ಮೆಟ್ಟಿ ನಿಲ್ಲಬೇಕಾದರೆ ಮನೋಬಲ, ಅಚಲ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು. ಕೇವಲ ನಿರ್ಧಾರಗಳು ಯಶಸ್ಸಿಗೆ ಕಾರಣವಾಗುತ್ತಿರಲಿಲ್ಲ. ಆ ಯಶಸ್ಸಿಗಾಗಿ ಕ್ರಮಿಸಬೇಕಾದ ಹಾದಿ ದುಸ್ತರವಾಗಿಯೇ ಇರುತ್ತಿತ್ತು. ವೈಯಕ್ತಿಕ ಬದುಕನ್ನು

ಸುಧಾರಿಸಿಕೊಳ್ಳಲು ಹೊರಟ ಹೆಣ್ಣಿಗೆ ಖಾಸಗಿ ಬದುಕು ನಗಣ್ಯವೆನಿಸುವಂತಾಗಿ ತನ್ನನ್ನು ತಾನು ಸಾಮಾಜಿಕವಾಗಿ ತೊಡಗಿಸಿಕೊಂಡ ಅನೇಕ ಉದಾಹರಣೆಗಳಿವೆ. ಬಾಲವಿಧವೆಯಾಗಿ ಒಂಟಿಯಾಗಿ ಬದುಕಬೇಕಾದ ಹೆಣ್ಣು ಶೈಕ್ಷಣಿಕ ಸಾಧನೆಗೈದು ಮಾದರಿಯಾದ ಉದಾಹರಣೆ ಸಾಕಷ್ಟಿದೆ. ತನ್ನೆಡೆಯಿಂದ ತನ್ನ ಮೂಲಕ ಸಾಮಾಜಿಕವಾಗಿ ಪಾಲ್ಗೊಳ್ಳುವಿಕೆ ವ್ಯಷ್ಟಿ/ವ್ಯಕ್ತಿ ಪ್ರಜ್ಞೆಯಿಂದ ಆರಂಭಗೊಂಡು ಸಮಷ್ಟಿಯ ಮಹತ್ತರ ಬೆಳವಣಿಗೆಗೆ ಕಾರಣವಾಗಿರುವುದು ಸಾಮಾಜಿಕ ಬದಲಾವಣೆಯ ಸಂದರ್ಭದಲ್ಲಿ ಗ್ರಹಿಸಬಹುದಾದ ಸಂಗತಿ. "ಹದಿನೆಂಟನೆಯ ಶತಮಾನದ ವೇಳೆಗೆ ಯೂರೋಪಿನ ದೇಶಗಳಲ್ಲಾದ ಮನೋವಿಕಾಸ ಭಾರತದಲ್ಲಿಯೂ ಕಾಣಿಸಿಕೊಂಡಿತು. ಆಧುನಿಕ ಶಿಕ್ಷಣ ನಮ್ಮ ದೇಶದ ಯುವ ಮನಸ್ಸನ್ನು ಬದಲಿಸಿತು. ಪುರಾಣೋಕ್ತ ಭೂಗೋಳ, ಚರಿತ್ರೆ ಮತ್ತು ಮಿಥ್ಯವಿಜ್ಞಾನದ ಅರಿವಿನಿಂದ ಬೇರೆಯಾಗಿ, ನಿಜವಾದ ಇರವು, ಜನಾಂಗದ ಏಳಿಗೆ, ಅವನತಿ ಮತ್ತು ಬದಲಾಗದ ಪ್ರಕೃತಿ ನಿಯಮಗಳ ಜ್ಞಾನ ಲಭ್ಯವಾಯಿತು. ವೈಜ್ಞಾನಿಕ ಬೆಳಕಿನಲ್ಲಿ ದೇವರ ಆಣತಿಯೆಂದು ಆಚರಿಸುತ್ತಿದ್ದ ದುರಾಚಾರಗಳು ಮನುಷ್ಯ ವಿವೇಚನೆಯಿಲ್ಲದೆ ಮಾಡಿದ ತಪ್ಪುಗಳೆಂದು ಅರ್ಥವಾಯಿತು. (ಮಹಿಳಾ ಚಳವಳಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ:187)

ಕರ್ನಾಟಕದ ಧಾರವಾಡದ ವನಿತಾ ಸೇವಾ ಸಮಾಜ, ಶಾರದಾ ಸ್ತ್ರೀ ಸಮಾಜ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡದ್ದು, ಅಂತೆಯ ತೆಲಂಗಾಣ ಹೋರಾಟದಲ್ಲಿ ಮಹಿಳೆಯರು ಭಾಗವಹಿಸಿದರು. ನಿಜಾಮ ಆಳ್ವಿಕೆಯ ವಿರುದ್ಧ ನಡೆಸಿದ ಹೋರಾಟ, ಆಂಧ್ರಮಹಿಳಾ ಸಭಾ ಬಹು ಯಶಸ್ವಿ ಹೋರಾಟವಾಗಿತ್ತು. ನಂತರ ತಮಿಳುನಾಡಿನ ಆತ್ಮಗೌರವ ಚಳವಳಿ ಪೆರಿಯಾರ್‌ವಾದ ಬಹು ಪ್ರಭಾವ ಬೀರಿತ್ತು. ಕೇರಳದಲ್ಲಿ ನಡೆದ ಚಳವಳಿ ಸಂಚಲನವನ್ನೆಬ್ಬಿಸಿತ್ತು. ಈಳವಾ (ದಮನಕ್ಕೊಳಗಾದ) ಸಮುದಾಯದ ಅಸ್ಪೃಶ್ಯತಾ ನಿವಾರಣೆಯ ಚಳವಳಿ, ಶ್ರೀ ನಾರಾಯಣ ಗುರು ನೇತೃತ್ವದ ಸವರ್ಣೀಯರ ವಿರುದ್ಧದ ಚಳವಳಿ ಹೊಸ ಜಾಗೃತಿಯನ್ನು ತಂದಿತು. ಹೀಗೆ ಮಹಿಳಾ ಚಳವಳಿಗಳ ಪ್ರಭಾವ ಹೊಸ ಹುರುಪನ್ನು ತಂದಿತು.

"ಕೇರಳದ ನಂಬೂದರಿ ಸಮುದಾಯದ ಪರಿಷ್ಕಾರಕ್ಕಾಗಿ ಪ್ರಮುಖ ಹೋರಾಟಗಳಲ್ಲಿ ಸ್ತ್ರೀಯರು ಸಕ್ರಿಯವಾಗಿ ಪಾಲುಗೊಂಡಿದ್ದರು. ವಿ.ಟಿ. ಭಟ್ಟಾತಿರಿಪಾಡ್ ನೇತೃತ್ವದಲ್ಲಿ ಯೋಗಕ್ಷೇಮ ಸಭಾ ನಡೆಸಿದ 'ಮಾಱ್‌ಮಱಯ್ಕಲ್ ಸಮರಂ' (ಎದೆ ಮರೆಸುವ ಹೋರಾಟ)' 'ಕಲ್ಲು ಮಾಲಾ ಪ್ರಕ್ಷೋಭಂ' ಇವೆರಡೂ ನೇರವಾಗಿ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಿಸಿದ ಹೋರಾಟಗಳೇ ಆಗಿದ್ದವು" (ಕೇರಳ ಕಥನ – ಪು.ಸಂ. 93) ಸಾಮಾಜಿಕ ಸ್ವಾಸ್ಥ್ಯವನ್ನು

ಕಾಪಾಡುವ ಮೂಲಕ ಮಹಿಳೆಯರ ಸ್ಥಿತಿಗತಿಯ ಸುಧಾರಣೆ ನಡೆಯುತ್ತಿದ್ದ ಕಾಲದಲ್ಲಿ ಸಾಹಿತ್ಯದ ಮೂಲಕವೂ ಬಿಡುಗಡೆಯನ್ನು ಬಯಸಿತು.

ವೈಯಕ್ತಿಕ ಬದುಕಿನಲ್ಲಿ ಉಂಟಾದ ಸಡಿಲತೆ, ಸಾಮಾಜಿಕವಾಗಿ ಪಾಲ್ಗೊಂಡು, ಖಾಸಗಿ ಲೋಕದಾಚೆಗೆ, ಬದುಕಿನಲ್ಲಿ ಸಾಧನೆಗೈಯಬೇಕಾದ ಸಾಕಷ್ಟು ಅಂಶಗಳು ಎಂದು ಹೆಣ್ಣಿಗೆ ಮನವರಿಕೆಯಾಯಿತು. ಸ್ವಾತಂತ್ರ್ಯ, ಸುಧಾರಣೆ, ಅನ್ಯಸಂಸ್ಕೃತಿ ಪ್ರಭಾವಶಾಲಿಯಾಯಿತು. ಬದುಕಿನ ರೀತಿಯಲ್ಲಿ ಬದಲಾವಣೆ ಸಹಜವಾಗಿಯೇ ಆಯಿತು. ಧಾರ್ಮಿಕ, ಆಧ್ಯಾತ್ಮಿಕ ಮೌಲ್ಯಗಳ ಬಗ್ಗೆ ತಳೆದ ಉದಾತ್ತತೆ, ಮನುಷ್ಯನ ಸಹನಶೀಲತೆ, ನಮ್ಮ ಸಂಸ್ಕೃತಿಯಲ್ಲೇ ಬೇರೂರಿದ್ದ ಅಂಧಾನುಕರಣೆ, ಸಾಮಾಜಿಕ ಕಟ್ಟಲೆಗಳನ್ನು ಪ್ರಶ್ನಿಸಲಾಗದ ಸಂದಿಗ್ಧತೆ, ಆಶಾವಾದ, ಆದರ್ಶದ ಅನುಸರಣೆ ಇವೆಲ್ಲವೂ ಸಮಾಜದಲ್ಲಿ ಬೆರೆತು ಹೋಗಿತ್ತು. ಆ ಕಾಲದ ಜಟಿಲ ಒತ್ತಡಗಳಿಂದ ಬಿಡುಗಡೆ ಹೊಂದ ಬೇಕೆನ್ನುವುದು ಸಮಾಜವು ಸಾಮೂಹಿಕ ಬದಲಾಗಲು ಪ್ರೇರೇಣೆಯಾಯಿತು. ವಿಧವೆಯಾದ ಹೆಣ್ಣು, ಪುರುಷ ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಅಸಹಾಯಕಳು ಎಂಬ ಸಂದರ್ಭದ ಕಡೆಗೆ ಗಮನಹರಿಸಲಾಯಿತು.

ಸಾಮಾಜಿಕ ಬದಲಾವಣೆ ಆತ್ಮಪ್ರಜ್ಞೆಯನ್ನು ಜಾಗೃತಗೊಳಿಸಿತು. ಆತ್ಮನಿಷ್ಠ ಅನುಭವಗಳು ಮುಖ್ಯವೆನಿಸತೊಡಗಿದವು. ಜೀವನಾನುಭವ ವ್ಯವಸ್ಥೆ ಮತ್ತು ಕಂದಾಚಾರಗಳನ್ನು ಪ್ರಶ್ನಿಸುವ ಮಟ್ಟಕ್ಕೇರುವ ಶಕ್ತಿಯನ್ನು ಶಿಕ್ಷಣ ತಂದುಕೊಟ್ಟಿತು. ಆ ಕಾಲದ ಸತ್ಯವನ್ನು ಹುಡುಕಲು ಮುಂದಾದರು. ಮೇಲಿನ ಎಲ್ಲಾ ಚರ್ಚೆ ಹೆಣ್ಣು ಸಾಮಾಜಿಕವಾಗಿ ಚಾರಿತ್ರಿಕವಾಗಿ, ಕೌಟುಂಬಿಕವಾಗಿ, ಶೈಕ್ಷಣಿಕವಾಗಿ ಉಂಟಾದ ಬದಲಾವಣೆಯ ಬಗ್ಗೆ ತಿಳಿವು ಮೂಡಿಸುತ್ತದೆ. ತಿಳಿವಿನ ಸ್ಫೋಟ ಅರಿವಾಗಿ ಮಾರ್ಪಡುವಾಗ ಅಭಿವ್ಯಕ್ತಿ ಅನಿವಾರ್ಯವಾಗಿ ಕಂಡಿತು. ತನ್ನ ಅರಿವಿನ ವೈಯಕ್ತಿಕ ಅನುಭವಗಳು ಹೆಣ್ಣಿನ ಬದುಕಿಗೆ ಹೊಸ ಮಾರ್ಗವನ್ನು ಹಾಕಿಕೊಟ್ಟಿತು. ಆಧುನಿಕೋತ್ತರ ಚಿಂತನೆಯ ಫಲವಾಗಿ ಅಕ್ಷರ ಜ್ಞಾನಗಳಿಸಿದ ಹೆಣ್ಣು ಬರವಣಿಗೆಯ ಮೊರೆ ಹೊಕ್ಕಳು. ಭಾರತ ದೇಶದ ಸಾಮಾಜಿಕ ರೂಪುರೇಶೆಗಳು ಪಿತೃಪ್ರಧಾನ ಮೌಲ್ಯಭರಿತವಾಗಿತ್ತು. ಮಹಿಳೆ ಸಾಹಿತ್ಯ ರಚನೆಯಲ್ಲಿ ತೊಡಗಿದರೆ ಆಕೆಗೆ ಎಂದೂ ಪ್ರಬಲ ಬೆಂಬಲ ದೊರಕಲಿಲ್ಲ. ಯಾಜಮಾನಿ ಸಂಸ್ಕೃತಿಯೊಳಗೆ ಸಾಹಿತ್ಯ ರಚನೆ ಮಾಡಿದ ಮಹಿಳೆಗೆ ಇಕ್ಕಟ್ಟಿನ ಸಂದರ್ಭವನ್ನು ಮೀರುವ ಹಾದಿ ಸುಲಭವಾಗಿ ಇರಲಿಲ್ಲ. ಸಾಮಾಜಿಕವಾಗಿ ತನ್ನನ್ನು ತಾನು ಕೇಂದ್ರೀಕರಿಸುವ ಹಂಬಲ ಮಹಿಳಾ ಸಾಹಿತ್ಯದ ಮೂಲಕ ವ್ಯಕ್ತವಾಯಿತು. ಸಮಾಜದಲ್ಲಿದ್ದ ಮೌಲ್ಯಗಳು ಸ್ವಪ್ರಜೆಯೊಡನೆ ಬೆರೆತು ಸಾಮಾಜಿಕ ಅರಿವಿನತ್ತ ಹೊರಳಿದ್ದು ಬಹು ಮುಖ್ಯ ನಿಲುವಾಗಿದೆ.

ಸ್ತ್ರೀ-ಪುರುಷ ಅಸಮಾನತೆಯ ಬಗೆಗಿನ ಚಿಂತನೆಯಲ್ಲಿ ಸಾಹಿತ್ಯವು ಹೇಗೆ ಪ್ರಯೋಜನಕ್ಕೆ ಬರುತ್ತದೆ ಎನ್ನುವುದನ್ನು ಎಚ್.ಎಸ್. ಶ್ರೀಮತಿ ಅವರು ಹೀಗೆ ಚರ್ಚಿಸುತ್ತಾರೆ. "ಒಟ್ಟಾರೆ ಸಾಹಿತ್ಯವನ್ನು ಗಮನಿಸುವಾಗ, ಪ್ರತಿಯೊಂದು ಕೃತಿಯೂ ಆಯಾ ಸಾಹಿತಿಯ ವೈಯಕ್ತಿಕ ಅಭಿವ್ಯಕ್ತಿ ಎನ್ನುವುದರ ಜೊತೆ ಜೊತೆಯಲ್ಲೇ ಇಡೀ ಸಮಾಜದ ಮಾನವ ಜನಾಂಗದ ಅಭಿವ್ಯಕ್ತಿಯೂ ಅಲ್ಲಿರುತ್ತದೆ ಎಂಬುದು ನಿಜ. ಈ ಚಿಂತನೆಗಳಲ್ಲಿ ಸಮಾನತೆಯ ಎಷ್ಟೋ ಅಂಶಗಳನ್ನು ಗುರುತಿಸುವಂತೆಯೇ, ವೈರುಧ್ಯಗಳು ಪ್ರಕಟಗೊಂಡಿರುವುದನ್ನೂ ಗುರುತಿಸಲು ಸಾಧ್ಯವಿದೆ. ಬೇರೆ ಬೇರೆ ದೇಶಗಳಿಗೆ, ಬೇರೆ ಬೇರೆ ಸಮಾಜಗಳಿಗೆ ಸೇರಿದ ಸ್ತ್ರೀ ಹಾಗೂ ಪುರುಷರ ಅಭಿವ್ಯಕ್ತಿಗಳಲ್ಲಿ ಇರುವ ಸಮಾನ ಹಾಗೂ ವೈರುಧ್ಯದ ಸಂಗತಿಗಳನ್ನು ವಿಶ್ಲೇಷಿಸಿ ನೋಡಿದಾಗ ಸ್ತ್ರೀವಾದಿ ಸಮಸ್ಯೆಯ ಸ್ಪಷ್ಟವಾದ, ಪೂರ್ಣವಾದ ರೂಪವನ್ನು ಗ್ರಹಿಸಲು ಸಹಾಯಕವಾಗುತ್ತದೆ." (ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಪು.ಸಂ. 41) ಆದ್ದರಿಂದ ಸಾಹಿತ್ಯದ ಜೊತೆಗಿನ ಸ್ತ್ರೀವಾದಿ ಚಿಂತನೆಗಳು ಆಧುನಿಕ ಬರವಣಿಗೆಯಲ್ಲಿ ಹೊಸ ಪ್ರಜ್ಞೆಯನ್ನು ಮೂಡಿಸಿತು.

ನೀತಿ-ಅನೀತಿಗಳ ಹಂಗನ್ನು ತೊರೆದು ತನ್ನನ್ನು ತಾನು ಶೋಧಿಸಿಕೊಳ್ಳುವುದಕ್ಕೆ ಹೆಣ್ಣು ಬರವಣಿಗೆಯ ಮಾರ್ಗವನ್ನು ಆಯ್ದುಕೊಂಡಳು. ಪ್ರತಿಷ್ಠೆ, ಪಾತಿವ್ರತ್ಯ, ಶುದ್ಧತೆ, ಸಾಂಪ್ರದಾಯಿಕ, ಮೌಲ್ಯಗಳನ್ನೇ ನೆಚ್ಚಿಕೊಳ್ಳುವ ಪ್ರಧಾನವಾಹಿನಿಯ ಬದುಕಿನ ಕ್ರಮಕ್ಕೆ ಮುಖಾಮುಖಿ ಆಯಿತು. ಈ ಸಂದರ್ಭದಲ್ಲಿ ಶತಮಾನಗಳಿಂದ ಅಂತರಂಗದಲ್ಲಿ ಹುದುಗಿಸಿ ಉಸಿರು ಕಟ್ಟಿಸಿದ ಎಷ್ಟೋ ಭಾವನೆಗಳಿಗೆ ಅಕ್ಷರ ರೂಪ ನೀಡಲು ಮಹಿಳೆಯರು ಮುಂದಾದರು. ಹೆಚ್ಚೇನು ಶಿಕ್ಷಣ ದೊರಕದ ಬರವಣಿಗೆಗೆ ಪ್ರೋತ್ಸಾಹ ಸಿಗದ ಸಂದರ್ಭದಲ್ಲೂ ಮಹಿಳೆಯರು ಆಡುನುಡಿಯ ಮೂಲಕ ಸರಳವಾಗಿ ಸಾಹಿತ್ಯ ರಚನೆಯನ್ನೇ ಆರಂಭಿಸಿದರು. ಈ ಹಂತದಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಹೆಣ್ಣು ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಿದ್ದಳೇ! ಕೇವಲ ಮನೋಕಾಮನೆಯನ್ನೋ, ಆಕೆಯ ಖಾಸಗಿ ಯಾತನಾಮಯ ಬದುಕನ್ನು ಸಾರ್ವಜನಿಕವಾಗಿಸುವ ಪ್ರಯತ್ನವನ್ನು ಮಾತ್ರ ಆಕೆ ಮಾಡಿದಳೆ, ಹೆಣ್ಣಿನ ಬರವಣಿಗೆಯ ಆಶಯ, ಉದ್ದೇಶಗಳು ಏನಾಗಿತ್ತು. ಸಂಕ್ರಮಣ ಕಾಲದಲ್ಲಿ ಸಾಹಿತ್ಯ ರಚನೆಯಲ್ಲಿ ಹೆಣ್ಣು ತೊಡಗಲು ಇದ್ದ ಒತ್ತಡ ಎಂಥದ್ದಾಗಿತ್ತು ಎಂಬುದನ್ನು ಚರ್ಚಿಸುವ ಅಗತ್ಯವಿದೆ.

19ನೆ ಶತಮಾನದಲ್ಲಿ ಹೆಣ್ಣು ಸಾಹಿತ್ಯ ರಚನೆಯಲ್ಲಿ ತೊಡಗಲು ಇದ್ದ ತಾತ್ವಿಕ ಕಾರಣಗಳು :

- ರೂಢಿಗತ ಮೌಲ್ಯಗಳಿಗೆ ಹೊಸ ಆಶಯಗಳು ಮುಖಾಮುಖಿ ಆದದ್ದು, ಪಾರಂಪರಿಕ ಹೇರಿಕೆಯನ್ನು ಒಪ್ಪುವುದರ ಬಗ್ಗೆ ಸಮಾಜದಲ್ಲಿ ಮೂಡಿದ ಜಾಗೃತಿ ಹೊಸ ಆಲೋಚನೆಯ ಅಲೆಯನ್ನೆಬ್ಬಿಸಿತು.

- ಮಹಿಳೆಯರ ಜೀವನ ಅಂದಿನ ನಿರ್ದಿಷ್ಟ ಕಾಲಕ್ಕೆ ಮೀಸಲಾಗಿರದೆ ಹಿಂದಿನ ಚರಿತ್ರೆಯ ಶೋಧ ಮುಂದಿನ ಬದಲಾವಣೆಗೆ ಬುನಾದಿಯಾಯಿತು. ಬದಲಾವಣೆಗಾಗಿ ತಹತಹಿಕೆಯೂ ಇತ್ತು.

- ಸಾಂಸ್ಕೃತಿಕ ಬದಲಾವಣೆ ಸ್ವ-ಪ್ರಜ್ಞೆಯನ್ನು ಜಾಗೃತಗೊಳಿಸಿತು.

- ಸ್ತ್ರೀ ಪುರುಷರ ನಡುವಿನ ಅಂತರ ಮಾನವ ನಿರ್ಮಿತ ಕಲ್ಪನೆ ಎಂಬ ವಾಸ್ತವಾಂಶ ಮನವರಿಕೆ ಆಯಿತು. (ಶ್ರೇಷ್ಠ, ಕನಿಷ್ಠದ ಕಲ್ಪನೆಯ ನಿರಾಕರಣೆ)

- ಸಮಾಜದಲ್ಲಿ ಬೇರೂರಿದ್ದ ಭ್ರಮೆಗಳು, ಆದರ್ಶದ ಹೆಸರಿನಲ್ಲಿ ನಡೆಯುವ ಹುನ್ನಾರಗಳ ಬಗ್ಗೆ ಎಚ್ಚೆತ್ತುಕೊಂಡರು.

- ವೈಧವ್ಯ ಪ್ರಾಪ್ತವಾಗಿ ಒಂಟಿ ಜೀವನ ನಡೆಸಬೇಕಾದಾಗ ಬಾಲ್ಯವನ್ನು ಗಂಡನ ಮನೆಗೆ ಹೋಗಲು ತಯಾರಿ ನಡೆಸುವುದರ, ಬದಲಿಗೆ ಶಿಕ್ಷಣಕ್ಕೆ ಮೀಸಲಿಡಲಾಗಿದ್ದು ಅಕ್ಷರ ಜ್ಞಾನ ಹೆಣ್ಣಿನ ಕೈಗೆ ಲೇಖನಿ ಹಿಡಿಯುವ ಅವಕಾಶವನ್ನು ನೀಡಿತು.

- ವಸಾಹತು ಆಡಳಿತ ಶಿಕ್ಷಣದ ಮೂಲಕ ಅರಿವು ಮೂಡಿಸುವ ಅವಕಾಶ ಕಲ್ಪಿಸಿಕೊಟ್ಟಿತು.

- ಎಲ್ಲಕ್ಕಿಂತ ಮುಖ್ಯವಾಗಿ ಸಮಾಜದ ಕಟ್ಟಳೆಯಲ್ಲಿ ಸಿಲುಕಿ ಬಾಲ ವಿಧವೆಯಾಗಿ, ವೇಶ್ಯೆಯಾಗಿ, ಅರೆಬರೆ ಶಿಕ್ಷಣ ಕಲಿತ ಒಂಟಿ ಹೆಣ್ಣುಗಳು, ಕಂಡು ಬಂದರೂ, ಅವರ ಮೂಲಕವೇ ಹೊಸ ಸ್ತ್ರೀ ಪ್ರತೀಕಗಳು ಸಮಾಜದಲ್ಲಿ ಮೂಡಿ ಬಂದವು. ತಮಗಿದ್ದ ತೊಡಕುಗಳನ್ನು ಮೀರುವ ಪ್ರಯತ್ನ ಆರಂಭವಾಯಿತು.

- ವೈಯಕ್ತಿಕ ನೆಲೆಯಿಂದ ಆರಂಭವಾಗುವ ಪ್ರಜ್ಞೆ ತನ್ನನ್ನು ಕೇಂದ್ರವಾಗಿಸುವ ದೃಷ್ಟಿಯಲ್ಲಿ ಸಾಮಾಜಿಕ ಕಾಳಜಿಯ ಭಾಗವಾಗಿ ಮೂಡಿ ಬರುತ್ತಿದ್ದ ಸಂದರ್ಭ.

- ಆತ್ಮ ಶೋಧದ ಮೂಲಕ ಆರಂಭಗೊಂಡ ಆಲೋಚನೆಗಳು ಸಾಮಾಜಿಕ ಸಂದಿಗ್ಧತೆಗೆ ಉತ್ತರ ಕೊಡಲಾರಂಭಿಸಿದವು. ಸಾಹಿತ್ಯಕ ಬೆಳವಣಿಗೆಗೆ ಪೂರಕವಾಯಿತು.

ಒಟ್ಟಾರೆಯಾಗಿ ಅಂದಿನ ಸಮಾಜದಲ್ಲಿನ ಬದಲಾವಣೆಯು ಹೆಣ್ಣಿನ ಬದುಕಿನ ಮಟ್ಟ ಸುಧಾರಣೆಯಾಗಿ ತನ್ನಲ್ಲೇ ಮೂಡಿದ ಸ್ವಪ್ರಜ್ಞೆಯನ್ನು ಅಕ್ಷರದ ಮೂಲಕ ಪ್ರತಿಭಟಿಸಲು ಆರಂಭಿಸಿದರು. ಹಂತ ಹಂತದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಅಭಿವ್ಯಕ್ತಿಕ್ರಮವು ಬದಲಾಯಿತು. ಶತಶತಮಾನಗಳಿಂದ ಸ್ತ್ರೀ ರಕ್ಷಣೆ, ಸುರಕ್ಷತೆ ಎಂಬ ಹೆಸರಿನಲ್ಲಿ ಪುರುಷ ಮೌಲ್ಯಗಳನ್ನು ಹೇರುತ್ತಾ ತನಗೆ ಬೇಕಾದಂತೆ ಹೆಣ್ಣನ್ನು ನಡೆಸಿಕೊಳ್ಳುತ್ತಲೇ ಬಂದಿದ್ದ ಸಂದರ್ಭ ಯಾವುದು ತಪ್ಪು, ಸರಿಗಳ ಆಲೋಚನೆ ಮಾಡುವುದಕ್ಕೆ ಪ್ರೇರಣೆ ಆಯಿತು. ಹೆಣ್ಣಿನ ಬಗೆಗೆ ತಾಳುತ್ತಿದ್ದ ತಟಸ್ಥ ಧೋರಣೆಯ ಬಗ್ಗೆ ಎಚ್ಚರಿಕೆ ಮೂಡಿತು. ಸಾಂಸ್ಕೃತಿಕವಾಗಿ ಮಹಿಳೆಯರ ಬದುಕಿನಲ್ಲಿ ಕಂಡ ಬದಲಾವಣೆಯನ್ನು ಇಂದು ಅಭ್ಯಸಿಸ ಬೇಕಾದರೆ ಸಾಹಿತ್ಯದ ದಾಖಲೆಯ ಅಗತ್ಯವಿದೆ. 18ನೇ ಶತಮಾನ ಸಾಹಿತ್ಯದ ದೃಷ್ಟಿಯಿಂದ ಅಷ್ಟೇನು ಮಹತ್ವದ ಕಾಲವಾಗಿರದ ಸಂದರ್ಭದಲ್ಲಿ 19ನೇ ಶತಮಾನದಲ್ಲಿ ಉಂಟಾದ ಸಾಮಾಜಿಕ, ಶೈಕ್ಷಣಿಕ ಪ್ರಗತಿಯೇ ಬದಲಾವಣೆಗೆ ಮುಖ್ಯ ಕಾರಣವಾಗುತ್ತದೆ. ಬದಲಾವಣೆ ಜಗದ ನಿಯಮ, ಈ ನಿಟ್ಟಿನಲ್ಲಿ ದಕ್ಷಿಣ ಭಾರತದಲ್ಲಿ ಮಹಿಳೆಯರ ಪ್ರಜ್ಞೆ ಜಾಗೃತಗೊಂಡು ಅಭಿವ್ಯಕ್ತಿಸಿದ್ದು ಏನನ್ನು? ಸಾಹಿತ್ಯದ ಯಾವ ಪ್ರಕಾರವನ್ನು ಆಯ್ಕೆ ಮಾಡಿಕೊಂಡರು ಎಂಬ ಚರ್ಚೆಯನ್ನು ನಡೆಸುತ್ತ ಕಥನ ಪ್ರಕಾರವನ್ನೇ ಮಹಿಳೆಯರು ಆಯ್ಕೆ ಮಾಡಿಕೊಂಡು ಬರೆಯಲು ತೊಡಗಿದ್ದುದರ ಹಿಂದೆ ಇದ್ದ ಪ್ರಬಲ ಕಾರಣ ಯಾವುದು? ದಕ್ಷಿಣ ಭಾರತದಲ್ಲಿ ಮಹಿಳೆಯರ ಬರವಣಿಗೆಯ ಆಶಯ ಯಾವ ದಿಕ್ಕಿನೆಡೆಗೆ ಸಾಗುತ್ತಾ ಬಂದಿದೆ ಎಂಬುದನ್ನು ಚರ್ಚಿಸಬೇಕಾಗಿದೆ. ಪುರುಷರಿಗಿಂತ ಭಿನ್ನ ಲೋಕಾನುಭವ ಹೊಂದಿದ್ದ ಮಹಿಳೆಯರು ಪ್ರತಿ ಹಂತದಲ್ಲಿ ತೊಡರುಗಳನ್ನು ಎದುರಿಸಬೇಕಾಯಿತು. ವ್ಯವಸ್ಥೆಯನ್ನು ಪುನರ್ ಪ್ರತಿನಿಧಿಸುವ ಅಚ್ಚಿನ ಪಾತ್ರಗಳು ಪುರುಷ ಸಂಬಂಧದ ಜೊತೆ ಕೂಡಿ ಬೆರೆತು ಮೂಡಿ ಬರುತ್ತಿದ್ದವು. ದಿಢೀರನೆ ಪರಂಪರೆಯನ್ನು ಮೀರಿ ಬರೆಯಲು ಅಸಾಧ್ಯವಾಗಿದ್ದ ಸಂದರ್ಭ ಅದಾಗಿತ್ತು. ಮಹಿಳೆ ಬರೆಯ ಬಲ್ಲಳೇ ಎಂಬ ಸಂದರ್ಭ ಒಂದು ಕಾಲದಲ್ಲಿತ್ತು. ಕಥನ ಪ್ರಕಾರವನ್ನು ಇಡೀ ಭಾರತದಾದ್ಯಂತ ಬರೆಯಲು ಬಳಸಿಕೊಳ್ಳಲಾಯಿತು. ಕತೆ ಕಟ್ಟುವುದು

ಕೌಶಲವಾದರೆ ಗ್ರಹಿಸುವುದು ಅತಿ ಸುಲಭ, ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವ ಪಾತ್ರಗಳು ಅದೆಷ್ಟೋ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಬರೆಯಲು ಆರಂಭಿಸಿದರೆ ಆಕೆಗೆ ಎಂದೂ ಪ್ರಬಲ ಬೆಂಬಲ ಸಿಗಲಿಲ್ಲ. ಯಾಜಮಾನಿ ಸಂಸ್ಕೃತಿಯೊಳಗೆ ಸಾಹಿತ್ಯ ರಚನೆ ಮಾಡಿದ ಮಹಿಳೆಗೆ ಇಕ್ಕಟ್ಟಿನ ಸಂದರ್ಭವನ್ನು ಮೀರುವ ಹಾದಿ ಸುಲಭವಾಗೇನು ಇರಲಿಲ್ಲ.

ಮಹಿಳಾ ಬರವಣಿಗೆಯ ವಿಚಾರಗಳು :

- ಮಹಿಳಾ ಅನುಭವಗಳು, ಬದುಕಿನ ಶೈಲಿಯೇ ಭಿನ್ನವಾಗಿದ್ದವು (ಭಿನ್ನವಾಗಿರುತ್ತವೆ) ಆದ್ದರಿಂದ ಅವರ ಬರವಣಿಗೆಯು ಸ್ತ್ರೀ ಕೇಂದ್ರಿತವಾಗಿತ್ತು.
- ಗಂಡು, ಹೆಣ್ಣು ಒಂದೇ ಸಮಾಜದಲ್ಲಿ ಬದುಕಿದ್ದರೂ ಭಿನ್ನ ಮನೋಭೂಮಿಕೆ ಇದ್ದುದರಿಂದ ಬರವಣಿಗೆಗೆ ಆಯ್ಕೆ ಮಾಡಿಕೊಂಡ ವಿಷಯಗಳು ಸಂಪೂರ್ಣ ಬೇರೆಯೇ ಆಗಿತ್ತು.
- ಜಾನಪದ ಸಾಹಿತ್ಯದಲ್ಲಿ ಮಹಿಳಾ ದನಿ ಕೇಳಿ ಬಂದಿದೆಯಾದರೂ ಅವರು ಅಭಿವ್ಯಕ್ತಿಸಿದ್ದು ಕೌಟುಂಬಿಕ ನೆಲೆಯಲ್ಲೇ... ಪುರುಷರ ಒಪ್ಪಿತ ಮೌಲ್ಯಗಳ ಚೌಕಟ್ಟಿನಲ್ಲೇ ಆಗಿತ್ತು.
- ವೈಯಕ್ತಿಕ ಬದುಕಿನ ತಾಕಲಾಟಗಳನ್ನು ಮಹಿಳೆ ಸಾಹಿತ್ಯದ ಮೂಲಕ ಹೊರ ಹಾಕಲು ಹೊರಟರೆ ಪುರುಷರು ಯಾವ ತಾಕಲಾಟ ಹೊರಹಾಕಲು ಬರೆಯಲಿಲ್ಲ. ಬರವಣಿಗೆ ಪುರುಷರಿಗೆ ಮೀಸಲಾದ ಪಾಂಡಿತ್ಯವೆಂಬ ನಂಬಿಕೆಯಲ್ಲಿ ಬರೆಯುತ್ತಿದ್ದರು.
- ಭಾರತ ದೇಶ ಹಂತ ಹಂತವಾಗಿ ಹೇಗೆ ಬದಲಾಗುತ್ತಾ ಹೋಯಿತು. ಹಾಗೆ ಮಹಿಳಾ ಪ್ರಶ್ನೆಗಳು ಮೂಡಿದವು. ಬರವಣಿಗೆಯೂ ಹಂತ ಹಂತವಾಗಿ ಬದಲಾಯಿತು. (ಸ್ವಾತಂತ್ರ್ಯ ಹಂಬಲದಿಂದ ಕಾರ್ಪೋರೇಟ್ ಸಂಸ್ಕೃತಿವರೆಗೂ).
- ಆರಂಭದಲ್ಲಿ ಸಾಮಾಜಿಕ ಬದುಕಿನ ಸ್ತ್ರೀ ಯಾತನೆಯನ್ನು ಮಾತ್ರ ಕಥನ ರೂಪದಲ್ಲಿ ಕಟ್ಟಿಕೊಡಲು ಮುಂದಾದಳು.

- ಆಕೆಯ ಅಭಿವ್ಯಕ್ತಿ ಸಾಮರ್ಥ್ಯಕ್ಕಿದ್ದ ಅಡೆತಡೆ, ಸೀಮಿತ ಜ್ಞಾನ ಮಿತಿ, ಸುಲಭ ಅಭಿವ್ಯಕ್ತಿ , ಒಲಿದ ಕಥನ ಕ್ರಮ ಬರೆಯಲು ಕಥನ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳಲು ಪ್ರೇರಣೆಯಾಯಿತು.

- ಮಹಿಳೆ ಬಹುಶಃ ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಇನ್ನೂ ಹಲವು ವರ್ಷಗಳು ಸಂದಿಗ್ಧ ವಾತಾವರಣವನ್ನು ಎದುರಿಸಬೇಕಾಗಿ ಬರುತ್ತಿದ್ದಿರಬಹುದು. ಕತೆಗಾರ್ತಿಯ ಬರವಣಿಗೆಯ ತುಡಿತ ಕೇವಲ ಆಕೆಯದು ಮಾತ್ರವಾಗಿರದೆ ಭಾರತೀಯ ಸ್ತ್ರೀಯರ ಧ್ವನಿ ಎನ್ನಬಹುದು.

- ಸ್ವ-ಪ್ರಜ್ಞೆ ಜಾಗೃತವಾದ ಫಲವಾಗಿ ನೈತಿಕ-ಅನೈತಿಕಗಳ ಹಂಗನ್ನು ತೊರೆದು ಪ್ರೇಮ-ಕಾಮ, ಮುಟ್ಟು, ಬಸಿರು, ಹೆರಿಗೆ, ಸ್ವೀಕಾರ, ತಿರಸ್ಕಾರಗಳು ಸಾಹಿತ್ಯದಲ್ಲಿ ಸಹಜವಾಗಿಯೇ ಪ್ರಕಟಿತವಾಯಿತು.

- ಶತಮಾನಗಳಿಂದ ಅವಿತಿಟ್ಟ ಯಾತನೆ ಬೇರೆ ಬೇರೆ ಪ್ರದೇಶಗಳಲ್ಲಿ ವ್ಯಕ್ತವಾದರೂ ಪುರುಷಾಧಿಪತ್ಯವನ್ನೇ ಪ್ರಶ್ನೆ ಮಾಡುವ ದಾಟಿ ಇಡೀ ಭಾರತದ ಎಲ್ಲಾ ಕತೆಗಾರ್ತಿಯರಲ್ಲೂ ಮೂಡಿ ಬಂದಿದೆ.

- ಭಾರತದ ಮಹಿಳಾ ಕಥಾ ಸಾಹಿತ್ಯ ಕೇವಲ ಮಹಿಳೆಯ ದುಃಖದ ಸರಮಾಲೆಯಲ್ಲ. ದುರಂತದ ಸರಮಾಲೆಯಾಗಿದ್ದರೆ ಮಹಿಳಾ ಸಾಹಿತ್ಯ ಚರಿತ್ರೆ ಹುರುಳಿಲ್ಲದ್ದಾಗುತ್ತದೆ. ಆಕೆಯ ಬದುಕಿನ ಕ್ರಮವಾಗಿ ಸಾಂಸ್ಕೃತಿಕ ಸಂಗತಿಯನ್ನು ಬಿಂಬಿಸಿದೆ.

- ಪುರುಷ ನಿರ್ಮಿತ ಸಾಂಪ್ರದಾಯಿಕ ಸ್ತ್ರೀ ಪ್ರತಿಮೆಗಳು ಬಿಡುಗಡೆ ಹೊಂದಿ ಪುರುಷ ಸಮಾಜವನ್ನು ಪ್ರಶ್ನಿಸುವ ತಿರುಗೇಟು ನೀಡುವ ಪಾತ್ರಗಳು ಚಿತ್ರಿತವಾಗಿದೆ.

- ಸಾಮಾಜಿಕ ಆಚಾರಗಳ ಅವನತಿಯನ್ನು ಪ್ರಶ್ನೆ ಮಾಡುತ್ತಿರುವ ಮಹಿಳಾ ಬರವಣಿಗೆ ಬಹು ದೊಡ್ಡ ಸವಾಲಾಗಿದೆ.

- ಸ್ವಾತಂತ್ರ್ಯದ ಹಂಬಲ, ಸ್ವಾತಂತ್ರ್ಯದ ಸಂಭ್ರಮ, ವ್ಯಕ್ತಿ ಕೇಂದ್ರ ಪ್ರಜ್ಞೆ, ಖಾಸಗೀಕರಣ, ಸಾಮಾಜಿಕವಾಗಿ ಮಹಿಳೆ ಪಾಲ್ಗೊಂಡದ್ದು, ಜಾಗತೀಕರಣ, ಕಾರ್ಪೊರೇಟ್ ಸಂಸ್ಕೃತಿ, ಇವುಗಳ ಪ್ರಭಾವ ಮಹಿಳೆಯರ ಮೇಲೆ ಆಗಿದೆ.

- ಸಮಾಜದ ನಿರೀಕ್ಷೆ ಪೂರ್ವಾಗ್ರಹಗಳನ್ನು ಮೀರಿ ಬೆಳೆದ ಮಹಿಳಾ ಬದುಕಿನ ಚಿತ್ರಣಗಳು ಸಾಹಿತ್ಯದಲ್ಲಿ ದೊರೆತಿವೆ.

ರಾಷ್ಟ್ರೀಯತೆಯ ಭಾವ ಭಾರತಾದ್ಯಂತ ಮೂಡಿತ್ತು. ಪ್ರಜ್ಞಾವಂತ ವರ್ಗ, ಸಮಾನ ಮನಸ್ಕರು, ಒಟ್ಟುಗೂಡಿ ಸಮಾಲೋಚನೆ ನಡೆಸಲು ಆರಂಭಿಸಿದರು. ಸಾಹಿತ್ಯದಲ್ಲಿ ಸೃಜನಶೀಲತೆಯನ್ನು ಮೂಡಿಸಲು ಜನಸಾಮಾನ್ಯರ ನಿತ್ಯ ಲೋಕಾನುಭವಗಳ ದಾಖಲೆ ಆಯಿತು. ಭಾವನಾತ್ಮಕ ಅಂಶಗಳು ಭಾಷೆಯ ಮೂಲಕ ಅಭಿವ್ಯಕ್ತಗೊಂಡಿತು. ಹೆಣ್ಣನ್ನು ನೋಡುವ ಕ್ರಮವು ಮಾನವೀಕರಣಗೊಂಡಿತು. ಮಹಿಳೆಯರ ಅಭಿವ್ಯಕ್ತಿ ಕ್ರಮ ರೂಢಿಯಾಯಿತೆಂಬ ಮಾತ್ರಕ್ಕೆ ಸಾಮೂಹಿಕವಾಗಿ ಸ್ತ್ರೀಯರ ತಳಮಳಗಳು ವ್ಯಕ್ತವಾಯಿತೆಂಬ ಸಮಾಧಾನವೂ ಅಲ್ಲ. ಜೈವಿಕವಾಗಿ ಹೆಣ್ಣು ಹೆಣ್ಣಾಗಿ ಬದುಕುವುದಕ್ಕಿಂತ, ಹೆಣ್ಣೆಂಬ ಪ್ರಜ್ಞೆಯನ್ನು ಹೇರಲಾಗುತ್ತಿದ್ದುದು ಇಂದಿನವರೆಗೂ ರೂಢಿಯಲ್ಲೇ ಇದೆ. ಮಹಿಳಾ ಬರವಣಿಗೆ ಅವರ ತಾತ್ಕಾಲಿಕ ಅವಶ್ಯಕತೆಗಳನ್ನು ಮಾತ್ರ ದಾಖಲು ಮಾಡಲು ಇರುವ ಮಾರ್ಗ ಎಂದೂ ಹೇಳಲಾಗುವುದಿಲ್ಲ. ಕಥನ ಪ್ರಕಾರದ ಮೂಲಕ ಅಂದಿನ ಸಾಂಸ್ಕೃತಿಕ ಬದುಕಿನ ಅನಾವರಣವಾಯಿತು. ಮಹಿಳಾ ಬರವಣಿಗೆಯ ಮೂಲಕ ಆ ಕಾಲದ ಘಟನಾವಳಿಗಳು ಪ್ರತಿಫಲನಗೊಂಡವು. ಜನಸಾಮಾನ್ಯರ ಮನೋಲೋಕ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಂಡಿದ್ದು ಕಥನ ಪ್ರಕಾರವು ತೀರಾ ಸಹಜವೆಂಬಂತೆ ಮೂಡಿ ಬಂದಿತು.

ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ತೆಲುಗಿನ ದಾಮರಾಜು ಪುಂಡರೀಕಾಕ್ಷುಡು, ಮಲಯಾಳಂನ ಕುಮಾರನ್ ಆಶಾನ್ ಹಾಗೂ ವಲ್ಲತ್ತೋಳ್, ಕನ್ನಡದ ಕುವೆಂಪು, ಬೇಂದ್ರೆ, ತಮಿಳಿನ ವಿ. ಕಲ್ಯಾಣ ಸುಂದರ ಮೊದಲಿಯಾರ್ ಹಾಗೂ ಕಲ್ಕಿ, ಆರ್. ಕೃಷ್ಣಮೂರ್ತಿ ಮುಂಚುಣಿಯಲ್ಲಿದ್ದವರು. ಜನರ ಕವಿಗಳಂತೆ ಸ್ವೀಕೃತರಾದವರು. ಸೃಜನಾತ್ಮಕತೆಗೆ ಜನಸಾಮಾನ್ಯರನ್ನು ವಸ್ತುವಾಗಿಸಿಕೊಂಡರು. ಕುವೆಂಪು ವಿಶ್ವಪ್ರಜ್ಞೆ, ವಲ್ಲತ್ತೋಳ್ ಜಗವೆಲ್ಲ ಸುಖವಾಗಿರಲಿ, ಸ್ವತಂತ್ರವಾಗಿರಲಿ ಎಂಬ ಅಂಶವನ್ನು ಸಾಹಿತ್ಯದ ಮೂಲಕ ಸಾರಿದರು. ಮಾನವೀಯತೆ, ಮಾನವೀಯ ಮೌಲ್ಯಗಳು ಅತಿ ಮುಖ್ಯವೆನಿಸಲು ಆರಂಭಗೊಂಡಿತು. ದೇಶದಲ್ಲಿ ನಿರ್ಮಿತಗೊಂಡಿದ್ದ ರಾಜಕೀಯ ಅರಾಜಕತೆಯ ಜೊತೆಗೆ ವೈಯಕ್ತಿಕ ಹಿತಸಾಧನೆ ಮುಖ್ಯವೆನಿಸಿತು.

ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣ ಭಾರತದ ಮಹಿಳಾ ಸಾಹಿತ್ಯ ಕಥನ ಪ್ರಕಾರದ ಮೂಲಕ ವ್ಯಕ್ತಪಡಿಸಿದ್ದೇನನ್ನು? ಮಹಿಳಾ ಕಥನ ಸಾಹಿತ್ಯದ ಉದ್ದೇಶಗಳು ಯಾವುವು? ಮಹಿಳಾ ಸಾಹಿತ್ಯದಿಂದ ಸಮಾಜದಲ್ಲಿ ಬದಲಾವಣೆಯ ಸಂಕ್ರಮಣ ಆರಂಭವಾಯಿತು. ಮಹಿಳಾ ಬದುಕು

ವಾಸ್ತವದೆಡೆಗೆ ಮುಖಮಾಡಿತು. ವಿಷಯಗಳ ಆಯ್ಕೆ, ಸಾಮಾಜಿಕ ಸ್ಥಿತಿ ಹೇಗೆ ಭಿನ್ನವೆನಿಸಿತ್ತು ಅಥವಾ ನಾಲ್ಕು ರಾಜ್ಯಗಳ ಸಂದರ್ಭ ಒಂದೆ ತೆರನಾಗಿತ್ತೊ ಎಂಬುದರ ಕಥನವನ್ನು ತೌಲನಿಕವಾಗಿಟ್ಟು ನೋಡುವ ಮೂಲಕ ಅರಿಯುವ ಪ್ರಯತ್ನ ಮಾಡಲಾಗಿದೆ. ಕಾಲದಿಂದ ಕಾಲಕ್ಕೆ ಕಥನ ಸ್ವರೂಪ ಹೇಗೆ ಬದಲಾಗುತ್ತಾ ಬಂದಿದೆ. ಕಥನ ಪ್ರಕಾರವನ್ನು ಹೆಣ್ಣು ಹೇಗೆ ಬಳಸಿಕೊಂಡಿದ್ದು ಎಂಬುದನ್ನು ಸಾಹಿತ್ಯದ ಮೂಲಕ ಉದಾಹರಿಸಬಹುದಾಗಿದೆ.

ವಿಮರ್ಶಕರಾದ ಡಾ. ಗಿರಡ್ಡಿ ಗೋವಿಂದರಾಜಾರವರು ಮಹಿಳಾ ಬರವಣಿಗೆ ಕುರಿತು ಹೀಗೆ ಹೇಳುತ್ತಾರೆ. "ನಮ್ಮ ಲೇಖಕಿಯರು ಗುರುತರವಾದ ಸಮಸ್ಯೆಗಳನ್ನು ವಸ್ತುವಾಗಿ ಆಯ್ಕೆ ಮಾಡಿದರೂ ಸೂಕ್ತವಾಗಿ ಅವುಗಳನ್ನು ನಿರ್ವಹಿಸುವ ತಂತ್ರವನ್ನು ರೂಪಿಸದೆ ಸೋಲುತ್ತಾರೆ". (ಹೆಣ್ಣು ಹೆಂಗಸು:31) ಈ ನಡುವೆಯು ಮಹಿಳಾ ಕಥನ ಸಾಹಿತ್ಯ ಅನನ್ಯತೆಯನ್ನು ಉಳಿಸಿಕೊಂಡಿದೆ.

ದಕ್ಷಿಣ ಭಾರತದ ಸ್ವತಂತ್ರ ಪೂರ್ವ ಮಹಿಳಾ ಕಥಾ ಸಾಹಿತ್ಯ :

1918 ಆಗಸ್ಟ್‌ನಲ್ಲಿ ನಡೆದ ವಿಶೇಷ ಕಾಂಗ್ರೆಸ್ ಅಧಿವೇಶನದಲ್ಲಿ ಮಹಿಳೆಯರ ದುಃಸ್ಥಿತಿಯನ್ನು ಕುರಿತು, ಮಹಿಳೆಯರ ಸಂದರ್ಭ ಸುಧಾರಿಸಬೇಕೆಂದು ಸರೋಜಿನಿ ನಾಯ್ಡು ಅವರು ಧನಿಯೆತ್ತಿದರು. ಬ್ರಿಟಿಷರ ಪ್ರಭಾವದಿಂದ ಮಹಿಳೆಯರ ಜೀವನ ಸುಧಾರಣೆಗೆ ಶಿಕ್ಷಣವೆಂಬ ಸವಲತ್ತನ್ನು ನೀಡಲಾಯಿತು. 1927ರಲ್ಲಿ ಅಖಿಲ ಭಾರತ ಮಹಿಳಾ ಸಮ್ಮೇಳನವು (All India Women's Conference) ಮಹಿಳಾ ಪರ ವೇದಿಕೆಯಾಯಿತು. ಕೇರಳದ ಪುನ್ನಪ್ಪ – ವಯಲಾರ್ ಹೋರಾಟ, ತೆಲಂಗಣ ಮಹಿಳಾ ಹೋರಾಟವು ಮಹಿಳಾ ಸಾಂಸ್ಕೃತಿಕ ಸಂದರ್ಭದ ಸುಧಾರಣೆಗೆ ಬಹು ಮುಖ್ಯವಾಯಿತು. ಹೀಗೆ ಮಹಿಳಾ ಪರ ಆಲೋಚನೆಗಳು ಮೂಡಿ ಬರುತ್ತಿದ್ದ ಸಂದರ್ಭದಲ್ಲಿ ವೈಯಕ್ತಿಕ ತಾಕಲಾಟಗಳಿಂದ ಬಿಡುಗಡೆ ಹೊಂದುವ ಪ್ರಯತ್ನವನ್ನು ಮಹಿಳೆಯರು ಮಾಡಿದರು. ಮದುವೆ, ಕೌಟುಂಬಿಕ ಜೀವನದ ಮೂಲಕವೆ ಹೆಣ್ಣನ್ನು ಗುರುತಿಸುವ ಸಮಾಜದ ಬಗ್ಗೆ ಎಚ್ಚರಿಕೆ ಮೂಡಿತು. ಒಪ್ಪಿತ ಪಿತೃ ಪ್ರಧಾನ ಮೌಲ್ಯಗಳಲ್ಲೇ ಸಾಹಿತ್ಯ ಸೃಷ್ಟಿ ಆರಂಭವಾಯಿತು.

ದಕ್ಷಿಣ ಭಾರತದ ಸಾಹಿತ್ಯವನ್ನು ಕುರಿತು ವೀಣಾಶಾಂತೇಶ್ವರ ಅವರ ಮಾತುಗಳು ಇಂತಿವೆ "ಅವರು ಸಾಹಿತ್ಯದಲ್ಲಿ ಕಾಲೂರಲು ಹಾಗೂ ಪ್ರಗತಿ ತೋರಿಸಲು ಇನ್ನೂ ಸಮಯಬೇಕು ಅನ್ನುವುದೇನೋ ನಿಜ. ಆದರೆ ಇಷ್ಟೇ ಅವಧಿಯಲ್ಲಿ ಮಲಯಾಳಂ ಲೇಖಕಿಯರು, ತೆಲುಗಿನ ಲೇಖಕಿಯರು, ಮರಾಠಿ ಲೇಖಕಿಯರು ಹಾಗೂ ಗುಜರಾತಿ

ಲೇಖಕಿಯರು ಸಾಧಿಸಿದಷ್ಟನ್ನು ನಾವಿನ್ನೂ ಸಾಧಿಸಿಲ್ಲ ಎನ್ನುತ್ತಾರೆ" (ಇಲ್ಲಿಂದ ಮುಂದೆಲ್ಲಿಗೆ ಪು.ಸಂ. 21) ಅಂದರೆ ಕನ್ನಡ ಕಥನ ಸಾಹಿತ್ಯಕ್ಕೆ ಇನ್ನೂ ಸಾಧಿಸಬೇಕಾದದ್ದು ಬಹಳಷ್ಟಿದೆ ಎನ್ನುವ ಅಂಶ ತಿಳಿದುಬರುತ್ತದೆ.

ಹೋರಾಟದ ಯಾತನಾಮಯ ಜೀವನಕ್ಕೆ ವಿದಾಯ ಹೇಳುವ ಮೂಲಕವೇ ಸುಖಾಂತ್ಯದ ಭ್ರಮೆಯ ಲೋಕ ಬರವಣಿಗೆಯಲ್ಲಿ ಮೂಡಿ ಬಂದಿತು. ಆದರೆ ಹೆಣ್ಣು ಸಂತಸದ ಜೀವನ, ಬಿಡುಗಡೆ, ಸುಖೀ ಕುಟುಂಬದ ಕಲ್ಪನೆ, ಅತಿ ಭಾವುಕತೆಯನ್ನು ಸಾಹಿತ್ಯದ ಮೂಲಕ ಸೃಜಿಸಬೇಕಾದರೆ ಅವಳ ಸುತ್ತಲೂ ಇದ್ದ ಲೋಕ ಇಂಥಹದಕ್ಕೆ ಹಾತೊರೆಯುತ್ತಿರುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಸಾಹಿತ್ಯ ಸಮಾಜದ ಪ್ರತಿಬಿಂಬ ಎನ್ನುವಾಗ ಸಮಾಜದಲ್ಲಿದ್ದ ಮಹಿಳಾ ಸಂದರ್ಭ ಸಾಹಿತ್ಯದಲ್ಲಿ ದಾಖಲಾಯಿತು. ಭಕ್ತಿ ಕಾವ್ಯ ಬರೆಯುತ್ತಾ, ಪೌರಾಣಿಕ ಪಾತ್ರಗಳನ್ನು ಆರಾಧಿಸುತ್ತಿದ್ದ ಕಾಲಕ್ಕೆ ಮಹಿಳಾ ಪರ ಚಿಂತನೆಗಳು ಹೊಸತರಂತೆ ಕುತೂಹಲ ಮೂಡಿಸಿತು. ಸಾಂಪ್ರದಾಯಿಕ ಮನೋಭಾವ ಒಂದೆಡೆ ಆದರೆ ವೈಯಕ್ತಿಕ ಪ್ರಶ್ನೆಗಳು ಘರ್ಷಣೆಗೊಳಗಾದವು.

ಪುರುಷ ಪ್ರಧಾನ ವ್ಯವಸ್ಥೆಯ ಹುನ್ನಾರವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಹೆಣ್ಣು ಮಾಡಿದರೆ ಅದನ್ನು ಸುಲಭವಾಗಿ ಒಪ್ಪುವ ಕಾಲ ಅದಾಗಿರಲಿಲ್ಲ. ಯಾವಾಗ ಮಹಿಳೆಯರು ಕೇವಲ ಭಗವಂತನ ಧ್ಯಾನ, ಆಲೋಚನೆಗಳು ಮುಕ್ತಿ ಮಾರ್ಗ ಎಂದು ನಂಬಿಕೊಂಡಿದ್ದರು. ದೇವರ ಮೇಲೆ ಹಾಡು ಕಟ್ಟುವುದು, ಭಕ್ತಿಕಾವ್ಯ ಸೃಷ್ಟಿಯಲ್ಲಿ ತೊಡಗುತ್ತಿದ್ದರು. ಆ ಸಲುವಾಗಿ ಆ ಮೂಲಕ ತಮ್ಮ ಮನಸ್ಸನ್ನು ಆಧ್ಯಾತ್ಮಕದತ್ತ ಕೇಂದ್ರೀಕರಿಸುತ್ತಿದ್ದರು. ತಮ್ಮ ಸಂದರ್ಭಗಳನ್ನು ಹೇಳಿಕೊಳ್ಳಲು ಹೊರಟಾಗ ಕಥನ ಪ್ರಕಾರವನ್ನು ಬಹು ಮುಖ್ಯವಾಗಿ ಸ್ವೀಕರಿಸಿದರು. ಅವರ ಜೀವನ ಸಂದಿಗ್ಧತೆಯನ್ನು, ಸಂದರ್ಭವನ್ನು ಸಾಹಿತ್ಯಕ್ಕೆ ತರಲು ಕಥನರೂಪ ಬಹು ಸುಲಭವಾಯಿತು.

ಮಹಿಳಾ ಕಾವ್ಯ, ಕಥನ ಪ್ರಕಾರದ ಬಗ್ಗೆ ಚರ್ಚೆ ನಡೆಸುವಾಗ ಆಧುನಿಕ ಕನ್ನಡ ಕಾವ್ಯಕ್ಕೆ ಇತ್ತೀಚೆಗೆ ಮಹಿಳೆಯರ ಪ್ರವೇಶ ಹೆಚ್ಚಿರುವುದರ ಕುರಿತು ಚರ್ಚಿಸಬಹುದು. ಆದರೆ 20ನೇ ಶತಮಾನದ ಆರಂಭದಲ್ಲಿ ವೈಯಕ್ತಿಕ ಅರಿವು ಎಂಬುವುದರ ನಿರ್ವಚನವೇ ಬೇರೆ. ವೈಯಕ್ತಿಕ ಅರಿವು ಎಂದರೆ ಪುರುಷ ದಾಸ್ಯ, ಪುರುಷ ಮೌಲ್ಯಗಳಿಂದ ಬಿಡುಗಡೆ ಹೊಂದುವುದು. ಅಂದರೆ ಅದ್ಯಾವುದೇ ಪ್ರಕಾರವಾಗಲಿ ಹೆಣ್ಣಿನ ಮನಸ್ಸಿನ ಖಾಸಗಿ ಲೋಕವನ್ನು ತೆರೆದಿಡುವ ಪ್ರಯತ್ನ ಮಾಡಿದ್ದೇ ಅತಿ ಮುಖ್ಯ ಅಂಶವಾಗಿರುತ್ತದೆ. ಹಾಗೆಂದೊಡನೆ ಹೆಣ್ಣು ಬರವಣಿಗೆ ಆರಂಭಿಸಿದ

ಕೂಡಲೇ, ತನ್ನ ಸಂದರ್ಭವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದೊಡನೆ ಪುರುಷ ಸಮಾಜ ಅದನ್ನು ಸ್ವೀಕರಿಸಿ ಒಪ್ಪಿ ಮಹಿಳೆಯರ ಸಂದರ್ಭಕ್ಕೆ ಸಾಂತ್ವಾನ ನೀಡಿ ಸುಧಾರಣಾ ಮನೋಭಾವ ತಳೆದರೆಂದಲ್ಲ.

ಹೆಣ್ಣು ಸಾಹಿತ್ಯ ಬರೆಯಲು ಹೊರಟಾಗ ಆಕೆ ಸೃಜಿಸುವುದು ಕೇವಲ ಆಕೆಯ ವೈಯಕ್ತಿಕ ಲೋಕವನ್ನು, ಕೌಟುಂಬಿಕ ಹಿಂಸೆಯನ್ನು, ಯಾತನಾಮಯ ಬದುಕನ್ನು ಎಂದು ಅರ್ಥ ಸಂಕುಚಿತಗೊಳಿಸಿ ಮಹಿಳಾ ಬರವಣಿಗೆ ಎಂಬ ಹಣೆಪಟ್ಟಿ ಕಟ್ಟಿ ಆಕೆಯ ಬರವಣಿಗೆಯನ್ನು ಅಲಕ್ಷಿಸಿದ ಉದಾಹರಣೆಗಳು ಕಣ್ಣ ಮುಂದೆಯೇ ಇವೆ. ಆದ್ದರಿಂದಲೇ ಸಾಂಪ್ರದಾಯಿಕ ಸಾಹಿತ್ಯ ಚರಿತ್ರೆಯಲ್ಲಿ ಅವಗಣನೆಗೆ ಒಳಪಟ್ಟ ಮಹಿಳಾ ಸಾಹಿತ್ಯವು ತನ್ನದೇ ಆದ ಮಹಿಳಾ ಸಾಹಿತ್ಯ ಚರಿತ್ರೆ ಕಟ್ಟಿಕೊಳ್ಳುವಲ್ಲಿ ಸಫಲವಾಯಿತು. ಉದಾಹರಣೆಗೆ 2006ರಲ್ಲಿ ಡಾ. ಎಚ್.ಎಸ್. ಶ್ರೀಮತಿ ಅವರು ಸಂಪಾದಿಸಿದ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' ಅದೇನೆ ಇರಲಿ ದಕ್ಷಿಣ ಭಾರತದ ನಾಲ್ಕು ಪ್ರಮುಖ ಭಾಷೆಗಳಾದ ಕನ್ನಡ, ತಮಿಳು, ಮಲಯಾಳಂ, ತೆಲುಗು ಭಾಷೆಯಲ್ಲಿ ಮಹಿಳಾ ಬರವಣಿಗೆಯಲ್ಲಿ ಮೂಡಿದ ಸಾಮ್ಯತೆ ಭಿನ್ನತೆಗಳನ್ನು ಸಾಹಿತ್ಯದ ಮೂಲಕ ಪ್ರಬಂಧದಲ್ಲಿ ಪ್ರಾತಿನಿಧಿಕ ಉದಾಹರಣೆಗಳೊಂದಿಗೆ ಚರ್ಚೆ ನಡೆಸಲಾಗಿದೆ. ವಸಾಹತು ಸಂದರ್ಭದಲ್ಲಿ ಮೂಡಿ ಬಂದ ಮಹಿಳಾ ಬರವಣಿಗೆಯ ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

20ನೇ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದಲ್ಲಿ ಮಹಿಳಾ ಬರವಣಿಗೆ ಸಕ್ರಿಯವಾಗಿ ಆರಂಭಗೊಂಡಿತು. ಮಹಿಳಾ ಪ್ರಜ್ಞೆ ಜಾಗೃತವಾದ ಸಂದರ್ಭವು ಪುರುಷ ಪ್ರಧಾನ ವ್ಯವಸ್ಥೆಯಲ್ಲಿದ್ದುಗೊಂಡೆ ಸಾಹಿತ್ಯ ರಚನೆಗೆ ಅವಕಾಶವಾಯಿತು. ಪತ್ರಿಕೆಗಳು ಮಹಿಳಾ ಬರವಣಿಗೆಗೆ ಉತ್ತೇಜನ ನೀಡಿದ್ದನ್ನು ಮರೆಯುವಂತಿಲ್ಲ. ಆರಂಭದ ಕನ್ನಡದ ಪ್ರಮುಖ ಕಾದಂಬರಿಗಾರ್ತಿ ತಿರುಮಲಾಂಬ ಅವರು 'ಮಧುರವಾಣಿ' ಪತ್ರಿಕೆಗೆ 'ಸದಾಚಾರ' ಎಂಬ ಲೇಖನ ಬರೆಯುವ ಮೂಲಕವೇ ತಮ್ಮ ಬರವಣಿಗೆಯನ್ನು ಆರಂಭಿಸಿದರು. ತಿರುಮಲಾಂಬ ಅವರ ತಂದೆ ವೆಂಕಟಕೃಷ್ಣ ಅಯ್ಯಂಗಾರ್ ಅವರ ಪ್ರೋತ್ಸಾಹದಿಂದಲೇ ಪ್ರಾಥಮಿಕ ಶಿಕ್ಷಣ ಕಲಿತರು. ಬಾಲ್ಯದಲ್ಲೇ ವೈಧವ್ಯ ಅನುಭವಿಸಿದರೂ ತಮ್ಮ ಜೀವನದ ಸಂಕಷ್ಟಗಳಿಗೆ ಗಮನಕೊಡದೆ ಗೀತೆ, ರಾಮಾಯಣಗಳೆಡೆಗೆ ಮನಸು ಹರಿಸಿದರು. ಆದರೂ ಲೌಕಿಕ ಜೀವನದ ಏರಿಳಿತಗಳನ್ನು 'ಸುಶೀಲೆ', 'ನಭಾ', 'ವಿದ್ಯುಲತಾ' ಎಂಬ ಕಾದಂಬರಿಗಳಲ್ಲಿ ಬಿಂಬಿಸಿದರು. ಈ ಸಂದರ್ಭದಲ್ಲಿ ತಮಿಳಿನ ಗೋದಾನಾಯಕಿ ಅಮ್ಮನವರು ನಡೆಸಿದ ಪತ್ರಿಕೆ, ಬರೆದ ಕಾದಂಬರಿಗಳು ನೆನಪಿಸಿಕೊಳ್ಳಬಹುದು.

ತಮಿಳು ಸಾಹಿತ್ಯದ ಮೂಲಕ ಸಾಮಾಜಿಕ ಕಾಳಜಿ ವ್ಯಕ್ತವಾಯಿತು. ಭಯ, ನಾಜೂಕು, ಪಾತಿವ್ರತ್ಯ, ಶೀಲ, ಚಂಚಲತೆಯನ್ನು ಹೆಣ್ಣಿನ ಮೇಲೆ ಆರೋಪಿಸಿದ್ದ ಕಾಲದಲ್ಲಿ ತಮಿಳಿನ ಸುಬ್ರಮಣ್ಯ ಭಾರತಿಯಾರ್ ಮಹಿಳಾ ವಿಮೋಚನೆ, ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಬಾಲ್ಯವಿವಾಹದ ನಿರಾಕರಣೆ, ಸ್ತ್ರೀ ಪುರುಷರ ಸಮಾನತ್ವ, ಅಂತರ್‌ಜಾತಿ ವಿವಾಹ ಇವುಗಳ ಬಗ್ಗೆ ಪ್ರಸ್ತಾಪವಿತ್ತರು. ವೇದನಾಯಕಂ ಪಿಳ್ಳೈ ಮಹಿಳೆಯರು ಶಿಕ್ಷಣದ ಅಗತ್ಯತೆಯನ್ನು ಅರಿಯಬೇಕೆಂದು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದರು. ಇದೇ ರೀತಿ 19ನೇ ಶತಮಾನದ ಕೊನೆಯ ಭಾಗದಲ್ಲಿ ತೆಲುಗಿನ 'ಭಂಡಾರು ಅಚ್ಚಮಾಂಬ' ಎನ್ನುವರು 'ಅಬಲಾ', 'ಸಚ್ಚರಿತ್ರೆ', 'ರತ್ನಮಾಲ' ಎಂಬ ಮಹತ್ತರ ಕತೆಗಳನ್ನು ಬರೆಯುವ ಮೂಲಕ ಸ್ತ್ರೀಶಿಕ್ಷಣದ ಮಹತ್ವವನ್ನು ತಿಳಿಸಿ ಕೊಟ್ಟರು. ಅಂತೆಯೇ ಮಲಯಾಳಂ ಸಂದರ್ಭದಲ್ಲಿ 'ತಕಳಿ', 'ಬಷೀರ್', 'ಕರೂರು ನೀಲಕಂಠ ಪಿಳ್ಳೈ' ಪುರುಷ ಲೇಖಕರು ಬರವಣಿಗೆಯಲ್ಲಿ ತೊಡಗಿದ್ದ ಕಾಲದಲ್ಲಿ 'ಲಲಿತಾಂಬಿಕ ಅಂತರ್ಜನಂ', 'ಕೆ. ಸರಸ್ವತಿ ಅಮ್ಮ', 'ನಾಗವಳ್ಳಿ ಆರ್.ಎಸ್', 'ರಾಜಲಕ್ಷ್ಮಿ' ಇವರುಗಳು ಬರವಣಿಗೆ ಆರಂಭಿಸಿದರು. ಬ್ರಾಹ್ಮಣ ಸಮುದಾಯದ ಸಂದರ್ಭಗಳನ್ನು ಆರಂಭದ ದಿನಗಳಲ್ಲಿ ಇವರು ಸಾಹಿತ್ಯದಲ್ಲಿ ದಾಖಲೆ ಮಾಡಿದರು. ಮೂಢ ಆಚರಣೆಗೆ ಸಾಹಿತ್ಯದ ಮೂಲಕ ವಿರೋಧ ವ್ಯಕ್ತಪಡಿಸಿದರು.

ಕಾವ್ಯ ಪ್ರಕಾರವೇ ಪ್ರಧಾನವಾಗಿದ್ದ ಕಾಲದಲ್ಲಿ ಕನ್ನಡದ ಕತೆಗಾರ್ತಿಯರಲ್ಲಿ ಒಬ್ಬರಾದ ಸೀತಾದೇವಿ ಪಡುಕೋಣೆ ಅವರು 'ಒಂದು ಕಾಲಕ್ಕೆ ಚಿಕ್ಕ ಕಥೆಗಳಿಗೆ ಆಶಾದಾಯಕ ದಿನಗಳು ಬರಬಹುದು' ಎಂದು ನುಡಿದ ಮಾತೊಂದಿತ್ತು. ರಾಮಾಯಣ, ಮಹಾಭಾರತ ಭಕ್ತಿ ಮಾರ್ಗ ಅನುಸರಿಸಲು ಇದ್ದ ಕಾವ್ಯದ ಸ್ವರೂಪ ಕಥನ ರೂಪಕ್ಕೆ ತಿರುಗಲಾರಂಭಿಸಿತು. ಸೀತಾದೇವಿಯ ಬರವಣಿಗೆಗೆ ಅವರ ಪತಿಯ ಸಂಪೂರ್ಣ ಸಹಕಾರವೂ ಇತ್ತು. ಒಂದೆಡೆ ವೈಧವ್ಯದ ಕಟು ಹಾದಿಯಲ್ಲಿ ಯಾವುದೇ ಸಹಕಾರವಿಲ್ಲದೆ ಬರೆಯುವ ಸಂದರ್ಭವೂ ಮಹಿಳೆಯರಿಗೆ ಇತ್ತು ಎಂಬುದನ್ನು ಮರೆಯುವಂತಿಲ್ಲ.

ಕಥನ ಪ್ರಕಾರ ಶೈಶವಾವಸ್ಥೆಯಲ್ಲಿರುವಾಗಲೇ ಬರೆದ ಮತ್ತೊಬ್ಬ ಕತೆಗಾರ್ತಿ ವಾಸಂತಿಬಾಯಿ ಪಡುಕೋಣೆ. ಶಿಕ್ಷಣ, ವೈಧವ್ಯಗಳಾಚೆಗಿನ ಹೆಣ್ಣಿನ ಪ್ರೇಮ, ಸಂಸಾರದೊಳಗಿನ ಭಾವಶೂನ್ಯ ಸಂಬಂಧ, ದಾಂಪತ್ಯವನ್ನು ಕಾಡುವ ಸಂಶಯ, ಬಡತನದ ಬಗ್ಗೆ ಕತೆಯನ್ನು ಬರೆದರು. ಸಾಮಾಜಿಕ ಜೀವನವೇ ಮುಖ್ಯವೆನ್ನುವ ಸಂದರ್ಭದಲ್ಲಿ ಹೆಣ್ಣಿನ ಮನೋಲೋಕದ ಕಡೆಗೆ ಮನಸು ಹರಿಸಿದ ಕತೆಗಾರ್ತಿಯಾಗಿ ಈಕೆ ಕಂಡು ಬಂದಿದ್ದಾರೆ. ಸ್ವಲ್ಪ ಮಟ್ಟಿಗೆ ಪ್ರಗತಿಪರ ಆಲೋಚನೆ ಮಾಡುವ ಹೊತ್ತಿಗೆ 'ಲೀಲಾಬಾಯಿ ಕಾಮತ್' ಎಂಬ ಕತೆಗಾರ್ತಿ ಪ್ರೀತಿ, ಸಹನೆ,

ತ್ಯಾಗ, ಸೇವೆಯೇ ಸ್ತ್ರೀ ಮೌಲ್ಯಗಳೆಂಬ ಪುರುಷ ಲೋಕದ ಕವಚವನ್ನು ಮತ್ತೆ ತೊಡಿಸಿದರು. ಇವರೆಂದು ವಿಧವಾ ಮರುವಿವಾಹಕ್ಕೆ ಪ್ರೋತ್ಸಾಹಿಸಿ ಬರೆದವರಲ್ಲ. ಹೆಣ್ಣು ಮಕ್ಕಳಿಗೆ ಒದಗಿ ಬರುವ ಸಂದರ್ಭಕ್ಕೆ ಆತ್ಮವಿಶ್ವಾಸ ಮೂಡಿಸುವಂತ ಕತೆ ಬರೆಯ ಬೇಕೆಂಬ ಧೋರಣೆ ಉಳ್ಳವರಾಗಿದ್ದರು. ಆ ಕಾಲದಲ್ಲಿ ಸ್ತ್ರೀಯರು ವಿದ್ಯಾವಂತರಾದರೂ ಪುರುಷ ಸಮಾಜ ಹೇರಿದ್ದ ಸಾಂಪ್ರದಾಯಿಕ ಮೌಲ್ಯವನ್ನು ಒಪ್ಪಿ ತಮ್ಮ ಕರ್ತವ್ಯ ನಿರ್ವಹಿಸಲೇ ಬೇಕೆಂಬ ಆಲೋಚನೆಯಲ್ಲೇ ಬರೆದವರಿದ್ದರು. ಕನ್ನಡದ ಮತ್ತೋರ್ವ ಕತೆಗಾರ್ತಿ ಆರ್. ಕಲ್ಯಾಣಮ್ಮ ವಿಧವೆಯರ ಮರುಮದುವೆಯ ಬಗ್ಗೆ ಭಾವನೆ ಹೊಂದಿಲ್ಲದಿದ್ದರೂ ಆರ್ಥಿಕ ಸ್ವಾವಲಂಬನೆ ಹೊಂದಿರುವುದೇ ಪರಿಹಾರ ಎಂದು ಸೂಚಿಸಿದರು. ಅಂತೆಯೇ ತೆಲುಗಿನ 'ದ್ವೈವೇದುಲ ವಿಶಾಲಾಕ್ಷಿ' ಸ್ತ್ರೀ ಧನದ ಬಗ್ಗೆ ಉದಾರಭಾವವನ್ನು ಮೆರೆದಿದ್ದಾರೆ.

ನಂತರದಲ್ಲಿ ಕನ್ನಡದಲ್ಲಿ ಬಂದ ಶ್ಯಾಮಲಾದೇವಿ ಬೆಳಗಾಂವಕರ ವರದಕ್ಷಿಣೆ, ವಿಷಮ ವಿವಾಹ, ಆಧುನಿಕ ವೈವಾಹಿಕ ಜೀವನದ ಸಮಸ್ಯೆಗಳನ್ನು ಕುರಿತು ಬರೆದರು. ತಿರುಮಲೆ ರಾಜಮ್ಮ ಅವರು ಗಾಂಧೀಜಿಯವರ ವಾತ್ಸಲ್ಯಗೆದ್ದ ಕನ್ನಡತಿಯಾದರು. ಕೊಡಗಿನ ಗೌರಮ್ಮ ಅವರ ಪ್ರಕಟಿತ ಕಥಾ ಸಂಕಲನ 'ಕಂಬನಿ'ಗೆ ಬೇಂದ್ರೆಯವರು ಮುನ್ನುಡಿ ಬರೆದರು. ಈ 'ಕಟುಮಧುರ' ಕತೆಗಾರ್ತಿಯ ವೈಶಿಷ್ಟ್ಯವನ್ನು ನಿಖರವಾಗಿ ಗುರುತಿಸಿಬಿಟ್ಟರು. 'ಕತೆಗಳಲ್ಲಿ ಕಟುತ್ವವಿದ್ದರೂ ರೊಚ್ಚಿಲ್ಲ' ಸೋದ್ದೇಶಲೇಖನದ ಸೂಚನೆಯಿದ್ದರೂ ಅವಾಸ್ತವದ ಆರ್ಭಟೆಯಿಲ್ಲ. ಕಲೆಯ ನೈಜವನ್ನು ಮರೆಮಾಚಿಲ್ಲ – ಎಲ್ಲೆಲ್ಲೂ ಹೆಣ್ಣಿನ ಹೃದಯದ ಸಾಕ್ಷಿಯನ್ನು ಸಾರುವ ಈ ಕಥಾಗುಚ್ಛವು 'ಶ್ರೀನಿವಾಸ' 'ಆನಂದ'ರ ಕಥೆಗಳನ್ನು ಓದಿದ ವಾಚಕರಿಗೆ ಮನೋವಿಶ್ಲೇಷಣಾತ್ಮಕ ಕತೆಗಳ ಮಾದರಿಯಾಗಿ ಹೃದಯಂಗಮವಾಗುವವೆಂದು ನಾನು ನಂಬಿದ್ದೇನೆ ಎನ್ನುತ್ತಾರೆ. ಹಾಗಿದ್ದಾಗ ಬೆರಳೆಣಿಕೆಯಷ್ಟು ಮಂದಿಗೆ ಸಾಹಿತ್ಯಕ್ಕೆ ಉಳಿದ ಪುರುಷ ಲೇಖಕರ ಬೆಂಬಲ ಸಿಕ್ಕಿದ್ದನ್ನು ಮರೆವಂತಿಲ್ಲ."

ನವೋದಯ ಸಂದರ್ಭದಲ್ಲಿ ಬಾಲ್ಯ ವಿವಾಹ, ವಿಧವಾ ವಿವಾಹ, ವಿದ್ಯಾಭ್ಯಾಸಕ್ಕಾಗಿ ಹಂಬಲಿಸುವ ಮಧ್ಯಮವರ್ಗದ ಚಿತ್ರಣಗಳು ಯತಾವತ್ತಾಗಿ ಮೂಡಿ ಬಂದವು. ತನ್ನನ್ನು ತಾನು ಕೇಂದ್ರೀಕರಿಸುವ ಪಾತ್ರಗಳು ಚಿತ್ರಣಗೊಂಡವು. ಸಮಾಜದಲ್ಲಿದ್ದ ಮೌಲ್ಯಗಳು ಸ್ವಪ್ರಜ್ಞೆಯೊಡನೆ ಬೆರೆತು ಸಾಮಾಜಿಕ ಅರಿವಿನತ್ತ ಹೊರಳಿದ್ದು ಬಹು ಮುಖ್ಯ ನಿಲುವಾಗಿದೆ. ಖಾಸಗಿ ಬದುಕಿನ ಮೂಲಕ ಆರಂಭವಾಗುವ ಪ್ರಜ್ಞೆ ಸಮಾಜಮುಖಿಯಾಗಿ ಅನನ್ಯತೆ ಉಳಿಸಿಕೊಳ್ಳುತ್ತಲೇ ಬಂದಿದೆ. ವೈಯಕ್ತಿಕ ಬದುಕು ಸಂಕಷ್ಟಮಯವಾಗಿದ್ದ ಕಾಲದಲ್ಲಿ ಪರಂಪರೆಯೊಳಗೆ ಪಾತ್ರ ಚಿತ್ರಣ ಮೂಡಿ

ಬಂದಿತು. ಸಮಾಜದ ಪೂರ್ವಾಗ್ರಹದಲ್ಲೇ ನಿಂತು ಸಾಹಿತ್ಯ ರಚನೆಯಾಯಿತು. ಉದಾಹರಣೆಗೆ ಕಮಲಾದಾಸ್‌ರವರ ತಾಯಿಯಾದ ಬಾಲಮಣಿ ಅಮ್ಮನವರ ಕವಿತೆಗಳನ್ನು ಮೆಚ್ಚಿಕೊಳ್ಳುತ್ತಾರೆ. ಅಂತೆಯೇ ಸಂದರ್ಶನವೊಂದರಲ್ಲಿ ಒಮ್ಮೆಯೂ ಪರಂಪರಾಗತ ವಿಷಯಗಳನ್ನು ದಾಟಿ ಅಮ್ಮ ಹೊರಗೆ ಬಂದದ್ದಿಲ್ಲ ಎನ್ನುತ್ತಾರೆ. ಅದು ಆ ಕಾಲದ ಮಿತಿ ಎಂದು ಗಮನಿಸಬೇಕಾಗುತ್ತದೆ.

ಹಳೆಯ ಸಾಂಪ್ರದಾಯಿಕ ಚಿಂತನೆಗಳು ಹೊಸ ಸಮಾಜದ ಆಶಯಗಳೊಂದಿಗೆ ಅನುಸಂಧಾನ ನಡೆಸಿತು. ಹೀಗೆ ಕಥನ ಪ್ರಕಾರ ಆಗಿನ ನಿತ್ಯ ಜೀವನದ ದಾಖಲೆಯಾಗುತ್ತಾ ಓದುಗರೊಡನೆ ಹೊಸ ಸಂಬಂಧವನ್ನು ಏರ್ಪಡಿಸುತ್ತಾ ಸ್ತ್ರೀ ಸಂವೇದನೆಯನ್ನು ಕಟ್ಟಿಕೊಡುವ ಮಹತ್ವದ ಘಟನೆ ಜರುಗಿತು. ಪುರುಷ ದೃಷ್ಟಿಕೋನದಲ್ಲೇ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ತಂಗಿಯಾಗಿ, ವೇಶ್ಯೆಯಾಗಿ, ನೊಂದ ಹೆಣ್ಣಾಗಿ ಅಚ್ಚಿನ ಪಾತ್ರಗಳಲ್ಲಿ ಕಾಣಲು ತಯಾರಾದಳು. ಮಲಯಾಳದ ಲಲಿತಾಂಬಿಕ ಅಂತರ್ಜನಂ ಅವರು ಸಾಮಾಜಿಕ ಆಚಾರಗಳ ಅವನತಿಯನ್ನು, ಸಾಮಾಜಿಕ ದುರಾಚಾರಾಗಳನ್ನು ವಿರೋಧಿಸಿದರು. ಸಾಹಿತ್ಯದ ಮೂಲಕ ಪರಿವರ್ತನೆಯು ಅವಶ್ಯ ಎಂಬುದನ್ನು ಮನವರಿಕೆ ಮಾಡಿದರು.

ಯಾಜಮಾನ್ಯ ವ್ಯಂಗ್ಯದ ಕತೆಗಳು ರಚಿತವಾದವು. ನಾಗರೀಕತೆಯ ಮುಖವಾಡವನ್ನು ಪುರುಷ ಸಂಬಂಧಗಳ ನಡುವೆ ಬಲವಂತದಿಂದ ತೊಡಿಸಲಾಯಿತು. ಪುರುಷ ಪರಿಕಲ್ಪನೆಯಲ್ಲಿ ಹುದಿಗಿ ಹೋಗಿದ್ದ ಸ್ತ್ರೀಯರು, ಸ್ವತಃ ಬರವಣಿಗೆ, ಕಥನದ ಮೂಲಕ ಪುನರ್ ಸೃಷ್ಟಿಗೊಂಡರು. ಮಧ್ಯಮ ವರ್ಗದ ಜೀವನ, ಸ್ವ–ಅನುಭವ, ಮಾನಸಿಕ ಸ್ಥಿತಿ, ಬದುಕಿನ ಅನುಭವಗಳು ಪುರುಷ ಮನೋಭಾವಗಳು ಚಿತ್ರಣಗೊಂಡವು. ತೆಲುಗಿನ 'ಇಲ್ಲಿಂದಲ ಸರಸ್ವತಿ' ಅವರು 'ಸ್ವರ್ಣಕಮಲಾಲು' ಎಂಬ ಕಾದಂಬರಿಯಲ್ಲಿ ಮಧ್ಯಮವರ್ಗದ ಜೀವನ ಚಿತ್ರಣವನ್ನು ಚಿತ್ರಿಸಿದ್ದರು. ಕಾಮೇಶ್ವರಿ ಅವರ 'ವಿಧಿ ವಂಚಿತಲ' ಎಂಬ ಕತೆಯಲ್ಲಿ ಮಧ್ಯಮ ಕುಟುಂಬದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚಿತ್ರಣವಿದೆ. ತೆಲುಗು ಮಹಿಳಾ ಸಾಹಿತ್ಯಕ್ಕೆ ಕಾಂಚನಪಲ್ಲಿ ಕನಕಾಂಬ ಅವರ 'ಅಮೃತವಲ್ಲಿ' ಕಾದಂಬರಿ ಹೊಸ ದಿಕ್ಕನ್ನು ಹಾಕಿಕೊಟ್ಟಿತು. ನಂತರ ಪುರುಷ ಪ್ರಧಾನ ವ್ಯವಸ್ಥೆಯಲ್ಲೇ ಶ್ರೀಮತಿ ಸ್ಥಾನಾಪತಿ ರುಕ್ಮಿಣಮ್ಮ, ಓಲೇಟ ನಿತ್ಯ ಕಲ್ಯಾಣಮ್ಮ, ಪದಮಂಚಿ ಅನಂತಮ್ಮ, ಪುಟ್ಟಪರ್ತಿ ಕನಕಮ್ಮ ಅವರು ಬರವಣಿಗೆ ಮಾಡಿದರು. 'ತಲ್ಲಾ ಪ್ರಗಡ ವಿಶ್ವ ಸುಂದರಮ್ಮ' ಅವರು ಪತಿಯನ್ನು ಪ್ರಾಣವೆಂದು ಭಾವಿಸಿ ತಮ್ಮನ್ನೇ ಪೂಜಿಸುವ ಸತಿಯರನ್ನು ತೊರೆದು ಹಿಂಸಿಸುವ ದುಷ್ಟ ಪತಿಯರ ದುಶ್ಚರ್ಯೆಗಳಿಗೆ ರೋಸಿ 'ಗುಲಾಬಿ ಗಿಡವನ್ನಾಶ್ರಯಿಸಿದ ಲತೆಯಂತೆ ಬಾಳು' ಎನ್ನುತ್ತಾರೆ.

ಕೌಟುಂಬಿಕ ಚೌಕಟ್ಟಿನಲ್ಲೇ ಒಪ್ಪಿತ ಸ್ತ್ರೀ ಪಾತ್ರಗಳ ಚಿತ್ರಣವನ್ನು ಸೃಷ್ಟಿಸಲಾಗುತ್ತಿತ್ತು. ಅಪೇಕ್ಷಣೀಯವಾಗಿ ಅಚ್ಚಾಗುತ್ತಿದ್ದ ಸ್ತ್ರೀ ಪಾತ್ರಗಳು ಬರವಣಿಗೆಯ ಮೂಲಕವೇ ಪುರುಷ ಲೋಕದ ನಯವಂಚಕತೆಯನ್ನೂ ಹೇಳಲು ಆರಂಭಿಸಿದ್ದು ಮಹತ್ವದ ಸಂಗತಿ. ಸ್ವತಂತ್ರ್ಯಾನಂತರದ ಸಂದರ್ಭದಲ್ಲಿ ಮಹಿಳಾ ಬರವಣಿಗೆ ಇನ್ನೂ ಹಲವು ನೆಲೆಗಳಲ್ಲಿ ವಿಸ್ತಾರಗೊಂಡಿತು. ಹಲವು ಪ್ರಕಾರಗಳು ಹುಟ್ಟಿಕೊಂಡಿತು. ಅದರಲ್ಲೂ ಕಥನ ಪ್ರಕಾರ ಯಶಸ್ವಿಯಾಯಿತು. ಅಷ್ಟೇ ಅಲ್ಲ ಮಹಿಳೆಯರು ಕತೆ ಬರೆಯಲು ಆಯ್ಕೆ ಮಾಡಿಕೊಂಡ ವಿಷಯಗಳು ಸಂಪೂರ್ಣ ಭಿನ್ನವಾಗಿ, ಸ್ವಾರಸ್ಯಕರವಾಗಿ ಆಧುನಿಕತೆಗೆ ಒಗ್ಗುವಂತ ಪಾತ್ರಗಳು ಸೃಷ್ಟಿಗೊಂಡವು. ಕೌಟುಂಬಿಕ ಬದುಕಿನ ತಳಮಳಗಳನ್ನಷ್ಟೇ ವ್ಯಕ್ತಪಡಿಸುವುದು ಆಕೆಯ ಗುರಿಯಾಗದೆ ತನ್ನತನದ ಹುಡುಕಾಟ ಆರಂಭಗೊಂಡಿತು. ತಮ್ಮ ಅಸ್ಮಿತೆಯ ಹುಡುಕಾಟವನ್ನು ಸಾಹಿತ್ಯದ ಮೂಲಕವೇ ಮಾಡ ಹೊರಟರು. ಹೊಸ ವಿಮರ್ಶಾ ಪ್ರಕಾರಗಳು ಪರಿಚಯವಾಯಿತು. ಆಧುನಿಕತೆಯ ಭರಾಟೆಯಲ್ಲಿ ಕಾಣದಾದ ಹೆಣ್ಣು ತನ್ನ ಹುಡುಕಾಟವನ್ನು ಸಾಹಿತ್ಯದ ಮೂಲಕ ಮಾಡಲು ಮುಂದಾದರು. ಸ್ವತಂತ್ರ ಪೂರ್ವದ ಕೌಟುಂಬಿಕ ಬದುಕಿನ ವಿವರಾಣಾತ್ಮಕ ವಿಧಾನ ಬದಲಾಗಿ ವೈಚಾರಿಕ ವಿನ್ಯಾಸ ಸಾಹಿತ್ಯದಲ್ಲಿ ಮೂಡಿ ಬರುವ ಕಾಲ ಒದಗಿ ಬಂತು.

ದಕ್ಷಿಣ ಭಾರತದ ಸ್ವಾತಂತ್ರ್ಯೋತ್ತರ ಮಹಿಳಾ ಕಥಾ ಸಾಹಿತ್ಯ :

ರಾಷ್ಟ್ರೀಯತೆಯ ಭಾವ, ಸ್ವತಂತ್ರದ ಸಂಭ್ರಮದ ಆಚರಣೆ ಒಂದೆಡೆ ಆದರೆ ರಾಜರ ಆಳ್ವಿಕೆ ಮುಗಿದು ಹರಿದು ಹಂಚಿ ಹೋದ ರಾಜ್ಯಗಳು ಅರಾಜುಕತೆಯಿಂದ ಕೂಡಿದ್ದ ವಾತಾವರಣವಿತ್ತು. ಈ ಸಂದರ್ಭದಲ್ಲಿ ಮಹಿಳೆಯರು ತಮ್ಮ ವೈಯಕ್ತಿಕ ಜೀವನದತ್ತ ಗಮನ ಹರಿಸಲು ಮುಂದಾದರು. ಸಮಾಜದ ತಾರತಮ್ಯಗಳಿಗೆ ಹೆಣ್ಣು ನಲುಗಿರುವ ಸಂದರ್ಭವನ್ನು ಕುರಿತು ಸಾಹಿತ್ಯದ ಮೂಲಕ ಪ್ರಶ್ನೆ ಮಾಡಲಾರಂಭಿಸಿದಳು. ಅ.ನ.ಕೃ., ತ.ರಾ.ಸು., ಚದುರಂಗ, ನಿರಂಜನ ವ್ಯಾಸರಾಯ ಬಲ್ಲಾಳರು ಸ್ವಾತಂತ್ರ್ಯ ಚಳುವಳಿಯ ಅನುಭವವನ್ನು ದಟ್ಟವಾಗಿ ಚಿತ್ರಿಸುವುದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಕಾಲದಲ್ಲಿ ಬರವಣಿಗೆ ಮಾಡುತ್ತಿದ್ದರು. ಆರಂಭದ ಘಟ್ಟದಲ್ಲಿ ವಿಧವಾ ಸಮಸ್ಯೆ. ಶಿಕ್ಷಣಕ್ಕೆ ಹಾತೊರೆಯುವ ಹೆಣ್ಣು, ವೇಶ್ಯೆಯ ಚಿತ್ರಣ, ಪತಿವ್ರತೆಯಾಗಿ ಬದುಕುವಳಾಗಿ, ಆಧ್ಯಾತ್ಮಿಕ ತಳಹದಿಯಲ್ಲೇ ಬದುಕ ನಡೆಸುವ ಹೆಣ್ಣಿನ ಚಿತ್ರಣಗಳು ಯತೇಚ್ಛವಾಗಿ ಮೂಡಿ ಬಂದರೆ ಸ್ವಾತಂತ್ರ್ಯಾನಂತರ ಗಂಡಿನ ದೌರ್ಜನ್ಯಕ್ಕೊಳಗಾದ ಹೆಣ್ಣು, ಕೌಟುಂಬಿಕ ಹಿಂಸೆಗಳು, ದಬ್ಬಾಳಿಕೆಯನ್ನು ವಿರೋಧಿಸುವ ಹೆಣ್ಣಿನ ಚಿತ್ರಣಗಳು ಕಥನದ ಮೂಲಕ ಮೂಡಿ ಬಂದಿದೆ.

'ಪ್ರಗತಿಶೀಲ ಲೇಖಕರು ಸಮಾಜ ಸುಧಾರಣೆಗೆ ಸಾಮಾಜಿಕ ಸಮಸ್ಯೆಗಳು, ಎಡಪಂಥೀಯ ಆಲೋಚನೆಗಳನ್ನು ಕುರಿತು ಅಬ್ಬರದ, ಆದೇಶದ ನೆಲೆಯಲ್ಲಿ ಅಭಿವ್ಯಕ್ತಿಸುತ್ತಿದ್ದಾಗ ಈ ಕಾಲದಲ್ಲಿ ಬರೆದ ಲೇಖಕಿಯರು ಕೌಟುಂಬಿಕ ಆಮೆ ಚಿಪ್ಪಿನೊಳಗೆ ಸೇರಿಕೊಂಡ ಹಾಗೆ ತಮಗೆ ತಾವೇ ಮಿತಿಯನ್ನು ಲೋಕವನ್ನು ಸೃಷ್ಟಿಸಿಕೊಂಡರು. ಆದರೆ ಸ್ವಂತ್ರದ ನಂತರದ ಸ್ಥಿತಿಯಲ್ಲಿ ದೇಶವೇ ನವ ಪ್ರಜ್ಞೆಯೊಂದಕ್ಕೆ ಹಾತೊರೆಯುತ್ತಿದ್ದ ಕಾಲದಲ್ಲಿ ಆಗ ತಾನೇ ಅಕ್ಷರ ಕಲಿತು ಬರವಣಿಗೆಗೆ ತೊಡಗಿ ತಮಗನಿಸಿದ್ದನ್ನು ಹೇಳ ಹೊರಟ ಸಂದರ್ಭದಲ್ಲಿ ತಮಗೆ ಬರವಣಿಗೆಯ ಕ್ರಮವನ್ನು ತಾವೇ ಹಾಕಿಕೊಂಡ ಮಿತಿ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಆರೋಪಿಸುವುದು ತಕ್ಕುದಲ್ಲ. ಆ ಕಾಲದ ಒತ್ತಡಕ್ಕೆ ತಕ್ಕಂತೆ ಮಹಿಳಾ ಬರವಣಿಗೆ ಮೂಡಿ ಬಂದುದನ್ನು ಸ್ವೀಕರಿಸಬೇಕಾದ ಪ್ರಗತಿಯ ಪಥದಲ್ಲಿ ಸಾಗುವಾಗ ದಾಟಿದ ಹಾದಿ ಎಂಬಂತೆ ಒಪ್ಪಿ ನಡೆಯ ಬೇಕಾಗುತ್ತದೆ. ಬರವಣಿಗೆಗೆ ಒದಗಿದ ತೀರಾ ಸಹಜ ಸಂದರ್ಭ ಎಂಬುದನ್ನು ನೆನೆಯುತ್ತಾ ಮುಂದಿನ ಬದಲಾವಣೆಗೆ ಬುನಾದಿ ಎಂಬಂತೆ ಸ್ವೀಕರಿಸಬೇಕಾಗುತ್ತದೆ.

ಚರಿತ್ರೆಯಲ್ಲಿ ಅವಗಣನೆಗೊಳಪಟ್ಟ ಹೆಣ್ಣು ತನ್ನನ್ನು ಕುರಿತುಕೊಂಡು ಬರೆದದ್ದು ವಿಶೇಷ ಸಂಗತಿಯಾಗಿದೆ. ಹೆಣ್ಣು ತನ್ನನ್ನು ತಾನು ಗುರುತಿಸಿಕೊಳ್ಳುವುದು ಅತ್ಯಂತ ವಿರಳವಾಗಿಯೂ ಆಗಿದೆ. ಅಕ್ಷರ ಜ್ಞಾನದಿಂದ ದೊರೆತ ತಿಳುವಳಿಕೆಯ ಸಹಾಯದಿಂದ ಜಗತ್ತನ್ನು ಗ್ರಹಿಸುವ ಪ್ರಯತ್ನದಲ್ಲಿ ಅನೇಕ ಟೀಕೆಗಳಿಗೆ ಆಕೆ ಗುರಿಯಾಗಬೇಕಾಯಿತು. ಧರ್ಮ, ಜಾತಿ, ವರ್ಗ, ವರ್ಣದ ಎಲ್ಲೆಯನ್ನು ಮೀರಿ ವ್ಯಾಪಿಸಿರುವ ಪುರುಷ ರಾಜಕಾರಣದ ಅನುಭವವನ್ನು ಆಕೆ ಪಡೆದಳು.

ತನ್ನ ಸುತ್ತಲ ಪರಿಸರದ ನಿಯಂತ್ರಣಕ್ಕೆ ಒಳಪಟ್ಟು, ತನಗಾಗುತ್ತಿರುವ ಅನೇಕ ತೊಡಕುಗಳಿಗೆ ಹೆಣ್ಣು ಪ್ರತಿರೋಧ ತೋರುತ್ತಿದ್ದಾಳೆ. ಇಂತಹ ಸಂದರ್ಭಕ್ಕೆ ಹೆಣ್ಣು ಸಾಹಿತ್ಯಕವಾಗಿ ಪ್ರತಿರೋಧವನ್ನು ತೋರುತ್ತಿದ್ದಾಳೆ. ಸಾಮುದಾಯಿಕವಾಗಿಯೂ ಹೋರಾಟದ ರೂಪಗಳು ಅನೇಕ ತೆರನಾಗಿ ಕಾಣಬಂದಿದೆ. ವೈಯಕ್ತಿಕ ಜೀವನದಿಂದ ಆರಂಭವಾಗಿ ಇಡೀ ಸಮಾಜ ಮತ್ತು ಜಗತ್ತು ಹೆಣ್ಣನ್ನು ಕಾಣುವ ದೃಷ್ಟಿ ಮಹಿಳೆಯರನ್ನು ಮತ್ತೆ ಮತ್ತೆ ಕಾಡುತ್ತಲಿದೆ. ಮರುಮಾತನಾಡದೆ ಸಹಿಸುವ ಸಹಿಸಿದ್ದನ್ನು ಅನುಭಾವಿಕವಾಗಿ ವ್ಯಕ್ತಪಡಿಸುತ್ತಿರುವ ಶೈಲಿ ವಿಶೇಷವಾದದ್ದಾಗಿದೆ.

ಕೌಟುಂಬಿಕವಾಗಿ ಭಾವನಾತ್ಮಕ ನೆಲೆಯಲ್ಲೇ ಸಂತಸ-ತೃಪ್ತಿಗಳಿಸುವ ಹೆಣ್ಣಿನ ಚಿತ್ರಣಗಳು ಬಹುಮುಖ್ಯ ವಸ್ತುವಾಗಿವೆ. ಆರಂಭದಲ್ಲಿ ಕಾವ್ಯ ಪ್ರಕಾರವನ್ನು ಒಪ್ಪಿ ಬರೆದರೂ, ತಮಗನಿಸಿದ್ದನ್ನು ಹೇಳುವ ನೇರ ಅಭಿವ್ಯಕ್ತಿ ಕ್ರಮವನ್ನು ರೂಢಿಸಿಕೊಂಡರು. ತಮ್ಮ ಅನುಭವಕ್ಕೆ ದಕ್ಕಿದ

ವೈವಿಧ್ಯಮಯ ವಸ್ತುಗಳು ಕತೆಗಳಲ್ಲಿ ಬೆರೆತು ಹೊಸ ಆಲೋಚನೆಯನ್ನು ಮೂಡಿಸಿದೆ. ತಾವು ಬಾಳಿ ಬದುಕಿದ ಪರಿಸರಕ್ಕೆ ತಕ್ಕಂತೆ, ಜೀವನಾನುಭವದ ನೆಲೆಯಲ್ಲಿ ಕಥನ ಪ್ರಕಾರ ಬೆಳೆಯುತ್ತಾ ಸಾಗಿದೆ. "ತಮ್ಮ ಕಥೆಗಳ ವೈಶಿಷ್ಟದಿಂದ ಗಮನಸೆಳೆಯುತ್ತಿರುವ, ಭಾಗೀರಥಿ, ಹೆಗಡೆ, ಅನುಪಮಾ ಪ್ರಸಾದ್, ತುಳಸಿ ವೇಣುಗೋಪಾಲ್, ಉಷಾ ಪಿ.ರೈ, ಸುಮಂಗಲಾ, ಮಣಿಮಾಲಿನಿ ವಿ.ಕೆ., ಗೀತಾ ಬಿ.ಯು. ಗಂಗಾ ಪಾದೇಕಲ್, ಎ.ಪಿ.ಮಾಲತಿ, ವಸುಮತಿ ಉಡುಪ, ಸುನಂದಾ ಪ್ರಕಶ ಕಡಮೆ, ಸಬಿಹಾ ಭೂಮೀಗೌಡ, ಅನಸೂಯಾದೇವಿ, ಮಿತ್ರಾ ವೆಂಕಟ್ರಾಜ, ನಾಗವೇಣಿ ಮುಂಚಿ, ಚೇತನಾ ತೀರ್ಥಹಳ್ಳಿ ಮೊದಲಾದವರನ್ನೂ ಗುರುತಿಸಬಹುದಾಗಿದೆ. ಇವರ ಕಥೆಗಳನ್ನು ಆಯಾ ಕಥೆಗಾರ್ತಿಯರ ಧರ್ಮ, ಪ್ರಾದೇಶಿಕತೆ, ಸಮುದಾಯ, ಸಾಮಾಜಿಕ ಸ್ಥಾನಮಾನ, ಆರ್ಥಿಕತೆ, ಶಿಕ್ಷಣ, ಉದ್ಯೋಗ ಮೊದಲಾದ ವಿಭಿನ್ನ ಹಿನ್ನೆಲೆಗಳಲ್ಲೂ ನೋಡಬಹುದಾಗಿದೆ. (ಪ್ರತಿರೋಧದ ನೆಲೆಗಳು 29)

"1970ರ ದಶಕದಲ್ಲಿ ವ್ಯಂಗ್ಯ ಆಧರಿತ ಅಭಿವ್ಯಕ್ತಿ ವಿಧಾನವನ್ನು ಪುನರ್ ಅನ್ವೇಷಿಸಲಾಯಿತು ಮತ್ತು ಪುರುಷರ ನಡವಳಿಕೆಯನ್ನು ಟೀಕಿಸಲು, ಅಪಹಾಸ್ಯ ಮಾಡಲು ಒಂದು ಪರಿಣಾಮಕಾರಿ ಅಭಿವ್ಯಕ್ತಿ, ವಿಧಾನವನ್ನು ಬಳಸಲಾಯಿತು. ಪುರುಷನ ಪಿತೃಪ್ರಧಾನ ಪ್ರಾಧಿಕಾರವನ್ನು ತುಂಡರಿಸಲು ಪುರುಷರನ್ನು ಗಂಭೀರವಾಗಿ ಪರಿಗಣಿಸಬಾರದೆಂದು ವರ್ಜೀನಿಯಾ ವೂಲ್ಫ್ ಅಭಿಪ್ರಾಯ ಪಟ್ಟಳು". (ಮಹಿಳಾವಾದಿ ತತ್ವಜ್ಞಾನಿಗಳು 18) ಮಹಿಳೆಯರು ಬರವಣಿಗೆಯಲ್ಲಿ ತೊಡಗಿದಾಗ ಎದುರಾದ ಅನೇಕ ಸವಾಲುಗಳನ್ನು ಅಭಿವ್ಯಕ್ತಿಸಲು ಹೊಸ ವಿಧಾನವನ್ನು ತಾವೇ ರೂಢಿಸಿಕೊಂಡರು. ಆ ಮೂಲಕ ಅವರದೇ ಆದ ಮಾರ್ಗದಲ್ಲಿ ಹೊಸ ಶೈಲಿಯಲ್ಲಿ ಮಹಿಳಾ ಸಾಹಿತ್ಯ ಹೊಸ ದಿಕ್ಕಿನೆಡೆಗೆ ಸಾಗಿತು.

ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ವೈವಿಧ್ಯಮಯ ಅನುಭವಗಳು ಸಾಹಿತ್ಯದ ಮೂಲಕ ವ್ಯಕ್ತವಾಯಿತು. ಸ್ತ್ರೀಪ್ರತೀಕಗಳು ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಾ ಸಾಗುತ್ತಿದೆ. 'ಸ್ತ್ರೀವಾದ' ಪದದ ಸುಳಿವೆ ಇಲ್ಲದ ಕಾಲದಲ್ಲಿ ಸ್ತ್ರೀ ಪರ ಅಭಿವ್ಯಕ್ತಿ, ಸ್ತ್ರೀ ಸಂವೇದನೆ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಂಡದ್ದು ಗಮನಿಸಬೇಕಾದ ಅಂಶ. ನಂತರ 1975 ಮಹಿಳಾ ವರ್ಷ ಘೋಷಣೆ ಆಯಿತು. ಸ್ತ್ರೀಪರ ಅಧ್ಯಯನಗಳು, ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆ, ಸ್ತ್ರೀವಾದಿ ವಿಮರ್ಶೆಗಳು ಸಾಹಿತ್ಯ ರಚನೆಗೆ ಹೊಸ ಆಯಾಮವನ್ನು ತಂದು ಕೊಟ್ಟಿತು. ಎಂದೂ ಸ್ತ್ರೀ ಬರವಣಿಗೆಗೆ ಮನ್ನಣೆ ಸಿಗದೆ ಹೋದರೂ ಅವಳ ಆಲೋಚನೆಗೆ ತಕ್ಕ ಅಭಿವ್ಯಕ್ತಿ ದೊರಕಿತು. ಸಾಮಾಜಿಕ ಜೀವನದಲ್ಲಿ ಮೂಡಿದ ಅರಿವು ಸಾಹಿತ್ಯಕ್ಕೆ ಅನ್ವಯವಾದ ಕಾಲ ಅದಾಗಿತ್ತು.

ರಾಷ್ಟ್ರೀಯ ಚಳುವಳಿಯಿಂದ ಪ್ರೇರಿತರಾಗಿ ಬರೆದ ಆ ಕಾಲದಲ್ಲಿ ಸಾಮಾಜಿಕ ಕಳಕಳಿ ಹೊಂದಿದ ಸಾಹಿತ್ಯ ಸೃಷ್ಟಿಯಾಯಿತು. ಉದಾಹರಣೆಗೆ ವಿಧವಾ ವಿವಾಹ, ಪುರುಷ ಸಂಕೋಲೆಯಲ್ಲಿ ಬಳಲುವ ಬಡತನದ ಹೆಣ್ಣುಗಳು, ಶಿಕ್ಷಣ, ಆದರ್ಶ ಸ್ತ್ರೀ ಪ್ರತೀಕಗಳು, ಒಂದೆಡೆ ಕಂಡು ಬಂದರೆ, ಎರಡನೆಯ ಭಾಗದಲ್ಲಿ ನವ್ಯ ಪ್ರಜ್ಞೆ ಜಾಗೃತವಾಗುತ್ತದೆ.

ಈ ಸಂದರ್ಭದಲ್ಲಿ ತ್ರಿವೇಣಿಯವರ ಸಾಹಿತ್ಯ ವೈಖರಿಯನ್ನು ಉದಾಹರಿಸಬಹುದು. ಹೆಣ್ಣಿನ ಮಾನಸಿಕ ಹೋರಾಟವನ್ನು ವ್ಯಕ್ತಪಡಿಸಿದ ಲೇಖಕಿ. ಹೆಣ್ಣಿನ ಮನಸ್ಸಿನ ಹೊಯ್ದಾಟವನ್ನು ದಟ್ಟವಾಗಿ ಚಿತ್ರಿಸಿದ ತೆಲುಗಿನ ಉಷಾರಾಣಿ ಭಾಟಿಯಾ ಅವರನ್ನು ಉಲ್ಲೇಖಿಸಬಹುದು. ಹೊಸ ಸಾಮಾಜಿಕ ಪ್ರಜ್ಞೆಯೊಟ್ಟಿಗೆ ಬರೆದ ಲೇಖಕಿ. ಅಂತೆಯೇ ಸಮಕಾಲೀನ ಸಮಸ್ಯೆಗಳು, ಸ್ತ್ರೀ ಮನೋಲೋಕ ಚಿತ್ರಿಸಿದ ಲೇಖಕಿ ಇವರಾಗಿದ್ದಾರೆ. ಕೌಟುಂಬಿಕ ಅತೃಪ್ತಿ, ಅಭದ್ರತೆ ಆರ್ಥಿಕತೆಯೇ ಕಾರಣ ಎಂದರಿತ ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಬಯಸಿದ್ದು ಬಹು ಮುಖ್ಯ ಬದಲಾವಣೆ. ಕುಟುಂಬದ ಸಂದರ್ಭದಿಂದ ಭಾವುಕತೆಯೆಡೆಗೆ ಸಾಹಿತ್ಯ ಪ್ರಜ್ಞೆ ಜಾರಿದ ನಂತರ ಆರ್ಥಿಕ ಸಂಕಷ್ಟಕ್ಕೊಂದು ವಿರಾಮ ಹಾಕುವ ಪ್ರಯತ್ನದಲ್ಲಿ ಸಾಮಾಜಿಕ ವಲಯಕ್ಕೂ ಹೆಣ್ಣು ಲಗ್ಗೆ ಇಟ್ಟಳೆಂಬುದು ಮಹತ್ವದ ಸಂಗತಿ. ಪುರುಷ ಎಂದಿನಿಂದಲೂ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದಾನೆ, ಆದರೆ ಹೆಣ್ಣು ತಾನು ನಡೆದುಕೊಂಡು ಬಂದಂತೆ, ತನ್ನ ಬದುಕನ್ನು ಸಾಹಿತ್ಯವಾಗಿಸಿದ್ದಾಳೆ. ಇದು ಸ್ತ್ರೀ ಇತಿಹಾಸದ ಅತ್ಯಂತ ಮಹತ್ವದ ಅಂಶ. ತನ್ನ ಚರಿತ್ರೆಯ ನಿರ್ಮಾಣ ಆಕೆಗೆ ಸಾಧ್ಯವಾಗಿದ್ದು ಬದುಕಿನಿಂದ. ಬದುಕಿನಿಂದ ಒಡಮೂಡಿ ಬಂದಿದ್ದು ಸಾಹಿತ್ಯ ಹೀಗೆ ದಕ್ಷಿಣ ಭಾರತದ ನಾಲ್ಕು ಪ್ರಮುಖ ಭಾಷೆಗಳಲ್ಲಿ ಕಥನ ಸಾಹಿತ್ಯದಲ್ಲಿ ಮಹಿಳೆ ಅಭಿವ್ಯಕ್ತಿಸಿದ್ದೇನನ್ನು ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ತಿಳಿಯ ಬಹುದಾಗಿದೆ.

ತಮಿಳು ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದರೆ ಸಂಘ ಸಾಹಿತ್ಯ ಕಾಲಘಟ್ಟ (ಕ್ರಿ.ಪೂ. ಸು 500–ಕ್ರಿ.ಶ. 200) ದಲ್ಲೇ ಸ್ತ್ರೀಯರಿಗೆ ಉತ್ತಮ ಸ್ಥಾನಮಾನವಿತ್ತು. ಸ್ವತಂತ್ರವಿತ್ತು. ಆಧುನಿಕ ಸಂದರ್ಭದಲ್ಲಂತೂ ಸ್ತ್ರೀ ಬರವಣಿಗೆ ಸಂಕೋಚದ ಸಂಕೋಲೆಯನ್ನು ಬದಿಗೊತ್ತಿ, ಪಿತೃಪ್ರಧಾನ ಚೌಕಟ್ಟಿಗೆ ಮೌನ ಸೂಚಿಸದೆ ಬರವಣಿಗೆಗೆ ತೊಡಗಿದ್ದಾರೆ. ತಮಿಳಿನ ರಾಜಮ್ ಕೃಷ್ಣಮ್, ಅಂಬೈ, ಕೋಮಗಳ್, ಕುಯಿಲ ರಾಜೇಶ್ವರಿ, ಉಷಾ ಸುಬ್ರಮಣಿಯನ್, ಶಿವಶಂಕರಿ, ಇಂದುಮತಿ, ಲಕ್ಷ್ಮಿ, ವಾಸಂತಿ, ಅನುರಾಧ ರಮಣನ್, ಜ್ಯೋತಿರ್‌ಲತಾ ಗಿರಿಜಾ, ಆರ್. ಚೂಡಾಮಣಿ, ಕಾವೇರಿ, ಶಿವಗಾಮಿ, ತಿಲಕವತಿ ಹೀಗೆ ಹಲವು ಕತೆಗಾರ್ತಿಯರು ಹೊಸ ಆಲೋಚನೆಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ.

ಪ್ರಥಮ ತೆಲುಗು ಕವಯತ್ರಿ ತಾಳ್ಳೆ ಪಾಕ ತಿಮ್ಮಕ್ಕ (1424–1503) ಶೃಂಗಾರ ಕಾವ್ಯ ಬರೆದವಳು. ಪತಿಯೇ ಪರದೈವವೆಂದು ನಂಬಿ ಬಂದ ಸಾಹಿತ್ಯವಿದೆ. ಹೆಣ್ಣಿಗೆ ಕೌಟುಂಬಿಕ ಮಿತಿಯನ್ನು ಹಾಕಿಕೊಟ್ಟ ಸಾಹಿತ್ಯವಿದೆ. ಹೀಗೆ ಪರಂಪರೆಯೊಳಗೆ ಬರೆಯುತ್ತಿದ್ದ ಸಂದರ್ಭದ ಸ್ವರೂಪ ಬದಲಾಗಿ ಗಂಡಿನ ಅಧಿಕಾರ, ಕೌಟುಂಬಿಕ ವಾತಾವರಣ ಹೆಣ್ಣಿಗಿರುವ ಸೀಮಿತ ಚೌಕಟ್ಟನ್ನು ಮೀರುವ ಪ್ರಯತ್ನವನ್ನು ಇತ್ತೀಚಿನ ಲೇಖಕಿಯರಿಂದ ಆಗಿದೆ. ಅವರುಗಳೆಂದರೆ ಡಿ.ಕಾಮೇಶ್ವರಿ, ಕೊಂಡೆಪುಡಿ ನಿರ್ಮಲಾ, ಅಬ್ಬೂರಿ ಛಾಯದೇವಿ, ಎ.ಹೈಮಾವತಿ, ವಾಸಾಪ್ರಭಾವತಿ, ಮುಂತಾದವರು.

ಭಿನ್ನ ದೃಷ್ಟಿಕೋನಗಳ ಶೋಧ ಮಲಯಾಳಂ ಮಹಿಳಾ ಸಾಹಿತ್ಯದ ಮೂಲಕ ಆಗಿದೆ. ಕಾರಣವೆಂದರೆ ಮಲಯಾಳಿ ಸಮಾಜವು ತುಂಬ ವಿಲಕ್ಷಣವಾದುದು. ಅಲ್ಲಿ ಹೆಂಗಸಿಗೆ ಬಲ ತರುವ ಮಾತೃ ವಂಶಾವಳಿಯ ಪದ್ಧತಿ ಇರುವಂತೆಯೇ ದಟ್ಟವಾಗಿ ಪಿತೃಪ್ರಧಾನ ವ್ಯವಸ್ಥೆಯೂ ಇದೆ. ಹೆಂಗಸನ್ನು ತೆರೆ ಮರೆಯಲ್ಲೇ ಇಡುತ್ತಿದ್ದ ನಂಬೂದರಿ ಸಮಾಜದ ಕ್ರೌರ್ಯವನ್ನೂ ನಾಯರ್ ಮುಂತಾದ ಕೆಲವು ಪಂಗಡಗಳಲ್ಲಿನ ಮಾತೃ ವಂಶಾವಳಿ ಪದ್ಧತಿಯನ್ನೂ ಒಟ್ಟೊಟ್ಟಿಗೇ ಇಟ್ಟುಕೊಂಡಿದ್ದ ಸಮಾಜ ಅದು. ಮೇಲ್ನೋಟಕ್ಕೆ ಮಾತೃವಂಶಾವಳಿ ಪದ್ಧತಿ ಕಂಡು ಬಂದರೂ ಪಿತೃ ಪ್ರಧಾನ ಹಿಡಿತದ ಅನುಭವ ಸಾಹಿತ್ಯದ ಮೂಲಕ ವ್ಯಕ್ತಗೊಂಡಿದೆ. ಮಲಯಾಳಂನಲ್ಲೂ 20ನೇ ಶತಮಾನದ ಆರಂಭದಲ್ಲಿ ಪರಂಪರೆಯ ಸ್ತ್ರೀ ಪ್ರತೀಕಗಳು ಬಿತ್ತರಗೊಂಡಿದೆ. ಕಾಲಾನುಕ್ರಮದಲ್ಲಿ ಪ್ರಿಯ .ಎ.ಎಸ್., ಬಿ.ಎಂ. ಸುಹಾರ, ಸಾ.ರಾ. ಜೋಸೆಫ್, ಬಿ. ಚಂದ್ರಿಕಾ ಇವರುಗಳು ತಮ್ಮ ಕಾಲದ ಒತ್ತಡಕ್ಕೆ ದನಿಯಾಗಿದ್ದಾರೆ.

"ಭಾರತದ ಇತರ ಎಲ್ಲಾ ಭಾಷೆಗಳಿಗಿಂತ ಮಲಯಾಳದಲ್ಲೂ ಸಾಹಿತ್ಯ ಕ್ಷೇತ್ರದೊಳಗೆ ಸ್ತ್ರೀಯರ ಪ್ರವೇಶವಾದದ್ದು ಬಹಳ ತಡವಾಗಿ". (ಮಹಿಳಾ ಸಾಹಿತ್ಯ 163) ಆದಾಗ್ಯೂ ಮಲಯಾಳಂ ಕತೆಗಳಲ್ಲಿ ಅನೇಕ ವಸ್ತುಗಳು ಕತೆಗಳಲ್ಲಿ ಕಂಡುಬಂದಿದೆ. ಉದ್ಯೋಗಸ್ಥ ಸ್ತ್ರೀಯರ ಚಿತ್ರಣಗಳು 'ರಾಜಲಕ್ಷ್ಮಿ'ಯವರ ಕತೆಗಳಲ್ಲಿ ಸಿಗುತ್ತದೆ. 'ಪಿ. ವತ್ಸಲಾ'ರ ಕತೆಗಳಲ್ಲಿ ಸಮಕಾಲೀನ ಸಮಾಜದ ಬದುಕಿನ ವಿಮರ್ಶೆಗಳಿವೆ. 'ಮಾನಸಿ' ಅವರ ಕತೆಗಳಲ್ಲಿ ಪುರುಷ ಸಮಾಜದ ಬದುಕಿನೊಳಗೆ ಹೆಣ್ಣು ಬದುಕಲು ಹವಣಿಸುವ ತಲ್ಲಣವಿದೆ. 'ಗೀತಾ ಹಿರಣ್ಯನ್' ಲಘು ಹಾಸ್ಯದ ಶೈಲಿಯಲ್ಲಿ ಅತೀ ಗಂಭೀರವಾಗಿ ಬರೆಯುತ್ತಾರೆ. ಪರಂಪರೆಯ ಒಳಗಿನ ಸುಳ್ಳು ಹೆಣ್ಣಿನ ಬದುಕನ್ನು ನಿಯಂತ್ರಿಸುತ್ತಾ ಹೋಗುತ್ತದೆ ಎಂಬುದನ್ನು 'ಆಶಿತಾ' ಅವರು ಬಿಂಬಿಸುತ್ತಾರೆ.

ಒಟ್ಟಾರೆಯಾಗಿ ಕೇರಳ ಮಹಿಳೆಯರ ಬರವಣಿಗೆಯೂ ಆರಂಭದಲ್ಲಿ ಪರಂಪರೆಯ ನಿರ್ಮಿತಿಯೊಳಗೆ ಇದ್ದ ಅಂಶ ವೈಚಾರಿಕತೆಯ ಕಡೆಗೆ ಹೊರಳಿದ್ದು ತಿಳಿದುಬರುತ್ತದೆ. ತಮ್ಮನ್ನು ತಾವು ವಿಶ್ಲೇಷಿಸಿಕೊಳ್ಳುವ ಸ್ವಯಂ ವಿಶ್ಲೇಷಣೆಯೆ ಕತೆಗೆ ಸತ್ವವನ್ನು ಒದಗಿಸುತ್ತದೆ. ಪಶ್ಚಿಮದ ಪ್ರಭಾವದ ಹಿನ್ನೆಲೆಯಲ್ಲಿ ಮಹಿಳಾ ಚಿಂತನೆ ಬೆಳೆಯುತ್ತದೆಂಬ ಆರೋಪದ ನಡುವೆಯೂ ಸಾಂಸ್ಕೃತಿಕವಾಗಿ ಮಹಿಳಾ ಬರವಣಿಗೆ ತನ್ನ ಲೋಕದ ಅನಾವರಣ ಮಾಡಲು ಪೂರಕವಾದ ನೆಲೆಯನ್ನು ಕಂಡುಕೊಂಡಿದೆ.

ಆಧುನಿಕೋತ್ತರ ಸಾಹಿತ್ಯ ಸಂದರ್ಭದಲ್ಲಿ ಕತೆಗಾರ್ತಿಯರು ಮೂಡಿಸಿರುವ, ಭಿನ್ನ ಪಾತ್ರಗಳನ್ನು ಬಿಂಬಿಸಲು ಆಯ್ಕೆ ಮಾಡಿಕೊಂಡಿರುವ ಚಿತ್ರಣವನ್ನು ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

1. ಹೆಣ್ಣಿನ ಶಿಕ್ಷಣ.
2. ಕುಟುಂಬ ಜೀವನದಲ್ಲಿ ಸ್ತ್ರೀ ಪಾತ್ರ
3. ಪುರುಷ ದಬ್ಬಾಳಿಕೆಗೆ ಪ್ರತಿರೋಧ
4. ಉದ್ಯೋಗಸ್ಥ ಮಹಿಳೆಯರು (ಆರ್ಥಿಕ ಸ್ವಾವಲಂಬನೆ)
5. ಹೆಣ್ಣು ಮತ್ತು ವ್ಯವಸ್ಥೆಯ ಸಂಬಂಧ.

1. ಹೆಣ್ಣಿನ ಶಿಕ್ಷಣ :

ಕನ್ನಡದ ಸಂದರ್ಭದಲ್ಲಿ ಎಂ.ಕೆ. ಇಂದಿರಾ, ಎಚ್.ವಿ.ಸಾವಿತ್ರಮ್ಮ, ವಾಣಿ ಸರಸ್ವತಿಬಾಯಿ ರಾಜವಾಡೆ ಇವರುಗಳ ಕಾದಂಬರಿಯಲ್ಲಿ ಶಿಕ್ಷಣಕ್ಕೆ ಹಾತೊರೆಯುವ ಹೆಣ್ಣಿನ ಚಿತ್ರಣಗಳು ಕಂಡು ಬರುತ್ತದೆ. ತಮಗೊದಗಿದ ಸಂಕಷ್ಟಗಳಿಗೆ ಶಿಕ್ಷಣವೇ ಪರಿಹಾರವಾಗಿ ಕಾಣಬರುವ ಉದಾಹರಣೆಗಳಿವೆ. ತಮಿಳಿನ ಅಂಬೈ ಅವರ 'ಪುನರ್' (ಪುನಃ) ಎಂಬ ಕಥೆಯಲ್ಲಿ ಲೋಹಿದಾಸ್ ಎಂಬುವನು ಅರ್ಥಶಾಸ್ತ್ರದಲ್ಲಿ ಬಿ.ಎ. ಪದವಿಗಳಿಸಬೇಕೆಂದು ಬಯಸಿದರೆ ತಂದೆ ಇಂಜಿನಿಯರಿಂಗ್ ಸೇರುವಂತೆ ಒತ್ತಾಯ ಹೇರುತ್ತಾನೆ. ಅದೇ ಮಗಳು ಶಬರಿ ಎಂಜಿನಿಯರ್ ಆಗ ಬಯಸಿದರೆ "ಒಲೆಯೂದುವ ಹೆಣ್ಣಿಗೇಕೆ ಇಂಜಿನಿಯರಿಂಗ್ ? ಹಿಸ್ಟರಿ ಸಾಕೆನ್ನುತ್ತಾನೆ" (ಕಂದಮಿಳ ನಾರಿನೋಟ)[57]

ಹುರುಳಿಲ್ಲದ ಪರಂಪರೆ ಸಂಪ್ರದಾಯದ ವಿರುದ್ಧ ದನಿಯೆತ್ತುವ ಮೂಲಕ ಹೆಣ್ಣು ಶಿಕ್ಷಣಕ್ಕೆ ಹಾತೊರೆಯುವ ಮನಸ್ಸು ಅಂದಿನ ದಿನಗಳಲ್ಲಿ ವ್ಯಕ್ತಗೊಂಡಿದೆ. ತೆಲುಗಿನ ತುರಂಗ ಜಾನಕಿ

ರಾಣಿ' ಇವರ ಮೊದಲ ಸಣ್ಣ ಕತೆ 'ಭವಿಷ್ಯಾಲಮು' ಇದರಲ್ಲಿ ಸ್ತ್ರೀ ಶಿಕ್ಷಣಕ್ಕೆ ನೀಡಿರುವ ಪ್ರಾಮುಖ್ಯತೆಯನ್ನು ಗಮನಿಸಬಹುದು. ಹೀಗೆ ನವೋದಯದ ಆದರ್ಶವಾದ ಆ ಮೂಲಕ ಶಿಕ್ಷಣ ಕಲಿಯಬೇಕೆಂಬ ಹಂಬಲ, ಸಮಾಜದಲ್ಲಿ ಹೇಗೆ ಮೂಡಿ ಬಂದಿತೊ ಸಾಹಿತ್ಯದಲ್ಲೂ ಮೂಡಿಬಂದಿದ್ದನ್ನು ಈ ಸಂದರ್ಭದ ಆರಂಭದ ದಿನಗಳಲ್ಲಿ ಕಾಣಬಹುದು. ಸ್ತ್ರೀ ಶಿಕ್ಷಣ ಆಕೆಯ ಜೀವನ ಮಟ್ಟ ಸುಧಾರಣೆಗೆ ಗಮನ ಹರಿಸಿದರೆ ಮುಂದಿನ ಭಾಗದಲ್ಲಿ ಕುಟುಂಬ, ಗಂಡ, ಸಂಸಾರ ಹೀಗೆ ಹತ್ತು ಹಲವು ವಿಚಾರಗಳು ಸಾಹಿತ್ಯದ ಮೂಲಕ ಚರ್ಚೆಗೊಳಗಾಯಿತು. ತಮ್ಮ ಬದುಕಿಗಿದ್ದ ಅಡೆತಡೆಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಲು ಮುಂದಾದರು.

2. ಕುಟುಂಬ ಜೀವನದಲ್ಲಿ ಸ್ತ್ರೀ ಪಾತ್ರ :

ಗಂಡಿನ ಆಳ್ವಿಕೆಯಲ್ಲೇ ಹೆಣ್ಣು ಬದುಕಬೇಕೆಂಬ ನಿಯಮ ಇಂದಿನದಲ್ಲ. ಪುರುಷ ರಕ್ಷಣೆಯಲ್ಲಿ ಹೆಣ್ಣು ಬದುಕಿ ಬಂದಿರುವುದು ರೂಢಿ. ಆರಂಭದ ಹಂತದಲ್ಲಿ ಅಸಹಾಯಕ ಹೆಣ್ಣುಗಳು ಚಿತ್ರಿತವಾದರೆ ಎರಡನೇ ಹಂತದಲ್ಲಿ ತಮ್ಮ ಸಮಸ್ಯೆಗಳನ್ನು ಗ್ರಹಿಸಿಕೊಳ್ಳುವ ಪ್ರಯತ್ನ ಮಾಡಿದರು. ತತಕ್ಷಣದಲ್ಲೇ ತಮ್ಮ ಸಮಸ್ಯೆಗಳಿಗೆ ಪ್ರತಿರೋಧ ತೋರದೆ ಇದ್ದರೂ ಆಂತರಿಕ ಜಗತ್ತಿನಲ್ಲಿನ ತಮ್ಮ ತಳಮಳಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ. ಗಂಡು ಹೆಣ್ಣಿನ ಮಧ್ಯೆ ಇರುವ ತಾರತಮ್ಯಗಳನ್ನು ಇಲ್ಲವಾಗಿಸಲು ಸಾಹಿತ್ಯ ವಾಹಕವಾಗುತ್ತದೆ. ಮಹಿಳೆ ಕುಟುಂಬ, ಅಡುಗೆ ಮನೆ, ಮಕ್ಕಳ ಲಾಲನೆ ಪಾಲನೆ, ಗಂಡನ ಸೇವೆ ಇಂಥ ವಿಷಯಗಳು ಮುಖ್ಯವೆನಿಸುವಂತಿದೆ.

ಮಲಯಾಳಂ ಸಾಹಿತ್ಯದಲ್ಲಿ 'ಮಾನಸಿ' ಎಂಬುವರು ತಮ್ಮ 'ದೇವಿ ಮಹಾತ್ಮ್ಯಂ' ಎಂಬ ಕಥೆಯಲ್ಲಿ 'ಹೆಂಗಸರೆಂದರೆ ಮನೆ, ಬಟ್ಟೆ, ಒಡವೆಗಳಿಗಾಗಿ ತಮ್ಮ ಮನಸ್ಸನ್ನು ಕೊಟ್ಟುಬಿಟ್ಟವರು ಅರಿಶಿನ ಕುಂಕುಮಕ್ಕಾಗಿ ತಮ್ಮ ವ್ಯಕ್ತಿತ್ವವನ್ನೇ ಬಲಿಕೊಟ್ಟವರು. ಹದಿನೈದು ದಿನಗಳ ತನ್ನ ಮಗುವನ್ನು ಗಂಡ ಕಿತ್ತುಕೊಂಡು ಹೋದರೂ ಹೆಂಡತಿ ಸುಮ್ಮನಿರಬೇಕು ಏಕೆಂದರೆ ತಾನು ಹೆತ್ತ ಮಗುವಿನ ಮೇಲೆ ಹೆಣ್ಣಿಗೆ ಅಧಿಕಾರವಿಲ್ಲ ಈ ಪ್ರಸಂಗದಲ್ಲಿ ಹೆಣ್ಣು ಕುಟುಂಬದಲ್ಲಿ ಗಂಡಿನ ನಿರ್ಣಯಗಳಿಗೆ ಬದ್ಧಳಾಗಿಯೇ ಬದುಕಬೇಕಾದ ಸಂದರ್ಭವನ್ನು ಚಿತ್ರಿಸಲಾಗಿದೆ.

ತಮಿಳಿನ ಜ್ಯೋತಿರ್‌ಲತಾ ಗಿರಿಜಾ ಅವರು ತಮ್ಮ 'ಮಾನ ಅವಮಾನಂಗಳ' (ಮಾನ ಅವಮಾನಗಳು) ಕತೆಯಲ್ಲಿ ಶಾಂತಿಯ ಅಪ್ಪ, ಅಮ್ಮ ಪ್ರೀತಿಸಿ ಹಿರಿಯರ ಒಪ್ಪಿಗೆ ಸಿಗದೆ ಓಡಿ ಹೋಗಿ ಮದುವೆಯಾಗುತ್ತಾರೆ. ಕೇವಲ ಒಂದು ತಿಂಗಳು ಶಾಂತಿಯ ತಂದೆ ತನ್ನ ತಾಯಿಯನ್ನು ಬಿಟ್ಟು ಓಡಿ ಹೋಗುತ್ತಾನೆ. ಅಪ್ಪನ ಅಸ್ಥಿತ್ವದ ಮೂಲಕವೇ ಮಕ್ಕಳನ್ನು ಗುರುತಿಸುವ, ಕುಟುಂಬದ

ಕಲ್ಪನೆಯನ್ನು ಗ್ರಹಿಸುವ ಸಮಾಜದಲ್ಲಿ ಹೆಣ್ಣು ನಗಣ್ಯಳೆನಿಸುತ್ತಾಳೆ. ಅಂತೆಯೇ ತೆಲುಗಿನ 'ಡಿ.ಕಾಮೇಶ್ವರಿ' ಅವರು ಮಧ್ಯಮ ವರ್ಗದ ಕುಟುಂಬದ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಬರೆದಿದ್ದಾರೆ. ಭಾರತ ಕುಟುಂಬದ ಕಲ್ಪನೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಕುಟುಂಬದ ಪೂರ್ಣ ಜವಾಬ್ದಾರಿಯನ್ನು ಹೊರಬೇಕಾದವಳು ಹೆಣ್ಣಾಗಿದ್ದಾಳೆ. ಇಂತಹ ಸಂದರ್ಭದಲ್ಲಿ ಸ್ತ್ರೀಯರ ಪಾತ್ರಗಳು ಭಿನ್ನ ಸ್ತರಗಳಲ್ಲಿ ವ್ಯಕ್ತವಾಗಿದೆ.

3. ಪುರುಷ ದಬ್ಬಾಳಿಕೆಗೆ ಪ್ರತಿರೋಧ :

ಶತಮಾನಗಳಿಂದಲೂ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಬದುಕಿದ ಹೆಣ್ಣು, ಹೆಣ್ಣಿನ ಸಂದರ್ಭಕ್ಕೆ ದಿಟ್ಟ ಉತ್ತರ ನೀಡುವ, ಪ್ರತಿಕ್ರಿಯಿಸುವ ಸುಸಂದರ್ಭ ಸಾಹಿತ್ಯದ ಮೂಲಕ ಒದಗಿಬಂತು. ತೆಲುಗು ಸಾಹಿತ್ಯದ ಪ್ರಮುಖ ಕತೆಗಾರ್ತಿ ಅಬ್ಬೂರಿ ಛಾಯದೇವಿ ಅವರು ತಮ್ಮ 'ತನ್ನದಾರಿ' ಕತೆಯಲ್ಲಿ ಗಂಡ, ಮಕ್ಕಳ ಬೂಟಾಟಿಕೆಗೆ ಬೇಸತ್ತವಳು ಇಳಿ ವಯಸ್ಸಿನಲ್ಲಿ ಒಬ್ಬಳೇ ಸಿನಿಮಾಗೆ ಹೋಗುವ, ಪಾರ್ಕಿಗೆ ಹೋಗುವ, ಬೇಯಿಸಿದ ಕಡಲೆ ಉಸುಲಿ ತಿನ್ನುವ ಹೊಸ ಪ್ರಯತ್ನ ಮಾಡುತ್ತಾಳೆ. ತಮಿಳಿನ ಪ್ರಸಿದ್ಧ ಕತೆಗಾರ್ತಿ ಜ್ಯೋತಿರ್‌ಲತಾಗಿರಿಜಾ ಅವರ 'ತಲೈ ಮುಲೈ ವಿರಿಚಲ್' (ಪರಂಪರೆಯ ಬಿರುಕು ಕತೆಯಲ್ಲಿ ಭಾನುಮತಿ ಉದ್ಯೋಗಸ್ತ ಮಹಿಳೆ ಆಕೆಯ ಗಂಡ ಬೇರೆ ಹೆಣ್ಣಿನೊಂದಿಗೆ ಸಂಬಂಧ ಇಟ್ಟುಕೊಂಡುದ್ದರಿಂದ ಆಕೆ ತನ್ನ ತವರು ಮನೆಗೆ ಹೋಗಿ ನೆಲೆಸುತ್ತಾಳೆ. 6 ವರ್ಷಗಳ ನಂತರ ಆಕೆಯ ತಾಯಿ ಗಂಡನ ಮನೆಗೆ ಹೋಗೆಂದು ಹೇಳಿದಾಗ ತಾನು ಗಂಡನ ಜೊತೆ ಹೋಗಿ ಬದುಕಲಾರೆ. ನಾನು ಆತನಿಂದ ವಿಚ್ಛೇದನ ಪಡೆದು ಸ್ವತಂತ್ರವಾಗಿ ಬದುಕುತ್ತೇನೆಂಬ ನಿರ್ಧಾರವನ್ನು ತಾಯಿಗೆ ತಿಳಿಸುತ್ತಾಳೆ.

4. ಉದ್ಯೋಗಸ್ಥ ಮಹಿಳೆಯರು (ಆರ್ಥಿಕ ಸ್ವಾವಲಂಬನೆ) :

ಆಧುನಿಕತೆಯ ಪರಿಣಾಮವಾಗಿ ನಗರ ಜೀವನದಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗಿವೆ. ಕೇವಲ ಪುರುಷರಿಗೆ ಮಾತ್ರ ಈ ಅವಕಾಶಗಳಿಲ್ಲ ಬದಲಿಗೆ ಶಿಕ್ಷಣ ಕಲಿತ ಎಲ್ಲಾ ಹೆಣ್ಣುಮಕ್ಕಳುಗಳು ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಬದುಕು ನಡೆಸಿ ಸ್ವಾವಲಂಬನೆ ಸಾಧಿಸಿದಕ್ಕೆ ಸಾಹಿತ್ಯದಲ್ಲಿ ಉದಾಹರಣೆಗಳಿವೆ. ಕನ್ನಡದಲ್ಲಿ 'ನೇಮಿಚಂದ್ರ' ಅವರ ಕಥೆಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಚಿತ್ರಣ ಸಿಗುತ್ತದೆ. ಒಂಟಿ ಹೆಣ್ಣು ದೇಶ ವಿದೇಶಗಳಲ್ಲಿ ಪ್ರಯಾಣ ಮಾಡುತ್ತಾ ಉದ್ಯೋಗ ಕ್ಷೇತ್ರದಲ್ಲಿ ಸಾಧನೆಗೈಯುವ ಉದಾಹರಣೆ ಇವರ ಕತೆಗಳಲ್ಲಿ ದಟ್ಟವಾಗಿ ಚಿತ್ರಣಗೊಂಡಿವೆ. ಶಿಕ್ಷಣ ಪಡೆದ ಎಷ್ಟೋ ಹೆಣ್ಣು ಮಕ್ಕಳು ಕುಟುಂಬಕ್ಕೆ ಆಸರೆಯಾಗುವ ಉದಾಹರಣೆಗಳು ಸಾಹಿತ್ಯದಲ್ಲಿ ಮೂಡಿ ಬಂದಿವೆ.

5. **ಹೆಣ್ಣು ಮತ್ತು ವ್ಯಸ್ಥೆಯ ಸಂಬಂಧ :**

ವ್ಯವಸ್ಥೆಯ ಭಾಗವಾಗಿರುವ ಹೆಣ್ಣು ಯಾವಾಗಲು ಅಬಲೆ, ಒಪ್ಪಿತ ಮೌಲ್ಯಗಳಲ್ಲೇ ಹೆಣ್ಣು ಜೀವಿಸಬೇಕಾದ ಸಂದರ್ಭ ಎಲ್ಲೆಡೆಯೂ ಸರ್ವೇ ಸಾಮಾನ್ಯ. ಅಬ್ಬೂರಿ ಛಾಯದೇವಿ ಅವರು ತಮ್ಮ 'ಬಾನ್‌ಷಾಯ್ ಬದುಕು' ಕತೆಯಲ್ಲಿ ಹೆಣ್ಣಿನ ಅಪಾರ ಸಾಮರ್ಥ್ಯವನ್ನು ಸಮಾಜವು ಬಾನ್‌ಷಾಯ್ ಗಿಡದಂತೆ ಕುಬ್ಜಗೊಳಿಸುತ್ತದೆ ಎಂಬ ರೂಪಕವನ್ನು ಕಟ್ಟಿಕೊಡುತ್ತಿದ್ದಾರೆ. ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಎರಡನೇ ದರ್ಜೆಯ ಸ್ಥಾನ...? ತನ್ನೆಲ್ಲಾ ಶಕ್ತಿ ಕುಗ್ಗಿಸುವ ಸಾಮಾಜಿಕ ಸಂದರ್ಭವನ್ನು ಕತೆಯ ಮೂಲಕ ತಿಳಿಸುತ್ತಾರೆ.

ಮಲಯಾಳಂನ ಕತೆಗಾರ್ತಿ 'ಆಶಿತಾ' ಅವರು ತಮ್ಮ 'ಅಪೂರ್ಣ ವಿರಾಮಗಳು' ಕತೆಯಲ್ಲಿ ನಿರಾಶ್ರಿತೆಯಾದ ಹೆಣ್ಣೊಬ್ಬಳನ್ನು ಆಸ್ಪತ್ರೆ, ಸಮಾಜ ಸೇವಾ ಸಂಸ್ಥೆ, ಪೊಲೀಸು ವ್ಯವಸ್ಥೆ ನಡೆಸಿಕೊಳ್ಳುವ ವಿಧಾನವನ್ನು ಚಿತ್ರಿಸಿದ್ದಾರೆ. ವ್ಯವಸ್ಥೆ ಹೆಣ್ಣನ್ನು ನಡೆಸಿಕೊಳ್ಳುವ ಬಗ್ಗೆ ಸಮಾಜ ತಳೆಯುವ ತಟಸ್ಥತೆಯ ಬಗ್ಗೆ ಅನೇಕ ಕತೆಗಳು ಹುಟ್ಟಿಕೊಂಡಿವೆ.

ಹೀಗೆ ಸ್ವಾತಂತ್ರ್ಯೋತ್ತರ ಕಥಾ ಸಾಹಿತ್ಯ ಬೇರೆ ಬೇರೆ ವಿಷಯಗಳನ್ನು ನಿರ್ವಹಿಸುತ್ತಾ ಬಂದಿರುವುದನ್ನು ಕಾಣಬಹುದು. ಇದುವರೆಗಿನ ಚರ್ಚೆಯನ್ನು ಗಮನಿಸಿದರೆ ಪುರುಷ ಮೌಲ್ಯಗಳಿಗೆ ಮುಖಾಮುಖಿಯಾಗುವಂತೆ ಸಾಹಿತ್ಯ ಮೂಡಿ ಬಂದಿದೆ. ಹೆಣ್ಣಿಗೆ ವಾಸ್ತವ ಬದುಕಿನಲ್ಲಿ ತನ್ನೊಳಗೆ ಮೂಡಿ ಬಂದ ಜಾಗೃತಿ ಅದಾಗಿದೆ. ಒಂದೇ ಸಮಾಜದಲ್ಲಿ ಬದುಕಿ ಬಾಳುತ್ತಿರುವ ಪುರುಷ ಮತ್ತು ಮಹಿಳೆ ಆಯ್ಕೆ ಮಾಡಿಕೊಂಡ ವಿಷಯಗಳು ವೈವಿಧ್ಯಮಯವಾಗಿತ್ತು. ಹೆಣ್ಣು ವೈಯಕ್ತಿಕ ಧ್ವನಿ ಎತ್ತಿದರೆ, ಪುರುಷ ತಾನೇ ನಿರ್ಮಿಸಿಕೊಂಡ ಸಮಾಜದಲ್ಲಿ ತನ್ನನ್ನು ಪುನರ್ ಪ್ರತಿಷ್ಠಾಪಿಸಲು ಪ್ರಯತ್ನಿಸಿದನು. ಹೆಣ್ಣು ಸಮಾನತೆಯ ಅಂಶವನ್ನು ಪ್ರತಿಪಾದಿಸಲು ಹೊರಟಾಗ ಹೆಣ್ಣಿನ ಬರವಣಿಗೆಯನ್ನು ಕಡೆಗಣಿಸುವುದೇಕೆ? ಪ್ರಾಥಮಿಕ ಹಂತದ ಬರವಣಿಗೆ ಎಂದು ಆರೋಪವೇಕೆ? ಹೆಣ್ಣಿನ ಬರವಣಿಗೆಗೆ ಪುರುಷ ಲೋಕ ಸೂಚಿಸುವ ಮೌನವೂ, ತಟಸ್ಥ ಸ್ಥಿತಿಯೂ ಆಕೆಯ ಬರವಣಿಗೆಗೆ ತೋರುವ ಉದಾಸೀನತೆಯಾಗುತ್ತದೆ.

ಅಧ್ಯಾಯ ೫

ವೀಣಾಶಾಂತೇಶ್ವರ ಕಮಲಾದಾಸ್ ಬರವಣಿಗೆಯ ಸ್ತ್ರೀವಾದಿ ಅಧ್ಯಯನ

ಅಧ್ಯಾಯ – 5

ವೀಣಾಶಾಂತೇಶ್ವರ ಕಮಲಾದಾಸ್ ಬರವಣಿಗೆಯ ಸ್ತ್ರೀವಾದಿ ಅಧ್ಯಯನ

'ಸ್ತ್ರೀ' 'ಸ್ತ್ರೀವಾದ' ಸ್ತ್ರೀ ಸಂವೇದನೆ 'ಸ್ತ್ರೀತ್ವ' ಈ ಪರಿಕಲ್ಪನೆಗಳು ಅಧ್ಯಯನದ ವಿಷಯವಾಗಿ ಪ್ರತ್ಯೇಕ ವಿಶ್ವವಿದ್ಯಾಲಯಗಳಲ್ಲಿ ಗಂಭೀರವಾಗಿ ಚರ್ಚೆಗೊಳಪಡುತ್ತಾ, ಸ್ತ್ರೀ ಬರವಣಿಗೆ ಕುರಿತು ಸಂಶೋಧನೆ ನಡೆಸುತ್ತಾ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣಗಳು, ಮಹಿಳಾ ಸವಲತ್ತುಗಳು, ಮಹಿಳಾ ಪರ ಚಿಂತನೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲಾಗುತ್ತಿದೆ. ಜೊತೆಗೆ ಸ್ತ್ರೀಪರ ನಿಲುವುಗಳಿರುವ ಹೇರಳ ಸೃಜನಶೀಲ ಸಾಹಿತ್ಯ ಒಡಮೂಡಿ ಬರಲು ಮಹತ್ತರವಾದ ಚಾರಿತ್ರಿಕ ಕಾರಣವಿದೆ. ಆದರೆ ಇಂದು ಪುರುಷ ಅಧ್ಯಯನ ವಿಭಾಗವೆಂದೇನೂ ರೂಡಿಯಲ್ಲಿ ಇಲ್ಲ. ಪುರುಷವಾದವೆಂಬ ಪ್ರತ್ಯೇಕ ವಾದವಿಲ್ಲ. ಪ್ರತ್ಯೇಕ ವಾದದ ಅಗತ್ಯವೂ ಮೂಡಿ ಬಂದಿಲ್ಲ. ಆದರೆ ಸಮಾಜ ನಿಯಂತ್ರಿಸಲ್ಪಡುತ್ತಿರುವುದು ಪುರುಷನಿಂದ, ಬಹುತೇಕ ಹೆಣ್ಣಿನ ಜೀವನ ನಿರ್ದೇಶಿತವಾಗುತ್ತಿರುವುದು ಗಂಡಿನಿಂದ. ಈ ಹಿನ್ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಕ್ರಮೇಣ ಸ್ತ್ರೀವಾದವೆಂಬುದು ಆದಿಮ ಒತ್ತಡವಾಯಿತು. ಆ ಪರಿಣಾಮವಾಗಿ ಸ್ತ್ರೀ ವಿಚಾರಗಳು ಸಾಹಿತ್ಯದ ಮೂಲಕ ವ್ಯಕ್ತವಾಯಿತು. ಇದುವರೆಗೆ ನಿರ್ಮಿತಗೊಂಡಿರುವ ಸ್ಥಾಪಿತ ಮೌಲ್ಯಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಅನಿವಾರ್ಯವಾಯಿತು.

'ಸ್ತ್ರೀವಾದ; ದಿನೇ ದಿನೇ ತನ್ನ ಆಯಾಮವನ್ನು ಬದಲಿಸಿಕೊಳ್ಳುತ್ತಾ ಸಾಗುತ್ತಿದೆ. ಸ್ತ್ರೀವಾದದ ತುಡಿತ ಬದಲಾಗುತ್ತಿದೆ. ಸ್ತ್ರೀವಾದದ ಸ್ಥೂಲ ಸ್ವರೂಪದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಆಧುನಿಕತೆಯ ಭರಾಟೆಯಲ್ಲಿ ಸ್ತ್ರೀ ಪ್ರತೀಕಗಳು ಬದಲಾಗುತ್ತಾ ಸಾಗಿದೆ. ಆರಂಭದಲ್ಲಿ ಸ್ತ್ರೀ ಪ್ರಜ್ಞೆ ಮೂಡಿದ್ದು ಪಾಶ್ಚಾತ್ಯರಿಂದ, ಅದರ ಪರಿಣಾಮವಾಗಿ ಭಾರತದಲ್ಲಿ ಆರಂಭಗೊಂಡ ಸ್ತ್ರೀಪರ ಕಾಳಜಿಯ ಅಂಶಗಳು ಪ್ರಧಾನ ವಾಹಿನಿಯ ಸೀಮಿತ ಪ್ರಜ್ಞಾವಂತ ವರ್ಗದಲ್ಲಿ ಚರ್ಚೆಯಾಗಲು ಅನುವಾಯಿತು. ಆದರೆ ಕಾರ್ಯರೂಪಕ್ಕೆ ದಿಢೀರನೆ ಬರಲಿಲ್ಲ. ಕಾರಣ ಬದಲಾವಣೆಯ ದಾರಿ ಸುಲಭವಾಗಿ ದಕ್ಕುವುದಲ್ಲ. ಸರ್ಕಾರದ ಅಭಿವೃದ್ಧಿಯ ಕಾರ್ಯಕ್ರಮದಲ್ಲಿ ಶಿಕ್ಷಣಕ್ಕೆ ದೊರೆತ ಪ್ರೋತ್ಸಾಹದಿಂದ ವೃತ್ತಿ ಶಿಕ್ಷಣ ತರಬೇತಿ ಕಾರ್ಯಕ್ರಮಗಳು ಸಮಾಜದೊಟ್ಟಿಗೆ ಹೆಣ್ಣು ನಿಕಟ ಸಂಪರ್ಕ ಹೊಂದಲು ಸಹಕಾರಿಯಾಯಿತು. ಕಾಲಕ್ರಮೇಣ ಸ್ತ್ರೀ ಬಿಡುಗಡೆಯ ಪಥ ತೆರೆದುಕೊಂಡಿತು. ಹೆಣ್ಣು ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ತೊಡಗಿಕೊಂಡಳು. ಆರ್ಥಿಕ

ಸ್ವಾವಲಂಬನೆ ಕಂಡುಕೊಂಡಳು. ಹೊಸ ಸವಾಲೊಂದನ್ನು ಎದುರಿಸಲು ಸಜ್ಜಾದಳು. ಕೌಟುಂಬಿಕ ಹೊಣೆ ಮತ್ತು ಉದ್ಯೋಗಸ್ಥೆಯಾಗಿ ಕಾರ್ಯೋನ್ಮುಖಳಾದಳು. ಎಷ್ಟೇ ಆರ್ಥಿಕ ಸ್ವಾವಲಂಬನೆ ಸಾಧಿಸಿದರೂ ಪಿತೃಪ್ರಧಾನ ನಿಲುವುಗಳು ಹೆಣ್ಣಿನ ನಿತ್ಯ ಜೀವನದ ಮೇಲೆ ಕಡಿವಾಣ ಹೇರುತ್ತಲೇ ಬಂದಿದೆ.

ಆದರ್ಶನಾರಿ ಕಲ್ಪನೆಯಲ್ಲಿ ಸಮಾಜದ ಧೋರಣೆಗಳು ಹೆಣ್ಣನ್ನು ನಿಯಂತ್ರಿಸುತ್ತಲಿರುತ್ತದೆ. ಇಂದು ಸಾಮಾಜಿಕ ಚರ್ಯೆ ಬದಲಾಗಿದೆ. ಹೆಣ್ಣು ತನ್ನ ಗಂಡನನ್ನು ಸಂಗಾತಿಯಾಗಿ, ಸಹಚರಿಯ ರೂಪದಲ್ಲಿ ಬಯಸುತ್ತಾಳೆ. ಆದರೆ ಅದಕ್ಕೆ ತದ್ವಿರುದ್ಧವಾಗಿ ಪುರುಷ ಯಾಜಮಾನಿಕೆಯಲ್ಲಿ ಹೆಣ್ಣನ್ನು ನಿಯಂತ್ರಣದಲ್ಲಿಟ್ಟು ಪುರುಷ ಸಮಾಜ ನೋಡಬಯಸುತ್ತದೆ. ಕೇವಲ ಯಾವುದೋ ಒಂದು ನಿಟ್ಟಿನಲ್ಲಿ ಹೆಣ್ಣಿನ ದುಸ್ಥಿತಿಯು ಕಾಣಬರುವುದಿಲ್ಲ. ದೈನಂದಿನ ಹಲವು ಹೊಣೆಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಹೆಣ್ಣಿನ ಕೊಡುಗೆ ಅಪಾರವಾಗಿರುವುದನ್ನು ಕತೆಗಳಲ್ಲಿ ಕಾಣಬಹುದಾಗಿದೆ. ಹೆಣ್ಣಿನ ವೈಧವ್ಯ, ತಾಯ್ತನ, ಪಾತೀವ್ರತ್ಯದಂತಹ ಹಲವು ಸಾಂಪ್ರದಾಯಿಕ ನೋಟಕ್ರಮಗಳ ಜೊತೆಗೆ ಹೆಣ್ಣು ರಾಜಿಯಾಗುತ್ತಾ ನಿತ್ಯ ಬವಣೆಯಲ್ಲಿ ಸಾಗಬೇಕಾಗುವ ಕ್ರಮ ಇದಕ್ಕೆ ತೋರುವ ಪ್ರತಿಕ್ರಿಯೆ ಕತೆಗಳಲ್ಲಿ ಚರ್ಚಿತವಾಗುತ್ತವೆ.

ಕುಟುಂಬದಲ್ಲಿ ಹೆಣ್ಣು ಅನುಭವಿಸುವ ಮಾನಸಿಕ ತಾಕಲಾಟಗಳು, ಆಕೆಯ ಮನೋಲೋಕದ ಅತ್ಯಂತ ಒಳಗಿನ ಪದರದ ಅನಾವರಣ ಕತೆಗಳ ಮೂಲಕ ಸಾಧ್ಯವಾಗುತ್ತಿದೆ. ಧೈರ್ಯ ದಿಟ್ಟತೆಯನ್ನು ತೋರುವ ಹೆಣ್ಣಿನ ಪಾತ್ರಗಳು ವ್ಯವಸ್ಥೆಯ ನಿರ್ಬಂಧ ಮತ್ತು ಗಡಿಗಳ ಪರಿಧಿಯೊಳಗೆ ಅಂತರಂಗವನ್ನು ಹಿಡಿದಿಡಲು ಯತ್ನಿಸುವ ದಿಟ್ಟ ನಿಲುವುಗಳು ಸಾಕಾರಗೊಂಡಿವೆ. ಭಾವುಕಲೋಕದ ಸಂಘರ್ಷಕ್ಕೆ ಕಥನ ಸಾಹಿತ್ಯವು ಪ್ರಖರವಾಗಿ ಬೆಳಕು ಚೆಲ್ಲುತ್ತದೆ.

ಸಂಸ್ಕೃತಿಯಲ್ಲಿ ಅಡಕವಾಗಿರುವ ಸ್ತ್ರೀ ಸಂಕಥನಗಳು ಸ್ತ್ರೀ ಭಾವಕ್ಕೆ ತೊಡರಾಯಿತು. ಆದರೂ ಹೆಣ್ಣಿನ ಕೌಟುಂಬಿಕ ಚೌಕಟ್ಟಿನಾಚೆ ಹೊಸಲೋಕದ ಅನುಭವ ದಕ್ಕಿತು. ಅಧೀನತ್ವದ ಕಲ್ಪನೆ ಮೀರಿ ಬದುಕಬೇಕೆಂಬ ಪ್ರಜ್ಞೆ ಸಾಮಾನ್ಯವಾಯಿತು. ಎಲ್ಲಾ ಸಿದ್ಧಾಂತಗಳನ್ನು ಮೀರಿದ ಸ್ತ್ರೀ ಪುರುಷ ಸಂಬಂಧಗಳು ಬಹು ಮುಖ್ಯ ಅಂಶವಾಗಿರುವುದನ್ನು ಇಬ್ಬರು ಲೇಖಕಿಯರು ವ್ಯಕ್ತಪಡಿಸಿದ್ದಾರೆ. ಈ ಇಬ್ಬರು ಲೇಖಕಿಯರ ಕಥನ ಸಾಹಿತ್ಯವನ್ನು ತೌಲನಿಕವಾಗಿ ಅಭ್ಯಸಿಸುವ ಸಂದರ್ಭದಲ್ಲಿ ಕೆಳಕಂಡ ಅಂಶವನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ.

1. ಕಥೆಗಳಲ್ಲಿ ಮೂಡಿ ಬಂದಿರುವ ಸಾಮಾನ್ಯ ಸಂಗತಿಗಳು.
2. ಪಾತ್ರಗಳ ಮೂಲಕ ಚರ್ಚೆ

3. ವಸ್ತು ಆದರಿಸಿದ ಅಧ್ಯಯನ

4. ಆಶಯಗಳ ಅಧ್ಯಯನ

5. ಸ್ತ್ರೀಪರ ಅಧ್ಯಯನಗಳಿಂದ ಹೊರತಾದ ಚಿಂತನೆಗಳು (ಇಬ್ಬರು ಲೇಖಕಿಯರ ಕಥನಗಳನ್ನು ಪರಿಗಣಿಸಿ)

6. ಪರಸ್ಪರ ಕತೆಗಳ ಅಧ್ಯಯನ.

ಹೀಗೆ ತೌಲನಿಕ ಅಧ್ಯಯನ ನಡೆಸಲು ಅನುಕೂಲವಾಗುವಂತೆ ಈ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಲಿಂಗಭೇದ ಮತ್ತು ಪರಂಪರೆಯನ್ನು ಮೀರುವ ಹೆಣ್ಣಿನ ಚಿತ್ರಣ, ಸ್ತ್ರೀತ್ವದ ಹುಡುಕಾಟ ಕತೆಗಳ ಮೂಲಕ ವ್ಯಕ್ತಗೊಂಡಿರುವ ಕ್ರಮವನ್ನು ಅಭ್ಯಸಿಸಲಾಗಿದೆ. ಪಿತೃ ಪ್ರಧಾನ ಚೌಕಟ್ಟು, ಪಿತೃಪ್ರಧಾನತೆಯ ಕ್ರೌರ್ಯ ಹೇಗೆ ಕತೆಗಳಲ್ಲಿ ಮೂಡಿ ಬಂದಿದೆ. ಅಷ್ಟೆ ಅಲ್ಲ ಪಿತೃ ಪ್ರಧಾನ ನಿಲುವುಗಳಿಗೆ ಕತೆಗಳ ಮೂಲಕ ದಕ್ಕಿರುವ ಪ್ರತಿಕ್ರಿಯೆ ಎಂಥದ್ದು? ಎಂಬುದನ್ನು ಚರ್ಚಿಸಲಾಗಿದೆ.

ಇಂದು ಸ್ತ್ರೀವಾದಿ ಅಧ್ಯಯನದ ತುರ್ತು ಏನು ಎಂದು ಚಿಂತಿಸುವಾಗ, ಸ್ತ್ರೀವಾದಿ ಅಧ್ಯಯನವು ಇಂದು ಪುರುಷರ ಮೇಲರಿಮೆಯನ್ನು ಮುರಿಯುವ ಕೆಲಸ ಮಾಡಬೇಕಿಲ್ಲ. ಮನುಷ್ಯರ ಜೀವನ ಸಹಜ ಆದರೆ ಜೀವನದುದ್ದಕ್ಕೂ ಅಸಹಜವಾಗಿ ವರ್ತಿಸದೆ ಸಾಮರಸ್ಯ ಸಾಧಿಸುವುದೇ ಗುರಿಯಾದಾಗ ಮಾನವೀಯತೆ ನೆಲೆಗೊಳ್ಳುವೆಡೆಗೆ ಚರ್ಚೆ ಸಾಗುತ್ತದೆ. ಎಂಬುದು ಸಾಹಿತ್ಯ ಅಧ್ಯಯನದ ಮೂಲಕ ತಿಳಿಯುತ್ತದೆ. 'ಸ್ತ್ರೀವಾದಿ ಅಧ್ಯಯನ' ಎಂದೊಡನೆ ಕೃತಿಯೊಳಗಿನ ಸ್ತ್ರೀ ಪಾತ್ರ ಪರಿಚಯಿಸುವುದು, ಆ ಪಾತ್ರದ ಬಗ್ಗೆ ವಿವರಣೆ ನೀಡುವುದು ಎಂದಲ್ಲ. ಪಾತ್ರಗಳ ಮೂಲಕ ಹೊರಡುವ ಅಂಶಗಳು ಯಾವುವು? ಒಪ್ಪಿತ ಮೌಲ್ಯಗಳನ್ನು ಬದಲಿಸಲು ಮಾಡಿರುವ ಪ್ರಯತ್ನ ಎಂಥದ್ದು? ಸಾಹಿತ್ಯದ ಮೂಲಕ ವ್ಯಕ್ತವಾಗಿರುವ ಪಿತೃ ಪ್ರಧಾನ ನಿಲುವುಗಳು, ಪುರುಷ ಶೋಷಣೆಯ ವಿರುದ್ಧ ಧ್ವನಿ ಎತ್ತುವ ಹೆಣ್ಣಿನ ಪಾತ್ರಗಳು ಹೇಗೆ ಸೃಷ್ಟಿಗೊಂಡಿವೆ. ಹೆಣ್ಣಿನ ಪಡಿಯಚ್ಚಿನ ಪಾತ್ರಗಳನ್ನು ಪುರುಷರು ಒಂದೆಡೆ ಚಿತ್ರಿಸಿದರೆ, ಹೊಸ ದೃಷ್ಟಿಕೋನವನ್ನು ಹೆಣ್ಣು ತನ್ನ ಸಾಹಿತ್ಯದ ಮೂಲಕ ಚಿತ್ರಿಸಿದಳು. ಎಷ್ಟೋ ಭಾರಿ ತನ್ನ ಅನನ್ಯತೆಯೇ ಇಲ್ಲದೆ ಹೆಣ್ಣು ಸಾಹಿತ್ಯದಲ್ಲಿ ಕಾಣಬರುತ್ತಾಳೆ.

ಪುರುಷ ದೃಷ್ಟಿಯಲ್ಲಿ ಹೆಣ್ಣು ಆರ್ಥಿಕ ಅವಲಂಬಿಯಾಗಿ ಅಲಂಕಾರಿಕ ವಸ್ತುವಾಗಿ, ಕಾಮತೃಷೆ ನೀಗಿಸುವ ಹೆಣ್ಣಾಗಿ, ಶೀಲ, ಪಾತಿವ್ರತ್ಯದ ನೆಪ ಒಡ್ಡಿ ಪುರುಷರ ಅಗತ್ಯಕ್ಕೆ ಬೇಕಾದಂತೆ ಸೃಷ್ಟಿಯಾಗುತ್ತಲೇ ಬಂದಿದ್ದಾಳೆ. ಹೆಣ್ಣು ಕೇವಲ ಅಡುಗೆ ಮನೆಯಲ್ಲಿ ಬಂಧಿತವಾಗಿ,

ತಾಯಿಯಾಗಿ, ಪುರುಷ ಕಟ್ಟಳೆಯಲ್ಲೇ ಬದುಕುವ ತಾಯಿಯಾಗಿ ಮಗಳಾಗಿ, ತಂಗಿಯಾಗಿ, ಹಲವು ಪಾತ್ರಗಳಲ್ಲಿ ಪುರುಷರು ಮಹಿಳೆಯರನ್ನು ಚಿತ್ರಿಸಿದ್ದಾರೆ. ಆದರೆ ಹೆಣ್ಣಿನ ಬರವಣಿಗೆಯಲ್ಲಿ ಸ್ತ್ರೀ ಪ್ರತೀಕಗಳು ಮಹತ್ತರ ಬದಲಾವಣೆ ಹೊಂದಿದೆ. ಈ ಬದಲಾವಣೆಯೆ ಸ್ತ್ರೀವಾದಿ ಅಧ್ಯಯನಕ್ಕೆ ಪೂರಕವಾಯಿತು. 1975 ಅಂತರಾಷ್ಟ್ರೀಯ ಮಹಿಳಾ ವರ್ಷ ಘೋಷಣೆಯಾದ ಮೇಲೆ ಸ್ತ್ರೀಪರ ಚಿಂತನೆಗೆ ಹೊಸ ವಿಮರ್ಶಾಕ್ರಮಕ್ಕೆ ಹೆಚ್ಚು ಅವಕಾಶ ಒದಗಿತು. ಪ್ರಸ್ತುತ ಪ್ರಬಂಧಕ್ಕೆ ಆಯ್ಕೆ ಮಾಡಿಕೊಂಡಿರುವ ಕತೆಗಾರ್ತಿಯರಾದ ಕನ್ನಡದ ವೀಣಾ ಶಾಂತೇಶ್ವರ, ಮಲಯಾಳಂನ ಕಮಲಾದಾಸ್ ಅವರು ಭಾರತೀಯ ಮಹಿಳಾ ಸಾಹಿತ್ಯದ ಭಿನ್ನ ದನಿ, ವಿಭಿನ್ನ ಆಯಾಮಗಳನ್ನು ಹೊಂದಿರುವ ಬರಹಗಾರ್ತಿಯವರು. ಏಕ ಕಾಲಘಟ್ಟದಲ್ಲಿ ನೆರೆಹೊರೆ ರಾಜ್ಯದಲ್ಲಿದ್ದುಕೊಂಡು ಬರೆದ ಕತೆಗಾರ್ತಿಯರು ಪುರುಷ ಕೇಂದ್ರಿತ ಚಿಂತನೆಯ ನಡುವೆ ಇದ್ದುಕೊಂಡೆ ತಮ್ಮ ಬರಹಗಳ ಮೂಲಕ ಸಮಾಜದಲ್ಲಿ ಸ್ತ್ರೀ ಬರವಣಿಗೆಯ ಬಗ್ಗೆ ಇದ್ದ ನಂಬಿಕೆಯನ್ನು ಬದಲು ಮಾಡಿದವರು ಸಾಹಿತ್ಯದ ಮೂಲಕ ಹಲವು ಚರ್ಚೆಗೆ ಅವಕಾಶ ಮಾಡಿಕೊಟ್ಟವರಾಗಿದ್ದಾರೆ. 'ನಾನು ಸ್ತ್ರೀವಾದಿಯಲ್ಲ' ಎಂದು ಹೇಳಿಕೊಳ್ಳುವ ವೀಣಾ ಅವರ ಕತೆಗಳು ಒಂದೆಡೆ ಮತ್ತು ಭಾರತದಲ್ಲಿ ಸ್ತ್ರೀವಾದ ಒಂದು ಶಿಸ್ತಾಗಿ ಅಧ್ಯಯನ ನಡೆಯುವ ಮುಂಚೆಯೇ ಸ್ತ್ರೀಪರ ಚಿಂತನೆಗಳ ಮೂಲಕ ಕಥನವನ್ನು ಬರವಣಿಗೆಗೆ ತಂದ ಕಮಲಾದಾಸ್‌ರವರ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಸ್ತ್ರೀ ಸ್ವರೂಪವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯವನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ಅಧ್ಯಯನಕ್ಕೊಳಪಡಿಸಲು ಕೆಲವು ಮುಖ್ಯ ನೆಲೆಗಳನ್ನು ಅನುಸರಿಸಲಾಗಿದೆ. ಅವುಗಳೆಂದರೆ:–

- ಲಿಂಗಭೇದ
- ಪಿತೃಪ್ರಧಾನ ಮೌಲ್ಯಗಳ ಸಂರಚನೆ
- ಭಾಷಾ ಬಳಕೆ

ಲಿಂಗಭೇಧ :

ಸಿಮೋನ್ ದಿ ಬುವಾ ಹೇಳುವಂತೆ 'ಹೆಣ್ಣಾಗಿ ಯಾರು ಹುಟ್ಟುವುದಿಲ್ಲ, ಹೆಣ್ಣಾಗಿ ಮಾರ್ಪಡುತ್ತಾಳಷ್ಟೆ' ಶಿಶುವೊಂದು ಭೂಮಿಯ ಮೇಲೆ ಜನ್ಮ ತಳೆದ ನಂತರ ದೈಹಿಕ ರಚನೆಯ ಆಧಾರದ ಮೇಲೆ ಹೆಣ್ಣು ಗಂಡು ಎಂದು ನಿರ್ಧರಿತವಾಗುತ್ತದೆ. "ಈಗಾಗಲೇ ನಾವು

ತಿಳಿದಿರುವಂತೆ ಹೆಣ್ಣು–ಗಂಡು ಎಂಬ ವ್ಯತ್ಯಾಸವು ಹುಟ್ಟಿನಿಂದ, ಜೈವಿಕ ಆಧಾರವಾಗಿ ಇರುವುದಲ್ಲ. ನಾವು 'ಹೆಣ್ಣು' ಅಥವಾ 'ಗಂಡು' ಆಗುವುದು ಸಮಾಜದಲ್ಲಿ". (ಮಹಿಳಾ ಅಧ್ಯಯನ–ಜನವರಿ–ಜೂನ್–2010, ಪು.ಸಂ. 95) ಲಿಂಗಭೇದ ಪ್ರಕ್ರಿಯೆಯು ಸಮಾಜದಲ್ಲಿ ಘಟಿಸುವ ಕ್ರಿಯೆಯಾಗಿ ಸಮಾಜದಲ್ಲಿ ಬೆರೆತಿದೆ. ಹೀಗೆ ಕೇವಲ ದೈಹಿಕ ವ್ಯತ್ಯಾಸದಿಂದ ಹೆಣ್ಣನ್ನು ಗುರುತಿಸಿ ಬಿಟ್ಟಿದ್ದರೆ ಸಮಾಜದಲ್ಲಿ ಸ್ತ್ರೀ, ಪುರುಷ ಎಂಬ ಅಸಮತೋಲನ ಮೂಡುತ್ತಿರಲಿಲ್ಲ. ಹೆಣ್ಣು ಎಂದೂ ಎರಡನೆ ದರ್ಜೆಯ ಪ್ರಜೆ, ಪ್ರತಿ ಹಂತದಲ್ಲೂ ಹೆಣ್ಣಿನ ದೈಹಿಕ ರಚನೆ ಅವಳಿಗೆ ಸವಾಲಾಗಿದೆ. ಹೆಣ್ಣಿನ ದೈಹಿಕ ರಚನೆಗೆ ಸಂತಾನೋತ್ಪಾದಿಸುವ ಸಾಮರ್ಥ್ಯವಿದೆ. ಈ ರೀತಿಯ ಸಾಮರ್ಥ್ಯ ಹೆಣ್ಣಿಗೆ ವರದಾನವೇ ಸರಿ. ಕಾಲ, ದೇಶ, ಜನಾಂಗ ಬೇಧವಿಲ್ಲದೆ ಸೃಷ್ಟಿ ಹೆಣ್ಣಿಗೆ ಈ ಸಾಮರ್ಥ್ಯವನ್ನು ನೀಡಿದೆ. ಪುರುಷ ಸಮಾಜ ಈ ಸಾಮರ್ಥ್ಯವನ್ನು ಬಲಹೀನತೆ ಎಂಬಂತೆ ಬದಲು ಮಾಡಿದೆ. ಶೀಲ, ಪಾತಿವ್ರತ್ಯದ ಹಣೆಪಟ್ಟಿಯ ಹೆಣ್ಣಿನ ಹಣೆಗಂಟಿಸಿ, ಆತಂಕದಲ್ಲಿ ಬದುಕುವಂತೆ ಮಾಡಲಾಗಿದೆ. ಇಷ್ಟೆ ಅಲ್ಲ ಹೊರುವುದು, ಹೆರುವುದು ಮಾತ್ರ ಹೆಣ್ಣಿನ ಕೆಲಸವೆಂಬ ಸೀಮಿತ ಚೌಕಟ್ಟನ್ನು ಹೆಣ್ಣಿಗಾಗಿ ಪುರುಷ ಪ್ರಪಂಚ ನಿಗಧಿಪಡಿಸಿದೆ.

ಪುರುಷ ತನ್ನ ಬಲವನ್ನು ಪ್ರದರ್ಶಿಸಲು ಹೆಣ್ಣನ್ನು ಅಧೀನಕ್ಕೆ ಒಳಪಡಿಸುವಲ್ಲಿ ದೈಹಿಕ ರಚನೆ ಬಹು ಮುಖ್ಯ ಪಾತ್ರವಹಿಸುತ್ತದೆ. "ಅನಾಟಮಿ ಈಸ್ ಡೆಸ್ಟಿನಿ ಅಂದರೆ ದೇಹರಚನೆಯೇ ನಮ್ಮ ವಿಧಿ ಎನ್ನುವ ವಾದ ಇಂದಿನ ದಿನಗಳಲ್ಲಿ ಪ್ರಸ್ತುತವಲ್ಲ. ಲಿಂಗವ್ಯತ್ಯಾಸದಿಂದ ಮಾತ್ರ ವರ್ತನೆ ಬದಲಾಗುವುದಿಲ್ಲ. ಲಿಂಗತ್ವಕಲಿಕೆ, ಸಾಮಾಜೀಕರಣ, ಬೆಳೆಯುವ ವಾತಾವರಣ, ಅವಕಾಶಗಳು, ರಾಜಕೀಯ ಘಟನೆಗಳು ಇವೇ ಮುಂತಾದ ಅನೇಕ ಕಾರಕಗಳು ವ್ಯಕ್ತಿತ್ವವನ್ನು ರೂಪಿಸುತ್ತವೆ". (ಸ್ತ್ರೀವಾದಿ ಮನೋವಿಜ್ಞಾನ:62) ಮಾತೃತ್ವ ಕೇವಲ ತನ್ನ ವಂಶಾಭಿವೃದ್ಧಿಗಿರುವ ಸಕಾರಾತ್ಮಕ ಅಂಶವೆಂದು ಪುರುಷ ಪರಿಗಣಿಸುತ್ತಾನೆ. 'ಹೆಣ್ಣು ಕೋಮಲೆ' ಎಂದು ಹೇಳುವ ವಾದ, ಕೇವಲ ಕೋಮಲೆಯಾಗಿಸಿಲ್ಲ 'ಅಬಲೆ'ಯಾಗಿಸುವ ಮೂಲಕ ಹೆಣ್ಣಿನ ವೈಯಕ್ತಿಕ ಸಮಸ್ಯೆಯಾಗಿ ಮಾರ್ಪಾಡಾಗಿದೆ. ಇಡೀ ಸಮಾಜವನ್ನು ಕಾಡುವ ಸಾಮಾಜಿಕ ಸಮಸ್ಯೆಯಾಗಿದೆ. ದೈಹಿಕ ಬಲ ಹೆಚ್ಚೆಂಬ ಕಾರಣಕ್ಕೆ ಪುರುಷ ಮಾನಸಿಕವಾಗಿಯೂ ಬಲವನ್ನು ಪ್ರದರ್ಶಿಸುವ ನಿದರ್ಶನಗಳಿವೆ. ಜೊತೆಗೆ ಹೆಣ್ಣನ್ನು ಅಸಹಾಯಕ ಸ್ಥಿತಿಗೆ ದೂಡುವ ಸಂದರ್ಭಕ್ಕೆ ಸಮಾಜದಲ್ಲಿ ಹಲವು ಉದಾಹರಣೆಗಳಿವೆ.

ಹೊರಗಿನ ದುಡಿಮೆಗೆ ಗಂಡು ಹೊರಟರೆ ಕೌಟುಂಬಿಕ ಹೊಣೆಯನ್ನು ಹೊತ್ತ ಹೆಣ್ಣು ಹೆರುವ, ಹೊರುವ, ಮಕ್ಕಳ ಪಾಲನೆಯಲ್ಲಿ ತೊಡಗಬೇಕಾಗುವ ವಾಡಿಕೆ ಇಂದಿನದಲ್ಲ. ಆದರೆ

ಕೇವಲ ಮನೆಯಲ್ಲಿ ಬಂಧಿಸಿ ಹೊರಗಿನ ಲೋಕಕ್ಕೆ ಹೆಣ್ಣು ತೆರೆದು ಕೊಳ್ಳಲಾರದಂತ ಪರಿಸ್ಥಿತಿಯು ಹಿಂದೆ ನಿರ್ಮಾಣಗೊಂಡಿತ್ತು. ಹೆಣ್ಣಿಗೆ ದೈಹಿಕವಾಗಿ ರಕ್ಷಣೆ ನೀಡಲು ಪುರುಷನ ಅಗತ್ಯವಿದೆ ಎಂಬ ನಂಬಿಕೆ ಕೇವಲ ಅಗತ್ಯವಾಗಿ ಉಳಿಯದೆ ಅಧಿಕಾರಯುತವಾದ ಸಂಬಂಧವನ್ನು ಸಮಾಜದಲ್ಲಿ ಸೃಷ್ಟಿ ಮಾಡಿತು. ಪ್ರಧಾನ ಅಧೀನ ಕಲ್ಪನೆ ಮೂಡಿ ಬರಲು ದೈಹಿಕ ರಚನೆಯು ಬಹುಮುಖ್ಯ ಕಾರಣವಾಗಿದೆ.

ಕಾಲ ಕ್ರಮೇಣ ಹೆಣ್ಣಿನ ಸ್ಥಿತಿಗತಿ ಸ್ಥಿತ್ಯಂತರಗೊಂಡಿತು. ಆಧುನಿಕೋತ್ತರ ಚಿಂತನೆ ಮಹಿಳೆಯ ಜೀವನ ಶೈಲಿಯನ್ನು ಬದಲಾಯಿಸಿತು. ಹೆಣ್ಣಿನ ಬಗೆಗೆ ಸಮಾಜದಲ್ಲಿ ನಿರ್ಮಿತವಾಗಿದ್ದ ಸಿದ್ದ ಮಾದರಿಯ ಮೌಲ್ಯಗಳು ಪಲ್ಲಟಗೊಂಡಿತು. ಆದರೂ ದೈಹಿಕವಾಗಿ ಹೆಣ್ಣನ್ನು ದುಡಿಸಿಕೊಳ್ಳುವ ಆ ಮೂಲಕ ಅವಳ ಶ್ರಮವನ್ನು ನಗಣ್ಯವೆಂದು ಭಾವಿಸುವ ಸಂದರ್ಭ ಇಂದಿಗೂ ಇದೆ. ಎಷ್ಟೋ ಭಾರಿ ಹೆಣ್ಣನ್ನು ಕೇವಲ ದೈಹಿಕ ಕಾಮನೆಯ ದೃಷ್ಟಿಯಲ್ಲಿ ಪುರುಷ ನೋಡ ಬಯಸುತ್ತಾನೆ. ಕೇವಲ ಕುಟುಂಬದಲ್ಲಿ ಅಷ್ಟೇ ಅಲ್ಲ ಇಂದಿನ ಕಾರ್ಪೋರೇಟ್ ಪ್ರಪಂಚದಲ್ಲಿ ವೈಯಕ್ತಿಕ ಆಸೆ ಆಮಿಷಗಳಿಗಾಗಿ ಹಣದ ಮೋಹಕ್ಕೆ ಒಳಗಾಗಿಸಿ, ಐಷಾರಾಮ್ಯದ ಮೋಹಕ್ಕೆ ಒಳಗಾದ ಹೆಣ್ಣು ಕೂಡ ತನಗೆ ಪರಿವೆ ಇಲ್ಲದೆ ಸಂಕಟದಲ್ಲಿ ಸಿಲುಕಿಕೊಳ್ಳುವ ಉದಾಹರಣೆ ಇದೆ. ಸಾಮಾಜಿಕವಾಗಿ ಹೆಣ್ಣಿಗೆ ಅಷ್ಟೇನು ಸುರಕ್ಷಿತವಾದ ವಾತಾವರಣವಿಲ್ಲ. ಗಾಂಧೀಜಿಯವರ ರಾಮರಾಜ್ಯದ ಕನಸು ಸುಲಭವಾಗಿ ಸಾಕಾರಗೊಳ್ಳುವುದಿಲ್ಲ ಎನ್ನುವುದಕ್ಕೆ ದೇಶದಾದ್ಯಂತ ನಡೆದ ಗ್ಯಾಂಗ್ ರೇಪ್ ಪ್ರಕರಣಗಳೇ ಸಾಕ್ಷಿ. ಇಂದು ಹೆಣ್ಣು ಕೌಟುಂಬಿಕವಾಗಿ ಮತ್ತು ಹೊರಗಿನ ದುಡಿಮೆಯಲ್ಲಿ ಪಾಲ್ಗೊಳ್ಳುತ್ತಿರುವುದು ಹೊಸ ಸವಾಲುಗಳಿಗೆ ಕಾರಣವಾಗಿದೆ.

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದಲ್ಲಿ 'ಲಿಂಗಭೇಧ'ದ ಚರ್ಚೆ ನಡೆಸುವಲ್ಲಿ ಸಹಾಯಕವಾಗುವಂತೆ ಕೆಳಗೆ ಸೂಚಿಸಿದ ಮೂರು ಹಂತಗಳನ್ನು ಅನುಸರಿಸಲಾಗಿದೆ.

1. ಜೈವಿಕ ಭಿನ್ನತೆ ತಂದೊಡ್ಡುವ ಮಾನಸಿಕ ಸಂಘರ್ಷ
2. ಸಂಪ್ರದಾಯ ಮೀರಿ ಬೆಳೆದ ಪಾತ್ರಗಳು
3. ಸ್ತ್ರೀತ್ವದ ಹುಡುಕಾಟ

1. ಜೈವಿಕ ಭಿನ್ನತೆ ತಂದೊಡ್ಡುವ ಮಾನಸಿಕ ಸಂಘರ್ಷ :

ಜೈವಿಕವಾಗಿ ಹೆಣ್ಣಿನ ರಚನೆ ಭಿನ್ನ ಎಂಬುದು ಸೃಷ್ಟಿಯಷ್ಟೇ ಸತ್ಯ. ಆದರೆ ಹೆಣ್ಣಿನ ಅನೇಕ ಸಮಸ್ಯೆಗಳಿಗೆ ಕಾರಣ ಅವಳ ದೇಹ ಎಂಬುದು ಒಪ್ಪಿತ ಸಂಗತಿ. ಆದರೆ ಹೆಣ್ಣನ್ನು ದೈಹಿಕವಾಗಿ

ಕುಗ್ಗಿಸುವ ಮೂಲಕ ಮಾನಸಿಕವಾಗಿ ದುರ್ಬಲಗೊಳಿಸುವ ಪುರುಷ ಸಮಾಜದ ವಿರುದ್ಧ ಇಬ್ಬರು ಕತೆಗಾರ್ತಿಯರು ಸೂಕ್ಷ್ಮವಾಗಿಯೇ ಪ್ರತಿಕ್ರಿಯಿಸಿದ್ದಾರೆ. ಪುರುಷ ಲೇಖಕರು ಹೆಣ್ಣನ್ನು ಸಂಸ್ಕೃತಿಯ ಕ್ರೌರ್ಯವನ್ನು ಒಪ್ಪಿ, ಪಿತೃಪ್ರಧಾನತೆಯನ್ನು ಮೀರದ ಪಾತ್ರಗಳಾಗಿ ಸೃಷ್ಟಿಸಿದುದಕ್ಕೆ ಉದಾಹರಣೆ ಇದೆ. ಹೆಣ್ಣನ್ನು ಕಾಮುಕವಾಗಿ ಮತ್ತು ದೈಹಿಕವಾಗಿ ವರ್ಣಿಸುವ ಚಿತ್ರಣವನ್ನು ಪುರುಷ ಲೇಖಕರು ಯತಾವತ್ತಾಗಿ ಚಿತ್ರಿಸಿದ್ದಾರೆ. ಅದರಾಚೆಗಿನ ಹೆಣ್ಣಿನ ಮನೋಲೋಕ ಹೊಂದಿರುವುದು ಮಹಿಳೆಯರಿಂದ ಶೋಭಿತವಾಯಿತು. ಪುರುಷ ಪ್ರಜ್ಞೆಯೇ ಅಂತಿಮವೆಂದು ಬರೆಯುವ ಸಂಪ್ರದಾಯಿಕ ಬರವಣಿಗೆಯ ಜೊತೆಗೆ ಸ್ತ್ರೀ ದೃಷ್ಟಿಕೋನದಲ್ಲಿ ಕಥನ ನಿರೂಪಣೆ ಆಗಿರುವುದು ವಿಶೇಷ. ಈ ಕಥನಗಳನ್ನು ಹೀಗೆ ವಿವರಿಸಬಹುದು.

ಅ. ಭಯವಾಗಿ ಕಾಡುವ ಮುಳ್ಳುಗಳು : 'ಮುಳ್ಳುಗಳು' ಕತೆಯ ನಾಯಕಿ ಶಾಂತಿಗೆ ಮೆತ್ತನೆ ಹಾಸಿಗೆಯು ಮುಳ್ಳು, ದೀರ್ಘ ರಾತ್ರಿಗಳು, ಹಗಲುಗಳು ಮುಳ್ಳುಗಳಾಗಿ ಕಾಡುತ್ತವೆ. "ಕಂಡ ಕಂಡ ಮುಠ್ಠಾಳರ ಕಣ್ಣುಗಳಲ್ಲಿ ಮುಳ್ಳುಗಳಿಂದ ಚುಚ್ಚಿಸಿಕೊಂಡು, ಚುಚ್ಚಿಸಿಕೊಂಡು ಹೇಸಿಹೋಗಿದೆ". (ನಡೆದದ್ದೇ ದಾರಿ:13) "Act act in the living present" (ನಡೆದದ್ದೇ ದಾರಿ:08) ಎಂದು ಲೆಕ್ಚರ್ ನೀಡುವ ಶಾಂತಿ ಕಾಣದ ಮುಳ್ಳಿಗಾಗಿ ಹೆದರಿ ನರಳುತ್ತಿದ್ದಾಳೆ.

ಪುರುಷರು ಅವರ ನೋಟ ಹೇಗೆ ಮುಳ್ಳುಗಳಾಗುತ್ತವೆ ಎಂಬುದು ಕತೆಯಲ್ಲಿ ಬಿತ್ತರಗೊಂಡಿದೆ. ನಮ್ಮ ಸುತ್ತಲೂ ಮುಳ್ಳುಗಳಿವೆ ಎಂದು ಅರಿಯದ ಹೆಣ್ಣುಗಳು, ಮೈ ಹುಣ್ಣಾಗುವ ಹಾಗೆ ಮುಳ್ಳಿನ ತುದಿಗೆ ಬಲಿಯಾಗಿ ನರಳುವ ಸ್ಥಿತಿಯ ಬಗ್ಗೆ ಎಚ್ಚರಿಕೆ ಮೂಡಿಸುವಲ್ಲಿ ವೀಣಾ ಅವರು ಪರಿಣಾಮಕಾರಿ ಪ್ರಯತ್ನ ಮಾಡಿದ್ದಾರೆ.

ಮುಳ್ಳುಗಳಿಲ್ಲದ ಪುರುಷನನ್ನು ಮದುವೆ ಆಗಬೇಕೆಂದು ಹಂಬಲಿಸಿ ನಿರಂತರವಾಗಿ ಶಾಂತಿ ಹುಡುಕಾಟ ನಡೆಸುತ್ತಾಳೆ. ಪುರುಷ ನೋಟವು ಮುಳ್ಳು ಎನಿಸುವಂತಿದೆ. ನಿರ್ಮಲ ಭಾವನೆಯನ್ನು, ಮುಳ್ಳುಗಳಿಲ್ಲದ ಕನಸನ್ನು ಬಯಸುವ ಶಾಂತಿಗೆ 'ಕಾಮ'ವೆಂಬ ಮುಳ್ಳು ಸದಾ ಒಂಟಿ ಹೆಣ್ಣುಗಳನ್ನು ಕಾಡುತ್ತದೆ ಎಂಬ ವೇದನೆ ಇದೆ. ಹುಡುಗರಾಗಲಿ ಮುದುಕರಾಗಲಿ ಅವರ ಕಣ್ಣುಗಳಲ್ಲಿ ಮುಳ್ಳಿದೆ ಎನ್ನುವ ಸೂಕ್ಷ್ಮ ಪ್ರಜ್ಞೆಯೇ ಆಕೆಯ ದಾಂಪತ್ಯದ ಬದುಕಿಗೆ ತಡೆಯಾಗಿದೆ. ಎಲ್ಲವೂ ಭ್ರಮೆಯೇ ಹಾಗಾದರೆ..? ದೇಸಾಯಿ ಭ್ರಮೆ 'ಅವನು' ಭ್ರಮೆ. ನಾಳೆಯೊಮ್ಮೆ ತನಗೆ ಗಂಡನಾಗಿ ಬರಲಿರುವ ಪ್ರಾಣಿ ಭ್ರಮೆ ಎಂದುಕೊಳ್ಳುವ ಶಾಂತಿಯ ಕಣ್ಣುಗಳಲ್ಲಿ ಭ್ರಮೆ ಇದೆಯೋ, ಸಮಾಜದಲ್ಲಿ ಹೆಣ್ಣನ್ನು ಕಾಣುವ ನೋಟದಲ್ಲಿ ಮುಳ್ಳಿದೆಯೋ ಎಂದು ಚಿಂತನೆ ನಡೆಸುವಂತೆ ಪ್ರೇರೇಪಿಸುತ್ತದೆ. ಮುಳ್ಳು ಎನ್ನುವುದು ದೈಹಿಕ ಮತ್ತು ಮಾನಸಿಕ ಕ್ರಿಯೆಗೆ ಸಂಬಂಧಿಸಿದ್ದು.

ದೈಹಿಕವಾದ, ನೋವು ಮನಸಿಗೂ ಸಂಬಂಧಿಸಿದ್ದು ಶಕ್ತಪ್ರತಿಮೆಯಾಗಿ ಮುಳ್ಳು ಕಾಡಿದೆ. ಕಾಡುವ ಮುಳ್ಳುಗಳು ಉಳಿದವರಿಗೆ ಚುಚ್ಚದಿರಲಿ ಎಂಬ ಎಚ್ಚರಿಕೆಯಾಗಿಯೂ ಕತೆಯನ್ನು ಗ್ರಹಿಸಬಹುದಾಗಿದೆ.

ಕಾಲೇಜಿನಿಂದ ಹಾಸ್ಟೆಲಿಗೆ ತಲುಪುವ ಹಾದಿಯಲ್ಲಿ 'ಶಾಂತಿ' ಅನುಭವಿಸಿದ ತಳಮಳವನ್ನು ಕಮಲಾದಾಸ್‌ರವರ 'ಭಯ' ಕತೆಯ 'ಸೌಧಾಮಿನಿ ಟೀಚರ್' ಅನುಭವಿಸುತ್ತಾರೆ. 'ಟೀಚರ್ ನಿಮ್ಮ ರೂಪ ಕಂಡರೆ ಏನೋ ಒಂದು ರೀತಿಯ ಆನಂದ' ಎನ್ನುತ್ತಾ ವಿದ್ಯಾರ್ಥಿ 'ವೇಣು' ಹಾಡಿ ಬೆತ್ತದ ಏಟು ತಿಂದಿದ್ದ. ಡಾಕ್ಟರ್ ಮಗಳಿಗೆ ಟ್ಯೂಷನ್ ಮುಗಿಸಿ ಮನೆಗೆ ಹೋಗುವ ಹೊತ್ತಿಗೆ ಎದುರಾದ ವೇಣುವಿನ ವರ್ತನೆಯನ್ನು ಸೌಧಾಮಿನಿ ಟೀಚರ್ ನಿರಾಕರಿಸಿದರು. ವೇಣು ಸೌಧಾಮಿನಿ ಟೀಚರ್ ಎದುರು ಸೆಕ್ಸ್, ಬಲತ್ಕಾರ ಈ ಕುರಿತು ಎಗ್ಗಿಲ್ಲದೆ ಮಾತನಾಡುತ್ತಾನೆ. 'ಮುಳ್ಳುಗಳು' ಕತೆಯಲ್ಲಿ ಮೂರು ವರ್ಷಗಳ ಹಿಂದೆ ಫೇಲಾಗಿದ್ದ ಶಂಕರ್‌ಶೆಟ್ಟಿ 'ಶಾಂತಿ'ಯನ್ನು ಪಿಕ್ಚರ್‌ಗೆ ಕರೆಯುವಂತೆ, ವೇಣು ಕೂಡ ತಾನು ವಿದ್ಯಾರ್ಥಿ ಎಂಬುದನ್ನು ಮರೆತು ಒಬ್ಬ ಪುರುಷನಂತೆ ಸೌಧಾಮಿನಿ ಟೀಚರ್ ಜೊತೆ ವರ್ತಿಸುತ್ತಾನೆ. ಹೆಣ್ಣನ್ನು ದೈಹಿಕವಾಗಿ ಹಿಂಸಿಸುವ ಮಾನಸಿಕವಾಗಿ ದುರ್ಬಲಗೊಳ್ಳಿಸುವ ಅಧಿಕಾರಯುತವಾಗಿ ವರ್ತಿಸುವ ಪುರುಷ ಸ್ವಭಾವ ಅನಾವರಣಗೊಳ್ಳುತ್ತಿದೆ.

ಹೀಗೆ ಪುರುಷ ನಡವಳಿಕೆ ಹೆಣ್ಣಿಗೆ ಕಾಡುವ ಮುಳ್ಳುಗಳಾಗಿ ಭಯವನ್ನು ತಂದೊಡ್ಡುತ್ತದೆ. ದೇಹದ ಮೂಲಕ ಹೆಣ್ಣನ್ನು ಕಾಣಬಯಸುವ ಪುರುಷ ಪ್ರಪಂಚಕ್ಕೆ 'ಮುಳ್ಳುಗಳು', 'ಭಯ' ಕತೆಯು 'ದೆವ್ವ' ಎಂಬ ಕತೆಯು ಲೇಖಕಿ ಬಳಸಿರುವುದು 'ದೇಹ ಕೇಂದ್ರಿತ ಕಲ್ಪನೆಯನ್ನು ಮೀರಲು, ಆತ್ಮಕ್ಕೆ ಪ್ರಾಮುಖ್ಯತೆ ನೀಡುವಂತೆಯೂ ಇರಬಹುದು'. ಏಹ ಮತ್ತು ಮನಸ್ಸನ್ನು ಸರಿದೂಗಿಸುವ ಪ್ರಯತ್ನವಾಗಿಯೂ ಕಾಣಬಹುದು.

ಆ. ಪುರುಷ ದೃಷ್ಟಿಯಲ್ಲಿ ಹೆಣ್ಣು : ಹೆಣ್ಣನ್ನು ಪುರುಷ ಬಯಸುವುದು ದೇಹವಾಗಿ, ಅದು ಕನಸಿನಲ್ಲಿ ದೆವ್ವವಾಗಿಸಿಯಾದರೂ ಸರಿ. 'ದೆವ್ವ' ಕತೆಯ ನಾಯಕ ಕನಸಿನಲ್ಲಿ ಸ್ಪೀಡಾಗಿ ಗಾಡಿ ಓಡಿಸುವಾಗ ಆತು ಕುಳಿತವಳ ಸೆರಗು ಭರ್ರೆಂದು ಹಾರಾಡುತ್ತಿದ್ದಂತೆ... ತನ್ನ ಬೆನ್ನಿಗೆ ಅವಳ ಎದೆಯ ಹಿತವಾಗಿ ಸ್ಪರ್ಶ... ಯಾರವಳು ?" (ನಡೆದದ್ದೇ ದಾರಿ:421) ಎಂದು ಕನವರಿಸುತ್ತಾ ತನಗೆ ಪರಿಚಿತ ಹೆಣ್ಣುಗಳ ಸ್ಪರ್ಶದಲ್ಲಿ ಮೈಮರೆಯುತ್ತಾನೆ. ಹೀಗೆ ಸ್ತ್ರೀ ಸ್ಪರ್ಶಕ್ಕೆ ಹಾತೊರೆಯುವ ಪುರುಷನ ದೃಷ್ಟಿಯಲ್ಲಿ ಹೆಣ್ಣು ಯಾವಾಗಲೂ ಗುರುತಿಸಲ್ಪಡುವುದು ದೇಹದ ಮೂಲಕವೇ.

'ಕಮಲಾದಾಸ್'ರವರು ಸ್ತ್ರೀ ದೇಹ ಕುರಿತು 'ಪದ್ಮಾವತಿ ಎಂಬ ವೇಶ್ಯೆ' ಕತೆಯಲ್ಲಿ ಹೀಗೆ ವಿವರಿಸುತ್ತಾರೆ. "ನಾನು ಬಹಳ ದೂರದಿಂದ ತಮ್ಮನ್ನು ಕಾಣುವ ಸಲುವಾಗಿ ಇಲ್ಲಿಗೆ ಬಂದಿದ್ದೇನೆ.

ತಮಗೆ ನೀಡಲೆಂದೇ ಕೊಂಡು ಬಂದ ಉಡುಗೊರೆಗಳೆಲ್ಲವನ್ನೂ ದಾರಿಯಲ್ಲಿ ಒಬ್ಬೊಬ್ಬರಾಗಿ ಕಿತ್ತುಕೊಂಡು. ಈಗ ಉಳಿದಿರುವುದು ಈ ದೇಹ ಮಾತ್ರ. ಎಷ್ಟು ಮಂದಿ ಮುಳುಗಿ ಮಿಂದರೂ, ಎಷ್ಟು ತೆಪ್ಪಗಳು ತೇಲಿದರೂ, ಕ್ಷಯಿಸದ ನದಿಯಂತೆ ಕೊನೆಯಿಲ್ಲವಾದುದು ಈ ಸ್ತ್ರೀ ದೇಹ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:167) ಹೀಗೆ ಸ್ತ್ರೀ ದೇಹವನ್ನು ಕೇವಲವಾಗಿ ಕ್ಷಣಿಕ ಸುಖಕ್ಕೆ ಬಯಸುವ ಪುರುಷ ಲೋಕಕ್ಕೆ ಕತೆಯ ಮೂಲಕ ಮರು ಉತ್ತರ ನೀಡುತ್ತಾರೆ.

ವೀಣಾಶಾಂತೇಶ್ವರ ಅವರ 'ಒಲವೇ ಜೀವನ' ಕತೆಯಲ್ಲಿ ಸತೀಶ್ ಕುಲಕರ್ಣಿಯನ್ನು ಕುಸುಮಾ ಪಾಟೀಲ ಪ್ರೀತಿಸುತ್ತಾಳೆ. ತೆಳುವಾಗಿದ್ದೀರೆಂಬ ಕಾರಣಕ್ಕೆ ಆಕೆಯ ಭಾವನೆಗೆ ಸತೀಶ್ ಸ್ಪಂದಿಸುವುದಿಲ್ಲ. ಶೋಭ ನಾಯಕ ಎಂಬ ಹೆಣ್ಣನ್ನು ಮೋಹಿಸುತ್ತಾನಾದರೂ ಅವಳ ಮೊಂಡು ಎಡಗೈ ಇದ್ದುದರಿಂದ ಅವಳ ಬಗ್ಗೆಯೂ ತಟಸ್ಥ ಭಾವನೆ ತಳೆಯುತ್ತಾನೆ. ಆದರೆ 'ಒಲವೆ ಜೀವನ' ಎಂದು ಅರಿತ ಸತೀಶ್ ಶೋಭಾಳಿಗೆ ಆಸರೆಯಾಗುತ್ತಾನೆ. ಈ ಕತೆಯು ಹೆಣ್ಣಿನ ಬಾಹ್ಯ ಸೌಂದರ್ಯಕ್ಕಿಂತ ಮನದಾಳದ ಪ್ರೀತಿಯೇ ಮುಖ್ಯ ಎಂದು ಅರಿತ ಸತೀಶನ ಚಿತ್ರಣ ಪುರುಷ ವರ್ತನೆಯಲ್ಲಿ ಬದಲಾವಣೆ ಬಯಸುವ ಪಾತ್ರವಾಗಿದೆ.

ದೇಹ-ಕಾಮಗಳಾಚೆ ಹೆಣ್ಣು ಗಂಡಿನ ಸಂಬಂಧ ಮುಖ್ಯವಾಗುತ್ತದೆ. ಕೇವಲ ದೇಹ ಕೇಂದ್ರಿತವಾಗಿ ಹೆಣ್ಣನ್ನು ನೋಡುವ ಪ್ರಪಂಚದ ಬಗ್ಗೆ ನಿರಾಕರಣ ಭಾವವನ್ನು ತಳೆಯಲಾಗಿದೆ. ಒಂದೆಡೆ ಪರಿಚಿತ ಹೆಣ್ಣುಗಳನ್ನೆಲ್ಲಾ ಕಾಮುಕ ನೋಟ ಬೀರುವ ಪುರುಷರಿದ್ದಾರೆ. ಸ್ತ್ರೀ ದೇಹವು ಅಂತಿಮವಲ್ಲ ಅವಳ ಭಾವವೇ ಮುಖ್ಯ. ಕುಸುಮಾ ಪಾಟೀಲರನ್ನ ತೆಳುವೆಂಬ ಕಾರಣ ನೀಡಿ ನಿರಾಕರಿಸಿದ ಸತೀಶ್, ಶೋಭಾಳ ಮೂಲಕ ಒಲವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಪುರುಷ ನೋಟದ ಮುಳ್ಳುಗಳನ್ನು ಮೀರಲು ಶಾಂತಿ ನಿರಂತರವಾಗಿ ಪ್ರಯತ್ನಿಸುತ್ತಾಳೆ. ಭಯವಿದ್ದರೂ ಸೌಧಾಮಿನಿ ಟೀಚರ್ ಒಂಟಿಯಾಗಿ ಮನೆ ತಲುಪುತ್ತಾಳೆ. ವೇಣು ಮಾತಿಗೆ ಹೆದರಿದ್ದರೂ ಮನಸ್ಸಿನೊಳಗೆ ಸಂಘರ್ಷ ನಡೆದರೂ ದೈಹಿಕವಾಗಿ ತನ್ನ ರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯದ ಬಗ್ಗೆ ಎಚ್ಚರವಹಿಸುತ್ತಾಳೆ ಹೆಣ್ಣು. ದೇಹ ಮತ್ತು ಮನಸ್ಸು ಒಂದಕ್ಕೊಂದು ಅಂತರ್ ಸಂಬಂಧ ಉಳ್ಳದ್ದು, ಇವೆರಡನ್ನು ಬೇರ್ಪಡಿಸಿ ನೋಡಲು ಸಾಧ್ಯವೇ ಇಲ್ಲ. ಪುರುಷ ಸಮಾಜವು ಹೆಣ್ಣನ್ನು ನೋಡುವ ನೋಟವನ್ನು ಬದಲಾಯಿಸುವ ಇಂಗಿತ ಕತೆಗಳಲ್ಲಿದೆ.

ಇ. ಲೈಂಗಿಕತೆಯ ಅರ್ಥ ತಿಳಿಯದ ಹರೆಯದ ಹೆಣ್ಣು : ಕಮಲಾದಾಸ್ ಕತೆಗಳಲ್ಲಿ ಹರೆಯದ ಹೆಣ್ಣುಗಳನ್ನು ಲೈಂಗಿಕತೆಯಲ್ಲಿ ತೊಡಗಿಸುವ ಚಿತ್ರಣವಿದೆ. ಆದರೆ ಈ ಕೂಪದಿಂದ

ಹೆಣ್ಣು ಮಕ್ಕಳನ್ನು ದೂರ ಸರಿಸಬೇಕೆಂಬ ಹಂಬಲವೂ ಇದೆ. ಆ ಬಿಡುಗಡೆಯನ್ನು ತಮ್ಮ ಕತೆಗಳ ಮೂಲಕ ಮೂಡಿಸಿದ್ದಾರೆ. ಸಂದರ್ಭಕ್ಕೆ ಅನುಗುಣವಾಗಿ ಮನುಷ್ಯ ವರ್ತಿಸುತ್ತಾನೆ.

ಕಮಲಾದಾಸ್ ರವರ 'ಗೂಡುಗಳು' ಕತೆಯಲ್ಲಿ ಮಗನ ಪ್ರೀತಿಯಿಂದ ದೂರವಾದ ಅಮ್ಮ, ಎಲ್ಲರ ಬಾಯಲ್ಲೂ 'ಅಮ್ಮು' ಎಂದು ಕರೆಸಿಕೊಂಡು ಗೂಡೊಂದನ್ನು ಸೃಷ್ಟಿಸಿಕೊಂಡು ಅನೇಕ ಹರೆಯದ ಹೆಣ್ಣುಗಳಿಗೆ ಆಸರೆ ಎಂಬಂತೆ ತೋರಿದರೂ ವೇಶ್ಯಾವಾಟಿಕೆಯಲ್ಲಿ ಅವರನ್ನು ತೊಡಗಿಸುತ್ತಿದ್ದಳು. ಮನುಷ್ಯ ಸಮಾಜ ಸೃಷ್ಟಿಯಾದಂದಿನಿಂದ ದೇಹವನ್ನು ಬಂಡವಾಳವಾಗಿಸುವ ಮೂಲಕ ಹಣ ಸಂಪಾದನೆಯ ಮಾರ್ಗವನ್ನು ಹೆಣ್ಣು ಹಿಡಿಯಬೇಕಾದರೆ ನೂರಾರು ಒತ್ತಡಗಳು ಆಕೆಯ ಮೇಲಿದ್ದವು. ಇದನ್ನು ಕೇವಲ ಪುರುಷ ಸಮಾಜದ ಕ್ರೌರ್ಯವೆಂದೋ, ಹಣ ಸಂಪಾದನೆಗೆ ಹಿಡಿದ ಮಾರ್ಗವೆಂದು ಹೇಳಲಾಗದು. ಏಕೆಂದರೆ ಇದು ಸಮಾಜವಿದ್ರೋಹಕ ಕೃತ್ಯ. ಈ ಕೃತ್ಯದಲ್ಲಿ ತೊಡಗಿರುವ ಸಂದರ್ಭಕ್ಕೆ 'ಕಮಲದಾಸ್' ತಮ್ಮ ಕತೆಗಳ ಮೂಲಕ ಮಾನವೀಯತೆಯ ಲೇಪನ ಮಾಡ ಹೊರಟಿದ್ದಾರೆ. ಆದರೂ 'ಗೂಡುಗಳು' ಕತೆಯ ಹತ್ತು, ಹನ್ನೊಂದು ವಯಸ್ಸಿನ 'ಲಕ್ಷ್ಮಿ' ಪಾತ್ರ, 'ಮನಸ್ಸು ಮಲ್ಲಿಗೆ' ಕತೆಯ ಹನ್ನೆರಡು ವರ್ಷದ ರುಕ್ಮಿಣಿ ಪಾತ್ರ, 'ಶಿಕ್ಷೆ' ಕತೆಯ ಹದಿನೈದರ ವಯಸ್ಸಿನ 'ಅಮ್ಮು' ಪಾತ್ರ ಸಹ ಗಮನಿಸಬೇಕಾದಂತಹ ಪಾತ್ರಗಳಾಗಿವೆ.

ನಾಗರಿಕ ಸಮಾಜದ ಅಮಾನವೀಯ ಘಟನೆಗಳ ಬಗ್ಗೆ ಎಚ್ಚರ ಮೂಡಿಸುವ ಸಲುವಾಗಿ ಈ ಕಥೆಗಳು ಸೃಷ್ಟಿಗೊಂಡಿವೆ. ಲಕ್ಷ್ಮಿ ಮತ್ತು ರುಕ್ಮಿಣಿ ಲೈಂಗಿಕತೆಯಲ್ಲಿ ತೊಡಗುವ ಮುನ್ನ ಬಿಡುಗಡೆ ಹೊಂದುತ್ತಾರೆ. ಆದರೆ 'ಶಿಕ್ಷೆ' ಕತೆಯ 'ಅಮ್ಮು' ತಾನು ಚೆನ್ನಾಗಿ ಓದದೆ ಹೋದುದಕ್ಕೆ ಮದುವೆ ಎಂಬ ಶಿಕ್ಷೆಗೆ ಗುರಿಯಾಗಿರುತ್ತಾಳೆ. ಮದುವೆ ಎಂಬುದು ಶಿಕ್ಷೆ ಎನ್ನುವುದಾದರೆ ಕೌಟುಂಬಿಕ ಜೀವನಕ್ಕೊಂದು ಅರ್ಥವಿಲ್ಲವೇ? ವ್ಯವಸ್ಥೆಯಲ್ಲಿನ ಕೌಟುಂಬಿಕ ಬಂಧನ ಆಕೆಯನ್ನು ಲೈಂಗಿಕ ಕ್ರಿಯೆಯಲ್ಲಿ ತೊಡಗಲು ಪೂರಕವಾದ ವಾತಾವರಣವನ್ನು ನಿರ್ಮಿಸಿರುತ್ತದೆ. ಅಜ್ಜಿಯ ಮಾತನ್ನು ನಿರಾಕರಿಸದೆ ತನ್ನ ಸಂದರ್ಭಕ್ಕೆ ತಾನೆ ಕಾರಣ ಎಂದು ಶಿಕ್ಷೆ ಅನುಭವಿಸುತ್ತಾಳೆ. ಅಂತಹ ಸಂದರ್ಭದಿಂದ ಬಿಡುಗಡೆ ಹೊಂದಲು ಬಯಸುತ್ತಾಳೆ.

ಮೇಲ್ಕಂಡ ಚರ್ಚೆಯ ಮೂಲಕ ಹೆಣ್ಣನ್ನು ದೇಹ ಕೇಂದ್ರಿತವಾಗಿ ನೋಡುವ ಪುರುಷ ಸಮಾಜದ ವಕ್ರ ದೃಷ್ಟಿಯ ಬಗೆಗೆ ಕತೆಯಾರ್ತಿಯರು ಗಮನ ಹರಿಸಿದ್ದಾರೆಂಬ ಅಂಶ ಸ್ಪಷ್ಟವಾಗುತ್ತದೆ. ಪುರುಷನಿಗೆ ಪಾತಿವ್ರತ್ಯ, ಶೀಲದ ಅಂಟುಮುಂಟಿಲ್ಲ. ಸಾವಿನ ಭಯ ಬಿಟ್ಟರೆ ಮತ್ಯಾವ ಭಯವೂ ದೇಹಕ್ಕಿಲ್ಲ. ಒಂಟಿ ಪುರುಷ ಕತ್ತಲೆಯ ರಸ್ತೆಯಲ್ಲಿ ನಡೆಯಬಾರದೆಂಬ

ನಿಯಮವಿಲ್ಲ. ಆದರೆ ಸ್ತ್ರೀ ದೇಹ ಎನ್ನುವುದು ಇದ್ಯಾವುದನ್ನೂ ಮೀರಿ ನಡೆಯಲು ಸಾಧ್ಯವಿಲ್ಲವಾದ್ದರಿಂದ ಅವಳ ಬಗ್ಗೆ ವಿಶೇಷ ಹೊಣೆಯೊಂದನ್ನು ಆಕೆಯೇ ಹೊರುತ್ತಾಳೆ, ಹೊರಬೇಕಾಗುತ್ತದೆ. ಈ ಸಂದರ್ಭದಲ್ಲಿ ಅನೇಕ ಬಾರಿ ಹೆಣ್ಣು ಮಾನಸಿಕ ಸಂಘರ್ಷಕ್ಕೆ ಒಳಗಾಗುತ್ತಾಳೆ.

2. ಸಂಪ್ರದಾಯ ಮೀರಿ ಬೆಳೆದ ಪಾತ್ರಗಳು :

ಹೆಣ್ಣೆಂದರೆ ಹೀಗೆ ಬದುಕಬೇಕೆಂಬ ಸಂಪ್ರದಾಯ ಒಂದಿತ್ತು. ಆದರೆ ಕಾಲಕ್ರಮೇಣ ಪರಂಪರೆಯ ಹೇರಿಕೆಯಿಂದ ಹೆಣ್ಣು ಬಿಡುಗಡೆ ಹೊಂದಿದಳು. ಸಮಾಜದಲ್ಲಿದ್ದ ಮೂಢ ಕಲ್ಪನೆಗಳಿಗೆ ಬಲಿಯಾಗಿ ಬದುಕಿದ್ದವಳು ಹೆಣ್ಣು. ನಿಯಮ, ಹೇರಿಕೆ ಹೆಣ್ಣಿಗೆ ಮಾತ್ರ. ಪುರುಷ ಸ್ವತಂತ್ರ ಜೀವಿ. ಯಾವ ಕಟ್ಟಳೆಯೂ ಇಲ್ಲದೆ ಬದುಕ ಬಲ್ಲವನೆಂಬ ಸಂಭ್ರಮ ಕೇವಲ ಆತನ ಬದುಕಿಗೆ ಮೀಸಲಾದ ಸಂಗತಿ. ಈ ತಾರತಮ್ಯ ಅರಿವಿಗೆ ಬಂದಾಗಿನಿಂದಲೂ ಪುರುಷರ ಸಣ್ಣತನಗಳನ್ನು ಹೆಣ್ಣು ಮೌನವಾಗಿ ವಿರೋಧಿಸಿದ್ದೂ, ಪ್ರತಿಭಟನೆ ನಡೆಸಿದ್ದೂ ಇದೆ. ಆದರೆ ಇಂದೂ ಪ್ರತಿಭಟನೆಯ ಅಗತ್ಯವಿಲ್ಲ. ಹೆಣ್ಣು ತನಗೆ ಬೇಕಾದಂತೆ ಬಾಳ್ವೆ ನಡೆಸುವ ಸ್ವಾತಂತ್ರ್ಯವನ್ನು ಆಕೆಯೇ ಗಿಟ್ಟಿಸಿಕೊಂಡಿದ್ದಾಳೆ. ಹಾಗೆಂದ ಮಾತ್ರಕ್ಕೆ ಇದು ಸ್ತ್ರೀ ಸ್ವಾತಂತ್ರದ ವೀರಗಾಥೆಯಲ್ಲ. ವ್ಯವಸ್ಥೆಯ ಕ್ರೌರ್ಯಕ್ಕೆ ಸಿಲುಕಿ ನಲುಗುವ ಬದಲು ತನ್ನ ದಾರಿಯಲ್ಲಿ ತಾನು ಸಾಗುವ, ತನ್ನ ನಿರ್ಧಾರ ತಾನು ತೆಗೆದುಕೊಳ್ಳುವ, ಭಾರವಾದ ಮನಸ್ಸನ್ನು ಹಗುರಾಗಿಸಿ ತಿಳಿಯಾದ ಭಾವವನ್ನು ಮೂಡಿಸುವ ಪ್ರಯತ್ನವಾಗಿದೆ. ಬದುಕು ಬಂದಂತೆ ಸ್ವೀಕರಿಸುವ, ತನ್ನ ದೃಷ್ಟಿಯಲ್ಲಿ ಬದುಕಲೆತ್ನಿಸುವ ಪ್ರಯತ್ನವಾಗಿ ಹೆಣ್ಣು ಕ್ರಮಿಸುವ ಹಾದಿಯಾಗಿದೆ.

ಬದುಕು ಬಂದಂತೆ ಸ್ವೀಕರಿಸ ಹೊರಟರೂ ಹೆಣ್ಣು ಎದುರಿಸಬೇಕಾದ ಸಂದರ್ಭ ಸಂದಿಗ್ಧವಾಗಿಯೇ ಇರುತ್ತದೆ. ಬದುಕಿಗೆ ಪ್ರೀತಿ ಮುಖ್ಯ, ಪ್ರೀತಿಯ ಆಸರೆ ಮುಖ್ಯ. ಕೇವಲ ಸಮಯ ಸಾಧಕರಾಗಿ ನಡೆದುಕೊಳ್ಳುವ ಪುರುಷ ಹಲವು ಚಿತ್ರಣವನ್ನು ಲೇಖಕಿಯರು ಸಹಜವಾಗಿಯೇ ಚಿತ್ರಿಸಿದ್ದಾರೆ.

ಅ) ಖರೆ ಪ್ರೀತಿಯನ್ನು ಹುಡುಕಿ ಹೊರಟವರು :

ವೀಣಾಶಾಂತೇಶ್ವರ ಅವರ 'ಗಂಡಸರು' ಕಾದಂಬರಿ 1975ರಲ್ಲಿ ಪ್ರಜಾವಾಣಿ ವಿಶೇಷಾಂಕದಲ್ಲಿ ಪ್ರಕಟವಾಗಿತ್ತು. '38' ವರ್ಷಗಳು ಕಳೆದು ಓದಿದರೂ ಹೆಣ್ಣಿನ ಭಾವುಕತೆಯನ್ನು ಒಮ್ಮೆ ಬಿಗಿ ಹಿಡಿಯುವಂತೆ ಮಾಡುತ್ತದೆ. 'ಶಾಂತಿ'ಯ ಮೂಲಕ ಅನೇಕ ತೆರನಾದ ಪ್ರೀತಿ

ತೋರುವ ಪುರುಷರನ್ನು ನಮಗೆ ಪರಿಚಯಿಸುತ್ತಾರೆ. ಪ್ರೀತಿಯನ್ನು ಕುರಿತು 'ಶಾಂತಿ' ಕಾದಂಬರಿಯಲ್ಲಿ ಹೀಗೆ ಹೇಳುತ್ತಾಳೆ.

"ನೋಡು ಶಂಕರ ಖರೆ ಪ್ರೀತಿ ಅಂದ್ರೆ ಮನಸಿನ ಪ್ರೀತಿ'. ಈ ದೈಹಿಕ ಸಂಬಂಧದಿಂದ ಮನಸ್ಸು, ಪ್ರೀತಿ ಹೊಲಸು ಆಗತದಾ, ನನಗೆ ಅಂಥಾ ಪ್ರೀತಿ ಬ್ಯಾಡ, ನನ್ನ ಖರೆ ಪ್ರೀತಿ ಮಾಡೋವಂಥವನ್ನ ನಾ ಲಗ್ನಾಗ್ತೀನಿ ಗಂಡಸು–ಹೆಂಗಸಿನ ದೈಹಿಕ ಸಂಬಂಧ ನೆನಸಿದರೆ ಹೇಸಿಗೆ ಬರ್ತದಾ ನನಗ, ನಾವೇನು ನಾಯಿಗಳs ಹಂದಿಗಳs ? ಮನುಷ್ಯರಾಗಿ ಹುಟ್ಟಿದಕ್ಕೆ ಪ್ರಾಣಿಗಳಿಗಿಂತ ಬ್ಯಾರ ಇರಬೇಕೋ ಬ್ಯಾಡೋ? ಇದೆಲ್ಲ ಸಮಾಜದಾಗಿನ ಕೆಟ್ಟ ಪದ್ಧತಿ, ಹೆಂಗಸಿನ್ನ ಆಳಾಗಿ ಇಟಗೊಳ್ಳಿಕ್ಕೆ ಗಂಡಸು ಹೂಡಿರೋ ಸಂಚು. ನನಗೆ ಇದು ಸೇರೋದಿಲ್ಲ ನೋಡು ಏನಂತೀ" (ನಡೆದದ್ದೇ ದಾರಿ:28)

ಸದಾ ಒಂದೇ ಸಮಾನವಾಗಿ ತೋರುವ ಪ್ರೀತಿ ನನಗೆ ಬೇಕೆಂದು ಹುಡುಕ ಹೊರಟವಳು 'ಶಾಂತಿ'. ನಿರಂತರವಾಗಿ ಪ್ರೀತಿಯ ಶೋಧ ನಡೆಸುವ ಮೂಲಕ ಪುರುಷ ಸ್ವಭಾವದ ಅನಾವರಣ ಮಾಡುತ್ತಾರೆ. ವಸ್ತುವಿನ ದೃಷ್ಟಿಯಲ್ಲಿ ಹೊಸದೆಂದು ಇಂದಿಗೂ ಅನಿಸುತ್ತದೆ. ಸೂಕ್ಷ್ಮ ಸ್ವಭಾವದ 'ಶಾಂತಿ' ಪುರುಷ ವ್ಯವಸ್ಥೆಯಲ್ಲಿನ ಓರೆಕೋರೆಗಳನ್ನು ಮೀರಿ ನಿಲ್ಲಲು ಪ್ರಯತ್ನಿಸುತ್ತಾಳೆ. ಗಂಡಸರು ಮನುವಿನ ಮೊಮ್ಮಕ್ಕಳು ಎಂದು ಟೀಕಿಸುತ್ತಾಳೆ. ಸಾಕಷ್ಟು ಪುರುಷ ಪತ್ರಗಳ ಮೂಲಕ ಪ್ರೀತಿ ಅರಸುತ್ತಾಳೆ. ದೇಹಕೇಂದ್ರಿತವಾಗಿ ಪ್ರೀತಿಯನ್ನು ಹುಡುಕುವ ಪುರುಷ ಲೋಕಕ್ಕೆ ಶಾಂತಿ ಸವಾಲಾಗುತ್ತಾಳೆ.

ಇಂಗ್ಲಿಷ್ 'Love' ವ್ಯಕ್ತಪಡಿಸಿದ್ದ ಶಂಕರ್, 'Strong supporter of women's lib' ಎನ್ನುವ ಪ್ರೊ॥ ಮಠದ್ Loyality ಬಯಸುವ ರಮಾಕಾಂತ ಸಿಂಧೆ, ಧರ್ಮ ಬದಲಿಸಲು ಹೊರಟ ಜಾನ್ ಅಶೋಕ್‌ಕುಮಾರ್ 'ಶಾಂತಿ'ಯ ಜೀವನ ಪಯಣದಲ್ಲಿ ತೇಲಿ ಹೋದ ನಾವಿಕರು ಮಾತ್ರ, ಪರಕೀಯವಾಗೇ ಬದುಕುವ ಹೆಣ್ಣಿನ ಜೀವನದ ಬಗ್ಗೆ ಪರಿವೆ ಇಲ್ಲದೆ ಇರುವವರು ಎಷ್ಟೋ ಮಂದಿ, ಕೆಲವೊಮ್ಮೆ ಪುರುಷ ಬಂಧನ ವಿಲಕ್ಷಣಪಾಶದಂತೆ. ಪಾಶದಲ್ಲಿ ಬಿಡುಗಡೆಯಾಗದೆ ನರಳುತ್ತಲೆ ಇರುವರಿಗೆ 'ಶಾಂತಿ' ಬಿಡುಗಡೆಯನ್ನು ತೋರುತ್ತಾಳೆ. ಪ್ರೀತಿಯನ್ನು ಅರಸಿ ಹೊರಟವಳಿಗೆ ವಿದೇಶಿಯನೊಬ್ಬ ಪ್ರೀತಿ ಎಂದರೆ ಏನು ಎಂದಾಗ ನನಗೆ ಗೊತ್ತಿಲ್ಲ ಎಂದು ಹೇಳುವಲ್ಲಿ ತಟಸ್ಥತೆಯನ್ನು ತೋರುತ್ತಾಳೆ. ಅಂತೆಯೇ 'ಒಂದು ರವಿವಾರ' ಕತೆಯ ರೇಖಾ–'ಔಟಿಂಗ್ಸ್ ಇಲ್ಲದ ಸಂಡೆ ಎಂಥದ್ದು ? "ಮತ್ತ ಮತ್ತ ಒಬ್ಬರ ಜೋಡೀನ ಒಂದ ಕಡೆಗೆ ಹೋಗೋದ್ರಾಗ charm ಇರೋದಿಲ್ಲ" (ನಡೆದದ್ದೇ ದಾರಿ:137) ಎನ್ನುತ್ತಾಳೆ. ಹೆಣ್ಣಿನ

ಆಯ್ಕೆಯ ಸ್ವಾತಂತ್ರವನ್ನು ತಿಳಿಸುತ್ತದೆ. ಹೀಗೆ ರೇಖಾಳಿಗೆ ಆಸರೆ ನೀಡಿದ್ದ ಮನಯೊಡತಿ ಗಿರಿಜಾ ಲಗ್ನ ಮಾಡಿಕೊಳ್ಳೊದರ ಬಗ್ಗೆ ಹೀಗೆ ಹೇಳ್ತಾಳೆ "ಛೀ ಬರೇ ಸೆಂಟಿಮೆಂಟಲ್ ಯಾವ ಗಂಡ್ಸಿಗೂ ಯಾವ ಹೆಂಗಸಿನ ಸಲುವಾಗಿನೂ ಹಿಂಗ ಖರೆ attachment ಇರೋದಿಲ್ಲ. ಅವರದೆಲ್ಲಾ ಪ್ರೀತಿ ಬರೆ ತಮ್ಮ ಹಸಿವು ಹಿಂಗಿಸಿಕೊಳ್ಳೋದರ ಪೂರ್ತೆ ಇರ್ತದ. ಖರೇ ಅಂದ್ರೆ ಗಂಡಸರ್ನ ಲಗ್ನ ಮಾಡಿಕೊಳ್ಳೋ ಹೆಂಗಸರೇ ಮೂರ್ಖರು" (ನಡೆದದ್ದೇ ದಾರಿ:140) ಈ ತಟಸ್ಥ ಭಾವನೆ ಮೂಡುವ ಪಾತ್ರ ಸೃಷ್ಟಿಗೆ ಕಾರಣವಾದ ಸಾಮಾಜಿಕ ಸಂದರ್ಭ ಕತೆಗಳಲ್ಲಿ ಬಿತ್ತರಗೊಂಡಿದೆ. ಕೌಟುಂಬಿಕ ಕಲ್ಪನೆಯನ್ನು ಮುರಿದು ಬಯಸುವ ಸ್ತ್ರೀ ಸ್ವೇಚ್ಛೆಯ ವೀರಗಾಥೆಯಲ್ಲ.

ಹಾಗಾದರೆ ಶಾಂತಿ, ರೇಖಾ, ಗಿರಿಜಾ ವ್ಯವಸ್ಥೆಯ ಸಂಪ್ರದಾಯ ವಿರೋಧಿಗಳಲ್ಲ. ಪುರುಷ ನಡವಳಿಕೆಯ ಬಗ್ಗೆ ಅನುಭವ ಪಡೆದ ಇವರು ತಟಸ್ಥತೆಯ ಸ್ಥಿತಿಗೆ ತಲುಪಿದವರಾಗಿದ್ದಾರೆ. ಹೀಗೆ ನಿರಂತರ ಪ್ರೀತಿಯ ಹುಡುಕಾಟದಲ್ಲಿ 'ಕೊನೆಯ ದಾರಿ' ಕತೆಯ ಲಿಲಿ ಹುಡುಕುತ್ತಿರುವುದು ಏನನ್ನು? "you are a perfect woman" (ನಡೆದದ್ದೇ ದಾರಿ:65) ಎಂದು ಹೇಳುವ ತೀರದ ದಾಹದ ಡಾ॥ ಗೋವಿಂದ ಮೂರ್ತಿಯ ಬಗ್ಗೆ ತಾಳುವ ಅಸಡ್ಡೆ, A/c ಮುಗಿಸುವ ತನಕ ಬುಜದ ಮೇಲಿಂದ ಕೈ ತಗೆಯದ ಬಾಸ್ ಬಗ್ಗೆ ಮೂಡಿರುವ ಅಸಹ್ಯವೋ, ತೀರಾ ಮೃದು ಸ್ವಭಾವದ ವಿಲಯಮ್ಸ್, ತೀರಾ ಹೇಡಿಯಾದ ಪ್ಲೆಟೋನಿಕ್ ಪ್ರೀತಿಯ ವಿನಯ ಸಾಳಕರ ಇವರೆಲ್ಲರನ್ನು ಪರಿಚಯಿಸುವುದು ಲಿಲಿಯ ಮೂಲಕವೇ... ಕೆಲಸ ಉಳಿಸಿಕೊಳ್ಳಬೇಕಾದರೆ ಬಾಸ್‌ನ ಹೆಂಡತಿ ಊರಿಗೆ ಹೋದಾಗಲೆಲ್ಲ ಅವನ ಹಾಸಿಗೆಯ ಸಂಗಾತಿಯಾಗುವುದು. ಈ ನಿರುಪಯುಕ್ತ ಸಂದರ್ಭಕ್ಕೆ ಬದಲಾಗಿ ಲಿಲಿ ರಾಜಿನಾಮೆ ನೀಡಿ ತನ್ನ 'ಕೊನೆಯ ದಾರಿ' ಯನ್ನು ಹಿಡಿಯುತ್ತಾಳೆ.

'ಶಾಂತಿ', 'ರೇಖಾ', 'ಗಿರಿಜಾ', 'ಲಿಲಿ'ಯ ಮೂಲಕ ಖರೆ ಪ್ರೀತಿಯನ್ನು ಹುಡುಕಲು ಹೊರಟಿರುವ ವೀಣಾ ಅವರ ಕತೆಗಳು ಅಂತ್ಯಗೊಳ್ಳುವುದು ಹತಾಶೆಯಲ್ಲೇ. ಲಗ್ನದ ಚೌಕಟ್ಟನ್ನು ಮೀರಿ ಹುಡುಕುವ ಪ್ರೀತಿಯೂ ದಕ್ಕದೂ, ಲಗ್ನವಾದ ನಂತರ ಅದು ಕೇವಲ ಬಂಧನ ಎಂಬ ಅಂಶವನ್ನು ಕತೆಗಳು ಸ್ಪಷ್ಟ ಪಡಿಸುತ್ತದೆ. ಹೆಣ್ಣೆಂಬ ಮೈಲಿಗೆಯನ್ನು ಮೀರಿ ಸೃಷ್ಟಿಗೊಂಡ ಈ ಪಾತ್ರಗಳು ಸಮಾಜದಲ್ಲಿ ಸಂಚಲನವನ್ನು ಸೃಷ್ಟಿಮಾಡುತ್ತದೆ. ಪಾತ್ರಗಳ ಮೂಲಕ ಪ್ರೀತಿ ಹುಡುಕುತ್ತಾ ಪುರುಷ ಸ್ವಭಾವವನ್ನು ವೀಣಾಶಾಂತೇಶ್ವರ ಅವರು ಬಯಲು ಮಾಡಿದ್ದಾರೆ. ಕನ್ನಡದ ಮಟ್ಟಿಗೆ ಈ ಪ್ರಯತ್ನ ವಿಶಿಷ್ಟವಾದುದು, ಮಹಿಳಾ ಬರವಣಿಗೆಯಲ್ಲೊಂದು ಸಂಚಲನವನ್ನು ತಂದಿತು.

ಆ) ಆಸರೆ ಬಯಸಿ ಬಂದವರು :

'ಕಮಲಾದಾಸ್'ರವರ ಕಥನದಲ್ಲೂ ಸಂಬಂಧಗಳಲ್ಲಿ ಪ್ರೀತಿಯನ್ನು ಬಯಸುವ, ಆಸರೆ ಪಡೆಯಲು ಹಂಬಲಿಸುವ ಮನಸ್ಸುಗಳ ಚಿತ್ರಣವು ಮೂಡಿ ಬಂದಿದೆ. ಪ್ರೀತಿಯನ್ನು ಪಡೆಯಲು, ಉಳಿಸಿಕೊಳ್ಳಲು, ಯಾವುದೇ ಸನ್ನಿವೇಶವನ್ನು ಎದುರಿಸಲು ಹೆಣ್ಣು ಸಿದ್ಧಳಿದ್ದಾಳೆ. ಕತೆಗಳಲ್ಲಿ ಪುರುಷನ ಪಲಾಯನವಾದ, ಅಳುಕುಳಿಗೆ ಬಲಿಯಾಗುವ ಹೆಣ್ಣುಗಳ ಚಿತ್ರಣವಿದೆ. ಆಸರೆ ಬಯಸಿ ಬಂದವರೆಂಬ ಮಾತ್ರಕ್ಕೆ ಹೆಣ್ಣು ಅಸಹಾಯಕಳೆಂದು ತಿಳಿಯಬೇಕಿಲ್ಲ. ಮನುಷ್ಯ ಸಂಬಂಧಗಳಲ್ಲಿ ಪರಸ್ಪರ ನಂಬಿಕೆ ಮುಖ್ಯ. ನಂಬಿಕೆ ಉಳಿಸಿಕೊಳ್ಳಲು ಹೆಣ್ಣು ಒತ್ತೆಯಿಡಬೇಕಾಗಿದ್ದು ತನ್ನತನವನ್ನೇ, ಅದರ ಫಲಿತ ಮಾತ್ರ ಶೂನ್ಯ ಒಮ್ಮೊಮ್ಮೆ ತಮ್ಮ ಆತ್ಮಸಾಕ್ಷಿಗೆ ದ್ರೋಹ ಬಗೆಯುವವರು, ವಿಕೃತ ಸ್ವಭಾವದ ಪುರುಷರು, ಅಸಹಾಯಕ ಸ್ಥಿತಿಯಲ್ಲಿ ಮಗುವೊಂದನ್ನು ಹೆಣ್ಣಿನ ಕೈಗಿತ್ತು ಹೋಗುವವರ ಚಿತ್ರಣ ತೀರಾ ಸಹಜವೆಂಬಂತೆ ಮೂಡಿ ಬಂದಿದೆ.

'ಪಾವಿತ್ರ್ಯ'ದ ಕಲ್ಪನೆ ಕೇವಲ ಹೆಣ್ಣಿನ ದೇಹಕ್ಕೆ ಮೀಸಲಾದ ಸಂಗತಿ. 'ಜಿಜ್ಞಾಸೆ' ಎಂಬ ಕತೆಯಲ್ಲಿ ಅಮೇರಿಕಾದಿಂದ ಮರಳಿ ಬರುತ್ತಿರುವ ಗೆಳತಿಯನ್ನು ಬರಮಾಡಿಕೊಳ್ಳಲು ನಾಯಕ ವಿಮಾನ ನಿಲ್ದಾಣಕ್ಕೆ ತೆರಳಿರುತ್ತಾನೆ. ಐದು ವರ್ಷಗಳ ನಂತರ ಭೇಟಿಯಾಗುವ ತನ್ನ ಗೆಳತಿಯ ಸೌಂದರ್ಯಕ್ಕೇನೂ ಚ್ಯುತಿ ಬಂದಿರುವುದಿಲ್ಲ. ಅಮೇರಿಕಾದಲ್ಲಿ ಆಕೆಯ ಜೊತೆಗಿರುವವನು ಅವಳನ್ನು ಕ್ರೂರವಾಗಿ ನಡೆಸಿಕೊಂಡಿರುವುದಿಲ್ಲವೆಂಬ ಲೆಕ್ಕಾಚಾರದಲ್ಲಿ ಅವಳೆಡೆ ನೋಡುತ್ತಾನೆ. ಹೆಣ್ಣು ಗಂಡಿನಿಂದ ಬಯಸುವುದು ಏನನ್ನು? ನಿರ್ಮಲವಾದ ಪ್ರೀತಿಯನ್ನು, ಆದರೆ ಆಕೆ ಅಮೇರಿಕಾಕ್ಕೆ ತೆರಳುವ ಮುನ್ನ ಆತ ಕ್ರೂರಿಯಾಗಿ ನಡೆದುಕೊಂಡಿದ್ದು. ಅಮೇರಿಕಾದಿಂದ ಮರಳಿ ಬಂದ ಮೇಲೆ ಅವಳ ಪಾವಿತ್ರ್ಯದ ಬಗ್ಗೆ ಅವನು ಚರ್ಚೆ ಮಾಡಲು ಇಚ್ಛಿಸಿರಲಿಲ್ಲ. ಆದರೆ ಅವಳನ್ನು ಅನುಮಾನದಿಂದ ಕಂಡು ತಾನೆ ಖಿನ್ನವಾದ. ಅಲ್ಲಿ ನಡೆದದ್ದೇನನ್ನು ವಿವರಿಸಬೇಡವೆಂದು ಪ್ರಿಯತಮೆಗೆ ಹೇಳುತ್ತಾನೆ. ಹೆಣ್ಣು ಎಲ್ಲೆ ಬದುಕಿದರೂ ತನ್ನ ಆತ್ಮವಂಚನೆ ಮಾಡಿಕೊಳ್ಳಲಾರಳು. ಅದು ಸ್ವದೇಶದಲ್ಲಾಗಲಿ ಅಥವಾ ವಿದೇಶದಲ್ಲಾಗಲಿ. ಸಂಪ್ರದಾಯದ ಸಂಕೋಲೆಯನ್ನು ಮುರಿದರೂ ಭಾವಕ್ಕೆ ನಿಷ್ಠಳಾಗಿರುವ ಚಿತ್ರಣವಿದೆ. ಹಲವು ಅನುಮಾನಗಳನ್ನು ಕಥೆ ವ್ಯಕ್ತಪಡಿಸುತ್ತದೆ. ಅಮೇರಿಕಾದಿಂದ ಮರಳಿ ಬಂದ ಮೇಲೆ ಅವನ ಕೊರತೆ ಹೇಗೆ ಮಾಯವಾಯಿತು, ಆಕೆಯ ಅಲ್ಲಿನ ಗೆಳೆಯನ ಬದಿಗೆ ಅವನಿಗೆ ಅನುಮಾನವೇಕೆ ಎಂಬ ಪ್ರಶ್ನೆ ಸ್ಪಷ್ಟವಾಗಿದೆ.

'ಅವಳ ಹಣೆ ಬರಹ' ಕಮಲಾದಾಸ್‌ರವರು ಹತ್ತನೆ ವಯಸ್ಸಿನಲ್ಲಿ ಬರೆದ ಕತೆ. 'ಸುಮುಖಿ' ರಾಜಕುಮಾರಿಯಂತೆ ಬೆಳೆದವಳು. ತನ್ನೆಲ್ಲ ಸುಖವನ್ನು ತೊರೆದು ಆಶಾಸ್ಯನೆಂಬ ದರಿದ್ರ ಬಾಲಕನೊಟ್ಟಿಗೆ ಊರಿನಿಂದ ಪರಾರಿಯಾದಳು. ಪುರುಷನ ಆಶ್ರಯವನ್ನು ಬಯಸಿ ಹೋದ ಸುಮುಖಿ ನಾಲ್ಕೈದು ವರ್ಷಗಳ ನಂತರ ಎರಡು ವರ್ಷದ ಪುಟ್ಟ ಬಾಲಕನಿಗೆ ತಾಯಿಯಾಗಿದ್ದಳು. ಆಶಾಸ್ಯನನ್ನು ನಂಬಿ ತಂದೆ ತಾಯಿಯನ್ನು ಮರೆತು ಬಂದ ಸುಮುಖಿಗೆ ಸಿಕ್ಕ ಪ್ರತಿಫಲವೇ ಸಾವು. ಆಶಾಸ್ಯನನ್ನು ಪೊಲೀಸರು ಗಲ್ಲಿಗೇರಿಸಿದರು. ಆಸರೆ ಬಯಸಿ ಬಂದ ಸುಮುಖಿ ಬಾವಿಯಲ್ಲಿ ತೇಲುವ ಹೆಣವಾದಳು. ಜಿಜ್ಞಾಸೆ ಕತೆಯ ನಾಯಕಿಯೂ ಅನುಭವಿಸುವುದು ಒಂಟಿತನವನ್ನೇ... ಸುಮುಖಿ ಅನುಭವಿಸಿದ್ದು ಅದೇ ವೇದನೆಯನ್ನೇ ದೈಹಿಕವಾಗಿ ಹೆಣ್ಣನ್ನು ಉಪಯೋಗಿಸಿ ನಿರ್ಲಕ್ಷಿಸುವ ಪುರುಷ ಪರಂಪರೆಗೆ ಈ ಕಥೆಗಳು ಸವಾಲಾಗಿವೆ.

'ಮೇಷ್ಟ್ರು' ಕತೆಯಲ್ಲಿ ಮೇಷ್ಟ್ರು ಹರೆಯದ ಹುಡುಗಿಯರ ಮುಂದೆ ಪ್ರೇಮ ಕವಿತೆಗಳನ್ನು ಹೇಳಿ ಮಧುರ ಭಾವಗಳನ್ನು ಕವಲೊಡೆಸುವ ಪ್ರಯತ್ನ ಮಾಡುತ್ತಿದ್ದರು. 'ದಾಕ್ಷಾಯಣಿ' ಎಂಬ ವಿದ್ಯಾರ್ಥಿನಿಗೆ ಮೇಷ್ಟ್ರ ಮೇಲೆ ನಿಜವಾದ ಪ್ರೇಮ ಮೂಡುತ್ತದೆ. ಮೇಷ್ಟ್ರಿಗೊಮ್ಮೆ ಸಿಡುಬಿನ ಕಾಯಿಲೆ ಬಂದಾಗ ಅವರ ಸೇವೆ ಮಾಡಿದಳು. ಮುಗ್ಧವಾಗಿ ಮೇಷ್ಟ್ರನ್ನ ಪ್ರೀತಿಸಿದ ದಾಕ್ಷಾಯಣಿಗೆ ಮೇಷ್ಟ್ರ ನಡವಳಿಕೆ ಸರಿ ಬರಲಿಲ್ಲ. ಮೇಷ್ಟ್ರು ನಡೆದುಕೊಂಡ ರೀತಿ ಭಯಾನಕವೆನಿಸಿತು. ಮೇಷ್ಟ್ರ ಆತುರ ಸ್ವಭಾವ ಅಸಹ್ಯ ವ್ಯಕ್ತಿತ್ವವನ್ನು ಕಣ್ಣಾರೆ ಕಂಡು ಅವರಿಂದ ದೂರವಾಗುವ ಪ್ರಯತ್ನಕ್ಕೆ ಮುಂದಾದಳು. ಭಾವುಕತೆ ಕತೆಗಳಲ್ಲಿ ಮುಖ್ಯ ಎನಿಸುತ್ತದೆ.

ಇಬ್ಬರು ಕತೆಗಾರ್ತಿಯರು ಪುರುಷ ಮನೋ ಪ್ರವೃತ್ತಿಯನ್ನು, ಸ್ವಭಾವವನ್ನು ಚಿಂತನೆಗೀಡು ಮಾಡುವಂತೆ ಕತೆ ರಚನೆ ಮಾಡಿದ್ದಾರೆ. ಎಲ್ಲ ಎಲ್ಲೆಯನ್ನು ಮೀರಿ ಹೆಣ್ಣು ತಾನು ಮನಸಾರೆ ಬಯಸಿದವರ ಬಗ್ಗೆ ಪ್ರೀತಿ ವ್ಯಕ್ತ ಪಡಿಸಿದರೆ ಕೇವಲ ದೇಹದ ಮೂಲಕವೇ ಹೆಣ್ಣನ್ನು ಗುರುತಿಸುವ, ಕಾಮದ ಗೊಂಬೆಯಂತೆ ಮಾತ್ರ ಅವಳನ್ನು ಕಾಣುವ ಪುರುಷ ಪ್ರವೃತ್ತಿಯನ್ನು ನೇರವಾಗಿ ಚಿತ್ರಿಸಿದ್ದಾರೆ. ಲಿಂಗಭೇದದ ಪರಿಕಲ್ಪನೆಯನ್ನು ಚರ್ಚೆ ಮಾಡುವಾಗ ಹೆಣ್ಣು ಬಳಸಲ್ಪಡುವ ಯಾಂತ್ರಿಕ ಜೀವಿಯಂತೆ ಎಷ್ಟೋ ಭಾರಿ ಕಾಣುತ್ತಾಳೆ. ಟೊಳ್ಳಾಗಿರುವ ಪುರುಷ ಅಂತರಂಗ, ದಾಹದ ನಾಯಕರು ಹೆಣ್ಣಿಗೆ ಸದಾ ಪರಕೀಯರಂತೆ ಕಾಣಬರುತ್ತಾರೆ. ಎಷ್ಟೋ ಭಾರಿ ಹಿಂಸಾತ್ಮಕ ವ್ಯಕ್ತಿತ್ವವೂ ಪುರುಷ ರೂಪದಲ್ಲಿ ಮೂಡಿ ಬರುತ್ತದೆ. ಹೆಣ್ಣಿನ ದೇಹ ಕೇವಲ ಕುತೂಹಲವಾಗಿ, ನಿಗೂಢವಾಗಿ ಕಾಣುತ್ತದೆ. ಪುರುಷ ಲೇಖಕರು ಜೀವಕಾಮದ ಸಂಬಂಧವನ್ನು

ವರ್ಣನೆ ಮಾಡುವಾಗ ಹೆಣ್ಣು ತನ್ನೊಳಗೆ ತಲ್ಲೀನಳಾಗುವಂತೆ ಚಿತ್ರಿಸುತ್ತಾರೆ. ಆದರೆ ಹೆಣ್ಣು ಬರವಣಿಗೆ ಆರಂಭಿಸಿದ ಮೇಲೆ ಆಕೆ ಭಾವ ತೀವ್ರತೆಯಿಂದಲೇ ಮನದ ತುಡಿತವನ್ನು ವ್ಯಕ್ತಪಡಿಸುತ್ತಾರೆ. ಬಳಸಲ್ಪಡುವ ಹೆಣ್ಣಾಗಿ ಖಿನ್ನಳಾಗುವ, ಕೇವಲ ಭೋಗಿಸಲ್ಪಡುವಂತೆ, ತೊಳಲಾಡುವ ಸ್ತ್ರೀ ಪಾತ್ರಗಳು ಚಿತ್ರಣಗೊಳ್ಳುವುದು ಪುರುಷ ಲೇಖಕನಿಂದ ಮಾತ್ರ ಸಾಧ್ಯ.

3. ಸ್ತ್ರೀತ್ವದ ಹುಡುಕಾಟ :

ಪ್ರತಿ ಹೆಣ್ಣು ತನ್ನೊಳಗಿನ ತನ್ನತನವನ್ನು ಒಂದಿಲ್ಲ ಒಂದು ರೀತಿಯಲ್ಲಿ ಹುಡುಕಾಟ ನಡೆಸುತ್ತಾಳೆ. ಹೆಣ್ಣಿಗೆ ಸಹಜವಾಗಿ ದಕ್ಕಿರುವುದು ದೇಹ ರಚನೆ, ಹೆಣ್ಣಿನ ದೇಹ ರಚನೆ ಆಕೆಯನ್ನು ಹಲವು ತೆರನಾದ ಮಾನಸಿಕ ಸಂಘರ್ಷಕ್ಕೆ ಒಳಗಾಗುವಂತೆ ಮಾಡುತ್ತದೆ ಎಂಬುದನ್ನು ಆರಂಭದ ಚರ್ಚೆಯಲ್ಲಿ ಗಮನಿಸಿದ್ದೇವೆ. ಈಗ ಸ್ತ್ರೀತ್ವದ ಕಲ್ಪನೆಯು ಸಹ ಅವಳೊಳಗೆ ನಡೆಯುವ ಸಂಘರ್ಷಕ್ಕೆ ಕಾರಣವಾಗಿದೆ. ಪುರುಷ ಪ್ರಧಾನ ನೆಲೆಯು ಹೆಣ್ಣನ್ನು ತನಗೆ ಬೇಕಾದಂತೆ ಬಳಸಿಕೊಂಡು ಅವಳ ಸ್ವಂತಿಕೆಯನ್ನು ಹಾಳುಗೆಡುವ ಪ್ರಯತ್ನವನ್ನು ಪ್ರಜ್ಞಾಪೂರ್ವಕವಾಗೇನು ಮಾಡಿಲ್ಲದಿದ್ದರೂ ಸ್ತ್ರೀ ತನ್ನೊಳಗೆ ಇಕ್ಕಟ್ಟಿಗೆ ಸಿಲುಕುತ್ತಲೇ ಬಂದಿರುವುದು ಸತ್ಯ. ಹಾಗೆಂದ ಮಾತ್ರಕ್ಕೆ ಹೆಣ್ಣನ್ನು ದೈಹಿಕ ಸತ್ಯವಾಗಿ ಮಾತ್ರವೋ, ಸಮಾಜ ರೂಪಿಸಿರುವಂತೆ ಮಾತ್ರ ಪಠ್ಯದ ಮೂಲಕ ಚರ್ಚೆ ಮಾಡ ಹೊರಟರೆ ಅದೊಂದು ಸವಾಲು. ಕಾರಣವೆಂದರೆ ಕಾಲಕ್ಕೆ ತಕ್ಕಂತೆ ಸ್ತ್ರೀ ಪ್ರತೀಕಗಳು ಬದಲಾಗುತ್ತಿರುವುದರಿಂದ ಹೊಸ ಹೊಸ ಸಂದರ್ಭಕ್ಕೆ ಆಕೆ ಸಿಲುಕಿ ತನ್ನತನದ ಹುಡುಕಾಟದಲ್ಲಿ ತೊಡಗಿರುತ್ತಾಳೆ. ದೇಹದ ಮೂಲಕ ಒತ್ತಡಕ್ಕೆ ಒಳಗಾಗುವ ಹೆಣ್ಣಿನ ಸಂದರ್ಭದ ಬಗ್ಗೆ ಗಮನ ಹರಿಸಬೇಕು.

"ಹೆಣ್ಣೂ ಏಕಕಾಲಕ್ಕೆ ಮಾಯೆಯೂ, ಸಖಿಯೂ, ಸತಿಯೂ ಆಗಿರುವುದರ ಜೊತೆಗೆ ಗೆಲ್ಲಬೇಕಾದ ಸವಾಲೂ ಆಗಿರುತ್ತಾಳೆ. ಈ ಯಾವುದೂ ಅವಳ ಆಯ್ಕೆಯೆನ್ನುವ ಹಾಗೆ ದಾಖಲಾಗುವುದಿಲ್ಲ ಅಧಿಕಾರ ಕೇಂದ್ರದಿಂದ ನಿರ್ದೇಶಿಸಲ್ಪಟ್ಟವಳ ಹಾಗೆ ಅವಳು ತನ್ನ ಪಾತ್ರವನ್ನು ಅಭಿನಯಿಸುತ್ತಾ ಹೋಗಬೇಕಾಗುತ್ತದೆ." (ನಡುವೆ ಸುಳಿವ ಆತ್ಮ:132) ಹೆಣ್ಣಿನ ದೇಹವೇ ಶತ್ರುವಾಗುವ ಆ ಮೂಲಕ ಹಿಂಸೆಯ ಆರಂಭಗೊಳ್ಳುವ ಕ್ರಮವನ್ನು ಪುರುಷ ಆರಂಭದಿಂದಲೂ ನಡೆಸಿಕೊಂಡು ಬಂದಿದ್ದಾನೆ. ಸ್ತ್ರೀತ್ವವನ್ನು ಗುರುತಿಸಿಕೊಳ್ಳುವ ಮುಟ್ಟು, ಬಸಿರು, ತಾಯ್ತನ ಇವುಗಳು ಪ್ರಕೃತಿ ಸಹಜ ಕ್ರಿಯೆ ಎನಿಸದೆ ಪುರುಷ ನಿಯಂತ್ರಣದ ಒತ್ತಡದಲ್ಲೇ ನಡೆಯಬೇಕಾದ ಘಟನೆ ಎಂಬಂತೆ ಮೂಡಿ ಬಂದಿದೆ.

ಹೆಣ್ಣು ಬರೆಯುವ ಬಹುತೇಕ ಸಾಹಿತ್ಯದಲ್ಲಿ ಸ್ತ್ರೀತ್ವದ ಹುಡುಕಾಟ ನಡೆಯುತ್ತಿರುತ್ತದೆ. ಅದನ್ನು ಗುರುತಿಸಿಕೊಳ್ಳುವ ಪ್ರಯತ್ನವೂ ಆಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕೆಲವು ಕಥೆಗಳನ್ನು ಉದಾಹರಿಸುವ ಮೂಲಕ ಸ್ತ್ರೀತ್ವದ ಹುಡುಕಾಟ ನಡೆದಿರುವುದನ್ನು ಚರ್ಚಿಸಲಾಗುತ್ತಿದೆ.

'ನೆರಳು' ಕತೆಯಲ್ಲಿ ಮಗಳ ಮನೆಯಲ್ಲಿ ಬದುಕು ಸಾಗಿಸುತ್ತಿದ್ದ ಕಥಾನಾಯಕಿ ಮಾಲತಿಯ ತಾಯಿ ವಿಧವೆ, ಅವಳು ಕುಂಕುಮವನ್ನು ಅಳಿಸದೆ ಉಳಿದಿರುತ್ತಾಳೆ. ಹೂ, ಬಳೆ, ಕುಂಕುಮ ಹೆಣ್ಣಿಗೆ ಹುಟ್ಟಿದಾಗಿನಿಂದ ರೂಢಿಗೆ ಬಂದದು, ಆದರೆ ಗಂಡನ ಸಾವಿನ ನಂತರ ಎಲ್ಲವನ್ನೂ ತ್ಯಜಿಸಿ ತನ್ನ ಅನನ್ಯತೆಯನ್ನು ಅಳಿಸಿ ಹಾಕುವ ಪ್ರಯತ್ನವನ್ನು ಮೀರುವ 'ಅವ್ವ' ಮೊಮ್ಮಕ್ಕಳಿದ್ದರೂ ತಾನು ಪ್ರೀತಿಸಿದ ಪ್ರಿಯಕರ ಸದಾಶಿವನ ನೆನಪುಗಳನ್ನು ಮಾಡಿಕೊಳ್ಳುವಾಗ ಆ ವಯಸ್ಸಿನಲ್ಲಿ ತನ್ನದೇ ಮನೋಲೋಕವೊಂದಿದೆ, ಸ್ವತಂತ್ರವಾಗಿ ಆಲೋಚನೆ ಮಾಡಬಲ್ಲಳು ಎಂಬುದು ತಿಳಿಯುತ್ತದೆ. ಹೀಗೆ ಇರಬೇಕೆಂಬ ನಿಯಮವನ್ನು ಹೇರಿಕೆಯಾಗಿಸುವ ಮೂಲಕ ಹೆಣ್ಣಿನ ಮನೋಬಲವನ್ನು ಅಡಗಿಸುವ ಪ್ರಯತ್ನಕ್ಕೆ ತೋರುವ ಪ್ರತಿರೋಧವಾಗಿದೆ. ಹೆಣ್ಣಿಗೆ ತನ್ನದೆ ಆದ ಅಸ್ಥಿತ್ವವಿದೆ ಎಂಬ ಅಂಶವನ್ನು ಸಾಬೀತು ಮಾಡುತ್ತಿದೆ. ವಿಧವೆ ಹೀಗೆ ಬದುಕ ಬೇಕಂಬ ನಿಯಮ ಮನುಷ್ಯರು ಮಾಡಿಕೊಂಡಿದ್ದಾಗಿದೆ. ಮೊಮ್ಮಗಳು ತನ್ನ ಗೆಳೆಯನೊಟ್ಟಿಗೆ ಮನೆಗೆ ಬಂದಾಗ ಆಕೆಯ ಸಂಬಂಧವನ್ನು ಸಂದೇಹದಿಂದ ಅನುಮಾನ ವ್ಯಕ್ತಪಡಿಸುವಂತಿದೆ.

ಅ) ಪಿತೃಪ್ರಧಾನ ಮೌಲ್ಯಗಳ ಸಂರಚನೆ :

ಪಿತೃಪ್ರಧಾನ ಸಂರಚನೆ ಸಮಾಜದಲ್ಲಿ ಆರಂಭದಿಂದಲೂ ರೂಢಿಯಲ್ಲಿದೆ. ಮಾತೃವಂಶೀಯತೆ ಪಿತೃವಂಶೀಯತೆ ಎಂದು ಎರಡು ರೀತಿಯಲ್ಲಿ ವಂಶಾವಳಿಯನ್ನು ಗುರುತಿಸುವ ಪದ್ಧತಿ ಇದೆ. ಮಗು ಜನಿಸಿದ ನಂತರ ಮಾತೃವಿನ ಮೂಲಕ ಗುರುತಿಸುವುದು ಅಥವಾ ಪಿತೃವಿನ ಹೆಸರಿನ ಮೂಲಕ ಗುರುತಿಸುವುದು ಭಾರತದಲ್ಲಿ ಎರಡು ಮಾದರಿಯ ಪದ್ಧತಿ ರೂಢಿಯಲ್ಲಿದೆ. ಬಹುತೇಕ ಪಿತೃವಂಶೀಯತೆಯ ಮೂಲಕವೇ ಹುಟ್ಟಿದ ಮಗುವನ್ನು ಗುರುತಿಸುವುದು. ಕರ್ನಾಟಕದಲ್ಲಿ ಪಿತೃವಂಶಾವಳಿ ಪದ್ಧತಿಯೇ ಆಚರಣೆಯಲ್ಲಿದೆ. ಕೇರಳದ ನಾಯರ್ ಜನಾಂಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಜನಾಂಗಗಳಲ್ಲಿ ಇಂದಿಗೂ ಮಾತೃವಂಶೀಯತೆ ಇದೆ. ನಾಯರ್ ಜನಾಂಗದಲ್ಲಿ ಹೆಣ್ಣು ಎಷ್ಟು ಗಂಡುಗಳನ್ನಾದರೂ ಉಪಭೋಗಿಸಬಹುದಾಗಿದ್ದು, ತಂದೆಯ ಇರುವಿಕೆಗೆ ಅಂತಹ ಪ್ರಧಾನ ಸ್ಥಾನವಿಲ್ಲ. ಈ ಮಕ್ಕಳು ತಾಯಿಯ ಪ್ರೇಮಿ ಅಥವಾ ಜನ್ಮದಾತನ ಜೊತೆಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವಂತಹ ಅವಕಾಶಗಳಿರುವುದಿಲ್ಲ, ಮಾತೃ ವಂಶೀಯ ಪದ್ಧತಿಯಲ್ಲಿ ತಂದೆಯ ಸ್ಥಾನ ಗೌಣವಾಗಿದ್ದು,

ಆಸ್ತಿಯ ಒಡೆತನ ಹೆಣ್ಣಿನದೇ ಆಗಿರುತ್ತದೆ ಮಾತೃವಂಶಾವಳಿ ಪದ್ಧತಿ ರೂಢಿಯಲ್ಲಿದ್ದರೂ ಕೇವಲ ಬಾಯಿ ಮಾತಿನಲ್ಲಿ ಮಾತ್ರ ಹೆಣ್ಣು ಕೆಲವು ಸವಲತ್ತುಗಳನ್ನು ಪಡೆಯುತ್ತಿದ್ದಳೇ ಹೊರತು ಪೂರ್ಣ ಅಧಿಕಾರ ಚಲಾಯಿಸುವವನು ಪುರುಷನೇ, ಹೆಣ್ಣಿನ ಭಾವವನ್ನು ನಿಯಂತ್ರಿಸುತ್ತಿದ್ದುದು ಪುರುಷನೇ ಎಂಬುದು ಸಾಹಿತ್ಯದ ಮೂಲಕ ಅರಿವಿಗೆ ಬರುತ್ತದೆ.

ಪಿತೃಪ್ರಧಾನತೆ ಎಂಬುವುದು ಸಮಾಜದಲ್ಲಿ ಎಂದಿನಿಂದಲೂ, ರೂಢಿಯಲ್ಲಿರುವ ಪದ್ಧತಿಯಾಗಿದೆ. ಮಾತೃಪ್ರಧಾನ ಕುಟುಂಬ, ಪಿತೃಪ್ರಧಾನ ಕುಟುಂಬ ಎಂಬ ಎರಡೂ ಪದ್ಧತಿ ಆಚರಣೆಯಲ್ಲಿದೆ. ಕೇರಳದಲ್ಲಿ ಮಾತೃ ಪ್ರಧಾನ ಕುಟುಂಬಕ್ಕೆ ಅವಕಾಶವಿದೆ. "ನಾಯರ್ ಸಮುದಾಯದ ಸ್ತ್ರೀಯರ ಸ್ಥಿತಿಯೂ ಇದೇ ರೀತಿ ಅತ್ಯಂತ ದಯನೀಯವಾಗಿತ್ತು. ಅವರದ್ದು ಹೊರನೋಟಕ್ಕೆ ಮಾತೃಪ್ರಧಾನ ಪದ್ಧತಿಯಾದರೂ ಅಲ್ಲಿ ಸ್ತ್ರೀಯರಿಗೆ ಯಾವ ಪ್ರಾಧಾನ್ಯವೂ ಇರಲಿಲ್ಲ. ನಾಯರ್‌ಗಳು 'ತರವಾಡು' ಎಂಬ ಕೂಡು ಕುಟುಂಬಗಳಲ್ಲಿ ವಾಸಿಸುತ್ತಿದ್ದರು. ತರವಾಡಿನ ಹಿರಿಯ ಗಂಡಸು ಕುಟುಂಬದ ಯಜಮಾನ ಹಾಗೂ ರಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದ ಆತನನ್ನು 'ಕಾರಣವರ್' ಎಂದು ಕರೆಯುತ್ತಿದ್ದರು" (ಮಹಿಳಾ ಸಾಹಿತ್ಯ:161) ಮೇಲ್ನೋಟಕ್ಕೆ 'ಮಾತೃವಂಶಾವಳಿ' ಪದ್ಧತಿ ರೂಢಿಯಲ್ಲಿದ್ದು ಕೇರಳದಲ್ಲೂ ಪಿತೃಪ್ರಧಾನತೆ ಆವರಿಸಿದೆ. "ಮಾತೃಪ್ರಧಾನತೆಯು ಪಿತೃಪ್ರಧಾನತೆಗೆ ಎಡೆಕೊಟ್ಟ ಚಾರಿತ್ರಿಕ ಹಂತವೇ ಹೆಣ್ಣಿನ ಪಾಲಿನ ದೊಡ್ಡ ಸೋಲು ದುರಂತ" (ಹೆಣ್ಣು ಹೆಂಗಸು:25) ಎನ್ನುತ್ತಾನೆ ಏಂಗಲ್ಸ್.

ಮೇಲ್ನೋಟಕ್ಕೆ ಮಾತೃವಂಶಾವಳಿ ಪದ್ಧತಿ ಅನುಸರಣೆಯಲ್ಲಿದ್ದರೂ ಪಿತೃಪ್ರಧಾನ ಬೇರುಗಳು ನಿತ್ಯ ಜೀವನದಲ್ಲಿ ಬೆರೆತಿರುತ್ತದೆ. ಹೆಣ್ಣೆಂದೊಡನೆ ಆಕೆ ಸ್ತ್ರೀವಾದಿಯೆಂದು, ಸ್ತ್ರೀಪರ ನಿಲುವುಗಳಿವೆ ಎಂದು ತೀರ್ಮಾನಿಸಲಾಗುವುದಿಲ್ಲ. ಗಂಡೆಂದೊಡೆ ದೌರ್ಜನ್ಯ ತೋರುವವನೆಂದು ತಿಳಿಯಲಾಗುವುದಿಲ್ಲ. ಹೆಣ್ಣಿಗೆ ಸಹ ಪಿತೃ ಆಲೋಚನಾ ಕ್ರಮ ರೂಢಿಗತವಾಗಿ ಬರಬಹುದು. ಗಂಡೊಬ್ಬನಿಗೆ ಹೆಣ್ಣಿನಂತೆ ಆಲೋಚಿಸುವ ಸಂದರ್ಭವೂ ಬರಬಹುದು. ಹಾಗಾಗಿ ಹೆಣ್ಣು ಮಾತ್ರ ಸ್ತ್ರೀವಾದಿಯೆಂದು, ಪುರುಷ ಸ್ತ್ರೀ ವಿರೋಧಿಯೆಂದು ಹೇಳಲಾಗುವುದಿಲ್ಲ. ಸಾಮಾಜಿಕವಾಗಿ ಪುರುಷ ಹೆಚ್ಚು ಪಾಲ್ಗೊಳ್ಳುತ್ತಿದ್ದರಿಂದ ಪುರುಷನೇ ಸಮಾಜದಲ್ಲಿ ಮುಂದಿನ ಹೆಜ್ಜೆಯನ್ನಿಡಲು ಅನುವಾಯಿತು. ಹೆಣ್ಣು ಪುರುಷನನ್ನು ಅನುಸರಿಸಿ ನಡೆಯುವುದು ಸರ್ವೇ ಸಾಮಾನ್ಯವಾಯಿತು. ಆದರೆ ಸಮಾಜದಲ್ಲಿ ಈ ಅನುಸರಣೆಯು ದಬ್ಬಾಳಿಕೆಯಾಗಿ ಹೆಣ್ಣು ಪಿತೃ ಪ್ರಧಾನಧಾರೆಯ ಸುಳಿಯಲ್ಲಿ ಸಿಲುಕುವಂತಾಗಿದ್ದು, ಸ್ತ್ರೀವಾದದ ಹುಟ್ಟಿಗೆ ಕಾರಣವಾಯಿತು.

"ಪಿತೃ ಸಂಸ್ಕೃತಿಯನ್ನು ಅಂತರ್ಗತಗೊಳಿಸಿಕೊಂಡ ಹಂತ, ಪಿತೃ ಸಂಸ್ಕೃತಿಯನ್ನು ವಿರೋಧಿಸುವ ಹಂತ, ಸ್ವ ಶೋಧನೆಯ ಹಂತ–ಎಂಬ ಮೂರು ಹಂತಗಳಲ್ಲಿ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶಕರು ಗುರುತಿಸುತ್ತಾರೆ. ಈ ಮೂರು ಹಂತಗಳು ಕ್ರಮವಾಗಿ ಸ್ತ್ರೀತ್ವ, ಸ್ತ್ರೀವಾದಿತ್ವ ಹಾಗೂ ಸ್ತ್ರೀಯಾತ್ಮಕತೆಯು ಪ್ರಧಾನವಾದ ಹಂತಗಳೆಂಬ ವಿವರಣೆ ಇದೆ. (ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಪು.ಸಂ. 89) ಪಿತೃ ಸಂಸ್ಕೃತಿಯೆನ್ನುವ ಪರಿಕಲ್ಪನೆ ಹೇರಿಕೆಯಾಗದೆ, ಸ್ತ್ರೀಕೇಂದ್ರಿತ ಅಧ್ಯಯನಕ್ಕೆ ಪೂರಕವಾದ ಸಂದರ್ಭ ಒದಗಿಸುತ್ತದೆ.

ನಿತ್ಯ ಜೀವನದಲ್ಲಿ ಪುರುಷ ಮನೆಯ ಒಡೆಯನಾಗಿ, ತಂದೆಯಾಗಿ, ಅಣ್ಣನಾಗಿ, ಗಂಡನಾಗಿ ಹೀಗೆ ಅಧಿಕಾರಯುತವಾಗಿ ತನ್ನ ನಿಯಂತ್ರಣದಲ್ಲೇ ಕುಟುಂಬ ಮುನ್ನಡೆಯ ಬೇಕೆಂಬುದು ರೂಢಿಗೆ ಬಂತು. ಆರ್ಥಿಕ ಸ್ವಾತಂತ್ರ್ಯವನ್ನು ಪುರುಷ ಗಳಿಸಿಕೊಂಡಿದ್ದರಿಂದ ಇಡೀ ಕುಟುಂಬದ ಹೊಣೆ ಹೊರುವ ನೆಪದಲ್ಲಿ ಅಧಿಕಾರ ಕೇಂದ್ರಿತವಾಗಿ ಸಮಾಜ ನಡೆಯಲು ಪುರುಷನೇ ಪ್ರೇರಕನಾದ. ಹೆಣ್ಣಿಗೆ, ಕಟ್ಟುಪಾಡುಗಳು ಆರಂಭವಾಗುವ ಮೂಲವೇ ಕುಟುಂಬವಾಯಿತು. ವೈಯಕ್ತಿಕ ನೆಲೆಯಲ್ಲಿ ಹೆಣ್ಣನ್ನು ಬಗ್ಗು ಬಡೆಯಲು ಆರಂಭವಾದ ಪುರುಷ ಪ್ರವೃತ್ತಿ ಸಾಮಾಜಿಕವಾಗಿಯೂ ರೂಢಿಗೆ ಬಂದಿತು. ಕಾಲ, ದೇಶಗಳ ಎಲ್ಲೆ ಮೀರಿ ಪುರುಷ ಪ್ರವೃತ್ತಿಯೊಂದು ಇದೆ ಎಂಬುದು ಅಧ್ಯಯನದ ಮೂಲಕ ತಿಳಿದಿದೆ. ತನಗರಿವಿಲ್ಲದೆಯೆ ಹೆಣ್ಣು ಪುರುಷ ದಾಸ್ಯಕ್ಕೆ ಶರಣಾಗತಳಾದಳು. ಹೆಣ್ಣಿನ ಮಾನ, ಪ್ರಾಣ ರಕ್ಷಣೆಯ ಹೊಣೆ ಹೊತ್ತ ಪುರುಷ ತನ್ನ ಸೇವೆಗಾಗಿಯೇ ಹೆಣ್ಣು ಬದುಕಿರುವಳೆಂಬ ಮನೋಭಾವವನ್ನು ತೀರಾ ಸಹಜವಾಗಿ ಬೆಳೆಸಿಕೊಂಡ. ಪ್ರಾಕೃತಿಕ ತೊಂದರೆಗಳಿಂದ ಹೆಣ್ಣನ್ನು ರಕ್ಷಿಸಿ ತನ್ನ ಅಪೇಕ್ಷಣೆಗೆ ತಕ್ಕಂತೆ ಬಳಸಿಕೊಳ್ಳಲು ಮುಂದಾದರು. ತನ್ನದು ಪಶು ಪ್ರವೃತ್ತಿ ಎಂಬ ಅರಿವು ಆತನಿಗಿಲ್ಲದಾಯಿತು. ಅದನ್ನು ತಿಳಿಸಿಕೊಡುವ ಧೈರ್ಯವನ್ನು ಯಾರೂ ಮಾಡಲಿಲ್ಲ. ಆತ ಅನುಸರಿಸಿದ ಹಾದಿಯನ್ನು ತಪ್ಪು, ಸರಿ ನಿಷ್ಕರ್ಷಿಸದೆ ಹೆಣ್ಣು ಅನುಸರಿಸುತ್ತಾ ಹೊರಟಳು. ಆದ್ದರಿಂದ ಪಿತೃ ಪ್ರಧಾನ ನಡವಳಿಕೆಗೆ ಲಿಂಗ ಭೇದದ ಹಂಗಿಲ್ಲ. ವಯಸ್ಸಿನ ಮಿತಿಯಿಲ್ಲ, ಬಡವ ಶ್ರೀಮಂತರೆಂಬ ತಾರತಮ್ಯವಿಲ್ಲ. ಹರಿದ ನೀರು ತಗ್ಗಿದ್ದಲ್ಲಿ ಹರಿಯುವಂತೆ ಎಲ್ಲಿಯವರೆಗೆ ಮೌಢ್ಯ ಆಚರಣೆಗೆ, ಅಂಧಾನುಕರಣೆಗೆ ಅವಕಾಶವಿದೆಯೋ, ಅಲ್ಲಿಯವರೆಗೂ ಪುರುಷ ಆಲೋಚನಾ ಕ್ರಮ ಸರಾಗವಾಗಿ ಹರಿದು ಬರುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಒಳ ಪಡಿಸುತ್ತಿರುವ ಇಬ್ಬರು ಕತೆಗಾರ್ತಿಯರ ಕಥನದಲ್ಲಿ ಪಿತೃಪ್ರಧಾನತೆಯ ಕ್ರೌರ್ಯದ ವಿರುದ್ಧ ಮೂಡಿರುವ ಅಂಶಗಳನ್ನು ಕೆಳಗೆ ಕಂಡಂತೆ ಅಧ್ಯಯನದ ದೃಷ್ಟಿಯಿಂದ ವಿಭಾಗ ಮಾಡಿಕೊಳ್ಳಲಾಗಿದೆ.

- ಪಿತೃಪ್ರಧಾನ ಜಗತ್ತಿನ ಕ್ರೌರ್ಯ
- ಪಿತೃ ಸಂಸ್ಕೃತಿಯಲ್ಲಿ ಕನಲಿರುವ ಪಾತ್ರಗಳು
- ಪಿತೃಪ್ರಧಾನ ನಿಲುವುಗಳಿಗೆ ಕತೆಗಳ ಮೂಲಕ ದಕ್ಕಿರುವ ಪ್ರತಿಕ್ರಿಯೆ.

ಕಥನದ ಮೂಲ ಉದ್ದೇಶವೇ ಪಿತೃ ಜಗತ್ತಿನ ಓರೆ ಕೋರೆಗಳು ಹೆಣ್ಣಿನ ಬದುಕನ್ನು ಹೇಗೆ ನಿಯಂತ್ರಿಸುತ್ತಿದೆ, ಅದರಿಂದ ಹೊರಬಹುದಾದ ಸಂದರ್ಭ ಹೆಣ್ಣಿಗೆ ಲಭ್ಯವಾಗಿರುವುದಾದರೂ ಹೇಗೆ ಎಂಬುದನ್ನು ಈ ಮೂಲಕ ಚರ್ಚಿಸಲಾಗಿದೆ.

ಅ) ಪಿತೃಪ್ರಧಾನ ಜಗತ್ತಿನ ಕ್ರೌರ್ಯ :

ಜಗತ್ತಿನಲ್ಲಿರುವ ಲಿಂಗಪ್ರಭೇದದ ಪರಿಕಲ್ಪನೆಯಲ್ಲಿ ಗಂಡು, ಹೆಣ್ಣೆಂಬ ದೈಹಿಕ ಭಿನ್ನತೆ ಮುಖ್ಯವಾದುದು. ಈ ಭಿನ್ನತೆಯನ್ನು ದೈಹಿಕವಾಗಿ ಮಾತ್ರ ಗುರುತಿಸುವುದಿಲ್ಲ. ಸಾಂಸ್ಕೃತಿಕವಾಗಿ ಹೆಣ್ಣು ಅಧೀನತ್ವದ ಕಲ್ಪನೆಯಲ್ಲಿ ಕನಲುವ ಸಾಕಷ್ಟು ಉದಾಹರಣೆಯನ್ನು ನಿತ್ಯ ಜೀವನದಲ್ಲಿ ಕಾಣುತ್ತೇವೆ. ತನಗರಿವಿಲ್ಲದೆಯೇ ನರಳುವ, ತನ್ನತನವನ್ನೇ ಕಳೆದುಕೊಂಡು ಬದುಕುವ ಕ್ರೌರ್ಯಯುತವಾದ ಪುರುಷ ಸಮಾಜದಲ್ಲಿ ಹೆಣ್ಣು ಬಲಿಪಶುವಾಗುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಪುರುಷ ದೈಹಿಕವಾಗಿ ಬಲದಲ್ಲಿ ಹೆಣ್ಣಿಗಿಂತ ಶಕ್ತನೆಂಬುದು ಆತನ ಅಸ್ತ್ರವಾಗಿರುವುದು ಹೆಣ್ಣನ್ನು ತನ್ನ ಬಿಗಿಮುಷ್ಠಿಯಲ್ಲಿಡುವುದು ಬಹುತೇಕ ಸಂದರ್ಭ. ಮಲಯಾಳಂ ಕಥನದಲ್ಲಿ ಪುರುಷ ಜಗತ್ತಿನ ಕ್ರೌರ್ಯವನ್ನು ಕಮಲಾದಾಸ್‌ರವರು ದಟ್ಟವಾಗಿ ದಾಖಲು ಮಾಡಿದ್ದಾರೆ. ಕನ್ನಡದ ಸಂದರ್ಭದಲ್ಲೂ ಪುರುಷ ವಂಚನೆಗೆ ಬಲಿಯಾದ ಹೆಣ್ಣಿನ ಚಿತ್ರಣಗಳು ಯತಾವತ್ತಾಗಿ ಮೂಡಿ ಬಂದಿರುವುದನ್ನು ಆಧುನಿಕ ಮಹಿಳಾ ಸಾಹಿತ್ಯದ ಆರಂಭ ಹಂತದಿಂದಲೂ ಕಾಣಬಹುದು. ದೈಹಿಕ ಬಲವಷ್ಟೇ ಹೆಣ್ಣಿನ ಸಂಕಷ್ಟಗಳಿಗೆ ಕಾರಣವಲ್ಲ. ಹೆಣ್ಣು ಒಳಗಾಗುವುದು ಕೇವಲ ದೈಹಿಕ ಕ್ರೌರ್ಯಕ್ಕೆ ಮಾತ್ರವಲ್ಲ.

ಪುರುಷ ಕ್ರೌರ್ಯವನ್ನು ಬೆಂಬಲಿಸುವ ಕೆಲವು ಅಂಶಗಳನ್ನು ಹೀಗೆ ಗುರುತಿಸಬಹುದು.

1. ಪರಂಪರೆಯ ರಕ್ಷಣೆ
2. ಆರ್ಥಿಕ ಸ್ವಾತಂತ್ರ್ಯ
3. ಮಾದರಿ ಹೆಣ್ಣಿನ ಕಲ್ಪನೆ

1. **ಪರಂಪರೆಯ ರಕ್ಷಣೆ :**

ಗಂಡಿನ ಎಲ್ಲಾ ಚಿಂತನೆಗಳ ಹಿನ್ನೆಲೆಗಳಿಗೂ ಪರಂಪರಾಗತ ನಂಬಿಕೆಗಳು ಪುಷ್ಠಿ ನೀಡುತ್ತವೆ. ತಾನು ನಡೆದದ್ದೇ ಹಾದಿ ಬಲಹೀನರು ಅದನ್ನು ಅನುಸರಿಸಿ ಸಾಗಬೇಕೆಂಬುದು ಪ್ರಧಾನ ಸಂಸ್ಕೃತಿಯಲ್ಲಿ ನೆಲೆಯೂರಿದೆ. ಪುರುಷ ರೂಪಿಸಿದ ನಿಯಮಗಳು ಕಾಲದಿಂದ ಕಾಲಕ್ಕೆ ವರ್ಗಾವಣೆಯಾಗುತ್ತಾ ಬಂದಿದೆ. ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವುದಕ್ಕಿಂತ ಭಿನ್ನವಾದ ಅನುಭವಗಳು ದೈನಂದಿನ ಜೀವನದಲ್ಲಿ ಮಹಿಳೆಯರು ಎದುರಿಸುತ್ತಿದ್ದಾರೆ. ಕೇವಲ ಬರವಣಿಗೆಯಲ್ಲಿ ಕಾಣಬರುವ ಚಿತ್ರಣಗಳು ಹೆಣ್ಣಿನ ಯಾತನಾಮಯ ಬದುಕು, ಸವಾಲುಗಳನ್ನು ದಾಖಲಿಸುವುದನ್ನು ಅಂತಿಮವೆಂದು ತಿಳಿಯಲಾಗುವುದಿಲ್ಲ. ಬರವಣಿಗೆಯನ್ನು ಮೀರಿದ ಸಂದಿಗ್ಧತೆ ಹೆಣ್ಣಿನ ತಲ್ಲಣಗಳು ನಿತ್ಯ ಜೀವನದಲ್ಲಿ ಆಯಾ ಪ್ರಾದೇಶಿಕ ಸಂದರ್ಭಕ್ಕೆ ಅನುಗುಣವಾಗಿ ಮೂಡಿ ಬಂದಿದೆ.

2. **ಆರ್ಥಿಕ ಸ್ವಾತಂತ್ರ್ಯ :**

ಲೋಕ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡ ಪುರುಷ ಆರಂಭದಿಂದಲೂ ಆರ್ಥಿಕವಾಗಿ ಸ್ವತಂತ್ರ. ಆರಂಭದಿಂದಲೂ ಹೆಣ್ಣು ಆರ್ಥಿಕವಾಗಿ ಅವಲಂಬಿತಳು. ಕೌಟುಂಬಿಕ ಹೊಣೆ ಹೆಣ್ಣಿನ ಮೇಲೆ ಇದ್ದು ಅವಳ ಶ್ರಮ ನಗಣ್ಯವಾಗಿರುತ್ತದೆ. ಈ ಅವಲಂಬನಾ ಮನೋಭಾವ ಹೆಣ್ಣಿನ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸುತ್ತಾ ಅಧೀನ ಸ್ಥಿತಿಯಲ್ಲಿರಿಸುವ ಹಲವು ಉದಾಹರಣೆಗಳನ್ನು ಕಾಣಬಹುದು. ಹೆಣ್ಣಿನ ಬದುಕಿಗೆ ಭದ್ರತೆ ನೀಡುವ ನೆಪದಲ್ಲಿ ಹೆಣ್ಣನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವ ಪ್ರಕ್ರಿಯೆಯ ಆರ್ಥಿಕ ಅವಲಂಬನೆಯು ಬಹುಮುಖ್ಯ ಕಾರಣ. ಆಧುನಿಕತೆ ತಂದ ಬದಲಾವಣೆಯಲ್ಲಿ ಕುಟುಂಬದ ಒಳಗೂ, ಹೊರಗೂ ಪುರುಷ ಜಗತ್ತಿನ ಯಾಜಮಾನ್ಯತೆಯನ್ನು ಅನುಭವಿಸಬೇಕಾದುದು ಇಂದಿನ ಸವಾಲಾಗಿದೆ. ವೀಣಾಶಾಂತೇಶ್ವರ ಮತ್ತು ಕಮಲಾದಾಸ್‌ರವರು ಕತೆಗಳಲ್ಲಿ ಕೌಟುಂಬಿಕ ಹಾಗೂ ಔದ್ಯೋಗಿಕ ಸಂದರ್ಭದಲ್ಲಿ ಎದುರಿಸುತ್ತಿರುವ ಸನ್ನಿವೇಶಗಳನ್ನು ಕತೆಗಳಲ್ಲಿ ಚಿತ್ರಿಸಿದ್ದಾರೆ.

3. **ಮಾದರಿ ಹೆಣ್ಣಿನ ಕಲ್ಪನೆ :**

ಮಾದರಿ ಹೆಣ್ಣಿನ ಕಲ್ಪನೆ ಇಂದಿನದಲ್ಲ. ಹೆಣ್ಣು ಹೀಗೆ ಇರಬೇಕೆಂಬ ನಿಯಮ ಲಿಖಿತ ರೂಪದಲ್ಲಿ ದಾಖಲೆ ಇಲ್ಲದಿದ್ದರೂ ಕಾಲ, ದೇಶಗಳನ್ನು ಮೀರಿದ ಹೆಣ್ಣಿನ ಬಗೆಗಿನ ಕಲ್ಪನೆ, ಮಾದರಿ ರೂಪ, ಪಡಿಯಚ್ಚಿನ ಪಾತ್ರಗಳ ಕಲ್ಪನೆಯನ್ನು ಸಾಹಿತ್ಯದಲ್ಲಿ ಹಾಗೂ ನಿತ್ಯ ಜೀವನದಲ್ಲಿ ಕಾಣಬಹುದು. ಇಂಥಹ ನಂಬಿಕೆಗಳನ್ನು ಮೀರಿದರೆ ಉಂಟಾಗುವ ಪರಿಣಾಮವೂ ಹೆಣ್ಣಿನ ಮೇಲೆ

ಆಗಿರುತ್ತದೆ. ಹೆಣ್ಣಿನ ಮಾದರಿ ಚಿತ್ರಣ ಬದಲಾದರೆ ಸಮಾಜದಲ್ಲಿ ಆ ಬದಲಾವಣೆಯನ್ನೂ ಒಪ್ಪುವುದಿಲ್ಲ. ಬದಲಾವಣೆಯನ್ನು ಬಯಸಿ ಮಾದರಿಯನ್ನೂ ಮೀರಲೂ ಸಾಧ್ಯವಿಲ್ಲದ ಪಿತೃಪ್ರಧಾನ ಚೌಕಟ್ಟಿನಲ್ಲಿರಬೇಕಾದ ಅನಿವಾರ್ಯತೆ ಹೆಣ್ಣಿನ ಸಂದರ್ಭಕ್ಕಿದೆ. ಸ್ವ-ಮರುಕದಲ್ಲೇ ಹೆಣ್ಣು ಕಾಲ ಕಳೆಯಬಹುದಾದ ಸನ್ನಿವೇಶ ಸರ್ವೇಸಾಮಾನ್ಯ ಸಂಗತಿಯಾಗಿದೆ. ಹೆಣ್ಣಿನ ಸಂದರ್ಭವನ್ನು ಸಾಹಿತ್ಯದ ಮೂಲಕ ಚಿತ್ರಿಸುವ, ಅವಳ ಸಂದರ್ಭವನ್ನು ಬದಲಿಸುವ ಹಂಬಲ ಸಾಹಿತ್ಯದ ಮೂಲಕ ಸಾಧ್ಯವಾಗಿದೆ. ಇದಕ್ಕೆ ವೀಣಾ ಹಾಗೂ ಕಮಲಾದಾಸ್‌ರವರ ಕತೆಗಳು ಸಾಕ್ಷಿಯಾಗಿವೆ.

ಕಮಲದಾಸ್‌ರವರ ಕತೆಗಳಲ್ಲಿ ಪಿತೃಪ್ರಧಾನ ಜಗತ್ತಿನ ಕ್ರೌರ್ಯತೆ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಹೆಣ್ಣಿನ ಅಸ್ಥಿತ್ವವನ್ನೇ ಅಲುಗಾಡಿಸುವ ಹೆಣ್ಣಿನ ಅಸ್ಮಿತೆಯನ್ನೆ ಅಳಿಸಿ ಹಾಕುವ, ಪುರುಷ ತನಗೆ ಬೇಕಾದಂತೆ ಹೆಣ್ಣಿನ ಸ್ವರೂಪವನ್ನೇ ತನಗೆ ಬೇಕಾದಂತೆ ಬಳಸಿಕೊಳ್ಳುವ, ಬದಲಿಸಿಕೊಳ್ಳುವ ರೂಪಕ 'ಕಲ್ಯಾಣಿ' ಕತೆ ಮನ ಕಲಕುವಂತಿದೆ. ಗಂಡನನ್ನು ಆಫೀಸಿಗೆ ಬಿಟ್ಟು ಬರುತ್ತಿದ್ದ ಅಮ್ಮಿಣಿಯನ್ನು ಪೊಲೀಸ್ ವೇಷ ಧರಿಸಿದ ಐದಾರು ಮಂದಿ ಪುರುಷರು ಕಾರಿಗೆ ಅಡ್ಡಗಟ್ಟಿ ಆಕೆಯನ್ನು ಕೆಂಪುಗೋಡೆಗಳ ಎರಡಂತಸ್ತಿನ ಕಟ್ಟಡದ ಮುಂದೆ ನಿಲ್ಲಿಸಿದರು. ಯಾವುದೇ ತಪ್ಪಿಲ್ಲದೆ ಅಮ್ಮಿಣಿ ದುಷ್ಟರ ಕೈಗೆ ಸೆರೆಯಾದಳು. ಸ್ಥೂಲಕಾಯದ ಕುಳ್ಳಗಿನ ಮಧ್ಯವಯಸ್ಕನೊಬ್ಬ ಆಕೆಯನ್ನು 'ಕಲ್ಯಾಣಿ' ಎಂದು ಸಂಭೋದಿಸಿದ. ಇವಳಿಗೆ ಮೂರು ತಿಂಗಳು ಕಠಿನ ಸಜೆ ಎಂದು ಕಿಟಕಿ ಇಲ್ಲದ ಕತ್ತಲೆ ಕೋಣೆಯಲ್ಲಿ ದೂಕಿ ಬಟ್ಟೆಗಳನ್ನು ಕಳಚಿಕೊಡಲು ಕೇಳಿ ಯೂನಿಫಾರಂ ಕೊಡುವುದಾಗಿ ಹೇಳಿದ. ಆಕೆ ಸಾಧ್ಯವಿಲ್ಲವೆಂದು ಹೇಳಿದಾಗ ಯಾವಾಗಿನಿಂದ ಈ ನಾಚಿಕೆ ನಿನಗೆ ಕಲ್ಯಾಣಿ ಎಂದು ಕೇಳಿದರು. ಅವಳು ನಾನು ಅಮ್ಮಿಣಿ, ಮಿ॥ ಮೆನನ್‌ರವರ ಪತ್ನಿ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ಸ್ವಲ್ಪ ಸಮಯದ ನಂತರ ಬಾಗಿಲು ತೆರೆಯುವ ಸದ್ದು ಕೇಳಿ ವಿದ್ಯುತ್ ದೀಪದ ಬೆಳಕು ಹರಿವಷ್ಟರಲ್ಲಿ ಅಮ್ಮಿಣಿ ನೀನು ಹೀಗೆ ಮಾಡ್ತಿಯಾ ಅಂದುಕೊಂಡಿರಲಿಲ್ಲ, ಎಂದಾಗ ಗಂಡನನ್ನು ಕಂಡು ಸಂತೋಷ ಪಟ್ಟರೂ ಆಕೆಗೆ ವೇಶ್ಯೆಯ ಪಟ್ಟ ಕಟ್ಟಿ ಗಂಡ ಹೊರಟು ಹೋದ, ಬಾಸ್ ಎಂದು ಪರಿಚಯಿಸಲ್ಪಟ್ಟ ವ್ಯಕ್ತಿ ಬಂದು ನಿನ್ನ ಗಂಡ ಎಂದು ಹೇಳಿದ ವ್ಯಕ್ತಿ ಹೇಗೆ ಹೊರಟು ಹೋದ ನೋಡಿದೆಯಾ? ಕಲ್ಯಾಣಿ ಎಂದಾಗ ನಾನು ಕಲ್ಯಾಣಿಯಲ್ಲ ಅಮ್ಮಿಣಿ ಎಂದು ಹೇಳಿದಳು. "ಹಾವುಗಳು ಪೊರೆ ಕಳಚುವಷ್ಟರಲ್ಲಿ ಅನಾಯಾಸವಾಗಿ ಆಕೆ ಅಮ್ಮಿಣಿ ಎಂಬ ಹೆಸರನ್ನು ತ್ಯಜಿಸಿ 'ಕಲ್ಯಾಣಿ' ಆಗಿಬಿಟ್ಟಿದ್ದಳು." (ನಡೆದದ್ದೇ ದಾರಿ:239) ಪುರುಷ ಜಗತ್ತು ತನಗೆ ಬೇಕಾದಂತೆ ಹೆಣ್ಣಿನ ಅಸ್ಥಿತ್ವವನ್ನು ಬದಲಿಸಿ ಬಿಡುತ್ತದೆ. ರಕ್ಷಣೆಯ ಹೊಣೆ ಹೊತ್ತ ಗಂಡಸು ತನಗೆ ಬೇಕಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ.

ಅಮ್ಮಿಣಿಯನ್ನು ಕಲ್ಯಾಣಿಯನ್ನಾಗಿ ಬದಲಿಸಿದ ರೀತಿ ಹೆಣ್ಣಿನ ಸ್ವರೂಪವನ್ನು ಬದಲಿಸಿದ ಪುರುಷ ಲೋಕದ ಕ್ರೌರ್ಯವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಶಕ್ತರೂಪಕವಾಗಿ ಪರಿಚಿತವಾಗುತ್ತದೆ.

'ವೀಣಾ ಶಾಂತೇಶ್ವರ ಅವರ 'ಅನಾಥೆ' ಕತೆ ಇಂದಿಗೂ ಎಂದಿಗೂ ನಮ್ಮ ಸಮಾಜಕ್ಕೆ ಪ್ರಸ್ತುತ. ಅಂತೆಯೇ ಪುರುಷ ಸಮಾಜದ ರಕ್ಷಣೆಯ ಸಂದರ್ಭ ಸಂಪೂರ್ಣ ನಂಬುಗೆಗೆ **ಅರ್ಹ**ವಾದುದಲ್ಲ. ಅನಾಥಶ್ರಮದಲ್ಲಿ ಸವಲತ್ತು ನೀಡುವುದಾಗಿ ಕಂಡು ಬಂದರೂ ಕಮಲಮ್ಮನ ರಾತ್ರಿಯ ರೌಂಡ್ಸ್‌ನಲ್ಲಿ ಯಾರನ್ನು ಎಳೆದು ಹೋಗುವಳೋ ಎಂಬ ಭಯ ಎಲ್ಲಾ ವಯಸ್ಕ ಹೆಣ್ಣು ಮಕ್ಕಳನ್ನು ಕಾಡುತ್ತಿತ್ತು.

ಒಂದು ದಿನ ಭಗಿನಿ ಸೇವಾ ಸಮಾಜದ ವಾರ್ಷಿಕೋತ್ಸವಕ್ಕೆ ರಾಜ್ಯ ಸಮಾಜ ಕಲ್ಯಾಣ ಶಾಖೆಯ ಮುಖ್ಯ ಅಧಿಕಾರಿಯೊಬ್ಬರು ಬಂದರು. 'ಹೆಣ್ಣಿಗೆ ಮನುವಿನ ಕಾಲದಿಂದಲೂ ಆಗಿರುವ ಅನ್ಯಾಯದ ಬಗ್ಗೆ ಮಾತನಾಡುತ್ತಾ ಹೆಣ್ಣು ಅನಾಥೆಯಲ್ಲ, ಮಾತೆ, ಶಕ್ತಿ ಸ್ವರೂಪಿಣಿ ಎಂದು ಹೇಳುತ್ತಾ ದೇಶದ ನೈತಿಕ ಬಲ ಮಹಿಳೆಯರಿಂದಲೇ ಉಳಿಯಬೇಕೆಂದು ಭಾಷಣ ಬಿಗಿದ ವ್ಯಕ್ತಿ ರಾತ್ರಿ ಆಶ್ರಮದಲ್ಲಿ ಅತಿಥಿಯ ಆತಿಥ್ಯ ದೊರಕಿತು. ಶಿವರಾಮರೆಡ್ಡಿ "ಕಮಲಿ ಇನ್ನು ಮೇಲೆ ಈ ಹುಡುಗಿಯರನ್ನು ಒಂದು ದಂ ಮೊದಲು ನಾನು ಟೇಸ್ಟ್ ಮಾಡಿ ಸಾಧು ಮಾಡಿ ನಂತರವೇ ಗೆಸ್ಟ್ ರೂಮ್ ಡ್ಯೂಟಿಗೆ ಕಳಿಸಬೇಕು ನೋಡು ಇಲ್ಲವಾದರೆ ಸಮಾಜದ ಮರ್ಯಾದೆ ತೆಗೆದಾರು' ಎಂದಾಗ ಕಮಲಮ್ಮನ ನಗು ಗಂಡಸಿನ ನಗುವಿನಂತೆ ಕೇಳಿತು." (ನಡೆದದ್ದೇ ದಾರಿ:439) ಹೆಣ್ಣಿನ ಸ್ವರೂಪವಿದ್ದರೆ ಆಕೆ ಸ್ತ್ರೀಪರವಾಗಿಯೇ ಇರುತ್ತಾಳೆಂದೇನೂ ಅಲ್ಲ, ಹೆಣ್ಣನ್ನು ಶಾಶ್ವತವಾಗಿ 'ಅನಾಥ' ವಾಗಿಸುವ ಪ್ರವೃತ್ತಿ ಸಮಾಜದ್ದಾಗಿದೆ. ಆ ಪ್ರಾಬಲ್ಯದ ಹಿಂದಿರುವರು ಪುರುಷರು.

ಸಮಾಜದಲ್ಲಿ ಹೆಣ್ಣಿಗೆ ರಕ್ಷಣೆಯಿಲ್ಲ. ಮೇಲ್ನೋಟಕ್ಕೆ ಹೆಣ್ಣಿಗೆ ರಕ್ಷಣೆ ದೊರೆವಂತೆ ನಟಿಸಿ ಅಮಾನವೀಯವಾಗಿ ನಡೆಸಿಕೊಳ್ಳುವ ಪುರುಷ ಸಮಾಜದ ಕುತಂತ್ರಗಳನ್ನು ಆಕ್ರೋಶವಿಲ್ಲದೆ ಬಯಲಿಗೆಳೆಯುವ ಪ್ರಯತ್ನ ಮಾಡಿದ್ದಾರೆ. ತನ್ನತನವೇ ಕಳೆದುಕೊಂಡು ದಿಕ್ಕೇ ತೋಚದೆ ಮುರುಟಿ ಹೋಗುವ ಎಷ್ಟೋ ಹೆಣ್ಣಿನ ಭವಿಷ್ಯ ಕುರಿತು ಇವರ ಕಥನದ ಮೂಲಕ ವ್ಯಕ್ತಗೊಂಡಿದೆ.

ಕಮಲಾದಾಸ್‌ರವರ 'ಸ್ವಯಂವರ' ಕತೆಯಲ್ಲಿ ಆವಂತಿ ರಾಜಕುಮಾರಿ ಎಂಬ ಭ್ರಮೆಯಲ್ಲಿದ್ದ ಹುಚ್ಚಿ ಮುದುಕಿಗೆ ಮಾಸಲು ಬಟ್ಟೆ ಧರಿಸಿದ ಪೋಲಿ ಹುಡುಗರು ನಾವುಗಳು ಕೇರಳ ಚಕ್ರವರ್ತಿ ಎಂದೂ ತಮ್ಮನ್ನು ವರಿಸಲು ಬಂದಿದ್ದೇವೆ ಎಂದು ವಂಚಿಸಿ, ನಿರ್ಜನ ಉದ್ಯಾನವನದಲ್ಲಿ ಆಕೆಯನ್ನು ಹಿಂಸಿಸಿದರು. ಆಕೆಯ ಉಸಿರು ನಿಂತಿತ್ತು.

'ಹೊಸ ರೇಖೆ' ಕಥೆಯ ಪಳನಿಸ್ವಾಮಿ ಹಸ್ತರೇಖೆಯನ್ನು ನೋಡಿ ಭವಿಷ್ಯ ಹೇಳುವೆನೆಂದು ಶಾಂತ ಚಿತ್ತದಿಂದ ನುಡಿದು ಎಳನೀರಿನ ಮಚ್ಚೊಂದನ್ನು ತೆಗೆದುಕೊಂಡು ಹೊಸ ರೇಖೆ ಸುಳ್ಳಾಗಬಾರದು, ಶಾಸ್ತ್ರ ಭವಿಷ್ಯಗಳು ಫಲಿಸದಿರುತ್ತದೆಯೇ ಎಂದು ತನ್ನ ಎರಡು ಕೈಗಳನ್ನು ಮೇಲೆತ್ತಿದ. ಪುರುಷ ದೌರ್ಜನ್ಯ ಮೇರೆ ಮೀರಿದ ನಡವಳಿಕೆ ಕತೆಯ ಮೂಲಕ ವ್ಯಕ್ತವಾಗಿದೆ.

ಒಂದಲ್ಲಾ ಒಂದು ರೀತಿಯಲ್ಲಿ ದೈಹಿಕವಾಗಿ, ಮಾನಸಿಕವಾಗಿ ಪುರುಷನಿಂದ ಹಿಂಸೆಗೆ ಗುರಿಯಾಗುವ ಸ್ತ್ರೀಯರ ಪರವಾಗಿ ಕತೆಗಾರ್ತಿಯರು ಧ್ವನಿಯೆತ್ತಿರುವುದು ಕಾಣಬರುತ್ತದೆ. ಪುರುಷ ತನಗೆ ಬೇಕಾದಂತೆ ನಡೆಯುವುದು ಎಂಬ ಅಂಶ ಕತೆಗಳ ಮೂಲಕ ಉದಾಹರಿಸಬಹುದು. ವೀಣಾಶಾಂತೇಶ್ವರ ಅವರ 'ಕೊನೆಯ ದಾರಿ' ಕತೆಯಲ್ಲಿ ಬರುವ ಲಿಲಿ ಬಾಸ್‌ನ ಕುತಂತ್ರಕ್ಕೆ ಮಣಿಯದೆ ಕೆಲಸಕ್ಕೆ ರಾಜಿನಾಮೆ ನೀಡಿ ಹೊರಡುತ್ತಾಳೆ. 'ಗಂಡಸರು' ಕಾದಂಬರಿಯ 'ಶಾಂತಿ'ಯ ಮೂಲಕ ಸ್ವಾರ್ಥ ಕಾಮುಕರು ಪರಿಚಿತರಾಗುತ್ತಾರೆ. ಹೆಣ್ಣು ಗಂಡಿಗೆ ಎಲ್ಲಾ ರೀತಿಯಲ್ಲೂ ವಿಧೇಯಳಾಗಿಯೇ ಇರಬೇಕು ಎನ್ನುವ ಒತ್ತಾಯ ವ್ಯವಸ್ಥೆಯಲ್ಲಿ ಹೇರಲ್ಪಟ್ಟಿರುತ್ತದೆ. ಪುರುಷನೆದುರು ಹೆಣ್ಣು ಯಾವುದೇ ಪ್ರಶ್ನೆ ಮಾಡುವಂತಿಲ್ಲ. ಆತನ ದಾಸಿಯಾಗಿದ್ದಾಗ ಮಾತ್ರ ಪುರುಷರು ಸಂತೃಪ್ತರಾಗಿರುತ್ತಾರೆ ಎಂಬುದು ಕತೆಗಾರ್ತಿಯರ ನಿಲುವು. ಈ ಅಸಹನೀಯ ಸಂಗತಿಗಳು ಕತೆಗಳಲ್ಲಿ ಪುನರಾವರ್ತಿಸುತ್ತವೆ.

ಸಮಾಜದಲ್ಲಿ ಪುರುಷ ನಿರ್ಣಾಯಕ ಪಾತ್ರವಹಿಸುತ್ತಾನೆ. ಹೆಣ್ಣಿನ ಸಹಜ ಆಸೆಗಳನ್ನು, ಸಣ್ಣ ಪುಟ್ಟ ಬಯಕೆಗಳನ್ನು ಹಿಡಿತದಲ್ಲಿಡುವಲ್ಲಿ ಆತ ತನ್ನ ತೀರ್ಮಾನವೇ ಅಂತಿಮ ಎನ್ನುತ್ತಾನೆ. ಕಮಲಾದಾಸ್‌ರವರ 'ಬಳೆಗಳು' ಎಂಬ ಕತೆಯಲ್ಲಿ ಮಧ್ಯಾಹ್ನದ ಬಿಸಿಲಿನ ಸಂದರ್ಭದಲ್ಲಿ ತಲೆಯ ಮೇಲೆ ಭಾರದ ಪೆಟ್ಟಿಗೆಯನ್ನು ಹೊತ್ತು ಬಂದ ಬಳೆಗಾರ. ಬಾಯಾರಿಕೆಯಿಂದ ಅಲ್ಲಿದ್ದವರ ಬಳಿ ನೀರು ಕೇಳಿದ. ಅಂಗಳದ ಬಾವಿಯಿಂದ ಅಡುಗೆಯವರು ನೀರು ಸೇದಿ ಹಾಕಿದ. ಅಂಗಳದ ಒಂದು ಬದಿಯಲ್ಲಿ ಯುವತಿಯೊಬ್ಬಳು ಮಲಗಿದ್ದವಳು ಎಚ್ಚರಗೊಂಡಳು. ಅವಳನ್ನು ಕಂಡು ಇಲ್ಲಿ ಯಾರಿಗಾದರೂ ಬಳೆ ಬೇಕೆ ಎಂದು ಕೇಳಿದ್ದಕ್ಕೆ ಆಕೆ ಸಂಕೋಚದಿಂದ ಪ್ರತಿಕ್ರಿಯೆ ನೀಡಿ ನನ್ನ ಬಳಿ ಕಾಸಿಲ್ಲವೆಂದು ಹೇಳಿದಳು. ಅಡುಗೆಯವನು ಇವರ ಸಂಭಾಷಣೆಯನ್ನು ಗಮನಿಸುತ್ತಿದ್ದನು. ಕಡೆಗೊಮ್ಮೆ ಕೆಲಸದಾಕೆ 'ದೇವಕೀ' ಯನ್ನು ಗದರಿ ಒಳಗಟ್ಟಿದನು. ಬಳೆತೊಡುವ ಆಸೆ ದೇವಕಿಗಿತ್ತೋ ಇಲ್ಲವೋ ಆದರೆ ಆಸೆಯನ್ನು ತಡೆ ಹಿಡಿದವನು ಅಡಿಗೆಯವನು. ಬಳೆಗಾರನ ಮನಸ್ಸಿನಲ್ಲೇನಿತ್ತೋ ಅದು ನಿಗೂಢ, ನಿರಾಶಾಭಾವವನ್ನು

ಅನುಭವಿಸಿದವಳು ಮಾತ್ರ ದೇವಕೀ. ಪುರುಷ ವರ್ತನೆಗಳಿಗೆ ಬಲಿಯಾಗುವ ಹೆಣ್ಣು ಮಾನಸಿಕವಾಗಿ ವೇದನೆಯನ್ನು ಅನುಭವಿಸಬೇಕಾಗುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ವೀಣಾಶಾಂತೇಶ್ವರ ಅವರ 'ಸೋನಿಯಾ' ಎಂಬ ಕತೆಯು ಪುರುಷ ನಿರ್ಮಿತ ಚೌಕಟ್ಟಿಗೆ ಬದ್ಧರಾಗಿರುವ ಕುಟುಂಬದ ಕತೆ. "A little boy is a little boy, but a little girl is a little mother" (ನಡೆದದ್ದೇ ದಾರಿ:441) ಎಂಬುದು ಅಕ್ಷರಶಃ ಸತ್ಯ ಮಾಡುವುದಕ್ಕೆ ಸಮಾಜದಲ್ಲಿ ಸಾಕಷ್ಟು ಉದಾಹರಣೆ ಇದೆ. ಸೋನಿಯಾ ತುಂಬಾ ಜಾಣ ಹುಡುಗಿ, ತುಂಟ ಹುಡುಗಿ, ಗೆಳತಿ ಮಿಲಿಯ ಕಣ್ಣುಗಳಿಂದ ಸೋನಿಯಾ ಜೀವನ ಚಿತ್ರಣ ನಮಗೆ ಸಿಗುತ್ತದೆ. ಒಂಬತ್ತನೆ ತರಗತಿ ಮುಗಿಸಿದ್ದ ಸೋನಿಯಾಗೆ ಮದುವೆ ಮುಗಿದಿತ್ತು. ಮಿಲಿ ಸೋತ ದನಿಯಲ್ಲಿ "ಅಮ್ಮಾ, ಸೋನಿಯಾಳ ಮದುವಿ ಮಾಡಿಬಿಟ್ಟಾರಮ್ಮಾ..." (ನಡೆದದ್ದೇ ದಾರಿ:441) ಎಂದು ಹೇಳಿದಳು ಆ ಮಾತು "ಸೋನಿಯಾಳನ್ನು ಗಲ್ಲಿಗೆ ಏರಿಸಿಬಿಟ್ಟಾರಮ್ಮಾ" (ನಡೆದದ್ದೇ ದಾರಿ:441) 'ಅನ್ನುವ ಧಾಟಿಯಲ್ಲಿ ಕೇಳಿ ಬಂತು. ಸಂಪ್ರದಾಯಕ್ಕೆ ಕಟ್ಟು ಬಿದ್ದು ಮೆಜಾರಿಟಿಗೆ ಬರದ ಸೋನಿಯಾಳಿಗೆ ಮದುವೆ ಆಗಿತ್ತು. ಮಿಲಿ ಮತ್ತು ಸೋನಿಯಾ ಡಾಕ್ಟರ್ ಆಗಿ ದೇಶ ಸೇವೆ ಮಾಡಬಯಸಿದ್ರು. ಮಿಲಿಯ ತಾಯಿ 'ಸರಸಿಯ ಗೊಂಬೆ' ಮಾಸ್ತಿಯವರ ಕತೆಯನ್ನು ನೆನೆದರು. ವ್ಯಕ್ತಿತ್ವ ನಿರ್ಮಾಣದಲ್ಲಿ ಹಿರಿಯರ ಪಾತ್ರ ಬಹು ಮುಖ್ಯ. ಆಚಾರ, ವಿಚಾರ, ಸಂಪ್ರದಾಯದ ಹೆಸರಿನಲ್ಲಿ ಹೆಣ್ಣಿನ ಸಾಮರ್ಥ್ಯವನ್ನೇ ಅಳಿಸಿ ಹಾಕುವ, ಕೌಟುಂಬಿಕ ಬದುಕೆ ಅಂತಿಮ ಎಂಬ ತೀರ್ಮಾನಕ್ಕೆ ಬರುವಂತೆ ಮಾಡುವ ರೂಢಿ ಸಮಾಜದಲ್ಲಿದೆ. ಆಧುನಿಕತೆಯ ಭರಾಟೆಯಲ್ಲಿದ್ದರೂ ಹೆಣ್ಣಿನ ಸ್ಥಿತಿ ಸುಧಾರಣೆಯಾಗದ ಸಂದರ್ಭವನ್ನು ಈ ಕತೆ ತಿಳಿಸುತ್ತಿದೆ. ಓದ ಬಯಸಿದ ಸೋನಿಯಾ ಬಾಳು ದಿಕ್ಕು ತಪ್ಪಿರುತ್ತದೆ.

ಹೆಣ್ಣನ್ನು ತನಗೆ ಬೇಕಾದಂತೆ ನಡೆಸಿಕೊಳ್ಳುವ, ಮಾನ, ಪ್ರಾಣ ರಕ್ಷಣೆ ನೀಡುವ ಹುಸಿ ಭರವಸೆಯಲ್ಲಿ, ದೈಹಿಕವಾಗಿ ಹಿಂಸಿಸುವ, ಆಕೆಯ ಸಣ್ಣ ಪುಟ್ಟ ಆಸೆಯನ್ನು ಹೊಸಕಿ ಹಾಕುವ, ಎಷ್ಟೋ ಬಾರಿ ಪಶು ಪ್ರವೃತ್ತಿಯಿಂದ ವರ್ತಿಸುವ ಸಮಾಜದ ಅಮಾನವೀಯ ಕೃತ್ಯಗಳಿಗೆ ಕತೆಗಳು ಸಾಕ್ಷಿಯಾಗಿವೆ. ಸಮಾಜದ ಸಂರಚನೆಯಲ್ಲಿ ಆರಂಭದಿಂದಲೂ ಬೆರೆತ ಪಿತೃ ಪ್ರಧಾನ ಎಳೆಗಳು ಹೆಣ್ಣಿನ ಬದುಕಿಗೆ ಅಡೆತಡೆಯೊಡ್ಡುತ್ತಿದೆ.

ಪಿತೃ ಸಂಸ್ಕೃತಿಯಲ್ಲಿ ಕನಲಿರುವ ಸ್ತ್ರೀ ಪಾತ್ರಗಳು :

"ಪಿತೃಸಂಸ್ಕೃತಿಯ ವ್ಯಾಪಕವಾದ ಅಧಿಕಾರ ರಚನೆಯ ಒಳಗಿನ ಹೆಣ್ಣು ಎಂದರೆ ಗಂಡಿನ 'ನಿರೀಕ್ಷಿತ' ಗಂಡಿನ ನೋಟದ, ಗಂಡಿನ ಕಣ್‌ನೆಲೆಯ (Perspective) ಗಂಡಿನ 'ಆದರ್ಶ'

ಪ್ರಾಯವಸ್ತು. ಅಂದ ಹಾಗೆ 'ಆದರ್ಶ' ಎಂದರೆ ಕನ್ನಡಿಯ ಎಂಬ ಅರ್ಥವೂ ಉಂಟಲ್ಲ. ಈ ಕನ್ನಡಿಯೊಳಗಿನ ಬಿಂಬ ಗಂಡಿನದು, ಬಿಂಬಿಸುವ ಕನ್ನಡಿ ಹೆಣ್ಣು. (ನಡುವೆ ಸುಳಿವ ಆತ್ಮ:13) ಎಂದು ಡಾ.ಬಿ.ಎನ್.ಸುಮಿತ್ರಾಬಾಯಿರವರು ಪಿತೃಸಂಸ್ಕೃತಿಯನ್ನು ನಿರ್ವಚಿಸುತ್ತಾರೆ. 'ಕಮಲಾದಾಸ್' ರವರ ಕತೆಗಳಲ್ಲಿ ಪುರುಷನ ಧ್ವಂಸ ಪ್ರವೃತ್ತಿಯ ಚಿತ್ರಣ ದಟ್ಟವಾಗಿ ಮೂಡಿ ಬಂದಿದೆ. ಹೆಂಡತಿಯನ್ನು ಕೊಲ್ಲಲು ಮುಂದಾಗುವ ಗಂಡ, ಆತನಿಗೆ ಹೆದರಿ ಹಿತ್ತಲಲ್ಲಿ ಕುಳಿತಿರುವ ಹೆಂಡತಿ, ಒಂಟಿಯಾಗಿ ಮನೆಯಲ್ಲಿದ್ದ ಹೆಣ್ಣನ್ನು ಹಿಂಸಿಸುವ ಕೃತ್ಯ, ತಂಗಿಯೊಬ್ಬಳನ್ನು ತನ್ನ ಸುಖಕ್ಕಾಗಿ ಮಾರಾಟ ಮಾಡುವ ಅಣ್ಣ, ಸಾವಿನ ಹಾಸಿಗೆ ಹಿಡಿದು ಮಲಗಿರುವ ಹೆಂಡತಿಗೆ ಮಗುವಿನ ಮುಖ ತೋರಿಸದೆ ವಾರ ಪತ್ರಿಕೆಯನ್ನು ಓದುತ್ತಿರುವ ಗಂಡ, ಈ ಕಠೋರ ವರ್ತನೆಗಳು ಬಹುತೇಕ ಸಾಧ್ಯಗೊಳ್ಳುವುದು ಪುರುಷನಿಂದಲೇ, ಎಂದು ತಿಳಿದಿರುವ ಹೆಣ್ಣು ಭಾವುಕಳಾಗಿ ಅಗಲಿಕೆಯ ನೋವನ್ನು ಸಹಿಸದೆ ಕೊರಗುತ್ತಾಳೆ. ನೋವಿಗೆ, ಕಷ್ಟಕ್ಕೆ ಮಿಡಿಯುವಳು ಹೆಣ್ಣು ಎಂಬುದು ಕತೆಗಳ ಮೂಲಕ ತಿಳಿಯುತ್ತದೆ.

'ಹುಲಿಬೇಟೆ' ಎಂಬ ಕತೆಯಲ್ಲಿ 'ರುಕ್ಮಾಬಾಯಿ' ಎಂಬ ಹೆಣ್ಣು ಮಗಳು ತನ್ನ ಸೋದರನ ನಿರೀಕ್ಷೆಯಲ್ಲಿ ಕಾದು ಕುಳಿತಿರುವಾಗ ಟೊಪ್ಪಿ ಧರಿಸಿದ ಮೂವರು ದಾಂಡಿಗರು ಗುಡಿಸಲನ್ನು ಪ್ರವೇಶಿಸಿ 'ಎಲ್ಲಿ ಹುಲಿ?' ಎಂದು ಕೂಗಾಡಿದರು. ಅವರು ಹುಡುಕಿಕೊಂಡು ಬಂದಿದ್ದು ಆಕೆಯ ಅಣ್ಣ ತುಕರಾಂನನ್ನು ವ್ಯವಸ್ಥೆಯ ವಿರುದ್ಧ ದನಿ ಎತ್ತುವ ಅರ್ಹತೆ ಯಾರಿಗೂ ಇಲ್ಲ. ಕವಿತೆ ಬರೆಯುವ ಹಾಡುವ ತನಗನಿಸಿದ್ದನ್ನು ತಿಳಿಸುವ ಸ್ವಾತಂತ್ರ್ಯವೂ ಸಮಾಜದಲ್ಲಿರಲಿಲ್ಲ. ತುಕರಾಂ ಮಾಡದ ತಪ್ಪಿಗೆ ಸೋದರಿಗೆ ಶಿಕ್ಷೆ. ರುಕ್ಮಾಬಾಯಿ ಕವಿತೆ ಬರೆದು ಹಾಡುವುದು ತಪ್ಪೇನು? ಎಂದು ಪ್ರಶ್ನಿಸಿದಳು. ಪುರುಷರು ಪ್ರಶ್ನಾತೀತರು. ಅವಳ ಮಾತನ್ನು ಕೇಳಿ ಕೋಪಗೊಂಡ ಆಗಂತುಕರು ಆಕೆಯನ್ನು ಲೈಂಗಿಕ ಚೇಷ್ಟೆಯ ಮೂಲಕ ಹಿಂಸಿಸಿದರು. ಅವರ ಕೂಗಾಟವನ್ನು ಕೇಳಿ ಪೊಲೀಸಿನವನು ಅಲ್ಲಿಗೆ ಬಂದರೂ ಅಟ್ಟಹಾಸದ ನಗೆ ಬೀರುತ್ತಾ ನಿಂತರು. ಈ ಕೃತ್ಯದಿಂದ ನೊಂದವಳು ಮಾತ್ರ ರುಕ್ಮಾಬಾಯಿ. ಹೊಸರೇಖೆ ಕತೆಯ 'ಪಳನಿಸ್ವಾಮಿ; ಕೂಡ ಒಂಟಿಯಾಗಿದ್ದ ಮಿಸಸ್ ಮೆನನ್‌ರವರಿಗೆ ಇಷ್ಟೆಲ್ಲಾ ಒಡವೆಗಳನ್ನು ತೊಟ್ಟಿದ್ದೀರಿ, ಒಂಟಿಯಾಗಿದ್ದೀರಿ ಎಂದಾಗ ಆಕೆ ಭಯಭೀತಳಾಗಿ ಮನೆಯ ಎಲ್ಲಾ ಕಿಟಕಿ ಬಾಗಿಲುಗಳನ್ನು ಮುಚ್ಚಿ ಬಂದಳು. ಹಸ್ತರೇಖಾತಜ್ಞ ಪಳನಿ ಸ್ವಾಮಿ ನಿಮಗೆ 'ದುರ್ಮರಣ'ವೆಂದು ಮೃದುವಾಗಿ ಹೇಳಿ, ತಾನೇ ಹಿತ್ತಲು ಬಾಗಿಲನ್ನು ಬೀಗ ಹಾಕಿ ಕಿಟಕಿಗಳನ್ನು ಮುಚ್ಚಿ ಆಕೆಯನ್ನು ಎಳನೀರಿನ ಮಚ್ಚಿನಲ್ಲಿ ಕೊಚ್ಚಲು ಮುಂದಾದನು. ಹಿಂಸೆ ಅನುಭವಿಸಲಿಕ್ಕೆಂದೆ ಭೂಮಿಯ ಮೇಲೆ ಹೆಣ್ಣು ಜನ್ಮ ತಳೆದಿರುವಳೇನೋ ಎಂದು ಶಪಿಸುವಂತೆ ಕತೆ ಮೂಡಿ ಬಂದಿದೆ.

'ವೇಲಾಯುಧನ ಹೆಂಡತಿ' ಕತೆಯಲ್ಲಿ ನೆಮ್ಮದಿಯಿಲ್ಲದೆ ನರಳುವ ಹೆಂಡತಿ, ಕುಟ್ಟಿಪೆಣ್ ವೇಲಾಯುಧನ ಹೆಂಡತಿ. ಮದುವೆಯಲ್ಲಿ ನೆಮ್ಮದಿ ಇಲ್ಲದೆ ಹೋದವನು. ವೇಲಾಯುಧನಿಗೂ ಕುಟ್ಟಿಪೆಣ್‌ಗೂ ವಯಸ್ಸಿನ ಅಂತರ ಹೆಚ್ಚಾಗಿತ್ತು. ಕೊಟ್ಟಿಗೆಯಾಚೆ ನೆಮ್ಮದಿಯನ್ನು ಕಳೆದುಕೊಂಡ ಕುಟ್ಟಿಪೆಣ್ ಒಂಟಿಯಾಗಿ ಕುಳಿತಿದ್ದಳು. ಜೊತೆಗಾತಿ ನಾನು ನಿನ್ನ ವಯಸ್ಸಿನವಳೇ ನನಗೂ ಮದುವೆ ವಯಸ್ಸು ಆಗಿರಬೇಕು ಎಂದುಕೊಂಡದಕ್ಕೆ "ಮದುವೇನೇ ಆಗಬಾರದು ಕುಟ್ಟಿಪೆಣ್ ಹೇಳಿದಳು ಆಮೇಲೆ ನೋಡು ನೆಮ್ಮದೀನೇ ಇರಲ್ಲ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:148) ಎಂದು ನುಡಿದ ಮಾತಿಗೆ ಜೊತೆಗಾರ್ತಿ ಹೆದರಿದಳು. ಮರಳಿ ಅಂಗಳಕ್ಕೆ ಹೋದಳು. ಅಜ್ಜಿಯ ಬಳಿ ಮದುವೆ ಬೇಡವೆಂದು ಮದುವೆಯಾದರೆ ನೆಮ್ಮದಿ ಇಲ್ಲವೆಂದು ನುಡಿದಳು. ಆಕೆ ಈ ಮಾತುಗಳನ್ನಾಡಲು ಕುಟ್ಟಿಪೆಣ್ ಕಾರಣವೆಂದು ತಿಳಿದ ವೇಲಾಯುಧ ಹೀಗೆಂದನು. "ಕುಟ್ಟಿಪೆಣ್ ಏನೇನೋ ಹೇಳಿ ನಿನ್ನ ತಲೆ ಕೆಡಿಸಿದ್ದಾಳೆ. ಅಲ್ಲೇ ಇದ್ದ ವೇಲಾಯುಧ ಹೇಳಿದ. ಇವತ್ತು ನಾನವಳ ಕತೆ ಮುಗಿಸ್ತೀನಿ. ಹಸಿ ಹಂಚಿಕಡ್ಡಿ ರೆಡಿ ಮಾಡಿ ಇಡ್ತೀನಿ. ಇವತ್ತು ನಾನವಳ ಚರ್ಮ ಸುಲೀತೀನಿ ಗಯ್ಯಾಳಿ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:149) ಎಂದು ಅಬ್ಬರಿಸಿದನು. ಮದುವೆ ಎಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನ ಅಧಿಕಾರಯುತವಾದ ನಡವಳಿಕೆ ತಂದೊಡ್ಡುವ ಅತೃಪ್ತಿಯನ್ನು ಕತೆ ಬಿಂಬಿಸುತ್ತಿದೆ. ಅವಳಿಗೆ ಹೊಡೆದೇ ಪಾಠ ಕಲಿಸ್ತೀನಿ ಎಂದು ಹೋದ ವೇಲಾಯುಧ ಅವಳ ಬಳೆ ಸದ್ದು ಕೇಳಿ, ನಾನು ನಿನ್ನನ್ನು ಹೊಡೆಯುವುದುಂಟೆ ಚಿನ್ನಾ ಎಂದು ತೋಳ ತೆಕ್ಕೆಯಲ್ಲಿ ಬಂಧಿಸಿದ. ಪುರುಷ ಸ್ವಭಾವದ ವೈಚಿತ್ರ್ಯವನ್ನು ಕತೆಯಲ್ಲಿ ಕಾಣಬಹುದು !

'ಎಕ್ಕ ರಾಜ ರಾಣಿ' ಕತೆಯಲ್ಲಿ ಬರುವ 'ಪ್ರೇಮಲತಾ' ಎಂಬ ಹುಡುಗಿಯನ್ನು ಹಣಕ್ಕಾಗಿ ಮಾರಾಟ ಮಾಡುವ, ಚೌಕಾಸಿ ಪ್ರವೃತ್ತಿಯನ್ನು ತೋರುವ ಮತ್ತು ತನ್ನ ಸಾಲ ತೀರಿಸಿಕೊಳ್ಳಲು ಬಳಸಿಕೊಳ್ಳುವ ಅಣ್ಣನ ಚಿತ್ರಣವನ್ನು ಕಾಣುತ್ತೇವೆ. ಮೂರು ವರ್ಷಗಳ ಹಿಂದೆ ಅವಳು (ಪ್ರೇಮಲತ) ಮನೆ ಬಿಟ್ಟು ಹೋಗಿದ್ದಳು. ಈಗ ಮದ್ರಾಸಿನಿಂದ ಬಂದಿದ್ದಾಳೆ. ಪರಮೇಶ್ವರ್ ಪಣಿಕ್ಕರ್ ಎನ್ನುವ ಸಿನಿಮಾ ಪ್ರೊಡ್ಯೂಸರು ಜೊತೆ ಆಕೆ ಬಂದಿದ್ದಳು.

ಆತ ಪ್ರೊಡ್ಯೂಸ್ ಮಾಡುವ ಸಿನಿಮಾದಲ್ಲಿ ಮಿಸ್ ಪ್ರೇಮಲತಾನೇ ನಾಯಕಿ. ಪ್ರೊಡ್ಯೂಸರ್ ಬಳಿ ಚಹಾ ತಿಂಡಿಗಾಗಿ ಮೂರು ರೂಪಾಯಿಯನ್ನು ಕೇಳಿದ. "ಹಣವಿಲ್ಲವಲ್ಲ, ಪಣಿಕ್ಕರ್ ಪೆಚ್ಚು ಮೋರೆ ಹಾಕಿ ಹೇಳಿದರು. ಕುನ್ನಂಕುಳಂನಿಂದ ಟ್ಯಾಕ್ಸಿ ಮಾಡಿ ಬಂದುದರಿಂದ ಇರೋದೆಲ್ಲಾ ಖರ್ಚಾಗಿ ಬಿಡ್ತು. ಮಿಸ್ ಪ್ರೇಮಲತಾ ಹೇಳಿದ್ದರು, ಮದ್ರಾಸಿಗೆ ಹೋಗ್ಲಿಕ್ಕೆ ಅಣ್ಣ

ಹಣ ಕೊಡ್ತಾರೆ ಅಂತ. ನಮ್ಮ ಮದುವೇನೂ ಇಲ್ಲೆ ನಡೆಸಬಹುದೂಂತ ಅಂದ್ಕೊಡ್ವಿ ವರದಕ್ಷಿಣೆಯಲ್ಲೆಲ್ಲಾ ನನಗೆ ನಂಬಿಕೆಯಿಲ್ಲ ಆದರೆ ಏನಾದರೂ ಕೊಟ್ಟರೆ ಸಂತೋಷ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:156) ಎಂದೊಡನೆ ಅಣ್ಣ ಆತನನ್ನು ಗದರಿ ಓಡಿಸಿದ. ವಾಸುವಿಗೆ ಪ್ರೇಮಲತಾಳನ್ನು ಕೊಟ್ಟು ಮದುವೆ ಮಾಡುವುದಾಗಿ ನಿಶ್ಚಯಿಸಿದ. ವಾಸುವಿನ ಬಳಿಯ ಮದುವೆ ತಯಾರಿಗಾಗಿ 30 ರೂಪಾಯಿ ತೆಗೆದುಕೊಂಡ. "ವಾಸು ಈಗ ನೀನು ನನ್ನ ಭಾವ. ನಾನು ತೊಗೊಂಡ ಸಾಲ ನಿನಗೆ ತಿರುಗಿ ಕೊಡಬೇಕಿಲ್ಲವಲ್ಲ. ಅದೇ ಈ ಮದುವೆಯಿಂದ ನನಗಾದ ಲಾಭ ಒಟು ನೂರಾನಲವತ್ತು ರೂಪಾಯಿ ನನಗೆ ಉಳಿಯಿತು' ವೇಲಾಯುಧ ಘೋಷಿಸಿದ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:157) ಹೀಗೆ ತನ್ನ ತಂಗಿಯನ್ನು ಹಣವಿರುವ ವಾಸುವಿಗೆ ಕೊಟ್ಟು ತನ್ನ ಸಾಲ ತೀರಿತೆಂದು ನೆಮ್ಮದಿಯಾದ. ಪ್ರೇಮಲತಾಳ ಆಸೆಯನ್ನು ಕೇಳುವವರಿಲ್ಲ. ಹೆಣ್ಣನ್ನು ಜೂಜಾಟದ ವಸ್ತುವಿನಂತೆ ನಡೆಸಿಕೊಂಡ ಉದಾಹರಣೆಯನ್ನು ಕಾಣಬಹುದು.

ಹೀಗೆ ಪುರುಷ ಕ್ರೌರ್ಯಕ್ಕೊಳಗಾದ, ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಗಾಗುವ ಹೆಣ್ಣಿನ ಚಿತ್ರಣಗಳು ಕತೆಯಲ್ಲಿ ಮೂಡಿ ಬಂದಿವೆ.

ಪಿತೃಪ್ರಧಾನ ನಿಲುವುಗಳಿಗೆ ಕತೆಗಳ ಮೂಲಕ ದಕ್ಕಿರುವ ಮಾನಸಿಕ ಪ್ರತಿಕ್ರಿಯೆ :

ಪಿತೃಪ್ರಧಾನತೆಯ ಕ್ರೌರ್ಯವು ಕಮಲಾದಾಸ್‌ರವರ ಕತೆಗಳಲ್ಲಿ ಮೂಡಿ ಬಂದಿರುವುದನ್ನು ಗಮನಿಸಿದ ನಂತರ ವೀಣಾ ಶಾಂತೇಶ್ವರ ಅವರ ಕತೆಗಳಲ್ಲಿ ಭಾವುಕ ಪ್ರತಿಕ್ರಿಯೆಯನ್ನು ಗಮನಿಸಬಹುದು. ಭಾವನಾತ್ಮಕವಾಗಿ ದೃಢವಾಗಿ ನಡೆದುಕೊಳ್ಳುವ ಹೆಣ್ಣಿನ ಚಿತ್ರಣ ಕತೆಗಳಲ್ಲಿ ಮೂಡಿ ಬಂದಿದೆ. ಪುರುಷ ನಡವಳಿಕೆಯಿಂದ ಮಾನಸಿಕ ಒತ್ತಡಗಳಿಗೊಳಗಾದ ಮಹಿಳೆಯರು ಬಿಡುಗಡೆಯನ್ನು ಬಯಸುವ ನಿರ್ದಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಕತೆಗಳು ಕಾಣಸಿಗುತ್ತದೆ. ಕಮಲಾದಾಸ್‌ರವರ ಕತೆಗಳಲ್ಲಿ ಪುರುಷ ಸ್ವಭಾವದ ಒರಟು ನಡವಳಿಕೆಯನ್ನು ಕಾಣಬಹುದಾಗಿದೆ. ವೀಣಾ ಅವರ ಕತೆಗಳಲ್ಲಿ ಹೆಣ್ಣಿನ ಭಾವುಕ ಲೋಕ ತೆರೆದುಕೊಳ್ಳುತ್ತದೆ. ಭಾವ ತೀವ್ರತೆಯಿಂದ ಘಾಸಿಗೊಳಗಾಗಿ ಮನಸ್ಸು ತಟಸ್ಥವಾಗಿ ದೃಢ ಚಿತ್ತವನ್ನು ತಾಳುವ ಉದಾಹರಣೆಗಳಿವೆ.

'ನೀನೇ ತಂತಿ' ಕತೆಯಲ್ಲಿ 'ಸರಯೂ' ಪಂಜರದೊಳಗಿನ ಗಿಳಿಯಂತೆ. ಹರೀಶನನ್ನು ವಿವಾಹವಾಗಿ ಮೂರು ವರ್ಷಗಳು ಕಳೆದಿದ್ದವು. 'ಸರಯೂ' ಮನಸ್ಸಿನಲ್ಲಿನ ಪ್ಲೆಟೋನಿಕ್ ಪ್ರೇಮ. ಅದರ ನೆನಪು. ಹರೀಶನ ಮನೆ ಬಂಧನದಂತೆ ಭಾಸವಾಯಿತು. ಗಿಳಿ ಪಂಜರದೊಳಗಿಂದ 'ಹರಿ

ಹರಿ' ಎಂದು ಕೂಗುವುದು ಕಿರಿಕಿರಿ ಉಂಟು ಮಾಡಿತು. ಹಿಂದಿನ ನೆನಪು ಎಲೆಕ್ಟ್ರಿಕ್ ಕಂಭಕ್ಕೆ ಬಿಗಿಯಲ್ಪಡುವ ತಂತಿಯಾಗುವ ಮೊದಲೇ ನಮ್ಮಿಬ್ಬರ ಭೆಟ್ಟಿ ಮಾಡಿಸಿದ್ದರೆ ಚನ್ನಾಗಿರುತ್ತಿತ್ತು ಎಂದು ಮರುಗಿದಳು. ಭ್ರಮೆಯಿಂದ ವಾಸ್ತವದೆಡೆಗೆ ಬರಬೇಕೆಂಬ ಪ್ರಯತ್ನದಲ್ಲಿ ಪಂಜರದ ಗಿಳಿಯನ್ನು ಹಾರಿಬಿಟ್ಟಳು. ಹರೀಶ ಕೇಳದಿದ್ದರೂ 'ನಾನೇ ವೀಣೆ' ಎಂಬ ಹಾಡನ್ನು ಹಾಡಿದಳು. ಬದುಕಿನಲ್ಲಿ ಘಟಿಸಿದ ದಿನಗಳನ್ನು ನೆನೆಯುವ ಬದಲು, ವಾಸ್ತವದಲ್ಲಿ ಬದುಕು ಕಾಣಬೇಕೆಂಬ ಮನಸ್ಸು ಒಂದೆಡೆ. ಹೊಟ್ಟೆಯಲ್ಲಿ ಬೆಳೆಯುತ್ತಿರುವ ಹರೀಶನ ಮಗುವಿಗಾಗಿ ತಾನು ಸ್ಥಿತ ಪ್ರಜ್ಞಳಾಗಬೇಕೆಂಬ ನಿರ್ಧಾರ ಮಾಡಿದಳು. ಹತ್ತು ವರುಷದ ಹಿಂದೆ ಇಬ್ಬರ ಬದುಕಿನಲ್ಲಿ ಬಂದ ದಿನಗಳನ್ನು ಮರೆಯುವ ಪ್ರಯತ್ನದಲ್ಲಿ ಸರಯೂ ತೀವ್ರ ಹೊಯ್ದಾಟ ನಡೆಸಿದಳು. ಆದರೆ ಎಲ್ಲವನ್ನು ಸುಲಭವಾಗಿ ಮರೆತು ಹರೀಶನ ಜೊತೆ ಭಾವ ಲೋಕವನ್ನು ಕಟ್ಟಲು ಹೊರಟ ಸರಯೂ ಅಪಸ್ವರ ಬೀರುವ ತಂತಿಗಾಗಿಯೇ ಉಳಿದಳೇ ? ತಟಸ್ಥಳಾದಳೇ ? ಹೆಣ್ಣಿಗಿರುವ ಭಾವತೀವ್ರತೆಯನ್ನು ಕತೆ ಹೇಳುತ್ತದೆ.

'ಮಳೆ ಬಂದಾಗ' ಕತೆಯ 'ಸಹನಾ' ಬಿಡಿಸಿದ ಮನುಷ್ಯನ ಚಿತ್ರಕ್ಕೂ ಕಾಕಾನ ಬಳಿ ಟ್ರೀಟ್‌ಮೆಂಟ್ ತೊಗೊಂಡ ವ್ಯಕ್ತಿಗೂ ಮಳೆ ಬಂದಾಗ ಉಂಟಾಗುವ ಭಾವವನ್ನು ಅವಿತಿಡಲು ಪ್ರಯತ್ನ ನಡೆಸುತ್ತಾಳೆಯೇ ಮಳೆಯ ನೀರಿನೊಂದಿಗೆ ಕಣ್ಣೀರು ಬೆರೆಯುವ ಸಂದರ್ಭ. "this is an incurable case'... incurable case"...(ನಡೆದದ್ದೇ ದಾರಿ:94) ಎನ್ನುವ ಮಾತಿಗೂ ಇರುವ ಅರ್ಥ ವೈಚಿತ್ರ್ಯವನ್ನು ಕಾಣಬಹುದು. ಚಿತ್ರಕಲೆಯ ಮೂಲಕ ಮಾನಸಿಕ ಬಿಡುಗಡೆ ಪಡೆಯುವ ಸಹನಾ ಮಳೆ ಬಂದಾಗ ಭಾವುಕಳಾಗುತ್ತಾಳೆ. 'ನೀನೇ ತಂತಿ' ಕತೆಯಲ್ಲಿ 'ಸರಯೂ' ಪಂಜರದಿಂದ ಗಿಳಿಯನ್ನು ಹಾರಿ ಬಿಟ್ಟು, ಸಹನಾ ತಾನು ತೆಗೆದ ಚಿತ್ರವನ್ನು ಮಳೆಯಲ್ಲಿ ತೊಯ್ಯುವ ಮೂಲಕ ಮಾನಸಿಕ ಬಿಡುಗಡೆಯನ್ನು ಹೊಂದುವ ಪ್ರಯತ್ನದಲ್ಲಿರುವರೇ ಅಲ್ಲವೇ?

ವಾಸ್ತವದ ಬದುಕಿಗೂ ಕಲ್ಪನೆಯ ಬದುಕಿಗೂ ಸಾಕಷ್ಟು ವ್ಯತ್ಯಾಸವಿದೆ ಎಂಬುದು 'ಬಿಡುಗಡೆ' ಕತೆಯ ಸರೋಜಳಿಂದ ತಿಳಿದು ಬರುತ್ತದೆ. ಸರೋಜ ಮರುಗುವುದು ಗಂಡನ ಸಾವಿಗಾಗಿ ಅಲ್ಲ, ಗಂಡ ಸಾಯಿಸಿದ ಅಸಂಖ್ಯಾತ ಕನಸುಗಳಿಗಾಗಿ. ಮೇಲ್ನೋಟಕ್ಕೆ ಸರೋಜ ಆಘಾತಕ್ಕೊಳಗಾಗಿರುವುದು ಗಂಡನ ಸಾವಿನಿಂದ ಎಂದು ಮಕ್ಕಳು ಸಂಬಂಧಿಕರು ಭಾವಿಸಿರುತ್ತಾರೆ. ಆದರೆ ಇದ್ದಷ್ಟು ದಿನ ತನ್ನ ಕನಸುಗಳನ್ನು ಹಾಳುಗೆಡಹಿದ, ಸಣ್ಣ ಪುಟ್ಟ ಆಸೆಗಳನ್ನು ಹೊಸಕಿ ಹಾಕಿದ, ತನ್ನ ಇಡೀ ತಿಂಗಳ ಸಂಬಳ ಕಸಿದುಕೊಳ್ಳುವ, ಅವಳ ಸಣ್ಣ ಆಸೆಯನ್ನೂ ಲೆಕ್ಕಿಸದ ಗಂಡನ ಸಾವಿನಿಂದ ನಿರ್ಲಿಪ್ತ ಭಾವ ತಾಳಿದ್ದಾಳೆ.

ಕಾಯಿಸಿಟ್ಟಿದ್ದ ಹಾಲನ್ನು ಸಕ್ಕರೆ ಬೆರಸಿ ಗಟಗಟ ಕುಡಿದಳು. 'ಮೈ-ಮನಸ್ಸು ಹಗುರಾಗುವಂತಹ ಭಾವ ಅದೆಂಥದೋ ಬಿಡುಗಡೆಯ ಸುಖದ ಭಾವ. ಎಲ್ಲ ನೋವುಗಳಿಂದ, ಅಪಮಾನಗಳಿಂದ, ಹಿಂಸೆಯಿಂದ, ನಿರಾಶೆಯಿಂದ, ಅನ್ಯಾಯದಿಂದ, ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಭಾವ. ತನಗೆ ದುಃಖವಾಗುತ್ತಿಲ್ಲ ಎಂದು ಆಕೆಗೆ ತಿಳಿಯುತ್ತಿದೆ. ದುಃಖವೇಕೆ ಆಗುತ್ತಿಲ್ಲವೆಂದು ಕಸಿವಿಸಿಯೂ ಆಗುತ್ತಿಲ್ಲ. ದುಃಖವಾಗುತ್ತಿದ್ದರೆ-ಕಸಿವಿಸಿಯಾಗುತ್ತಿದ್ದರೆ ಸಂತಾಪವಾಗುತ್ತಿದ್ದರೆ ಅದು ಈ ಗಂಡ ಸತ್ತು ಹೋದದ್ದಕ್ಕಾಗಿ ಅಲ್ಲ, ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ ಹೀಗೆ ಭಾವುಕವಾಗಿ ತಟಸ್ಥ ಭಾವ ತಳೆಯುವ, ದೃಢ ಚಿತ್ತವನ್ನು ತಾಳುವ ಹೆಣ್ಣಿನ ಪಾತ್ರಗಳು ವೀಣಾ ಅವರ ಕತೆಗಳಲ್ಲಿ ಚಿತ್ರಣಗೊಂಡಿದೆ. ಪುರುಷ ಲೋಕದ ಕ್ರೌರ್ಯ ಅದು ಉಂಟು ಮಾಡುವ ಪರಿಣಾಮ, ಶೋಷಣೆಗೊಳಗಾಗುವ ಮಹಿಳೆಯರ ಚಿತ್ರಣ ಇಬ್ಬರು ಕತೆಗಾರ್ತಿಯರಲ್ಲಿಯೂ ಮೂಡಿ ಬಂದಿದೆ.

ಅಧ್ಯಾಯ ೬

ಆಶಯ ಕೇಂದ್ರಿತ ವಿಶ್ಲೇಷಣೆ :

ಅ. ಕುಟುಂಬ – ದಾಂಪತ್ಯ

ಆ. ಹೆಣ್ಣು ಗಂಡಿನ ಸಂಬಂಧ

ಇ. ಹೆಣ್ಣು – ಹೆಣ್ಣಿನ ನಡುವಿನ ಸಂಬಂಧ

ಈ. ಹೆಣ್ಣು ಮತ್ತು ಸಮಾಜದ ಸಂಬಂಧ

ಆಕೃತಿ ಕೇಂದ್ರಿತ ವಿಶ್ಲೇಷಣೆ

ಅ. ಕಥನದಲ್ಲಿ ಮೂಡಿಬಂದಿರುವ ಸ್ತ್ರೀ ಪುರುಷ ಪಾತ್ರ ಚಿತ್ರಣ

ಆ. ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನದ ವಸ್ತು, ತಂತ್ರ–ಶೈಲಿ.

ಅಧ್ಯಾಯ – 6

ಅ. ಆಶಯ ಕೇಂದ್ರಿತ ವಿಶ್ಲೇಷಣೆ

ಅಸ್ಮಿತೆಯ ರಚನೆ :

ಹೆಣ್ಣಿನ ಅಸ್ಮಿತೆಯು ರಚನೆಗೊಳ್ಳುವುದು ತಾನಿದ್ದ ಪರಿಸರಕ್ಕೆ ತಕ್ಕಂತೆ, ಅಂದರೆ ತನಗೆ ದಕ್ಕುವ ಸಂದರ್ಭದಲ್ಲಿ ತನ್ನ ಗುರುತನ್ನು, ಇರುವಿಕೆಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಹೆಣ್ಣು ಮಾಡುತ್ತಲೇ ಬಂದಿದ್ದಾಳೆ. ಅಂತಹ ಸಾಂಸ್ಕೃತಿಕ ಒತ್ತಡ ಹೆಣ್ಣಿಗಿದೆ. ಹೆಣ್ಣು ವ್ಯವಸ್ಥೆಯ ಎಲ್ಲಾ ಸಂದಿಗ್ಧತೆಗಳನ್ನು ಸಹಿಸಿ ಮೌನವಾಗಿ ಬದುಕಿ ಬಾಳಿದ ನಿದರ್ಶನವೂ ಇದೆ. ಆದರೆ ಇದು ಅಸ್ಮಿತೆಯ ಕಾಲಘಟ್ಟ. ಪರಸ್ಪರ ಅಸ್ಮಿತೆಯನ್ನು ಉಳಿಸಿಕೊಳ್ಳುವ ಯತ್ನ ನಡೆಯುತ್ತಲೇ ಇದೆ. ಕೇವಲ ಪುರುಷ ವ್ಯವಸ್ಥೆಯ ಮಧ್ಯೆ ಅಸ್ಮಿತೆ ಸಾಧಿಸಬೇಕೆಂಬ ಹಂಬಲ ಇಂದಿನದಲ್ಲ. ನಗರವಾಸಿಗಳು, ಹಳ್ಳಿಗರ ನಡುವೆ ಅಸ್ಮಿತೆ ಉಳಿಸಿಕೊಳ್ಳಬೇಕೆಂಬ ಛಲ, ಕೌಟುಂಬಿಕ ಬದುಕು ಹಾಗೂ ಉದ್ಯೋಗಸ್ಥೆಯಾಗಿ ಅಸ್ಮಿತೆ ಉಳಿಸಿಕೊಳ್ಳಲು ಮಾಡುವ ಪ್ರಯತ್ನ, ಹೆಣ್ಣು ಗಂಡು, ಹೊಸತು–ಹಳತು, ದೇಶಿ–ವಿದೇಶಿ ಹೀಗೆ ಎಲ್ಲ ಘರ್ಷಣೆಯ ನಡುವೆ ಹೆಣ್ಣು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವಲ್ಲಿ ಅವಿರತ ಪ್ರಯತ್ನ ನಡೆಸುತ್ತಲೇ ಇದ್ದಾಳೆ. ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸುವ ಪ್ರತಿಯೊಂದು ಕಥನದಲ್ಲಿ ಹೆಣ್ಣು ಭಿನ್ನವಾಗಿ ಕಾಣಬರುತ್ತಾಳೆ. ಒಂದು ಕತೆಗಿಂತ ಮತ್ತೊಂದು ಕಥೆಯಲ್ಲಿ ಹೆಣ್ಣು ತನ್ನದೇ ಆದ ಅಸ್ಮಿತೆಯನ್ನು ಉಳಿಸಿಕೊಂಡು ಬರುವುದನ್ನು ಚರ್ಚೆ ಮಾಡಲಾಗುತ್ತದೆ.

'ವೀಣಾ ಶಾಂತೇಶ್ವರ' ಅವರ 'ಅವಳ ಸ್ವಾತಂತ್ರ್ಯ' ಕತೆಯ 'ವಿಮಲಾ'ಳ ಸಂದರ್ಭ ಕೇವಲ ಆಕೆಯ ಪರಿಸ್ಥಿತಿಯಲ್ಲ. ಆಧುನಿಕತೆಯ ಪರಿಣಾಮವಾಗಿ ಹೆಣ್ಣು ಹೊರಗೂ, ಒಳಗೂ ದುಡಿದು ಬದುಕು ಸಾಗಿಸಬೇಕಾಗುವ ಸಂದರ್ಭದಲ್ಲಿ ಆಕೆಯ ಶ್ರಮಕ್ಕೆ ಸಿಗುತ್ತಿದ್ದ ಬೆಲೆ ನಗಣ್ಯವಾಗಿರುತ್ತದೆ. ಹತ್ತು ವರುಷಗಳ ದಾಂಪತ್ಯ, ಮೂರು ಮಕ್ಕಳು, ಮಾವನವರ ಜವಾಬ್ದಾರಿ, ಅವಳ ಶಕ್ತಿಯನ್ನು ಕುಂದಿಸಿರುತ್ತದೆ. ಇದ್ಯಾವ ಹೊಣೆಯೂ ಬೇಡವೆಂಬಂತೆ ದೂರದೂರಿನಲಿ ಶಂಕರನ ಕೆಲಸ. ಈ ಎಲ್ಲಾ ಜವಾಬ್ದಾರಿಗಳಿಂದ ದೂರ ಉಳಿದು, ದುಡಿಯುವ ಗಂಡಸಿನ ಪಟ್ಟ. ಆತನಿಗೆ ಶಂಕರ ದೂರದೂರಿನಿಂದ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬರುವ ಯಾವ ಗಂಭೀರ ಪ್ರಯತ್ನವನ್ನು ಮಾಡಿರಲಿಲ್ಲ ಎಂಬ ಮಾತನ್ನು ವಿಮಲಾಳ ಬಾಯಿಂದಲೇ ಕೇಳಬಹುದು. ಹೊರಗೂ

ದುಡಿಯುವ 'ವಿಮಲಾ' ಇಡೀ ಕುಟುಂಬದ ಹೊಣೆಯನ್ನು ನಿರ್ವಹಿಸಬೇಕಾಗುತ್ತದೆ. ಎಲ್ಲಾ ಅರಿತ ಪತಿ ಶಂಕರ ತನ್ನ ಜವಾಬ್ದಾರಿಗಳಿಂದ ದೂರವಾಗಿಯೇ ಉಳಿದಿದ್ದ ಸಂದರ್ಭವನ್ನು ಕಾಣಬಹುದಾಗಿದೆ.

ಭಗಿನೀ ಸೇವಾ ಸಮಾಜದ ಸದಸ್ಯೆಯಾದ ಶಶಿಕುಲಕರ್ಣಿ ಅಂತರ್ ರಾಷ್ಟ್ರೀಯ ಮಹಿಳಾ ವರ್ಷದ ಸಲುವಾಗಿ ಭಾಷಣ ಮಾಡಲಿಕ್ಕೆ ವಿಮಲಾಳನ್ನು ಕರೆದಿದ್ದಕ್ಕೆ "Sorry ಶಶಿ, ಭಾಷಣಾ-ಗೀಷಣಾ ಎಲ್ಲಾ ಬಿಟ್ಟು ಹಳೆ ಮಾತಾತು. ನನಗೆ ಈಗ ಇಂಟರಸ್ಟೂ ಇಲ್ಲ, ಟೈಮೂ ಇಲ್ಲ" (ನಡೆದದ್ದೇ ದಾರಿ:164) ಎಂದು ನುಡಿದಳು. ಶಶಿ ಆಶ್ಚರ್ಯದಿಂದ ಹೀಗೆ ನುಡಿದಳು. ಕಾಲೇಜಿನಗಿದ್ದಾಗ ಆಕೆ (ವಿಮಲಾ) ಹೀಗೆ ಹೇಳಿದ್ಲು. "ಹೆಣ್ಮಕ್ಕಳ ಒಳ್ಳೇದರ ಸಲುವಾಗಿ, ಅವರ ಉದ್ಧಾರದ ಸಲುವಾಗಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿ ಕೊಡೋದರ ಸಲುವಾಗಿ, ಜೀವನ ಮೀಸಲಾಗಿಡ್ತೀನಿ" (ನಡೆದದ್ದೇ ದಾರಿ:164) ಅಂದಿದ್ದಳು. ಸಂಸಾರದ ಭಾರದ ಹೊಣೆಯನ್ನು ಒಬ್ಬಳೇ ಹೊರಲಾರದೇ, ಹೊತ್ತಿದ್ದ ಸಂದರ್ಭದಲ್ಲಿ ಅವಳ ಆದರ್ಶದ ಮಾತುಗಳೂ ಅವಳಿಗೆ ಹಿಂತಿರುಗಿಸಿದಂತೆ ಇತ್ತು. ಇವೆಲ್ಲಾ ಸಂದಿಗ್ಧತೆಗಳನ್ನು ಶಂಕರ ಗಮನಿಸಿಯೂ ಯಾವ ಪರಿವೆಯೂ ಇಲ್ಲದಂತೆ ಇದ್ದ. ಹೀಗೆ ಜವಾಬ್ದಾರಿಯಿಂದ ಪಲಾಯನಗೈಯ್ಯುವ ಪುರುಷರ ವರ್ತನೆ ಕತೆಯಲ್ಲಿ ಮೂಡಿ ಬಂದಿದೆ. ಇಷ್ಟೆಲ್ಲದರ ನಡುವೆಯೂ ವಿಮಲಾ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾ ನಡೆದದ್ದು ಅವಳ ಅಸ್ಮಿತೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೇ. ತನ್ನ ತನವನ್ನು ಒತ್ತೆಯಿಟ್ಟು ಬದುಕುವ ಹೆಣ್ಣಿನ ಬಾಳಿಗೆ ವಿಮಲ ಉದಾಹರಣೆಯಾಗುತ್ತಾಳೆ.

"ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಕಾಲು ಶತಮಾನ ಕಳೆದು ಹೋದರೂ ನಮ್ಮ ಹೆಂಗಸರು ಮಾತ್ರ ಇನ್ನೂ ಗುಲಾಮಗಿರಿಯಲ್ಲೇ ಇದ್ದಾರೆ. ಇದಕ್ಕೆ ಕಾರಣ 25%. ಸಂಪ್ರದಾಯ, ಇನ್ನು 25% ಪರಿಸ್ಥಿತಿ, ಇನ್ನು 50% ಗಂಡಸರು (ಚಪ್ಪಾಳೆ). ಇದು ಅಂತರರಾಷ್ಟ್ರೀಯ ಮಹಿಳಾ ವರ್ಷ. ಮಹಿಳೆಯರಿಗೆ ಸ್ವತಃದ ಬಗ್ಗೆ ಜಾಗೃತಿಯನ್ನುಂಟು ಮಾಡಿಕೊಡುವ ವರ್ಷ. ನಾವಿನ್ನು ಎಚ್ಚೆತ್ತುಕೊಳ್ಳಬೇಕು. ದಾಸ್ಯದ ಸಂಕೋಲೆಯನ್ನು ಹರಿದೊಗೆಯಬೇಕು. ನಮಗಾಗುತ್ತಿರುವ ಅನ್ಯಾಯವನ್ನು ಎಲ್ಲ ವಿಧದಲ್ಲೂ ಪ್ರತಿಭಟಿಸಬೇಕು. ಯಾವ ಕಾರಣಕ್ಕಾಗಿಯೂ ಯಾರೆದುರಿಗೂ ಬಗ್ಗಬಾರದು. ಅಂದಾಗಿ ಮಾತ್ರ" (ನಡೆದದ್ದೇ ದಾರಿ:171) ಹೀಗೆ ವೇದಿಕೆಯ ಮೇಲೆ ಭಾಷಣ ನಡೆಯುತ್ತಿದ್ದರೂ ನಿತ್ಯ ಜೀವನದಲ್ಲಿ ಹೆಣ್ಣು ಎದುರಿಸುತ್ತಿರುವ ಸವಾಲು ಹಲವು. ವಿಮಲಾಳಂತೆ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಡೆಯುತ್ತಿರುವ ಪ್ರಯತ್ನ ಗಣನೀಯವಾದುದು. ಹೆಣ್ಣಿನ

ಶೋಷಣೆಯ ಮೂಲ ನೆಲೆ ಕುಟುಂಬವೆ. ಹೆಣ್ಣಿಗೆ ರಕ್ಷಣೆಯ ನೀಡುವ ಸ್ಥಳ, ರಕ್ಷಣೆಯ ಹೆಸರಿನಲ್ಲಿ ನಡೆಯುವ ಶೋಷಣೆಯು ಒಂದೆಡೆ, ಆರ್ಥಿಕವಾಗಿ ಸ್ವಾವಲಂಬಿಯಾದಾಗಲೂ ಹೊರಗೂ ಒಳಗೂ ದುಡಿಯುವ ಹೆಣ್ಣಿನ ಶ್ರಮಕ್ಕೆ, ಅವಳ ಭಾವಕ್ಕೆ ಬೆಲೆಯಿಲ್ಲ. ಇಂತಹ ಸಂದರ್ಭ ಆಧುನಿಕತೆಯು ಹೆಣ್ಣಿಗೆ ಒಡ್ಡಿರುವ ಸವಾಲಾಗಿದೆ.

ಕಮಲಾದಾಸ್‌ರವರ 'ಹರಿದಕಂಬಳಿ' ಕತೆಯಲ್ಲೂ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಹೋಗುವ ಮಗನ ಚಿತ್ರಣವಿದೆ. ಕಳೆದ ಐದುವರೆ ವರ್ಷಗಳಿಂದ ಅಮ್ಮನನ್ನು ನೋಡಲಿಕ್ಕೆ ಬಾರದ ಗೋಪಿ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗಿದ್ದ. ಅಕ್ಕ ಕಮಲಾಳ ಆಶ್ರಯದಲ್ಲೇ ತಾಯಿ ಇದ್ದಳು. ಈಗ ಗೋಪಿ ಬಂದದ್ದು ಆಸ್ತಿಯಲ್ಲಿ ಪಾಲು ಕೇಳಲು ಯಾವ ನೆನಪೂ ಇಲ್ಲದ ತಾಯಿಗೆ ಮಗನ ಹೆಸರನ್ನು ಮಾತ್ರ ಕನವರಿಸುವ ನೆನಪು. ಸ್ವಾರ್ಥ ಸ್ವಭಾವದ, ಬೇಜವಾಬ್ದಾರನಂತೆ ಕಾಣುವ ಗೋಪಿ, ಯಾವ ಸ್ವಾರ್ಥವೂ ಇಲ್ಲದೆ ತನ್ನ ತಾಯಿಯನ್ನು ನೋಡಿಕೊಳ್ಳುವ ಕಮಲಾಳ ಪಾತ್ರವನ್ನು ಕಥೆಯಲ್ಲಿ ಕಾಣಬಹುದು. ಅಮ್ಮನಿಗೆ 83 ವರ್ಷ ವಯಸ್ಸು, ಇವತ್ತೋ ನಾಳೆಯೋ ಸಾಯುವ ಸ್ಥಿತಿಯಲ್ಲಿದ್ದಾಳೆ. ಅಮ್ಮನನ್ನು ನೋಡಬೇಕೆಂದು ನಿನಗನಿಸಲಿಲ್ಲವೇ ಎಂದು ಅಕ್ಕ ಕಮಲಾ ಕೇಳಿದಳು.

"ಅಮ್ಮನಿಗೆ ನನ್ನ ನೆನಪೇ ಇಲ್ವಲ್ಲಕ್ಕ ಅವನು ನಗಲು ಪ್ರಯತ್ನಿಸಿದ. ನಿನಗೆ ಅಮ್ಮನ ನೆನಪಿದೆಯಾ ಗೋಪಿ? ಅಕ್ಕ ಕೇಳಿದಳು" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:233) ಆ ಮಾತಿನಲ್ಲಿ ಅಕ್ಕನ ಖಾಳಜಿ, ಜವಾಬ್ದಾರಿಯುತವಾದ ನಡವಳಿಕೆ ಅಮ್ಮನ ಬಗೆಗಿದ್ದ ನಿಷ್ಕಲ್ಮಶ ಪ್ರೀತಿ. ಮಾನವೀಯತೆಯನ್ನು ಕಾಣಬಹುದಾಗಿದೆ. ಮಗನಾಗಿದ್ದು ತನ್ನ ಹೊಣೆಯನ್ನು ನಿರಾಕರಿಸುವ ಸಂದರ್ಭದಲ್ಲಿ ಕಮಲಳ ವೈಯಕ್ತಿಕ ಬದುಕಿನ ಸುಳಿವು ಇಲ್ಲದೆ ತಾಯಿಯ ಆರೈಕೆ ಮಾಡುವ ಮಗಳು ಕಾಣಬರುತ್ತಾಳೆ. ಹೀಗೆ ತಮ್ಮ ಕೌಟುಂಬಿಕ ಬದುಕಿನ ಹೊಣೆಯನ್ನು ನಿರ್ವಹಿಸುವಲ್ಲಿ ನಿಷ್ಠೆ ತೋರುವ ಹೆಣ್ಣಿನ ಚಿತ್ರಣವಿದೆ. ಕರ್ತವ್ಯ ನಿರ್ವಹಣೆಯಲ್ಲಿ ಹೆಣ್ಣು ಮೇಲ್ಮೈ ಸಾಧಿಸುವ ಉದಾಹರಣೆಗಳಿವೆ.

'ಲಾಕಪ್' ಎಂಬ ಕತೆಯಲ್ಲಿ ರಾಜಕೀಯ ಪಕ್ಷದಲ್ಲಿದ್ದುಕೊಂಡು ಸಾರ್ವಜನಿಕರ ಸಂಘಟನೆಗಾಗಿ ಭಾಷಣ ಮಾಡಿದ್ದಕ್ಕಾಗಿ 'ರತ್ನಮ್ಮ'ನನ್ನು ಅರೆಸ್ಟ್ ಮಾಡಿದ್ದರು. ಆಕೆ ಎಂದೂ ಹಿಂಸೆ ಮತ್ತು ಕ್ರಾಂತಿಯಲ್ಲಿ ನಂಬಿಕೆ ಇಟ್ಟವಳಲ್ಲ. ಜೈಲುಸೆರೆಯ ಬಗ್ಗೆ ಕಲ್ಪಿಸಿಯೂ ಇರಲಿಲ್ಲ. ಆದರೆ ಪುರುಷ ಪ್ರಭುತ್ವ ಮಹಿಳಾ ನಾಯಕತ್ವವನ್ನು ಒಪ್ಪುವುದಿಲ್ಲವಲ್ಲವೇ? ಹೆಂಗಸರು ಏನು ಮಾಡಿದರೂ ಅಪರಾಧವೆಂಬ, ಸಂಘಟನೆ, ಹೋರಾಟ, ರಾಜಕೀಯ ಎಂಬ ವಿಶಿಷ್ಟ

ಸಂದರ್ಭದಲ್ಲಿ ಯಾವ ಹಿಂಸೆಯನ್ನು ಲೆಕ್ಕಿಸದೆ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ನಡೆಸುತ್ತಲಿರುವುದು ಬಹು ಮುಖ್ಯವಾಗಿ ಗಮನಿಸಬೇಕಾದ ಸಂಗತಿ. ಇಂಥಹ ರಾಜಕೀಯದ ಬಿಕ್ಕಟ್ಟಿನ ಅತಂತ್ರಸ್ಥಿತಿ ಹೆಣ್ಣಿಗಿದ್ದರೂ, ರತ್ನಮ್ಮನಂಥವರು ತಮ್ಮ ಹೋರಾಟವನ್ನು ಬಿಡದೆ ರಾಜಕೀಯ ಸಂಘಟನೆಯಲ್ಲಿ ಮುಂದುವರೆಯುವಂಥವರನ್ನು ಕಾಣಬಹುದು. ಆಧುನಿಕ ಜಗತ್ತಿನ ಎಲ್ಲಾ ರಂಗದಲ್ಲಿಯೂ ಮಹಿಳೆ ತನ್ನದೇ ಆದ ಛಾಪನ್ನು ಮೂಡಿಸುತ್ತಿದ್ದಾಳೆ. ಅದೇ ರೀತಿ ರತ್ನಮ್ಮಳೂ ಕೂಡ. 'ಕಮಲಾದಾಸ್'ರವರ 'ಮಾಧುರಿಯ ಮಗಳು', ಕತೆಯ ಮಾಧವಿ ದುಡುಮೆಯ ಸಲುವಾಗಿ ತನ್ನ ಹುಷಾರಿಲ್ಲದ ಮಗುವನ್ನು ಬಿಟ್ಟು ನಸುಕಿನಲ್ಲಿಯೇ ಎದ್ದು ಹೊರಡಲು ಸಿದ್ಧವಾದಳು, ಕಾರಣ ಮಾಧವಿ ಕೆಲಸ ಮಾಡುವ ಮನೆಯ ಮಗು ಆಕೆಯಿಲ್ಲದೆ ಹಾಲು ಕುಡಿಯುವುದಿಲ್ಲ. ಮಾಧವಿಯ ವಯಸ್ಸಾದ ತಾಯಿಯೊಟ್ಟಿಗೆ ತನ್ನ ಮಗುವಿನ ಆಶ್ರಯ. ಮಗುವಿನ ಜನ್ಮಕ್ಕೆ ಕಾರಣನಾದ ತಂದೆಯ ಪಾತ್ರದ ಸುಳಿವೇ ಇಲ್ಲದಿರುವುದು ಪುರುಷ ಸ್ವಭಾವದ ಬಗ್ಗೆ ಚಿಂತೆ ಮಾಡುವಂತೆ ಪ್ರೇರೇಪಿಸುತ್ತದೆ. ಇಷ್ಟೇ ಅಲ್ಲ ತನ್ನ ಮಗುವನ್ನು ಸಲಹಲೆಂದು ಬೇರೊಬ್ಬ ಮಗುವನ್ನು ನೋಡಿಕೊಳ್ಳುವ ಮಾತೃ ಹೃದಯದ ಚಿತ್ರಣವಿದೆ. ಪುರುಷ ಪಾತ್ರ ಗೌಣವಾಗಿರುವುದು, ಅನೇಕ ಸಾಧ್ಯತೆಗಳನ್ನು ಸೂಚಿಸುತ್ತದೆ. ಮಾಧವಿ ಇತ್ತ ತನ್ನ ಮಗುವ ಕಡೆ ಪೂರ್ಣವಾಗಿ ಗಮನ ಹರಿಸಲಾರದೆ ಬೇರೊಬ್ಬರ ಮಗುವನ್ನು ನೋಡಿಕೊಳ್ಳುವ, ಮಾಧವಿ ಬದುಕಲು ನಡೆಸುತ್ತಿರುವ ಹೋರಾಟವನ್ನು ಗಮನಿಸಬಹುದು. ತನ್ನ ಮಗು ನರಳುತ್ತಿದ್ದರೂ ಬದುಕು ನಡೆಸಲು ಬೇರೊಬ್ಬರ ಮಗುವನ್ನು ನೋಡಿಕೊಳ್ಳುವ ತಾಯಿಯ ಚಿತ್ರಣವಿದೆ. ಹೀಗೆ ಗೌಣವಾಗುವ ಪುರುಷ ಪಾತ್ರಗಳು ಒಂದೆಡೆ, ಪುರುಷ ಜೊತೆಯಾಗಿದ್ದು ತನ್ನ ಹೊಣೆ ನಿರ್ವಹಿಸದ ಪಾತ್ರ ಚಿತ್ರಣಗಳು ಕತೆಗಳಲ್ಲಿವೆ.

ವೀಣಾ ಅವರ 'ನಿರಾಕರಣೆ' ಕತೆಯು ಪುರಾಣದಲ್ಲಿ ನಿರೂಪಿತವಾಗಿರುವ ಪುರುಷ ಪ್ರಧಾನ ಕಲ್ಪನೆಯನ್ನು ಪ್ರಶ್ನೆ ಮಾಡುವಂತೆ 'ಶಕುಂತಲಾ' ಪಾತ್ರ ಚಿತ್ರಣಗೊಂಡಿದೆ. ಸಮಾಜದಲ್ಲಿ ಒಪ್ಪಿತವಾಗಿರುವ ಪುರುಷ ಪ್ರಧಾನ ಮೌಲ್ಯಗಳನ್ನು ಶಕುಂತಲೆ ಪ್ರಶ್ನೆ ಮಾಡುತ್ತಾಳೆ. ದುಷ್ಯಂತನನ್ನು ಕೂಡಿ ಉಂಗುರವನ್ನು ಕಳೆದುಕೊಂಡಾಗ, ದುಷ್ಯಂತ ಶಾಕುಂತಲೆಯನ್ನು ಮರೆತಾಗ ಶಾಕುಂತಲೆ ದುಷ್ಯಂತನಿಲ್ಲದೆ ಒಂಟಿ ಜೀವನವನ್ನು ನಡೆಸುವಾಗಲೂ ಆಕೆ ಅನುಭವಿಸಿದ ಯಾತನೆಗೆ ಬೆಲೆ ಇಲ್ಲ. ಮತ್ತೆ ಮರಳಿ ದುಷ್ಯಂತ ಶಾಕುಂತಲೆಯನ್ನು ಕೂಡಲು ಬಂದಾಗ ಅವಳು ಸಂತೋಷದಿಂದ ಸ್ವೀಕರಿಸುವುದಿಲ್ಲ. ದುಷ್ಯಂತನನ್ನು ಒಪ್ಪಿ ಅವನೊಡನೆ ನಡೆಯುವುದು ಪುರುಷ ಲೋಕದ ಎಲ್ಲಾ ಸಂದಿಗ್ಧತೆಯನ್ನು ಹೆಣ್ಣು ಮೌನವಾಗಿ ಸಹಿಸುವಂತಹ ಸ್ಥಿತಿ ಲೋಕದಲ್ಲಿ ಒಪ್ಪಿತವಾದುದು. ಆದರೆ

ದುಷ್ಯಂತ ಮರಳಿ ಶಾಕುಂತಲೆಯನ್ನು ಒಪ್ಪಿ ಬಂದಾಗ ಅವಳ ಮನೋವ್ಯಾಪಾರವನ್ನು ಕತೆಗಾರ್ತಿ ಹೀಗೆ ಚಿತ್ರಿಸುತ್ತಾರೆ. ಕತೆಯಲ್ಲಿನ ಸ್ವಗತಗಳ ಮೂಲಕ ಹೆಣ್ಣಿನ ಮನೋಲೋಕವನ್ನು ಚಿತ್ರಿಸುತ್ತಾರೆ.

"ಯಾವ ಪುರುಷನಿಗಾಗಿ ಹಲವಾರು ವರ್ಷ ಹಗಲಿಡೀ ಕಾಯ್ದು-ಕಾಯ್ದು ಯಾರಿಗಾಗಿ ಜೀವನವನ್ನೇ ಒಂದು ತಪಸ್ಸಾಗಿಸಿದೆನೋ ಆತನು ನಿಜವಾಗಿಯೂ ಬಂದಿರುವಾಗ ಮನಸ್ಸಿನಲ್ಲಿ ಇದೆಂತಹ ನಿರ್ಲಿಪ್ತತೆ? ಇದೆಂಥಹ ತಾಟಸ್ಥ್ಯ? ಅದೇಕೆ ತನ್ನ ಮನಸ್ಸು ಹೂವಾಗಿ ಅರಳಲೊಲ್ಲದು. ಗರಿಬಿಚ್ಚಿ ಹಾರಲೊಲ್ಲದು? ಇಷ್ಟು ವರ್ಷಗಳಿಂದ ನಿರೀಕ್ಷಿಸಿದ್ದ ಈ ಸಮಯ ಇಂದು ನಿಜವಾಗಿ ಒದಗಿ ಬಂದಾಗಿ ಇದೇನು, ತನ್ನ ಮನಸ್ಸಿನಲ್ಲಿ ಈ ಬಗೆಯ ವಿಚಿತ್ರ ಕಾಠಿಣ್ಯ?" (ನಡೆದದ್ದೇ ದಾರಿ:241) ಹಿಂದಿನ ನೋವು ಹೀಗೆ ಆಕೆಯ ವರ್ತನೆಗೆ ಕಾರಣವಾಗಿದೆ.

ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದ ದುಷ್ಯಂತನನ್ನು, ತಾನು ಒಂಟಿಯಾಗಿ ಕಳೆದ ದಿನಗಳನ್ನು ಸುಲಭವಾಗಿ ಶಾಕುಂತಲೆ ಮರೆಯಲೂ ಆಗುತ್ತಿಲ್ಲ.-"ಈಗ ಈತ ಬಂದನೆಂದು ಸಂತೋಷಿಸಲೆ? ಓಡಿಹೋಗಿ ಈತನ ತೆರೆದ ತೋಳುಗಳಲ್ಲಿ ಸೇರಿಕೊಂಡು ಇಷ್ಟುದಿನ ಅನುಭವಿಸಿದ್ದನ್ನೆಲ್ಲಾ ಮರೆತುಬಿಡಲೆ? ಇಷ್ಟು ದಿನಗಳು ಆಚರಿಸಿದ ವ್ರತಗಳು ಗೈದ ತಪಸ್ಸು ಮಾಡಿದ ಪೂಜೆ-ಎಲ್ಲಾ ಸಫಲವಾಯಿತೆಂದು ಧನ್ಯಳಾಗಲೇ?" (ನಡೆದದ್ದೇ ದಾರಿ:242)

ಶಾಕುಂತಲೆಯ ಮಾನಸಿಕ ಹೊಯ್ದಾಟ, ಅವಳು ಕಾಯ್ದು ತಪಿಸಿದಕ್ಕೆ ಸಿಕ್ಕ ಫಲವೇನು ಸಕಾರಾತ್ಮಕವೇ? ಆದರೆ ಹಳೆಯ ವಂಚನೆಯ ಮರೆತು ಸಂತೋಷವನ್ನು ಒಪ್ಪಿಕೊಳ್ಳಬೇಕೆ? ಹಲವು ವರ್ಷಗಳ ಕಾಲ ನಿನಗಾಗಿ ತಪಿಸಿರುವ ಮೈ-ಮನಸ್ಸುಗಳನ್ನು ಶಾಂತಗೊಳಿಸಲು ದುಷ್ಯಂತ ಕೇಳಿದಾಗ ಶಾಕುಂತಲೆಯ ಆಕ್ರೋಶದ ಮಾತುಗಳು ಹೀಗಿವೆ.

"...ಇಲ್ಲ ಮಹಾರಾಜ, ವರ್ಷಗಳ ಕಾಲ ತಪಿಸಿರುವ ನಿನ್ನ ಮೈ-ಮನಸ್ಸುಗಳು ಒಂದು ಅಪ್ಪುಗೆಯಿಂದ ಶಾಂತವಾಗಬಹುದು. ಹಳೆಯದನ್ನೆಲ್ಲಾ ಮರೆತು ನೀನು ಮತ್ತೆ ತುಂಬು ಉತ್ಸಾಹದಿಂದ ಹೊಸ ಜೀವನ ಸುರು ಮಾಡಬಹುದು. ಆದರೆ ನೀನು ಗಾಸಿಗೊಳಿಸಿದ ನನ್ನ ಒಳಗು ಮತ್ತೆ ಚೇತರಿಸಲಾರದು. ನೀನು ಹೊಸಕಿ ಹಾಕಿದ ನನ್ನ ಭಾವನೆಗಳು ಮತ್ತೆ ಜೀವತಳೆಯಲಾರವು. ಈ ಶಕುಂತಲೆಯ ಆತ್ಮ ಸಮ್ಮಾನಕ್ಕೆ ಮಾಯಲಾರದ ಗಾಯವಾಗಿದೆ. ಆಕೆಯಿನ್ನೆಂದೂ ಮೊದಲಿನಂತಾಗಲಾರಳು.." (ನಡೆದದ್ದೇ ದಾರಿ:244-245)

ಶಾಕುಂತಲೆಯ ಮನಸ್ಸಿನ ಯಾತನೆ ಎಲ್ಲವನ್ನೂ ಮರೆತು ದುಷ್ಯಂತನನ್ನು ಮುಕ್ತವಾಗಿ ಸ್ವೀಕರಿಸಲು ಸಾಧ್ಯವೆ? ಎಂಬ ಪ್ರಶ್ನೆಯನ್ನು ಓದುಗರಲ್ಲಿ ಹುಟ್ಟುಹಾಕುತ್ತದೆ.

ಕಡೆಗೂ ಶಾಕುಂತಲೆ ಅರಮನೆಗೆ ಹೋಗಲು ಒಪ್ಪಿದ್ದು ಕುಮಾರನಾದ ಭರತನಿಗಾಗಿ. ಋಷಿ ಶಾಪವೆಂದು ಕ್ಷುಲ್ಲಕ ಕಾರಣ ನೀಡಿ ತಾನು ಕೂಡಿದ ಹೆಣ್ಣನ್ನು ಮರೆತು ಹೋಗುವ ಪುರುಷ ಸ್ವಭಾವವನ್ನು ನಿರಾಕರಿಸುವ ಮೂಲಕ ಶಾಕುಂತಲೆಗೆ ಹೊಸ ರೂಪಕೊಟ್ಟವರು ಕತೆಗಾರ್ತಿ ಎಂದೇ ಹೇಳಬಹುದು.

ಇಲ್ಲಿ ಶಾಕುಂತಲೇ ಕೇವಲ ದುಷ್ಯಂತನನ್ನು ನಿರಾಕರಿಸಿದಳೆಂದು ಅದು ಕೇವಲ ಅವಳ ಜೀವನದ ಘಟನೆ ಎಂದು ನಿರ್ಧರಿಸಲಾಗುವುದಿಲ್ಲ. ಹೆಣ್ಣು ತನ್ನ ಮಾನಸಿಕ ಹೊಯ್ದಾಟವನ್ನು, ಒಂಟಿಯಾಗಿ ಕಳೆದ ದಿನಗಳ ದುಃಖ ದುಮ್ಮಾನಗಳಿಗೆ ಬೆಲೆ ಕಟ್ಟುವವರಾರು? ಹೀಗೆ ಹೆಣ್ಣಿನ ಬದುಕಿನಲ್ಲಿ ಬೇಕೆಂದಾಗ ಋತುಮಾನ ಬದಲಾಗುತ್ತಾ ಬಂದಂತೆ ಬರುವ ಎಲ್ಲ ಪುರುಷ ವರ್ತನೆಯನ್ನು ನಿರಾಕರಿಸುವ ರೂಪಕವಾಗಿ ಶಾಕುಂತಲೆ ಕಂಡು ಬರುತ್ತಾಳೆ. ಪುರಾಣದ ಸೂತಕವನ್ನು ಕಳಚಿದ. ಹೊಸ ಶಾಕುಂತಲೆ ಆಧುನಿಕ ಹೆಣ್ಣಿನ ಪ್ರತೀಕವಾಗಿ ಕಾಣಬರುತ್ತಾಳೆ. ಮಕ್ಕಳಿಗಾಗಿ ಮಿಡಿಯುವ ತಾಯಿ ಭರತನಿಗೋಸ್ಕರ ತನ್ನತನವನ್ನು ಕಳೆದುಕೊಳ್ಳುತ್ತಾಳೆ.

ಕಮಲಾದಾಸ್ ರವರ 'ಮೆಹಂದಿ' ಕತೆಯಲ್ಲಿ ಮಧುಮಗಳಿಗೆ (ಅಮ್ಮು) ಮೆಹೆಂದಿ ಹಾಕಲಾಗುತ್ತಿರುತ್ತದೆ. ಎಲ್ಲರಿಗೆ ಕೇಳುವಂತೆ ಆಕೆ "ನೋಡಿ ಈ ಮದುವೆ ನಡೆಯೋಲ್ಲ" ಎಂದು ಗಟ್ಟಿಯಾಗಿ ಹೇಳುತ್ತಾಳೆ. (ಡಾ. ಕಮಲದಾಸ್‌ರವರ ಸಮಗ್ರ ಕಥೆಗಳು:362) ಎಂದು ಹೇಳಿದಳು. ವರದಕ್ಷಿಣೆ ತೆಗೆದುಕೊಳ್ಳದೆ ಮದುವೆ ಮಾಡಿಕೊಳ್ಳಲು ಹೊರಟಿದ್ದ ಅಮೇರಿಕಾದ ಎಂಜಿನಿಯರ್ ಹುಡುಗನನ್ನು ಅಮ್ಮು ಏಡ್ಸ್ ರೋಗವಿರುವ ಬಗ್ಗೆ ಶಂಕಿಸಿ ಮದುವೆ ಬೇಡವೆಂದು ಹೇಳಿದಳು. ಸಂಬಂಧಿಕರು ಎಷ್ಟೇ ಬಲವಂತಿಸಿದರೂ ಆಕೆ ಮದುವೆಯನ್ನು ನಿರಾಕರಿಸಿದಳು. ಹಣವಂತನೋ, ವಿದ್ಯಾವಂತನೋ ಆಗಬೇಕಿಲ್ಲ, ಒಬ್ಬ ಸಾಮಾನ್ಯ ಹುಡುಗನನ್ನು ನಾನು ವಿವಾಹವಾಗಬಲ್ಲೆ ಎಂದು ಯಾವುದೇ ತೊಡರಿಲ್ಲದೆ ಅಮ್ಮು ನುಡಿಯುತ್ತಾಳೆ.

ತಮ್ಮ ಆಯ್ಕೆಯನ್ನು ಸ್ವತಂತ್ರವಾಗಿ ತಿಳಿಸುವ, ಹಿರಿಯರ ಬಲವಂತಕ್ಕೆ ಶ್ರೀಮಂತಿಕೆಯ ಹುನ್ನಾರಕ್ಕೆ ಬದುಕನ್ನು ಬಲಿಕೊಡುವ ವಿರುದ್ಧ ಹೆಣ್ಣು ಧನಿ ಎತ್ತುವುದು ಇತ್ತೀಚಿನ ದಿನಗಳಲ್ಲಿ ಆಗುತ್ತಿರುವ ಬೆಳವಣಿಗೆ, ಅಮ್ಮುವಿನಂತಹ ಕೆಲವು ಹೆಣ್ಣು ಮಕ್ಕಳು ಮಾತ್ರ ತಮ್ಮ ಆಯ್ಕೆಯನ್ನು ಅಭಿವ್ಯಕ್ತಿಸುತ್ತಾರೆ. ತನ್ನ ಬದುಕಿನ ಬಗೆಗಿನ ಕಾಳಜಿ ಹೊಸ ಆತ್ಮಸ್ಥೈರ್ಯವನ್ನು, ಹುರುಪನ್ನು ತಂದು ಕೊಡುವಂತೆ ಪ್ರೇರೇಪಿಸುತ್ತಿರುವುದು ಗಣನೀಯ ಅಂಶವಾಗಿದೆ.

ಬದುಕು ಹಲವು ಕವಲುಗಳೊಡನೆ ಕವಲೊಡೆದು ಸಹಜವಾಗಿಯೇ ಸಾಗುತ್ತದೆ. ಅನಿವಾರ್ಯ, ಅಗತ್ಯತೆಗಳನ್ನು ಮೀರಿದ ಜಂಜಾಟದಲ್ಲಿ ಬದುಕಿನ ತಿರುವುಗಳು

ಎತ್ತಕಡೆಯಾದರೂ ಸಾಗಬಹುದು. ಹಾಗೆಂದ ಮಾತ್ರಕ್ಕೆ ಸ್ವಾರ್ಥದಿಂದ ನಡೆದುಕೊಳ್ಳುವ ಮನುಷ್ಯ ಸ್ವಭಾವವನ್ನು ಸದಾ ಒಪ್ಪಿ ನಡೆಯುವ ಕಾಠಿಣ್ಯದ ಹಾದಿ ಹೆಣ್ಣಿಗೆ ಮೀಸಲು ಎನ್ನುವ ಸಂಕಥನ ಸಮಾಜದಲ್ಲಿದೆ. ಇಂಥಹ ನಿರ್ಣಾಯಕ ಘಟ್ಟದಲ್ಲಿ ಹೆಣ್ಣು ಸೋತು ನಡೆಯಬೇಕೆಂಬ ಲೋಕ ನಿರ್ಣಯಕ್ಕೆ ಬದಲಾಗಿ ತಮ್ಮ ಬದುಕಿನ ಆಯ್ಕೆಗಳನ್ನು ನಿರ್ಧಾರಗಳನ್ನು ಕುರಿತು ಸ್ವತಂತ್ರವಾಗಿ ತೀರ್ಮಾನಿಸುವ ಬದಲಾವಣೆ ಗಮನಾರ್ಹವಾದುದು. ಇಂಥಹ ಒಂದು ಕತೆ ವೀಣಾಶಾಂತೇಶ್ವರ ಅವರ 'ಕವಲು' ಕತೆಯನ್ನು ಇಲ್ಲಿ ಚರ್ಚಿಸಬಹುದು.

ಇಪ್ಪತ್ತು ವರ್ಷಗಳ ಪ್ರೇಮದ ಸ್ವಾರ್ಥಕ್ಕೆ ಸಿಲುಕುವ ಒಡನಾಟ ಕವಲೊಡೆಯಿತು. ಗಂಡಿಗೆ ಹೆಣ್ಣು ಅನಿವಾರ್ಯ, ಹೆಣ್ಣಿಗೆ ಗಂಡಿನ ಅನಿವಾರ್ಯತೆ ಇಲ್ಲ ಎನ್ನುವಂತೆ ಮಿನಿ ಕೆನಡಾಕ್ಕೆ ಹೊರಡುತ್ತಾಳೆ. ಕಥಾ ನಾಯಕನ ಪತ್ನಿ ಶಾಂತ ತೀರಿಕೊಂಡ ನಂತರ ಮಿನಿಯ ಜೊತೆಗಿನ ಸಂಬಂಧವನ್ನು ಜಗಜಾಹೀರು ಮಾಡುವ ಆಸೆ, ರಾಜಾರೋಷವಾಗಿ ಸಬ್‌ರಿಜಿಸ್ಟರ್ ಆಫೀಸಿನಲ್ಲಿ ಮದುವೆಯಾಗಿ ಸಂಸಾರ ಹೂಡುವಾಸೆ. ಶಾಂತಳ ಅಧ್ಯಾಯವು ಮುಗಿದ ನಂತರ ಮಿನಿಯ ಅಗತ್ಯ ಹೆಚ್ಚಾಗುತ್ತದೆ. ಆತನದೇ ಪ್ರಶ್ನೆಗಳು ಅವನೇ ಕಂಡುಕೊಳ್ಳುವ ಉತ್ತರ. ಮಿನಿ ಅವನಾಡಿಸುವ ಗೊಂಬೆಯಂತೆ. ಆದರೆ ಅದು ಎಷ್ಟು ದಿನ, ಒಂದು ದಿನ ಅವಳು ನಿರ್ಧಾರ ತೆಗೆದುಕೊಳ್ಳಬಲ್ಲಳು. ಅದು ಮಹತ್ವದ ನಿರ್ಧಾರ, ನೀನಿಲ್ಲದೆಯೂ ನಾನು ಒಂಟಿಯೂ ಬಾಳಬಲ್ಲೆ ಎಂಬ ದೃಢ ನಿರ್ಧಾರ. ಆಗ ಇಪ್ಪತ್ತು ವರ್ಷಗಳ ಒಡನಾಟ ಕವಲು ಒಡೆಯುತ್ತದೆ. ಆತನ ಸಂದರ್ಭೋಚಿತ ಪ್ರೇಮಕ್ಕೆ ಬಿರುಕು ಬೀಳುತ್ತದೆ. ಬಿರುಕು ಕವಲಾಗುತ್ತದೆ. ಪುರುಷ ವಿದ್ರೋಹಕ ಸ್ವಭಾವಕ್ಕೆ ಮಿನಿಯ ಮೂಲಕ ಸರಳ ಉತ್ತರ ಲಭಿಸುತ್ತದೆ. ಹೆಂಡತಿ ಸತ್ತ ಮೇಲಿನ ಹೊಸ ಹುರುಪು ಮಿನಿಯ ಮೇಲಿನ ಹೊಸ ತವಕ ಆತನಿಗೆ ಮಾತ್ರ, ತಾಟಸ್ಥ್ಯವಾಗಿರುವ ಮೂಲಕವೇ ತಾನು ಸಹೃದಯರಿಗೆ ತಿಳಿಸಬೇಕಾದುದನ್ನು ಮಿನಿ ಪಾತ್ರ ಹೇಳಿ ಮುಟ್ಟಿಸುತ್ತದೆ. ತನ್ನ ಬದುಕಿನ ಅಸ್ಮಿತೆಯನ್ನು ಉಳಿಸಿಕೊಳ್ಳುವಲ್ಲಿ ಮಿನಿಯ ಪಾತ್ರ ಮುಖ್ಯವಾಗುತ್ತದೆ. ಆಕೆಯು ನೀಡುವ ಉತ್ತರವೇ ಪುರುಷ ವರ್ತನೆಗೆ ಆಘಾತ ನೀಡುವಂತದ್ದಾಗಿರುತ್ತದೆ. ಅವಳ ಬದುಕು, ಅವಳ ನಿರ್ಧಾರವೆನ್ನುವ ಬದಲಾವಣೆ ಮುಖ್ಯವೆನಿಸುತ್ತದೆ.

ಕಮಲಾದಾಸ್ ರವರ 'ಮಂಜು' ಕತೆಯಲ್ಲಿ ಆಕೆ ತೆಳುವಾದ ಬೆಳ್ಳಗಿನ ತಲೆಗೂದಲು, ಕೆಂಪು ಹಲ್ಲುಗಳು, ವಿಚಿತ್ರ ವೇಷ-ಭೂಷಣ, ಮುದುಕನನ್ನು ಮದುವೆಯಾಗಲು ಒಪ್ಪಿದ್ದು ಕೇವಲ ಬಡತನದಿಂದ ಪಾರಾಗಲು, ಅವಳಿಗೆ ಆತನನ್ನು ಮದುವೆಯಾಗುವ ಬಗ್ಗೆ ಯಾವ ಆಸಕ್ತಿಯೂ

ಇರುವುದಿಲ್ಲ, ಎಂಬುದು ಕತೆಯಲ್ಲಿ ತಿಳಿದು ಬರುವ ಅಂಶ. ಹೊರಗೆ ಗಾಯಕನ ಹಾಡು ಕೇಳಿಬರುತ್ತಿತ್ತು.

"ನನ್ನನ್ನು ರಕ್ಷಿಸು.. ನಾನು ಪ್ರೀತಿಯ ಮಡುವಿನಲ್ಲಿ ಬೀಳುತ್ತಿದ್ದೇನೆ ನನ್ನನ್ನು ಪ್ರೀತಿಯಿಂದ ರಕ್ಷಿಸು ತಂದೆ... ಈ ನೋವಿನಿಂದ ಕಾಪಾಡು' ಆತ ಆಲಾಪಿಸಿದ ಗಿಟಾರ್ ಆತನ ಧ್ವನಿಯೊಂದಿಗೆ ಬಿಕ್ಕಿತು" (ಡಾ. ಕಮಲದಾಸ್‌ರವರ ಸಮಗ್ರ ಕಥೆಗಳು:174)

ಹಾಡನ್ನು ಕೇಳುತ್ತಾ ಆಕೆ ಮುದುಕ ಗಂಡನ ಬಗ್ಗೆ ಅಸಹನೆ ವ್ಯಕ್ತಪಡಿಸಿದಳು. ಆತನ ಒರಟು ಪ್ರೀತಿಯನ್ನು, ನಡವಳಿಕೆಯನ್ನು ನಿರಾಕರಿಸಿದಳು, ವಿರೋಧಿಸಿದಳು.

"ಈ ಪ್ರೀತಿಯ ಅಂತ್ಯ ನನ್ನ ಸಾವು.. ಅದು ಗೊತ್ತು ನನಗೆ.. ನನ್ನ ಚಿನ್ನ ನನ್ನನ್ನು ಪಾರುಮಾಡು, ಕಾಪಾಡು.." (ಡಾ. ಕಮಲದಾಸ್‌ರವರ ಸಮಗ್ರ ಕಥೆಗಳು:177) ಬೀದಿಯ ಗಾಯಕ ಹಾಡುತ್ತಿದ್ದ, ಇದು ಆಕೆಯ ಬದುಕಿಗೂ ತಳುಕು ಹಾಕಿದಂತೆ ಇತ್ತು. ವಯಸ್ಸಿನ ಅಂತರ ಹೆಚ್ಚಾಗಿ ಅನಿವಾರ್ಯ ಕಾರಣದಿಂದ ಮದುವೆಯಾಗಿದ್ದ ಮುದುಕನ ಬಗ್ಗೆ ಅಸಹನೆ ಹೆಚ್ಚಾಗಿ ಗಟ್ಟಿಯಾಗಿ ನಗತೊಡಗಿದಳು. ಇವಳ ನಗುವನ್ನು ಕಂಡ ಗಂಡ ಭಯಭೀತನಾಗಿ ಹೋದ "ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ನಿಮ್ಮ ಮಗುವನ್ನು ನಾನು ಸಾಯಿಸುತ್ತೇನೆ' ಎಂದು ಅವಳು ಆವೇಶದಿಂದ ಚೀರಿದಳು" (ಡಾ. ಕಮಲದಾಸ್‌ರವರ ಸಮಗ್ರ ಕಥೆಗಳು:177) ಬದುಕಿನ ಬಗೆಗಿನ ಅತೃಪ್ತಿ, ಅಸಹನೆಯನ್ನು ಈ ರೀತಿ ಹೊರ ಹಾಕಿದಳು. ಅವಳ ಆಯ್ಕೆಗಿದ್ದ ಕಾರಣಗಳು ತಿಳಿಯವು.

'ಹೆಜ್ಜೆಸದ್ದು' ಕತೆಯು ಅಗಲಿದ ಪ್ರಿಯತಮನ ಬಗೆಗಿನ ಭಯವನ್ನು ಅವನು ಕೋಪಿಸಿಕೊಳ್ಳುತ್ತಾನೆಂಬ ಆತಂಕವಿಲ್ಲದೆ ತನಗನಿಸಿದ್ದನ್ನು ಬರೆಯಬಹುದೆಂಬ ನಿರಾಳ ಭಾವ. 'ಮಂಜು' ಕತೆಯಲ್ಲಿ ವಯಸ್ಸಾದ ಮುದುಕನನ್ನು ಮದುವೆಯಾದುದಕ್ಕೆ ಪಶ್ಚಾತ್ತಾಪ ಪಟ್ಟರೆ 'ಹೆಜ್ಜೆಸದ್ದು' ಕತೆಯಲ್ಲಿ ನಿರುಪದ್ರವಿಯಾದ ಮುದುಕನನ್ನು ಬಾಳ ಪ್ರಿಯತಮನನ್ನಾಗಿ ಸ್ವೀಕರಿಸಿದ್ದೆ ಅಲ್ಲವೇ ಎಂದು ಕೇಳಿದಕ್ಕೆ ಉತ್ತರ ಹೀಗಿತ್ತು. "ನೀವು ತಿಳಿದುಕೊಂಡಿರುವುದು ಸರಿಯಲ್ಲ, ನಾನು ನಿಮ್ಮನ್ನು ಏಕೆ ಪ್ರೀತಿಸುತ್ತಿದ್ದೇನೆಂದು ಕೇಳಿದರೆ ಅದಕ್ಕೆ ಸಕಾರಣಗಳ ಉತ್ತರ ಹೇಳಲು ನನ್ನಿಂದ ಸಾಧ್ಯವಿಲ್ಲ. ಅದು ನನಗೆ ಗೊತ್ತು ಇಲ್ಲ. ಅವರು ನಿರುಪದ್ರವಿಯಾದುದರಿಂದ ನಾನು ನಿಮ್ಮನ್ನು ಪ್ರೀತಿಸುತ್ತಿದ್ದೇನೆಂದು ಹೇಳುವುದು ಶುದ್ಧ ತಪ್ಪು" (ಡಾ. ಕಮಲದಾಸ್‌ರವರ ಸಮಗ್ರ ಕಥೆಗಳು:162) ಹನ್ನೆರಡು ವರ್ಷಗಳ ಪ್ರೇಮ. ಆದರೂ ಏನೋ ಅತೃಪ್ತಿ. ಪದೇ ಪದೇ ಕೇಳುತ್ತಿರುವ ಹೆಜ್ಜೆಸದ್ದು, ಭವಿಷ್ಯತ್ ನನ್ನನ್ನೇ ಹುಡಿಕಿಕೊಂಡು ಬರುತ್ತಿದೆಯೇ ಎಂಬ ಅನುಭವ.

ಪ್ರಿಯಕರ ಸತ್ತ ಮೇಲೆ ನಿರಾಳವಾಗಿ ಬರೆಯುತ್ತೇನೆ ಎಂಬ ಭಾವ ತನ್ನನ್ನು ಆವರಿಸುತ್ತಿರುವ ಬಗ್ಗೆ ಆಕೆಗೆ ಕೌತುಕವನ್ನು ಮೂಡಿಸುತ್ತಿದೆ.

ಕಮಲಾದಾಸ್ ರವರ 'ನಪುಂಸಕರು' ಕತೆ ಸಮಾಜದ ಅಲಕ್ಷಿತ ವರ್ಗದವರ ಬದುಕಿನ ಕತೆ. ಮುಂಬೈಯ ಸಯೋನ್ ಕೋಳಿವಾಡ ನಪುಂಸಕರ ಕಾಲೋನಿ ಗುಜರಾತಿನ ಸೇಠಾಣಿಯೊಬ್ಬಳು ಹುಟ್ಟುವಾಗಲೇ ನಪುಂಸಕಳಾಗಿದ್ದ ತಮ್ಮ ಮಗಳನ್ನು ಹುಡುಕಿ ಬಂದಳು. ತುಟಿಯ ಮೇಲೆ ಕಪ್ಪು ಮಚ್ಚೆ ಹುಣ್ಣಿಮೆ ಚಂದ್ರನಂತ ಮುಖ, 19 ವರ್ಷಗಳ ಹಿಂದೆ ಕಾಣೆಯಾಗಿದ್ದ ತನ್ನ ಮಗಳು ಕಳೆದು ಹೋಗಿದ್ದಳು. ಅಂತಹ ಪ್ರವೇಶವಿಲ್ಲದ ಹಿಜಿಡಾಗಳ ಕಾಲೋನಿಗೆ ಮಗಳನ್ನು ನೋಡಲು ಸೇಠಾಣಿ ಬಂದಳು. ಮಗಳ ಮೇಲಿನ ಮಮಕಾರ ಅಷ್ಟು ವರ್ಷಗಳು ಕಳೆದರೂ ಹೋಗಿರಲಿಲ್ಲ. ಹಿಜಿಡಾದ ಗುಂಪಿನ ನಾಯಕಿ ಎಷ್ಟೇ ಎಚ್ಚರಿಕೆ ನೀಡಿ ಮನೆ ಕಡೆಗೆ ಹೊರಡಲು ಹೇಳಿದರೂ ಮಗಳನ್ನು ನೋಡಿಯೇ ಹೋಗುವುದಾಗಿ ನೆಲದ ಮೇಲೆ ಮಗ್ಗುಲಾಗಿ ಕಣ್ಣು ಮುಚ್ಚಿದಳು. ನಂತರ ಸೇಠಾಣಿಗೆ ಎಚ್ಚರಿಕೆ ನೀಡಿದರು. 'ರುಗ್ಮಾ' ಎಂಬುವಳು ನೃತ್ಯವಾಡುತ್ತಾ ಬಂದಳು. ಅವಳ ತುಟಿಯ ಮೇಲಿನ ಮಚ್ಚೆ ಗಮನಿಸಿದಳು. ಅವಳೇ ಮಗಳೆಂದು ಎನಿಸಿದರೂ ಒಪ್ಪಲಾರದ ಸತ್ಯಗಳು. ಇಂಥಹ ಕತೆಗಳು ಸಮಾಜದಲ್ಲಿನ ಭಿನ್ನ ಅನುಭವವನ್ನು ಹೊರಹಾಕುವಲ್ಲಿ, ಅಸಹಾಯಕತೆಯ ಸಂದರ್ಭಗಳನ್ನು ಸಾಹಿತ್ಯದ ಮೂಲಕ ಮೂಡಿಸುತ್ತದೆ. ಈ ಕಥೆಯಲ್ಲಿ ಹಿಜಿಡಾಗಳು ಮೆರೆದ ಮಾನವೀಯತೆ, ಮಗಳ ಮೇಲಿನ ಮೋಹ, ರುಗ್ಮಾಳ ನಿತ್ಯ ಜೀವನ ಕಾಣಬರುತ್ತದೆ.

ವೀಣಾಶಾಂತೇಶ್ವರ ಅವರ 'ಪ್ರಶ್ನೆ' ಕತೆಯಲ್ಲಿ ಸಿನಿಮಾ ಆದರ್ಶ ನಾಯಕಿಯರಂತೆ ನನ್ನ ಸುಖವೇ ನಿನ್ನ ಸುಖವೆಂದು ಪುರುಷರನ್ನು ಏಕೆ ಓಲೈಸಬೇಕೆಂದು 'ಶಶಿ' ತನ್ನಲ್ಲೇ ಪ್ರಶ್ನೇ ಮಾಡಿಕೊಳ್ಳುತ್ತಾಳೆ. "ಹೆಣ್ಮಕ್ಕಳು ಲಗ್ನಾ ಮಾಡಿಕೊಂಡ ಮ್ಯಾಲೆ ಎಲ್ಲಾ ಪ್ರಶ್ನೇನೂ ಬಗೀಹರೀತಾವ" (ನಡೆದದ್ದೇ ದಾರಿ:35) ಎನ್ನುವ ಮಾತು ಕತೆಯಲ್ಲಿ ಕೇಳಿ ಬರುತ್ತದೆ. ಅಂದರೆ ಹೆಣ್ಣು ಮಕ್ಕಳ ಎಲ್ಲಾ ಸಮಸ್ಯೆಗೆ ಲಗ್ನದಿಂದಲೇ ಪರಿಹಾರ ಸಿಗುತ್ತದೆಂಬ ನಂಬಿಕೆ ವ್ಯವಸ್ಥೆಯಲ್ಲಿದೆ. ಇಂಥ ಯಾವ ಕಟ್ಟಿಗೆ ಬೀಳದವಳು ಶಶಿ, ವ್ಯರ್ಥ ದಿನಕಳೆದ ಅರ್ಥಪೂರ್ಣವಲ್ಲದ ಪ್ರಶ್ನೆಗಳು ಮನಸ್ಸನ್ನು ರಾಡಿ ಮಾಡುತ್ತದೆ. ನಂ. I, II, III, IV ಸಂಖ್ಯೆಗಳ ಸಾಲು, ತುಕ್ಕು ಹಿಡಿದ ಕಬ್ಬಿಣದಂತೆ ಪ್ರೀತಿ, ಸುಟ್ಟು ಕರಕಲಾದ ಅವಶೇಷದಂತೆ ಭಗ್ನ ಸ್ಥಿತಿ. ಕಾಡುವ ಪ್ರಶ್ನೆಗಳಿಗೆ ಉತ್ತರವಿಲ್ಲ, ಉತ್ತರವಿಲ್ಲದ ಪ್ರಶ್ನೆಗಳು ಕಾಡುವುದೇಕೆ? ಪ್ರಶ್ನೆಗಳು ಹುಟ್ಟುವ ಮುಂಚೆಯೇ ಕಮರಿ

ಹೋಗಬಹುದಲ್ಲವೇ? ನಿರಾಸೆ, ದುಃಖ, ಅತೃಪ್ತಿ, ಅಸಹಾಯಕತೆ ಪ್ರಶ್ನೆಗಳನ್ನು ಉಲ್ಬಣಗೊಳಿಸುತ್ತವೆ.

ಅನರ್ಥಕಾರಿ ಪ್ರಶ್ನೆಗಳಿಗೆ ಅವಕಾಶ ನೀಡಿದಷ್ಟು ಮಾನಸಿಕ ಗೊಂದಲ ಹೆಚ್ಚುತ್ತದೆ. ಪ್ರಶ್ನೆಗಳ ಹುಟ್ಟಿಗೆ ಕಾರಣ ಮನಸ್ಸು, ಇದಾವುದಕ್ಕೂ ಆಸ್ಪದ ಕೊಡಲೇಬಾರದು. ಕಡೆಗೊಮ್ಮೆ ಕಾಡುವ ಪ್ರಶ್ನೆಗಳನ್ನು ಕುರಿತು ಕತೆಗಾರ್ತಿ ಹೀಗೆ ಹೇಳುತ್ತಾರೆ. "ಪ್ರಶ್ನೆಗಳು ಜೀವನದ ಸಂಗಾತಿಯಂತೆ" (ನಡೆದದ್ದೇ ದಾರಿ:42) ನಮ್ಮ ಜೊತೆಗೆ ಹುಟ್ಟಿ ನಮ್ಮನ್ನು ಕಾಡುವ ಕೊನೆಯಿಲ್ಲದ ಪ್ರಶ್ನೆಗಳು. ಇಷ್ಟೆಲ್ಲಾ ಮಾನಸಿಕ ಹೊಯ್ದಾಟದ ನಂತರ ಮದುವೆಯೇ ಜೀವನದ ಪರಮ ಪರಿಹಾರ ಸಾಧಕವೆಂದೇನೂ ಅನಿಸಲಿಲ್ಲ, ಶಾಂತಿ ಎಂಬುದಿದೆಯೇ? ಗೊತ್ತಿಲ್ಲ ಎಂದೆನಿಸಿದರೂ ಕಾಡುವ ಎಲ್ಲಾ ಪ್ರಶ್ನೆಗಳಿಗೂ ಅಂತ್ಯ ಹಾಡಿ, ಮದುವೆಗೆ ಒಪ್ಪಿರುವೆನೆಂಬ ಪತ್ರವನ್ನು ತಂದೆಗೆ ಬರೆದಳು. ಮುಂದಿನ ಬದುಕಿನ ಬಗೆಗೆ ಶಶಿ ಚಿಂತಿಸುತ್ತಾ "ವರ್ತುಲಾಕಾರವಾಗಿ ಏಳುವ ತೆರೆಗಳು...ಆದರೆ ಕ್ರಮೇಣ ಶಾಂತವಾಗಿ–ಸ್ತಬ್ಧವಾಗಿ ಹೋಗುವ ತೆರೆಗಳು.." (ನಡೆದದ್ದೇ ದಾರಿ:42) ಹಾಗಾದರೆ ಕೊನೆಯ ಪ್ರಶ್ನೆ ಎಂಬುದು ಒಂದಿದೆಯೇ? ಇಲ್ಲ. ಮನುಷ್ಯನಿರುವ ತನಕವೂ ಕಾಡುವ ಪ್ರಶ್ನೆಗಳು ಅಸ್ಥಿತ್ವದಲ್ಲಿರುತ್ತದೆ. ಪ್ರಶ್ನೆಗಳು ಮನಸ್ಸನ್ನು ಕದಡುತ್ತಲಿರುತ್ತವೆ.

'ಕಮಲಾದಾಸ್'ರವರ 'ಹವಳದ ಸರ' ಕತೆಯಲ್ಲಿ ಮಗಳು 'ತಂಗಮಣಿ' ಕೊರಳಲ್ಲಿದ್ದ 'ಹವಳದ ಸರ'ವೇ ಪ್ರಶ್ನೆಯಾಗುತ್ತದೆ. ಅಪ್ಪುಕುಟ್ಟಿ ನಾಯರ್ ಮಾತುಗಳನ್ನು ಕೇಳಿದ ತಂಗಮಣಿಯ ತಾಯಿ ಅಮ್ಮುವಮ್ಮ ಮಗಳನ್ನು ಅನುಮಾನಿಸುತ್ತಾಳೆ. ತಂಗಮಣಿ ಕೆರೆಯಲ್ಲಿ ಮಿಂದು ಶರೀರದ ಉಬ್ಬು ತಗ್ಗುಗಳನ್ನು ಪ್ರದರ್ಶಿಸುತ್ತಾಳೆ ಎಂದು ಅಪ್ಪು ಕುಟ್ಟಿ ನಾಯರ್ ಅಮ್ಮುವಮ್ಮನ ಬಳಿ ಹೇಳಿದ ಮಾತು ಮಗಳಾದ ತಂಗಮಣಿಯ ಮೇಲೆ ಬೇಸರ ಹುಟ್ಟಿಸುತ್ತದೆ. ಈ ಅಸಮಾಧಾನದಿಂದ ತಂಗಮಣಿ ಮನೆಗೆ ಬಂದ ಮೇಲೆ ಅವಳನ್ನು ತಾಯಿ ಅಮ್ಮುವಮ್ಮ ಪ್ರಶ್ನಿಸಿದರು. ಕೆರೆಯ ದಂಡೆಯಲ್ಲಿ ದೇಹ ಪ್ರದರ್ಶನ ಮಾಡುತ್ತಿದ್ದನ್ನು ಕುರಿತು ಕೇಳಿದಳು. ತಂಗಮಣಿ ಅಮ್ಮನ ಮಾತನ್ನು ವಿರೋಧಿಸಿದಳು. ತಂಗಮಣಿ ಕೊರಳಲ್ಲಿದ್ದ ಹವಳದ ಸರ ಅಮ್ಮನಿಗೆ ಕಂಡಿತು. ಈ ಸರ ಹೇಗೆ ಸಿಕ್ತು? ಎಂದು ಅಮ್ಮುವಮ್ಮ ಕೇಳಿದ್ದಕ್ಕೆ ದಾರಿಯಲ್ಲಿ ಸಿಕ್ಕಿದ್ದು ಎಂದು ಹೇಳಿದರೂ, ಕೊಲ್ಲುತ್ತೇನೆ ನಿಜ ಬೊಗಳು ಎಂದು ಗದರಿದರೂ 'ಕೊಂದುಕೋ, ಆದರೆ ಈ ಸರ ನನಗೆ ದಾರೀಲೇ ಸಿಕ್ಕಿದ್ದು' ಎಂದು ದಿಟ್ಟವಾಗಿ ನುಡಿದಳು. 'ಹವಳದ ಸರ' ದಾರೀಲೇ ಸಿಕ್ಕಿದ್ದೋ ಅಥವಾ ಗೊರವರ ಬಳಿ ತಂಗಮಣಿ ತೆಗೆದುಕೊಂಡದ್ದೋ ಎಂದು ವ್ಯಕ್ತಪಡಿಸಿಲ್ಲ.

ಆದರೂ ನಾಯರ್‌ರ ಮಾತನ್ನು ಕೇಳಿ ಅಮ್ಮುವಮ್ಮ ತಂಗಮಣಿಯ ವಿರುದ್ಧ ಮಾತನಾಡಿದಳು. ಅಮ್ಮನ ಅನುಮಾನ ತಂಗಮಣಿಗೆ ಪ್ರಶ್ನೆಯಾಗಿದೆ.

'ಅಮ್ಮಾಳುಕುಟ್ಟಿಯ ಗಂಡ' ಕತೆಯಲ್ಲಿ ಅಮ್ಮಾಳುಕುಟ್ಟಿ ತನ್ನ ಗಂಡನ ವಂಚನೆಯನ್ನು ಅವನ ಹಣದ ಆಸೆಯನ್ನು ಹೇಳುತ್ತಾಳೆ. ಕಳೆದ ವರ್ಷವೇ ಮದುವೆಯಾಗಿದ್ದ ಅಮ್ಮಾಳು ಕುಟ್ಟಿಯ ಮದುವೆ ಆಗಲೇ ಮುರಿದು ಬಿದ್ದಿದೆ. ಇಷ್ಟು ಬೇಗ ನಿನ್ನ ಗಂಡನಿಗೆ ಬೇಡವಾಗ್ಬಿಟ್ಟೆಯೋ? ಎಂದು ಕೇಳಿದ್ದಕ್ಕೆ "ಬ್ಯಾಂಕಿಗೆ ಮುನ್ನೂರು ರೂಪಾಯಿ ಬಡ್ಡಿ ಕಟ್ಲಿಕ್ಕೇಂತ, ತುಲಾ ಮಾಸದಲ್ಲಿ ಸರ ಅಡವಿಟ್ಟರು, ಧನುರ್ ಮಾಸದಲ್ಲಿ ನನ್ನ ಜುಂಕೀನೂ ತಗೋಂಡೋಗಿ ಮಾರಿದರು. ಮಕರ ಮಾಸದಲ್ಲಿ ನನ್ನ ಉಂಗುರಾನೂ ತೊಗೊಂಡೋದ್ರು, ಅಲ್ಲಿಗೆ ಎಲ್ಲಾ ಮುಗೀತು. ಅನಂತರ ನನ್ನ ಗಂಡನ್ನ ನಾನು ನೋಡೇ ಇಲ್ಲಕ್ಕ, ಅವಳು ಯಾವ ಎಗ್ಗೂ ಇಲ್ಲದೆ ವರದಿ ಒಪ್ಪಿಸಿದಳು." (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:289) ಹೀಗೆ ಸಂದರ್ಭೋಚಿತವಾಗಿ ಹೆಣ್ಣು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವಲ್ಲಿ ಪ್ರಯತ್ನ ನಡೆಸುತ್ತಿದ್ದಾಳೆ. ತನ್ನ ಬಳಿಯಲ್ಲಿದ್ದ ಮೌಲ್ಯಯುತ ವಸ್ತುವಿನ ಲಾಭವನ್ನು ಪಡೆದು ಆಕೆಯನ್ನು ನಿರ್ಲಕ್ಷಿಸುತ್ತಿರುವುದು ತಿಳಿದು ಬರುತ್ತದೆ. ಆದರೆ ಆಕೆ ಆ ಸಂದರ್ಭವನ್ನು ನಿರ್ಭಾವುಕವಾಗಿ ಕಾಣುತ್ತಾಳೆ.

ಕಥನಗಳಲ್ಲಿ ಮೂಡಿ ಬಂದಿರುವ ಸಂಬಂಧಗಳ ಚಿತ್ರಣ:

ಸ್ತ್ರೀಪರ ನಿಲುವು ತಾಳಿರುವ ಇಬ್ಬರು ಲೇಖಕಿಯರು ಹೆಣ್ಣು ಗಂಡಿನ ಸಂಬಂಧದ ಬಹುತೇಕ ಎಲ್ಲಾ ಮಗ್ಗುಲುಗಳನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಪರಿಣಾಮಕಾರಿಯಾದ ಸಂವೇದನೆ ಇಬ್ಬರೂ ಲೇಖಕಿಯರ ಕಥನದಲ್ಲಿ ನಡೆದಿರುವ ಪ್ರಯತ್ನವಾಗಿದೆ. ವೀಣಾಶಾಂತೇಶ್ವರ ಅವರ ಕತೆಗಳಲ್ಲಿ ಗಂಡು ಹೆಣ್ಣಿನ ನಡುವಿನ ಸ್ವಾರಸ್ಯಕರ ಸಂಬಂಧದ ಚಿತ್ರಣವಿದೆ, ಸ್ವಾರಸ್ಯದಿಂದ ಬದುಕು ನೀರಸವೆನಿಸುವಷ್ಟು ಮಟ್ಟಿಗೆ ಸಂಬಂಧಗಳ ತಾಕಲಾಟಗಳನ್ನು ಕಾಣಬಹುದಾಗಿದೆ. ಕಮಲಾದಾಸ್‌ರವರ ಕತೆಗಳಲ್ಲಿ ಹೆಣ್ಣು ಗಂಡಿನ ಸಂಬಂಧದ ನಡುವಿನ ಸೂಕ್ಷ್ಮ ಅಂಶಗಳು ಸಹಜವಾಗಿ ಮೂಡಿ ಬಂದಿದೆ. ಒಟ್ಟಾರೆಯಾಗಿ ಕಥನಗಳಲ್ಲಿ ಮೂಡಿ ಬಂದಿರುವ ಸಂಬಂಧಗಳ ಚರ್ಚೆ ನಡೆಸಲು ಹೀಗೆ ವಿಂಗಡಣೆ ಮಾಡಿಕೊಳ್ಳಲಾಗಿದೆ.

ಅ. ಕುಟುಂಬ – ದಾಂಪತ್ಯ

ಆ. ಹೆಣ್ಣು ಗಂಡಿನ ಸಂಬಂಧ

ಇ. ಹೆಣ್ಣು – ಹೆಣ್ಣಿನ ನಡುವಿನ ಸಂಬಂಧ

ಈ. ಹೆಣ್ಣು ಮತ್ತು ಸಮಾಜದ ಸಂಬಂಧ

ಅ. ಕುಟುಂಬ – ದಾಂಪತ್ಯ :

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬಕ್ಕೆ ಮಹತ್ವದ ಸ್ಥಾನವಿದೆ. ಇದಕ್ಕೆ ಪೂರಕವಾಗಿ ದಾಂಪತ್ಯವು ಬದುಕಿನ ಬಹುಮುಖ್ಯ ಘಟ್ಟ. ಈ ಸಂದರ್ಭದಲ್ಲಿ ಸ್ವಭಾವಾನುಸಾರಿಯಾಗಿ, ಸಮಯಕ್ಕೆ ಅನುಗುಣವಾಗಿ ಅನೇಕ ಘಟನೆಗಳು ಜರುಗುತ್ತವೆ. ಬದುಕಿನ ಅನುಭವವೇ ಸಾಹಿತ್ಯವೆನ್ನುವಾಗ, ಇಬ್ಬರು ಲೇಖಕಿಯರು ಕುಟುಂಬ ದಾಂಪತ್ಯಗಳಲ್ಲಿ ಪಿತೃಪ್ರಧಾನ ಮೌಲ್ಯಗಳಿಗೆ ಮುಖಾಮುಖಿಯಾಗುವಂತೆ ಸಾಹಿತ್ಯ ರಚಿಸಿದ್ದಾರೆ. ಇಂಥಹ ಪಿತೃಪ್ರಧಾನ ನಿಲುವುಗಳ ಸೂಕ್ಷ್ಮ ಅಂಶಗಳು ಕತೆಗಳಲ್ಲಿ ಮೂಡಿ ಬಂದಿರುವುದನ್ನು ಚರ್ಚೆ ನಡೆಸಲಾಗಿದೆ. 'ವೀಣಾಶಾಂತೇಶ್ವರ' ಅವರ 'ಬಿಡುಗಡೆ' ಕತೆಯು ಹೆಸರೇ ಸೂಚಿಸುವಂತೆ ಹೆಣ್ಣು ಬಯಸುವ ಸ್ವತಂತ್ರ, ಸ್ವಚ್ಛಂದ ಮನಸ್ಥಿತಿಯ ಚಿತ್ರಣವಿದೆ. ಪುರುಷನೊಟ್ಟಿಗಿನ ಸ್ನೇಹ, ಆಕೆಯ ಭಾವುಕ ಲೋಕದ ಅನಾವರಣ, ಕೌಟುಂಬಿಕ ಜವಾಬ್ದಾರಿಯೊಟ್ಟಿಗೆ, ಉದ್ಯೋಗಸ್ಥೆಯಾಗಿ ಆರ್ಥಿಕ ಸ್ವಾತಂತ್ರ್ಯ ಬಯಸುವ ಸ್ಥಿತಿ ಎಲ್ಲವೂ ನಿರೂಪಿತವಾಗಿದೆ. ಮೂವತ್ತೈದು ವರ್ಷಗಳ ಸುದೀರ್ಘ ದಾಂಪತ್ಯ, ಅಸಂಖ್ಯಾತ ಕನಸುಗಳು ದಹನವಾಗಿದ್ದು ಪುರುಷ ಲೋಕ ರೂಢಿಸಿಕೊಂಡು ಬಂದಿದ್ದ ನಡವಳಿಕೆಯಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟ ಹೆಣ್ಣು ದುಡಿಮೆಗೆ ಮುಂದಾದರೆ ಅವಳ ಸಂಬಳಕ್ಕೂ ಬಿದ್ದ ಕತ್ತರಿ. ಸರೋಜ ಬಯಸಿದ ಸಣ್ಣ ಪುಟ್ಟ ಆಸೆಗಳಿಗೂ ಬೆಲೆಯಿಲ್ಲ. ತನ್ನ ದುಡಿಮೆಗೆ ತಕ್ಕ ಪ್ರತಿಫಲವಿಲ್ಲ. ವ್ಯರ್ಥ ಶ್ರಮ ಆಕೆಯದ್ದು. ಮಾನಸಿಕವಾಗಿ ಉಸಿರು ಕಟ್ಟಿದ ಭಾವನೆಯನ್ನು ಕತೆಯಲ್ಲಿ ಕಾಣಬಹುದಾಗಿದೆ. ಕುಟುಂಬದಲ್ಲಿ ಜೊತೆಯಲ್ಲಿ ಕಳೆದ ದಾಂಪತ್ಯಕ್ಕೆ ಅರ್ಥವಿಲ್ಲ. ಸಂಬಂಧ ಕೇವಲ ಮೇಲ್ನೋಟಕ್ಕೆ ಕಾಣಬರುವಷ್ಟು ಹಿತವಾಗಿಯೂ ಇರಲಿಲ್ಲ. ಯಾಂತ್ರಿಕ ಬದುಕು ಹೆಣ್ಣಿಗೆ, ತನ್ನ ಇಚ್ಛೆಯ ಬದುಕು ಪುರುಷನದ್ದು. ಮುಖವಾಡ ಧರಿಸಿ ಕಳೆಯುವ ದಾಂಪತ್ಯಕ್ಕೆ ಹುರುಳಿಲ್ಲ. ಇಂತಹ ಎಲ್ಲ ಸಂದಿಗ್ಧತೆಗೆ ಕಾರಣನಾದ ಪತಿಯ ಮರಣ ಆಕೆಗೆ ದುಃಖ ತರಲಿಲ್ಲ. ಬದಲಿಗೆ ಸಿಕ್ಕ ಬಿಡುಗಡೆ ಆಯಿತು.

ಈ ಸಮಯದಲ್ಲಿ 'ಕಮಲಾದಾಸ್ ರವರ 'ಡಾಕ್ಟರನ ಸಾವು' ಕತೆಯನ್ನು ಗಮನಿಸಬಹುದಾಗಿದೆ. ಅರನತ್ತರ ಹರೆಯದ ಡಾಕ್ಟರಿಗೆ ಹೊಟ್ಟೆಯ ಮೇಲ್ಭಾಗದಲ್ಲಿ ಕಾಣಿಸಿಕೊಂಡ ನೋವು. ಇದ್ದಕ್ಕಿದ್ದಂತೆಯೆ ತನ್ನ ಪತ್ನಿಯ ಬಡಕಲು ದೇಹ ಬೊಕ್ಕತಲೆ ಎಲ್ಲವೂ ತಾನು ಅವಳನ್ನು ನಡೆಸಿಕೊಂಡ ಪರಿಣಾಮವೇ ಎಂದೆನಿಸತೊಡಗುತ್ತದೆ. ಆಕೆಗಿದ್ದ ಒಂದು

ಸಿಂಗರ್ ಮಿಷಿನ್ ಕೊಳ್ಳುವ ಬಯಕೆ, ಒಂದು ಮಗು ಬೇಕೆಂಬ ಆಕೆಯ ಆಸೆ ಡಾಕ್ಟರ್ ಪತಿಯ ಕಾರಣದಿಂದ ಶಾಶ್ವತವಾಗಿ ಬಯಕೆಯಾಗಿಯೇ ಉಳಿಯುವಂತೆ ಆಯಿತು. ಅತ್ತು, ಕರೆದು ಗೋಗರೆದರೂ ಅವಳ ಆಸೆ ಯಾವುದೂ ಈಡೇರಿರಲಿಲ್ಲ. ಅವಳೆಲ್ಲ ಕನಸುಗಳು ಭಗ್ನಗೊಂಡರು ಡಾಕ್ಟರ್ ನೆನಪು ಮಾಡಿಕೊಂಡ ಪತ್ನಿ ಹೀಗೆ 'ಎಂದೂ ಸುಂದರಿಯಾಗಿರದಿದ್ದರೂ, ವಿದ್ಯೆಬುದ್ಧಿಗಳು ಇಲ್ಲವಾದರೂ ಈತನಕ ಅವಳೊಬ್ಬ ಪತ್ನಿಯಾಗಿದ್ದಳು.' ಪತ್ನಿ ಎಂಬುದಕ್ಕೆ ಇರುವ ಎಲ್ಲಾ ಪೂರ್ವಾಗ್ರಹ ಪೀಡಿತ ಸಂಗತಿಗಳು ಅವಳಿಗೆ ಒಪ್ಪುವಂತಿತ್ತೋ ತನ್ನ ಪತ್ನಿ ಹೇಗಿರಬೇಕೆಂದು ಡಾಕ್ಟರ್ ಬಯಸಿದ್ದನೋ ಜಾನಕಿ ಹಾಗೇ ಜೀವ ಸವೆಸಿದ್ದಳು. ಸಮಾಜದಲ್ಲಿ ಪೂರ್ವಾಗ್ರಹ ಪೀಡಿತವಾಗಿದ್ದ ಪತ್ನಿಯ ಬಗೆಗಿನ ಪೂರ್ವಾಗ್ರಹ ಜಾನಕಿಯ ಮೂಲಕ ವ್ಯಕ್ತಗೊಳ್ಳುವಂತಿತ್ತು. ಡಾಕ್ಟರ್‌ನಿಗೆ ತನಗರಿಯದೆ ಸನ್ನಿಹಿತವಾದ ಸಾವು, ಆ ಸಾವಿನ ದವಡೆಯಲ್ಲಿ ತನ್ನ ಹೆಂಡತಿಯ ಎಲ್ಲಾ ಆಸೆಗಳು ಅಪೂರ್ಣಗೊಂಡಿವೆ ಎಂಬ ಪ್ರಜ್ಞೆ ಕಾಡುತ್ತದೆ. ಸಾವಿನ ಕಡೆಯ ಕ್ಷಣದಲ್ಲಿ ಹೆಂಡತಿಯನ್ನು ಇಲ್ಲಿಯ ತನಕ ನಡೆಸಿಕೊಂಡ ರೀತಿಗೆ ಮರುಗುವ ಮಾನವೀಯ ಪ್ರಜ್ಞೆ ಜಾಗೃತವಾಗುವುದು ತಿಳಿಯುತ್ತದೆ, 'ಬಿಡುಗಡೆ' ಕತೆಯು ಒಂದು ಹೆಜ್ಜೆ ಮುಂದೆ ಸಾಗುತ್ತಾ ಹೆಣ್ಣು ತಾನು ಬಯಸಿದ್ದೆಲ್ಲವನ್ನು ಕಸಿದುಕೊಳ್ಳುವ ಪುರುಷ ಲೋಕಕ್ಕೆ ಮೌನ ಪ್ರತಿರೋಧ ತೋರುವಂತಿದೆ. ಪುರುಷ ಪ್ರಜ್ಞೆ ಬದಲಾಗುವ ಕ್ರಮ ಕಮಲಾದಾಸ್ ಕತೆಯಲ್ಲಿ ಮೂಡಿಬಂದರೆ, ಗಂಡನ ಅನುಪಸ್ಥಿತಿಯಲ್ಲೂ ನೆಮ್ಮದಿ ಕಾಣುವ 'ಸರೋಜ'ಳ ಚಿತ್ರಣ ಸಹಜವಾಗಿ ಮೂಡಿ ಬಂದಿದೆ. ಸಾವಿನ ಸಂದರ್ಭದಲ್ಲಿ ಹೆಂಡತಿಯ ಆಸೆ ಈಡೇರಿಸದಲಾರಕ್ಕಾಗಿ ಡಾಕ್ಟರ್ ಮರುಗಿದರೆ, ಯಾವುದೇ ಕನಿಕರವಿಲ್ಲದೆ ಸರೋಜಳನ್ನು ನಡೆಸಿಕೊಂಡದ್ದು 'ಬಿಡುಗಡೆ' ಕತೆಯಲ್ಲಿದೆ. ಯಾವ ಸಂದರ್ಭದಲ್ಲಾದರು ಹೆಣ್ಣು ಸಹಿಸಿ ನಡೆಯುವ ಅನಿವಾರ್ಯ ಸಂದರ್ಭವಿದೆ. ಪ್ರತಿಕ್ರಿಯೆ ನೀಡದ ಮೌನಗಳು ಹಲವು ಸಂಗತಿಗಳನ್ನು ಅಭಿವ್ಯಕ್ತಿಸುತ್ತದೆ.

ಕಮಲಾದಾಸ್‌ರವರ 'ಹಸಿರು ರೇಷ್ಮೆ ಸೀರೆ' ಕತೆಯಲ್ಲಿ ಸಾವಿನ ಕೊನೆಯ ಕ್ಷಣದಲ್ಲಿ ಹಸಿರು ರೇಷ್ಮೆ ಸೀರೆ ಬಯಸುವ 'ಅಮ್ಮು'ವಿನ ಚಿತ್ರಣವಿದೆ. ಏಳು ವರ್ಷಗಳ ದಾಂಪತ್ಯ, ಹೆಜ್ಜೆ ಇಡಲಾರದ ಪುಟ್ಟ ಮಗು, ಬದುಕುವ ಆಸೆ ಆದರೆ ಕ್ಯಾನ್ಸರ್ ಸಾವಿನ ದವಡೆಗೆ ಅಮ್ಮುವನ್ನು ಕೊಂಡೊಯ್ದಿತ್ತು. ಪತ್ನಿಯ ಸಾವಿನ ಸ್ಥಿತಿ 'ಮೆನನ್'ರ ಪ್ರೀತಿಯ ಪತ್ನಿಯ ದೂರಾಗುವ ನೋವು ಅಮ್ಮುವಿಗೆ ತನ್ನ ಪುಟ್ಟ ಕಂದ ಹೆಜ್ಜೆ ಇಡುವ, ಹಲ್ಲು ಬರುವುದನ್ನು ನೋಡಬೇಕೆಂಬ ಆಸೆ ಈಡೇರುವುದೇ ಎಂಬ ಚಿಂತೆ. ಬದುಕಿ ಬಾಳುವ ವಯಸ್ಸಿನಲ್ಲಿ ಕೇವಲ ಏಳು ವರ್ಷ ಕಳೆದ ದಾಂಪತ್ಯ ಸಾವಿನಿಂದಾಗಿ ಮುದುಡಿ ಹೋದ ಮನಸ್ಸು. ಆತ್ಮೀಯತೆಯಿಂದ ನಡೆದುಕೊಳ್ಳುವ

ದಂಪತಿಗಳ ನಡುವೆ ಸಂಭವಿಸಿದ ಕೈ ಮೀರಿದ ದುರಂತವಾಗಿ ಕಂಡು ಬರುತ್ತದೆ. ಈ ಸಂದರ್ಭದಲ್ಲಿ 'ನೇಮಿಚಂದ್ರರ 'ನೀನಿರುವೆ ನಮ್ಮೊಟ್ಟಿಗೆ' ಕತೆಯನ್ನು ನೆನೆಯಬಹುದು.

ನಮ್ಮವರನ್ನು ಕಳೆದುಕೊಂಡರೂ ನಾವಿರುವ ತನಕ ನೆನಪುಗಳು ನಮ್ಮನ್ನು ಕಾಡುತ್ತದೆ. ಡಾಕ್ಟರನ ಸಾವು ಕಳೆದು ಹೋಗುವ ಸಂಬಂಧವಾದರೆ ಹಸಿರು ರೇಷ್ಮೆ ಸೀರೆಯ ಅಮ್ಮು ಮೆನನ್ ದಂಪತಿಗಳು ಕಳೆದುಕೊಳ್ಳುವ ಸಾವಿನಿಂದ ದೂರವಾಗುವ ತಲ್ಲಣವನ್ನು ಅನುಭವಿಸುತ್ತಾರೆ. ಕಮಲಾದಾಸ್‌ರವರ ಮತ್ತೊಂದು ಕತೆ 'ನೆನಪುಗಳು' ಕಳೆದುಹೋದ ನೆನಪನ್ನು ಕೆದಕುವ ಸಂದರ್ಭವನ್ನು ತಾಯಿ ತನ್ನ ಮಗಳಾದ ಸೀತೆಯನ್ನು ಅಲಂಕರಿಸಿ ರಾತ್ರಿ ಕೊಠಡಿಗೆ ಕಳುಹಿಸುವಾಗ ಇಪ್ಪತ್ತು ವರ್ಷಗಳ ಹಿಂದೆ ತನ್ನ ತಾಯಿ ಹೇಳಿದ ಮಾತುಗಳು ನೆನಪಾಗಿತ್ತು. ಕಣ್ಣೀರಿಟ್ಟಳು. ಅದಕ್ಕೆ ಕಾರಣ ಸತ್ತ ಆಕೆಯ ಗಂಡನ ನೆನಪು. ತನ್ನ ಮಗಳ ವಿವಾಹದ ದಿನ, ಆ ರಾತ್ರಿ ತನ್ನ ಬದುಕಿನ ನೆನಪುಗಳು ಮನಸ್ಸಿನಲ್ಲಿ ಆವರಿಸಿತ್ತು. ಗಂಡನನ್ನು ಕಳೆದುಕೊಂಡರೂ, ನೆನಪುಗಳು ಸದಾ ಹಸಿರು. ಆಕೆಯ ಸ್ವಗತದ ಮೂಲಕ ಅವಳು ತನ್ನ ಗಂಡನ ನೆನಪನ್ನು ಮಾಡಿಕೊಳ್ಳುವ ಜೊತೆಗೆ ಆಕೆ ತನ್ನ ಗಂಡನೊಂದಿಗೆ ಕಳೆದ ಕ್ಷಣಗಳನ್ನು ಅನುಭವಿಸುವ ಚಿತ್ರಣವಿದೆ.

'ಕಮಲಾದಾಸ್'ರವರ ಕತೆ 'ಡಾರ್ಜಲಿಂಗ್' ಪತ್ನಿಯನ್ನು ಕಳೆದುಕೊಳ್ಳುವೆ ಎಂಬ ಆತಂಕ ಒಂದೆಡೆಯಾದರೆ, ನಡುವಯಸ್ಸಿನವರು ಹುಟ್ಟು ಹಬ್ಬ ಆಚರಿಸಿಕೊಳ್ಳಬಾರದೆಂಬ ನೆಪದಿಂದ ಹೆಂಡತಿಗೆ ಉಡುಗೊರೆಯಾಗಿ ಕೆಂಪು ಸೀರೆಯನ್ನು ಕೊಡಿಸದೇ ಇದ್ದುದಕ್ಕೆ ತಡವಾಯಿತೆಂಬ ಪಶ್ಚಾತ್ತಾಪವಾಗುತ್ತದೆ. ಆತನ ಒಳ ಮನಸ್ಸು ಸಂಕಟಪಡುತ್ತಿತ್ತು. ಆಕೆ ಸತ್ತರೆ ವಿದ್ಯುತ್ ಚಿತಾಗಾರ, ಬಯಸಿದರೆ ಆಸ್ಪತ್ರೆಯವರು ನನ್ನನ್ನು ದಿವಾಳಿ ಮಾಡುತ್ತಾರೆಂಬ ಆತಂಕ, ಮುಂದೆ ಮಗುವನ್ನು ನೋಡಿಕೊಳ್ಳುವವರಾರು? ನನಗೆ ಸಾಲಕೊಡುವ ಗೆಳೆಯನೂ ಊರಿನಲ್ಲಿಲ್ಲ. ಹೀಗೆ ದಿಢೀರನೆ ಎದುರಾಗುವ ಸಂದರ್ಭಗಳು, ಆರ್ಥಿಕ ಮುಗ್ಗಟ್ಟು, ಕಳೆದುಕೊಳ್ಳುವ ನೋವು ಇವುಗಳಿಗೆ ಪ್ರತಿಕ್ರಿಯೆ ನೀಡುವ ಚಿತ್ರಣವಿದೆ. ಮಧ್ಯಮವರ್ಗದ ಕುಟುಂಬದಲ್ಲಿ ಉಂಟಾಗುವ ಅನೇಕ ಸಂದರ್ಭಗಳ ಪರಿಣಾಮವನ್ನು ಕಥೆ ಚಿತ್ರಿಸುತ್ತದೆ.

'ಆಭರಣಗಳು' ಎಂಬ ಕಮಲಾದಾಸ್‌ರವರ ಕತೆಯಲ್ಲಿ ಗಂಡ ತನ್ನ ಪತ್ನಿಯ ಎಲ್ಲಾ ಆಭರಣಗಳನ್ನು ಮಾರಾಟ ಮಾಡಿದ್ದ. ಇದರಿಂದ ಆಕೆಯ ಆರೋಗ್ಯ ಕೆಟ್ಟಿತ್ತು. ತಾನು ಮಾಡಿದ ಈ ಒಡವೆಗಳ ಮಾರಾಟದಿಂದಲೇ ತನ್ನ ಹೆಂಡತಿಗೆ ಈ ಸ್ಥಿತಿ ಒದಗಿ ಬಂದಿರುವುದೆಂದು ಮರುಗಿದ. ಕಡೆಗೊಮ್ಮೆ ತನ್ನೆಲ್ಲಾ ಸಂಪಾದನೆಗಳನ್ನು ಉಪಯೋಗಿಸಿ ಒಡವೆಗಳನ್ನು ತೆಗಿಸಿಕೊಟ್ಟ,

ಆಕೆಯ ಆರೋಗ್ಯದಲ್ಲಿ ಸುಧಾರಣೆ ಆಯಿತು. 'ನೀನು ನನಗೆ ಮತ್ತೆ ಸಿಕ್ಕಿದೆಯಲ್ಲ. ಇನ್ನು ನನಗೆ ಬೇರಾವುದರ ಅಗತ್ಯವಿಲ್ಲ' ಎಂದು ಸಂತೋಷ ಪಟ್ಟ ಆದರೆ ಒಂದು ವರ್ಷದ ನಂತರ ಆಕೆಗೆ ಕಾಯಿಲೆ ಮರಳಿ ಬಂದಿತು. ಆಕೆ ಅಪ್ರಜ್ಞೆಗೆ ಜಾರಿದಳು. ಆತ ಅವಳ ಹೊಸ ಆಭರಣಗಳನ್ನೆಲ್ಲಾ ಮಾರಿದ. ನಿರ್ಜೀವ ಆಭರಣಕ್ಕಿಂತ ಜೀವಂತವಾಗಿದ್ದ ಹೆಂಡತಿಯು ಆತನಿಗೆ ಮುಖ್ಯವಾಯಿತೋ ಅಥವಾ ಆಭರಣಗಳನ್ನು ಮಾರಿ ಹಣಗಳಿಸುವ ಅಗತ್ಯವಿತ್ತೋ ಆಕೆಯ ಆಭರಣಗಳನ್ನು ಬಳಸಿಕೊಂಡ. ಆದರೂ ಅವರ ದಾಂಪತ್ಯ ಉಳಿಯಲಿಲ್ಲವೆಂಬ ನಿರಾಶೆ ಕತೆಯಲ್ಲಿ ವ್ಯಕ್ತವಾಗಿದೆ.

ವೀಣಾಶಾಂತೇಶ್ವರ ಅವರ ಕತೆ 'ತಿರುಗಿ ಹೋದಳು' ಎರಡು ದಾಂಪತ್ಯದ ಚಿತ್ರಣಗಳನ್ನು ಒಟ್ಟಿಗೆ ಪರಿಚಯಿಸುತ್ತದೆ. ವಿದ್ಯೆ ಕಲಿಯದ 'ಹಮೀದಾ'ಳ ವೈವಾಹಿಕ ಬದುಕು ಮತ್ತು ವಿದ್ಯೆ ಕಲಿತು, ಉದ್ಯೋಗಸ್ಥೆಯಾಗಿದ್ದ ಲಕ್ಷ್ಮಿಯ ಬದುಕಿನ ಚಿತ್ರಣವಿದೆ. ಗೌಸ ಮತ್ತು ಸುರೇಶನ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಇಲ್ಲ, ವ್ಯತ್ಯಾಸವೂ ಇಲ್ಲ. ಆರಂಭದಿಂದ ಅಂತ್ಯದವರೆಗೂ ಹೆಣ್ಣನ್ನು ತನಗೆ ಬೇಕಾದಂತೆ ಬಳಸಲ್ಪಡುವ ಚಿತ್ರಣವಿದೆ. ಆಯ್ಕೆ ಅರಿಯದ ವಯಸ್ಸಿನಲ್ಲಿ ವಿವಾಹವಾದ ಹಮೀದಾಳಿಗೂ ತಾನೇ ಸ್ವತಃ ಬದುಕನ್ನು ಆರಿಸಿಕೊಂಡ ಲಕ್ಷ್ಮಿಯ ಜೀವನಕ್ಕೂ ಹೆಚ್ಚೇನೂ ವ್ಯತ್ಯಾಸವಾಗಲೇ ಇಲ್ಲ. ಇಬ್ಬರೂ ಅನುಭವಿಸಿದ ಬದುಕಿನ ಅನುಭವಗಳು ಒಂದೇ. ಪತಿಯೊಡನೆ ಒಡನಾಟ ಒಂದೇ ತೆರನದ್ದಾಗಿದೆ. ಪುರುಷ ಸಮಾಜದ ಧೋರಣೆ ವರ್ಗಾತೀತ ಧರ್ಮಾತೀತವಾಗಿದೆ.

ಅಕ್ಷರಸ್ಥ ಲಕ್ಷ್ಮಿಗೂ ಅನಕ್ಷರಸ್ಥೆ ಹಮೀದಾಳ ಬದುಕು ಒಂದೇ ಆಯಿತು. ಪ್ರೇಮಿಸಿ ಪತಿಯನ್ನು ಆಯ್ಕೆ ಮಾಡಿಕೊಂಡ ಲಕ್ಷ್ಮಿಯೂ ಅನುಭವಿಸಿದ್ದು ಪುರುಷಕ್ರೌರ್ಯ, ಸ್ವಾರ್ಥಸ್ವಭಾವದ ಅಪೇಕ್ಷಣೀಯ ನಡವಳಿಕೆಯನ್ನೇ. ಏನೂ ಅರಿಯದೆ ಒಪ್ಪಿ ವಿವಾಹವಾದ ಹಮೀದಾಳದ್ದು ಕೂಡ ಅಂಥಹದ್ದೇ ಬದುಕು. ಬಹುತೇಕ ದೈಹಿಕವಾಗಿ, ಆರ್ಥಿಕವಾಗಿ ಹೆಣ್ಣನ್ನು ಬಗ್ಗು ಬಡಿಯುವ ಪುರುಷ ಸ್ವಭಾವ ಕೇವಲ ಹಮೀದಾ ಲಕ್ಷ್ಮಿಯ ಕತೆಯಲ್ಲ. ಇಡೀ ಸ್ತ್ರೀಕುಲದ ಕತೆ. ಹೀಗೆ ನಡೆಸಿಕೊಳ್ಳುವ ಮೂಲಕ ಹೆಣ್ಣನ್ನು ಅಂಕೆಯಲ್ಲಿಟ್ಟು ತನ್ನ ಇಚ್ಛೆಯಂತೆ ಬದುಕು ಸಾಗಿಸುವ ಬಗ್ಗೆ ಪುರುಷ ಸ್ವಭಾವದ ನಡವಳಿಕೆಯನ್ನು ಕತೆ ನೇರವಾಗಿಯೇ ಹೇಳುತ್ತದೆ. ಹಮೀದಾಳ ಬದುಕನ್ನು ಹತ್ತಿರದಿಂದಲೇ ಕಂಡ ಲಕ್ಷ್ಮಿ ತನಗೆ ಅನುಕೂಲವಾದಾಗ ಬಂದು ಹಣಕೊಟ್ಟು ಹೋಗುವ, ದೈಹಿಕವಾಗಿ ಹಿಂಸಿಸಿ ಹತ್ತು ಮಕ್ಕಳ ತಾಯಿ ಮಾಡುವ ಗೌಸನ ವಿರುದ್ಧ ಲಕ್ಷ್ಮಿ ಹೀಗೆ ಮಾತನಾಡುತ್ತಾಳೆ. "ನೀನ್ಯಾಕೆ ಆತನನ್ನು ಸೇರಿಸಿಕೊಳ್ಳುತ್ತೀ ಹಮೀದಾ? ಹೆಂಡತಿ ಮಕ್ಕಳ ಬಗ್ಗೆ ತನ್ನ ಕರ್ತವ್ಯ ತಿಳಿಯದ ಗಂಡನ್ನು ಬೆಂಕಿ ಹಾಕಿ ಸುಡಬಾರದೆ? ಆತ ಬಂದಾಗ

ಒದ್ದು ಕಳಿಸಬಾರದೇ? ಅವನಿಂದ ನಿನಗೇನೂ ಸಹಾಯವಿಲ್ಲ, ಲಾಭವಿಲ್ಲ, ಮತ್ತೇಕೆ ಅವನು ಬಂದಾಗ ಇಷ್ಟು ಸಡಗರ ಪಡುವುದು? ಮುಖಕ್ಕೆ ಉಗಿದು ಆಚೆ ನೂಕಬಾರದೆ ಅವನನ್ನ ?" (ನಡೆದದ್ದೇ ದಾರಿ:202) ಹೀಗೆನ್ನುತ್ತಿದ್ದ ಲಕ್ಷ್ಮಿ ತನ್ನ ಬದುಕು ಇದೇ ದಾರಿಯಲ್ಲಿ ಸಾಗುವಾಗ ಎಲ್ಲಾ ಮನವರಿಕೆಯಾದರೂ ಮೌನವಾಗಿ ಸಹಿಸಿಕೊಳ್ಳುತ್ತಾಳೆ. ಇದೂ ಕೇವಲ ಲಕ್ಷ್ಮಿಯ ಸಂದರ್ಭವಲ್ಲ. ಇಡೀ ಭಾರತೀಯ ಸ್ತ್ರೀಯರ ಸಂದರ್ಭ ಆರ್ಥಿಕವಾಗಿ ಸ್ವತಂತ್ರವಾಗಿದ್ದ ಲಕ್ಷ್ಮಿಗೆ ಗಂಡನ ಹಣ ಮುಖ್ಯವೆನಿಸಲಿಲ್ಲ. ಆತನ ಪ್ರೀತಿಯಷ್ಟೇ ಸಾಕೆಂಬ ಸಮಾಧಾನ. ಮದುವೆಗೆ ಮೊದಲು ನಡೆದುಕೊಳ್ಳುತ್ತಿದ್ದ ರೀತಿ, ಆಡಿದ ಮಾತು, ನೀಡಿದ ಆಶ್ವಾಸನೆಗೆ ಬೆಲೆಯೇ ಇರಲಿಲ್ಲ. ಸುರೇಶನ ಎಷ್ಟೋ ನಡವಳಿಕೆ, ರೀತಿ ನೀತಿಗಳು ಅಸಮಾಧಾನವೆನಿಸಿದರು ಲಕ್ಷ್ಮಿ ತವರಿಗೆ ಮರಳಿ ಬಂದವಳು ತಿರುಗಿ ಹೋದಳು. ಸ್ವೀಕಾರ ತಿರಸ್ಕಾರಗಳ ನಡುವೆ ದಾಂಪತ್ಯ ಸಾಗಿತ್ತು.

ಕಮಲಾದಾಸ್‌ರವರ 'ಕಳೆದುಹೋದ ನೀಲಾಂಬರಿ' ಕತೆಯಲ್ಲಿ ಅತೃಪ್ತ ದಾಂಪತ್ಯದ ಚಿತ್ರಣವಿದೆ. ಡಾ. ಸುಭದ್ರದೇವಿ ಚಂದ್ರಶೇಖರ ಮೆನನ್ ಆದರ್ಶ ದಂಪತಿಗಳೆಂದು ಮೇಲ್ನೋಟಕ್ಕೆ ಕಾಣಿಸುತ್ತಿದ್ದರು. ಡಾಕ್ಟರ್ ವೃತ್ತಿಯಲ್ಲಿ ತೊಡಗಿದ್ದ ಸುಭದ್ರಳನ್ನು ಕುರಿತು ಗಂಡ ಮೆನನ್ ಹೀಗೆ ಹೇಳುತ್ತಿದ್ದ. "ಸುಭದ್ರ ನಿನ್ನ ಪೂರ್ತಿ ಪ್ರೀತಿ ಸಿಗುವುದು ನಿನ್ನ ರೋಗಿಗಳಿಗಷ್ಟೇ, ಚಿಕಿತ್ಸೆ ನೀಡುವವಳ ಹಾಗೂ ಪಡೆಯುವವರ ಸಂಬಂಧವಷ್ಟೇ ನಿನಗೆ ಗೊತ್ತಿರುವುದು ನಿಜ ಹೇಳಲಾ, ನಿನ್ನ ರೋಗಿಗಳನ್ನು ಕಂಡರೆ ನನಗೆ ಎಲ್ಲಿಲ್ಲದ ಹೊಟ್ಟೆಯುರಿಯಾಗುತ್ತದೆ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:340) ಎನ್ನುತ್ತಿದ್ದನು. ಮೆನನ್ ಮತ್ತು ಡಾ. ಸುಭದ್ರಳ ದಾಂಪತ್ಯಕ್ಕೆ ವೃತ್ತಿ ಅಡ್ಡಿಯಾಯಿತು. ಸುಭದ್ರ ತನ್ನ ಹಿಂದಿನ ನೆನಪುಗಳನ್ನು ಮೆಲುಕು ಹಾಕಿದಳು. ಈಜಲು ಬಾರದ ತಾನು ನೀರಿನಲ್ಲಿ ಬಿದ್ದಾಗ ಶಾಸ್ತ್ರಿಗಳು ಅದೆಲ್ಲಿಂದಲೋ ಬಂದು ನೀರಿಗೆ ಧುಮುಕಿ ತನ್ನನ್ನು ಮೇಲಕ್ಕೆ ಕರೆತಂದ ನೆನಪು. ಅಂತಹದೆ ಮಧುರ ನೆನಪನ್ನು ಹೊತ್ತು ಮೂವತ್ತು ವರ್ಷಗಳ ನಂತರ ತನ್ನ ತವರೂರಾದ ಮಧುರೆಗೆ ಬಂದರೂ ಶಾಸ್ತ್ರಿಗಳನ್ನು ಭೇಟಿ ಮಾಡಿ ತನ್ನ ಮೂವತ್ತು ವರ್ಷಗಳು ಅವಿತಿಟ್ಟ ಭಾವವನ್ನು ಹೇಳಬೇಕೆನಿಸಿದರೂ ಸಾಧ್ಯವಾಗಲಿಲ್ಲ. ಶಾಸ್ತ್ರಿಗಳು ಸಹ 'ಜ್ಞಾನಂ'ಳನ್ನು ವಿವಾಹವಾಗಿ ಅತೃಪ್ತವಾಗಿಯೇ ಬದುಕು ಸಾಗಿಸಿದ್ದರು. ಸುಭದ್ರಳ ಕುರಿತ ಅವಿತಿಟ್ಟ ಭಾವನೆ ಹೊರ ಬರಲೇ ಇಲ್ಲ. ಎರಡು ಅತೃಪ್ತ ದಾಂಪತ್ಯದ ಚಿತ್ರಣ ಕತೆಯಲ್ಲಿ ಮೂಡಿಬಂದಿದೆ. ಸುಭದ್ರ, ಜ್ಞಾನಂ, ಶಾಸ್ತ್ರಿಗಳು, ಮೆನನ್ ನಾಲ್ಕು ಜನರು ಅತೃಪ್ತವಾಗಿಯೇ ಬದುಕು ಸಾಗಿಸಿದವರು. ಸುಭದ್ರ ತನ್ನ ವೃತ್ತಿಯಲ್ಲಿ ನಿರತಳಾದರೆ ಶಾಸ್ತ್ರಿಗಳು ಸಂಗೀತ ಪಾಠ ಹೇಳುತ್ತಲೇ ಅರೆ ಹೊಟ್ಟೆ ತುಂಬಿಸಿಕೊಂಡೇ ಜೀವನ ನಡೆಸಿದರು. ಹಣವಿದ್ದ ಸುಭದ್ರ ಮೆನನ್ ಆಗಲಿ ಶ್ರಮ ಪಟ್ಟು ಬದುಕು ಸಾಗಿಸುತ್ತಿದ್ದ ಶಾಸ್ತ್ರಿ ದಂಪತಿಗಳು ಕೂಡ ಕಳೆದು ಹೋದ

ನೀಲಾಂಬರಿಯ ರಾಗವನ್ನು ಹುಡುಕುತ್ತಲೇ ಇದ್ದರು. ನೀಲಾಂಬರಿ ರಾಗ ಆಲಾಪದ ನೆನಪಿನೊಂದಿಗೆ ಬದುಕು ನೂಕಿದರು.

ಆ. ಹೆಣ್ಣು ಗಂಡಿನ ಸಂಬಂಧ :

ದಾಂಪತ್ಯದ ಹೊರತಾಗಿ ಹೆಣ್ಣು-ಗಂಡಿನ ಸಂಬಂಧಗಳು ಸಮಾಜದಲ್ಲಿ ಸಹಜವಾಗಿ ಮೂಡಿರುತ್ತದೆ. ಇಂತಹ ವೈವಿಧ್ಯಮಯವಾದ ಚಿತ್ರಣಗಳು ಇಬ್ಬರು ಲೇಖಕಿಯರಲ್ಲಿ ಮೂಡಿ ಬಂದಿರುವ ಬಗೆಯನ್ನು ಈ ಮೂಲಕ ಚರ್ಚೆಗೊಳಪಡಿಸಿದ್ದೇನೆ. 'ಮಳೆಹಾತೆ'ಗಳಂತೆ ಎರಡು ಕಾಲು ಗಂಟೆಗಳ ಪ್ರೇಮ. "ನೀನು ನನ್ನ ಮೇಲೆ ತೋರಿದ ಪ್ರೀತಿ ಬೆಂಕಿಯಾಗಿತ್ತು. ಅದರಲ್ಲಿ ನೀನು ಸುಟ್ಟು ಹೋಗುವೆಯೆಂದು ಭಾವಿಸಿದೆ. ಆದರೂ ನೀನು ಸಾವಿನಿಂದ ಪಾರಾದೆ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:142) ಸುಡುವ ಸಂಬಂಧಗಳು ಬದುಕಿನಲ್ಲಿ ಜೊತೆಯಾಗಿ ಬಂದು ಹೋಗುವ ಚರ್ಚೆ ಕತೆಗಳಲ್ಲಿವೆ. ದೇಹ, ಆಕಾರಗಳನ್ನು ಮೀರಿ ಬೆಳೆದ ಬಾಂಧವ್ಯ ಬೆಳೆದು ಅಳಿಸುವ ಸಂದರ್ಭವನ್ನು ಕತೆಗಳು ಚರ್ಚಿಸುತ್ತವೆ.

"ಆಕಾರವಿರುವ ನಾನು !
ದೇಹವಿಲ್ಲದ ದೇವರುಗಳು !
ಬಂಗಾರಲೇಪಿತ ರತ್ನದಂತೆ ಅವರ ಮೌನದಲ್ಲಿ ಜ್ಞಾನ !"
(ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:142)

ಮೌನವಾಗಿ ಅರಸುತ್ತಾ ಸಾಗುವುದು ಯಾರಿಗಾಗಿ, ಯಾವುದರ ಹುಡುಕಾಟ "ನನಗೆ ಗೊತ್ತಿದೆ, ನಿಮ್ಮ ಎದೆಯಲ್ಲಿ ಯಾವುದೋ ವೇದನೆಯ ಹಿಮಾಲಯ ಅಡಗಿದೆ. ನಿಮ್ಮ ಕಣ್ಣುಗಳಲ್ಲಿ ಆ ವೇದನೆ ಸದಾ ಮಿನುಗುತ್ತಿದ್ದ ನಿಮ್ಮ ದುಃಖವನ್ನೆಲ್ಲ ನನಗೆ ಕೊಡಿ. ಎರಡೂ ಕೈ ನೀಡಿ ಅದನ್ನು ಅಪ್ಪಿಕೊಳ್ಳುವೆ. ಪ್ರೀತಿಯಾಗಿ ನನಗೆ ನಿಮ್ಮದೊಂದು ಕಿರುನಗೆ ಸಾಕು. ನಾನು ರಾಕ್ಷಸನಲ್ಲ. ನನಗೆ ಹೂವನ್ನು ಹೊಸಕಿ ಹಾಕುವ ಬಯಕೆಯಿಲ್ಲ ನಾನು ಬಾಯಾರಿದವನು. ನನಗೆ ನಿಮ್ಮ ಒಲವಿನಮೃತ ಮಾತ್ರ ಸಾಕು" ಹೀಗೆ ತನ್ನಲ್ಲಿರುವ ರಾಕ್ಷಸ ಪ್ರವೃತ್ತಿಯನ್ನು ಅವಿತಿಟ್ಟು ಬದುಕುವ ನಿಜವಾದ ತನ್ನನ್ನು ಪೂರಕವಾಗಿ ಪ್ರದರ್ಶಿಸುವ ಪುರುಷ ಚಿತ್ರಣಗಳು ಕತೆಯಲ್ಲಿ ಮೂಡಿ ಬಂದಿದೆ. ಅರ್ಥ ಸ್ವಾರ್ಥಗಳ ಜೀವನದ ಬಹುತೇಕ ಘಟನೆಗಳು ಅಕ್ಷರರೂಪ ಪಡೆಯುತ್ತಾ ಸಾಗಿದೆ. ಯಾವುದನ್ನು ಒಪ್ಪಬೇಕು, ತಿರಸ್ಕರಿಸಬೇಕು, ಆಯ್ಕೆ ಮಾಡಿಕೊಳ್ಳಬೇಕು ಈ ಎಲ್ಲದರ ನಿಷ್ಕರ್ಷೆಗೆ ಉದಾಹರಣೆಯೇ ವೀಣಾಶಾಂತೇಶ್ವರ ಮತ್ತು ಕಮಲಾದಾಸ್‌ರ ಕತೆಗಳು.

ವೀಣಾಶಾಂತೇಶ್ವರ ಅವರ 'ಹೀಗೊಂದು ಕತೆ' ಎಲ್ಲ ಸಂಬಂಧಗಳ ತೊಡಕನ್ನು ಮೀರಿ ಬದುಕುವ ಕತೆ. ಮುಂದುವರೆದು ಹೆಣ್ಣಿನ ತಾಯ್ತನಕ್ಕೆ ವಿವಾಹವೆಂಬ ಪರ್ಮಿಟ್ ಬೇಕೆ, ಸಾಮಾಜಿಕ ಕಟ್ಟಲೆಯ ಎಲ್ಲಾ ಭಯವನ್ನು ತೊರೆದು ಪುರುಷನೊಟ್ಟಿಗೆ ಜೀವನ ಕಳೆಯಲು ಸಾಧ್ಯ ಎನ್ನುವಾಗ ವಿವಾಹವಾಗದೆ ತಾಯಿಯಾಗುವುದರಲ್ಲಿ ತಪ್ಪೇನು? ಎನ್ನುವ ದಿಟ್ಟ ನಿರ್ಧಾರ ತೆಗೆದುಕೊಳ್ಳುವ ಹೆಣ್ಣಿನ ಕತೆ. ಮುಂಬಯಿ ನಗರಿಯ ಹಲವಾರು ಹೆಣ್ಣು ಮಕ್ಕಳಲ್ಲಿ ಮೂಡುವ ಪ್ರಶ್ನೆ ಈ ಕಥಾನಾಯಕಿಯಲ್ಲೂ ಮೂಡಿಬಂದಿದೆ. ಆಧುನಿಕತೆ ಹೆಣ್ಣಿಗೆ ಬದುಕಲು ಸ್ವಚ್ಛಂದ ವಾತಾವರಣ ನಿರ್ಮಾಣ ಮಾಡಿಕೊಟ್ಟಿದೆ. ಅದರಲ್ಲಿ ಆಕೆಯ ಮಿತಿಯೇನು? ಮಿತಿ ನಿರ್ಮಿತಿ ಮಾಡಿಕೊಳ್ಳುವರು ಯಾರು? ಇಷ್ಟಾದರೂ ತನಗೆ ಅನಿಸಿದಂತೆ ಬದುಕುವ ಅವಕಾಶವನ್ನು ಕಸಿಯುವರ್‍ಯಾರು? ತಡೆಯುವರ್‍ಯಾರು? ಹೆಸರಿಲ್ಲದೆ ಕಳೆದ ಹತ್ತು ವರ್ಷದ ಸಂಬಂಧಕ್ಕಿಂತ ಹೆಸರಿರುವ ತಾಯಿ, ಮಗುವಿನ ಸಂಬಂಧ ಶ್ರೇಷ್ಠ, ಎನ್ನುವುದು ಆಕೆಯ ವಾದ.

ಯಾವ ಸಂಬಂಧವೂ ಬೇಡವೆಂದು ದೂರದ ಮುಂಬೈಲ್ಲಿ ಬದುಕುವ ಅವರಿಬ್ಬರಿಗೆ ಮಗು ಅಡ್ಡಿಯಾಗುತ್ತದೆ ಎಂಬ ಭಾವನೆ ಆತನದ್ದು. ಅವರಿಬ್ಬರೂ ಕೂಡಿ ಹತ್ತು ವರ್ಷ ಬದುಕಿ ಬಾಳುವಾಗ ಇಲ್ಲದ ಭಯ ಮಗು ಹುಟ್ಟುವಾಗ ಏಕೆ ಭಯ ಮೂಡಿಸಿತು. ಸಂಬಂಧಗಳು ನಿರರ್ಥಕ ಎಂದು ಬದುಕುವ ಅವರಿಗೆ ಮಗು ಹುಟ್ಟಬೇಕಾದರೆ ಗಂಡ–ಹೆಂಡತಿಯಾಗಿರಬೇಕು, ಎನ್ನುವ ಆತನ ಮನೋಭಾವಕ್ಕೆ ಪ್ರತಿಯಾಗಿ ತನ್ನಿಷ್ಟದಂತೆ ಆಕೆ ಮಗುವನ್ನು ಪಡೆಯುತ್ತಾಳೆ. ಹೆಣ್ಣೊಬ್ಬಳು ಒಂಟಿಯಾಗಿ ಮಗುವನ್ನು ಹೆತ್ತು ಸಲಹಲು ಸಿದ್ಧ. ಆದರೆ ಅದಕ್ಕೆ ಕಾರಣನಾದ ಗಂಡಿಗೆ ಈ ವಿಷಯವನ್ನು ಜಾಹಿರುಪಡಿಸಲು ತನ್ನ ಹಿರಿಯರ ಒಪ್ಪಿಗೆ ಬೇಕು. ಮಗು ಹೆತ್ತ ನಂತರ ಯಾವ ಪುರುಷ ಸಂಬಂಧದ ಹಂಗೂ ಬೇಡದೆ ತನ್ನ ಪಾಡಿಗೆ ತಾನು ಬದುಕಬಲ್ಲೆ ಎಂಬ ನಿರ್ಧಾರ ತೆಗೆದುಕೊಂಡ ಕಥಾ ನಾಯಕಿಯ ನಿರ್ಧಾರ ಮಹತ್ವದ್ದಾಗಿದೆ.

ಸಂಬಂಧಗಳಲ್ಲಿನ ಅನುಮಾನವನ್ನು ಕುರಿತು 'ಕಮಲಾದಾಸ್'ರವರ 'ಜಿಜ್ಞಾಸೆ' ಕತೆಯು ಪ್ರಸ್ತಾಪಿಸುತ್ತದೆ. ಆದರೆ ಅನುಮಾನವನ್ನು ಮೀರಿ ಬೆಳೆದ ಸಂಬಂಧ ಅವರದ್ದು. ಐದು ವರ್ಷಗಳ ಕಾಲ ಅಮೇರಿಕಾದಲ್ಲಿ ಕಾಲ ಕಳೆದು ಬಂದ ತನ್ನ ಗೆಳತಿಯ ಬಗ್ಗೆ ಕೊಂಚ ಅನುಮಾನ. ತನ್ನ ಅವಗುಣಗಳನ್ನು ತಡೆಯಲಾಗದೆ ಅಮೇರಿಕಾಗೆ ಹೊರಟಿದ್ದಳು. ಅದೇನೆ ಇರಲಿ ಮರಳಿ ಬಂದಾಗ ಅವಳ ಬಗ್ಗೆ ಏನೇ ಸಂಶಯಗಳಿದ್ದರೂ ಅವುಗಳನ್ನು ಮನಸ್ಸಿನಲ್ಲಿ ಲೆಕ್ಕ ಹಾಕದೆ ಮುಕ್ತವಾಗಿ ಆಕೆಯನ್ನು ಸ್ವೀಕರಿಸಿದ. ಆಕೆ ಅಮೇರಿಕಾಕ್ಕೆ ಹೊರಟು ನಿಂತಾಗ ಬದುಕು ಶೂನ್ಯವೆನ್ನುವಂತಾಯಿತು. ಅವಳು ಮರಳಿ ಬಂದು ತನ್ನ ಕಳೆದ 5 ವರ್ಷದ ಬದುಕಿನ ಬಗ್ಗೆ

ಹೇಳಲು ಮುಂದಾದರೂ ಆತನಿಗೆ ಐದು ವರ್ಷಗಳ ಜೀವನದ ಬಗ್ಗೆ ಕೆದಕುವ ಆಸಕ್ತಿ ಇರಲಿಲ್ಲ. ಕಳೆದು ಹೋದ ದಿನಗಳನ್ನು ನೆನೆದು ಇಂದು ಆಕೆಯನ್ನು ತಿರಸ್ಕರಿಸಲು ಸಿದ್ಧವಿರಲಿಲ್ಲ. ತನ್ನ ಅಮೇರಿಕಾದ ಬದುಕು ಹೇಗಿತ್ತು ಎಂದು ತಿಳಿಯುವುದು ಬೇಡವೆ ಎಂದು ಆಕೆ ಕೇಳಿದ್ದಕ್ಕೆ "ಖಂಡಿತಾ ಇಲ್ಲ, ನಾನು ಕೇಳುವಂತದ್ದೇನೂ ಇಲ್ಲ, ಬಹುಶಃ ನಾನು ಕೇಳಿದರೂ ನೀನು ಏನೂ ಹೇಳಕೂಡದು, ಗೊತ್ತಾಯಿತಾ?" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:142) ಎನ್ನುತ್ತಾನೆ. ನಂಬಿಕೆ ಮಾನವೀಯತೆಗಳು ಮನುಷ್ಯ ಸಂಬಂಧಗಳನ್ನು ಉಳಿಸಿ ಪೋಷಿಸುತ್ತವೆ.

ವೀಣಾಶಾಂತೇಶ್ವರ ಅವರ ಕತೆ 'ಕೊನೆಯ ದಾರಿ' ಕತೆಯ ನಾಯಕಿ 'ಲೀಲಾವತಿ' ತನಗೆ ಬೇಕಾದ ಬದುಕಿನ ದಾರಿಯನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತಾಳೆ. ಆಯ್ಕೆಯನ್ನು ಮಾಡಹೊರಟ ಸಂದರ್ಭದಲ್ಲಿ ಎದುರಾಗುವ ಪುರುಷ ಪಾತ್ರಗಳಾದ ಡಾಕ್ಟರ್ ಗೋವಿಂದ ಮೂರ್ತಿ, ವಿನಯಸಾಳಕರ, ವಿಲಿಯಮ್ಸ್, ಶಂಕರಗೌಡರು ಆಯ್ಕೆ ಮಾತ್ರ ಲಿಲಿಯದ್ದು. ವಿಲಿಯಮ್ಸ್ ಆತ ಲಗ್ನ ಆಗಲು ಹೊರಟಿದ್ದ ಆಂಟಿಯ ಮಗಳನ್ನು ಬಿಟ್ಟಿರಲು ತಯಾರಿರಲಿಲ್ಲ. ಅವನಿಗೆ ಆಂಟಿಯ ಆಸ್ತಿಯೇ ಮುಖ್ಯವಾಯಿತು.

ಎಲ್ಲಾ ಹೆಣ್ಣು ಕನಸು ಕಾಣುವಂತೆ ಲೀಲಾ ಕೂಡ ವಿವಾಹವಾಗಿ ತನ್ನ ಗಂಡನ ಬಗ್ಗೆ ಕನಸು ಕಾಣುತ್ತಾಳೆ. ಆದರೆ ಗಂಡನಲ್ಲಿದ್ದ ಕುಡುಕತನ, ಜಾರತನದಿಂದ ಆತನನ್ನು ದೂರಮಾಡಿ ತನ್ನ ಆಯ್ಕೆಯ ಬದುಕನ್ನು ನಡೆಸುತ್ತಾಳೆ. ಡಾಕ್ಟರ್ ಗೋವಿಂದ ಮೂರ್ತಿ ಎಲ್ಲಾ ಬಲ್ಲವನು. 'you are a perfect women' ಎಂದು ಹೊಗಳುತ್ತಾನೆ. ಆದರೆ ಆತನ ಒರಟುತನ ಗೋವಿಂದಮೂರ್ತಿ ಸಹವಾಸವೇ ಸಾಕೆನಿಸುವಂತೆ ಮಾಡಿಸಿರುತ್ತದೆ. ಜೊತೆಗೆ ಮಗು ಬೇಕೆನ್ನುವ ಲೀಲಾಳ ಆಸೆಗೆ ಅವನು ಸ್ಪಂದಿಸಿರಲಿಲ್ಲ.

ಲೀಲಾಳ ಬಾಸ್ ಕೂಡ ಚಪಲ ಸ್ವಭಾವದವನು. accounts ಬರೆದು ಮುಗಿಸುವ ತನಕ ಭುಜದ ಮೇಲಿನ ಕೈ ತೆಗೆಯಲೇ ಇಲ್ಲ. ಗೋವಿಂದ ಮೂರ್ತಿ, ವಿಲಿಯಮ್ಸ್, ಬಾಸ್ ಎಲ್ಲರಿಗಿಂತ ಶಂಕರೇಗೌಡರಂಥ ಒಳ್ಳೆಯ ಗಂಡಸರ ಬಗ್ಗೆ ಗೌರವ ಮೂಡಿತು. ಅವರ ಪ್ರೀತಿ-ಅನುಕಂಪ ಲೀಲಾಳಿಗೆ ಇಷ್ಟವಾಯಿತು. ಎಂದೋ ಸತ್ತು ಹೋದ ಅಪ್ಪನ ನೆನಪು ತರುವ ಶಂಕರೇಗೌಡರ ಇಂಪಲಾಕಾರ್ ಸಿದ್ಧವಿತ್ತು. ಅಪ್ಪನ ಮಮತೆ ತೋರುವ ಪತಿಯ ಸಾಂಗತ್ಯ ಹಿತಕರವೆನಿಸುತ್ತದೆ. ಬದುಕ ಹಾದಿಯಲ್ಲಿ ಹಾದು ಹೋದ ಎಲ್ಲಾ ಪುರುಷರಿಗಿಂತ ಶಂಕರೇಗೌಡರು ಲೀಲಾಳ ಆಯ್ಕೆಯಾದರು. ತನಗೆ ಸರಿ ಎನಿಸಿದ ಆಯ್ಕೆಯನ್ನು ಆಕೆ ಮಾಡಿಕೊಂಡಳು.

ವೀಣಾಶಾಂತೇಶ್ವರ ಅವರ 'ಗಂಡಸರು' ಕಿರು ಕಾದಂಬರಿಯ 'ಶಾಂತಿ'ಯ ಬದುಕಿನಲ್ಲೂ ಹೀಗೆ ಹಾದುಹೋಗುವ ಪುರುಷರ ಸರಣಿ. ನಿಜ ಪ್ರೀತಿಯನ್ನು ಅರಸುವ ಶಾಂತಿಗೆ ಅರ್ಥವಾಗುವುದು ಪ್ರೀತಿ ಅರ್ಥಹೀನವಾದುದು. ಕೇವಲ ಸಂದರ್ಭಕ್ಕೆ ತಕ್ಕ ಹಾಗೆ ಪ್ರೀತಿಯನ್ನು ನಟಿಸುವರು ಪುರುಷರು. ನಿರರ್ಥಕ ಪ್ರೀತಿಯ ಜೊತೆಗೆ ಬದುಕು ಸಾಗಿಸಿದ 'ಶಾಂತಿ' ಪ್ರೀತಿ ಎಂದರೆ ಏನು ನನಗೆ ಗೊತ್ತಿಲ್ಲ ಎನ್ನುವ ನಿರ್ಧಾರಕ್ಕೆ ಬರಲು ಆಕೆಯ ಬದುಕಿನಲ್ಲಿ ಹಾಯ್ದು ಶಂಕರ, ಮಠದ್, ರಮಾಕಾಂತ್, ಜಾನ್ ಅಶೋಕ್ ಇವರುಗಳೇ ಕಾರಣಕರ್ತರು. ಶಾಂತಿ ಪ್ರೀತಿಯೆಂಬುದರ ಬಗ್ಗೆ ತಟಸ್ಥ ಭಾವ ತಾಳಲು ಪುರುಷ ಸ್ವಭಾವಗಳೇ ಕಾರಣ. ಇಂತಹ ಸಂಬಂಧಗಳು ಬದುಕಿನಲ್ಲಿ ಮತ್ತೆ ಮತ್ತೆ ನೀರಸ ಭಾವನೆಯನ್ನು ಉಂಟು ಮಾಡುತ್ತವೆ.

ಕಮಲಾದಾಸ್ ರವರ 'ಮಧ್ಯಾಹ್ನ' ಎಂಬ ಕತೆಯಲ್ಲಿ ಶಾರದಾ ಗರ್ಭ ಧರಿಸುವುದಕ್ಕೆ ಗಂಡ ಶಂಕರ ಕಾರಣವಲ್ಲ. ಹೇಡಿಯಾದ ಪ್ರಿಯತಮ ಕಾರಣನಾಗಿರುತ್ತಾನೆ. ಹುಟ್ಟುವ ಮಗುವಿಗೆ ತನ್ನ ಬಣ್ಣವೇ ಇರಬಹುದು ಇದು ಗಂಡ ಶಂಕರನಿಗೆ ಗೊತ್ತಾಗಬಹುದೆಂಬ ಭಯ ಪಟ್ಟ, ಗಂಡನಿಗೆ ಸತ್ಯ ತಿಳಿದಿದೆ ಎಂದು ಶಾರದಾ ಹೇಳಿದಳು. ಇತ್ತ ಪ್ರಿಯಕರನನ್ನು ಮುಕ್ತವಾಗಿ ಒಪ್ಪಲಾಗುತ್ತಿಲ್ಲ. ಕಾರಣ ಶಾರದ ಬೇರೊಬ್ಬನ ಪತ್ನಿ. ಅವಳನ್ನು ಮತ್ತೆ ರಮಿಸಲು ಮುಂದಾದಾಗ ಶಾರದಾಳಿಗೆ ಆತನಲ್ಲಿ ಮನಸಿಲ್ಲದೆ ಅವಳಲ್ಲಿದ್ದ ಅಸಹನೆಯಿಂದ ಹೊಡೆಯಲು ಮುಂದಾದಳು. ಅವಳ ಕೈಯಿಂದ ತಪ್ಪಿಸಿಕೊಂಡು ಓಡುವುದರಲ್ಲಿ ತಾನು ತಂದಿದ್ದ ಕೊಡೆಯನ್ನು ಅಂಗಳದಲ್ಲೇ ಬಿಟ್ಟು ಹೋದ. ಮಧ್ಯಾಹ್ನ ಊಟಕ್ಕೆಂದು ಬಂದ ಶಂಕರ ಕೊಡೆಯನ್ನು ಪಕ್ಕಕಿಟ್ಟು ಒಳ ಬಂದು ವಿಹ್ವಲಳಾಗಿ ಬಿದ್ದಿದ್ದ ಪತ್ನಿಯನ್ನು ಕಂಡ. ಅವಳ ಈ ಸ್ಥಿತಿಗೆ ಕಾರಣವನ್ನು ಅರಿತ. ಆದರೂ ಮರು ಮಾತನಾಡಲೇ ಇಲ್ಲ. ಅವನು ಶಾಂತನಾಗಿದ್ದ. ಗಂಡನ ಆ ಸ್ಥಿತಿಯನ್ನು ಕಂಡ ಶಾರದ ಮತ್ತಷ್ಟು ಕೋಪಗೊಂಡಳು. ಆತನ ನಿಸಹಾಯಕ ಸ್ಥಿತಿಯೇ ಆತನನ್ನು ಮೌನವಾಗಿಸಿತ್ತೋ.. ಅದನ್ನು ಸಹಿಸಲಾರದೆ ಶಾರದಾಳ ಈ ಸ್ಥಿತಿಗೆ ಸಮ್ಮತವಿತ್ತೋ.. ಗಂಡನ ಶಾಂತ ಸ್ವಭಾವವು ಅವಳ ನಡವಳಿಕೆಯ ಬಗೆಗೆ ಅವಳಿಗೆ ಅಸಹನೆಯನ್ನು ತಂದೊಡ್ಡಿತು. ಅತ್ತ ಬೆಳಗಿನ ಹೊಸತನವು ಇಲ್ಲದ ಸಂಜೆಯ ತಂಪೂ ಇಲ್ಲದ ಮಧ್ಯಾಹ್ನದ ಸುಡುವ ಬಿಸಿಲಂತೆ ಮನಸು ಬಾಡಿತ್ತು. ನಿರ್ಧಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಪುರುಷರ ಗೊಂದಲದ ಸ್ಥಿತಿಯನ್ನು ಬಿಂಬಿಸುತ್ತದೆ.

'ವೀಣಾ ಶಾಂತೇಶ್ವರ ಅವರ ಕತೆ 'ಮುಕ್ತಿ' ಈ ಕತೆಯಲ್ಲಿ 'ಕಲಾ' ಇವಳ ಸಾವಿಗೆ ಸಮರ್ಪಕ ಕಾರಣವಿಲ್ಲ. ಸಾವಿಗೆ ಕಾರಣ ಚಂದೂಲಾಲ ಅಥವಾ ಅವಳ ಪ್ರೇಮವೋ, ಭಗ್ನಗೊಂಡ ಪ್ರೇಮಿಯು ಆಕೆ ಮೌನಕ್ಕೆ ಶರಣಳಾದಳು. ಚಂದೂಲಾಲನ ಲಫಂಗತನಕ್ಕೆ ಕಲಾ

ಬಲಿಯಾದಳು. ಪ್ರೀತಿ ಎಂಬ ಪಾಶಕ್ಕೆ ಸಿಲುಕಿ ಮುಕ್ತಿ ಹೊಂದಿದ್ದು ಸಾವಿನಿಂದ, ದೂರದೂರಿಗೆ ವರ್ಗ ಮಾಡಿಸಿಕೊಂಡು ಹೊರಟಿರುವ ಚಂದೂಲಾಲ ಮುಕ್ತನಾಗುವನೇ ಕಲಾಳ ನೆನಪಿನಿಂದ. ಈ ದುರಂತಕ್ಕೆ ಪರೋಕ್ಷ ಕಾರಣ ಶಂಕರಮಾಮನಾ? ಬಿಕ್ಕಿ ಬಿಕ್ಕಿ ಅತ್ತರೂ ಮುಕ್ತಿ ಇಲ್ಲ ಶಂಕರಮಾಮಾನಿಗೆ. ಹಾಗಾದರೆ ಕಲಾಗೆ ಸಿಕ್ಕ ಮುಕ್ತಿ ಎಂತದ್ದು ಎನ್ನುವ ಚಿಂತೆ ಸಹೃದಯರನ್ನು ಕಾಡುತ್ತದೆ.

ಪರಸ್ಪರ ಸಂಬಂಧಗಳಲ್ಲಿನ ಅನುಮಾನ ದುರಂತದ ಅಂತ್ಯ ಎಂಬಂತೆ 'ಕಮಲಾದಾಸ್'ರವರ 'ಹೀಗೊಂದು ಮಧುಚಂದ್ರ' ಕತೆ ಉದಾಹರಣೆಯಾಗಿದೆ. ದಂಪತಿಗಳು ಹೊರಟ ಪ್ರಯಾಣದ ಸಂತಸದ ದಿನಗಳಾಗದೆ ಪರಸ್ಪರ ಸಾವಿಗೀಡಾಗುವ ದುರಂತದ ಕತೆಯಾಗಿದೆ. ದಂಪತಿಗಳಿಬ್ಬರಿಗೂ ಒಬ್ಬರ ಮೇಲೆ ಒಬ್ಬರಿಗೆ ಅನುಮಾನ. ಆತನ ಸೆಕ್ರೆಟರಿ ಮಿಸ್ ಲೋಸಾ ಮತ್ತು ಆತನ ಸಂಬಂಧದ ಬಗ್ಗೆ ಹೆಂಡತಿ ಪ್ರಸ್ತಾಪಿಸಿದರೆ ಹೆಂಡತಿಯ ಗೆಳೆಯನ ಬಗ್ಗೆ ಅಂದರೆ ಮಿಸ್ಟರ್ ಸೇನ್‌ಗುಪ್ತಾ ಬಗ್ಗೆ ಆತ ಹೇಳಿದ. ರೈಲಿನಲ್ಲಿ ಮಧುಚಂದ್ರಕ್ಕೆ ಪ್ರಯಾಣಿಸುತ್ತಿರುವ ಗಂಡ ಹೆಂಡಿರ ಮಧ್ಯೆ ಒಂದು ಬಿರುಕು, ಕರಿನೆರಳು ಮೂಡಿತು. ತನ್ನ ಹೆಂಡತಿಯನ್ನು ಕೊಲ್ಲಲು ಆತ ಸುಪಾರಿ ಕೊಟ್ಟಿದ್ದ. ಅವಳ ಸಾವಿಗೆ ಏನು ಕಾರಣ ಎಂಬುದು ಅವಳಿಗೆ ತಿಳಿಯದೆ ಸತ್ತಳು. ಸತ್ತ ಹೆಂಗಸಿನ ಗಂಡನಿಗೆ ವಿಜಯದ ಸಂಭ್ರಮ ಸಂತಸ. ನೂರರ ಕೆಲವು ನೋಟುಗಳನ್ನು ನೀಲಿ ಅಂಗಿಯ ಕೊಲೆಗಡುಕನಿಗೆ ಕೊಟ್ಟು ಅಲ್ಲಿಂದ ಹೊರಡಲು ಹೇಳಿದ. ಸೇನ್‌ಗುಪ್ತಾ ಹಣಕೊಟ್ಟು ಆತನನ್ನು ಕೊಲ್ಲಲು ಹೇಳಿದ್ದಾರೆ ಎಂದೊಡನೆ ಆತನ ಕೈಗಳು ಕಾರ್ಯಪ್ರವೃತ್ತವಾದವು. ಸಂತಸ ಅನುಭವಿಸಬೇಕಾದ ಮಧುಚಂದ್ರ ದುರಂತ ಅಂತ್ಯ ಕಂಡಿತು. ವಿಧಿಯ ಕ್ರೂರ ಆಟವನ್ನು ಸಾಂಕೇತಿಕವಾಗಿ ಈ ಕಥೆ ತಿಳಿಸುವಂತಿದೆ.

'ವೀಣಾಶಾಂತೇಶ್ವರ ಅವರ 'ಶೋಷಣೆ ಬಂಡಾಯ' ಕಾದಂಬರಿಯಲ್ಲಿ ಹೆಣ್ಣಿನ ಮೇಲೆ ವಿವಿಧ ಸ್ಥರಗಳಲ್ಲಿ ನಡೆಯುವ ಶೋಷಣೆಯನ್ನು ಡಾಕ್ಟರ್ ಶಾಂತಿಯ ಮೂಲಕ ಪರಿಚಯಿಸುತ್ತಾರೆ. ಪುರುಷ ಸಮಾಜಕ್ಕೆ ಹೆಣ್ಣು ಶರಣಾಗುವುದೇ ಮುಖ್ಯ ಪ್ರಶ್ನೆಯಾಗಿದೆ. ಎಷ್ಟೇ ಆಧುನಿಕತೆಯನ್ನು ಹೆಣ್ಣು ಒಪ್ಪಿ ಸ್ವತಂತ್ರವಾಗಿ ಬದುಕ ನಡೆಸಲು ಹೊರಟರೂ ಪುರುಷ ಸಂಬಂಧದಲ್ಲಿ ದಬ್ಬಾಳಿಕೆಗೆ ಒಳಗಾಗುವ ಚಿತ್ರಣವಿದೆ. ಕಲಾವಿದೆಯಾಗಲು ಹೊರಟ ಕಮಲಾಳಿಗೆ ಶಿವಮೂರ್ತಿಯ ಸಹವಾಸದಿಂದ ಸಿನಿಮಾ ನಟಿಯಾಗುವ ಅವಕಾಶ ತಪ್ಪಿ ಹೋಗುತ್ತದೆ. ಆತನಿಂದ ಮಾನಸಿಕ ದೈಹಿಕ ಹಿಂಸೆಗೆ ಆಕೆ ಒಳಗಾಗುತ್ತಾಳೆ.

ಮನೆಕೆಲಸದಾಕೆ 'ರೋಶನ್ ಬಿ' ಈಕೆಯು ಪ್ರತಿ ನಿತ್ಯ ತನ್ನ ಗಂಡನ ಹಿಂಸೆಗೆ ನಲುಗುವಳು. ಏನಾದರೂ ಮತ್ತೆ ಆತನ ಜೊತೆಗೆ ಸಂಸಾರ ಸಾಗಿಸುತ್ತಾಳೆ. ಪುರುಷ ದೌರ್ಜನ್ಯ ಕಂಡು ಬಂದರೂ ಅದನ್ನು ಸಹಿಸಿ ನಡೆಯುವ ಹೆಣ್ಣಿನ ಚಿತ್ರಣವು ಕತೆಯ ಉದ್ದಕ್ಕೂ ಇವೆ. 'ಮಾಲಿನಿ ಪಾಟೀಲ' ರಾಜಕಾರಣಿ ಮಹಿಳೆಯ ಮೇಲಿನ ದೌರ್ಜನ್ಯದ ವಿರುದ್ಧ ಹೋರಾಟ ಮಾಡುವಳು. ಸಮಾಜದಲ್ಲಿ ಗಂಡು ಹೆಣ್ಣಿನ ಸಮಾನತೆಯ ಬಗ್ಗೆ ಮಾತನಾಡುತ್ತಾಳೆ. ಆದರೆ ಅತ್ತ ಕೌಟುಂಬಿಕ ಹೊಣೆಯನ್ನು ಸಂಪೂರ್ಣವಾಗಿ ಹೊರಲಾರದೆ ಇತ್ತ ತನ್ನ ಆದರ್ಶಗಳನ್ನು ಪಾಲಿಸಲಾರದೆ ದ್ವಂದ್ವದಲ್ಲಿ ಸಿಲುಕಿರುತ್ತಾಳೆ. 'ಪೂರ್ಣಿಮಾ ಸಿಂಗ್' ಮದುವೆಗೆ ಮುಂಚೆ ಉತ್ತಮ ಕವಿಯಾಗಿದ್ದವಳು ಮದುವೆಯ ನಂತರ ಸಾಂಸಾರಿಕ ಜೀವನಕ್ಕೆ ತನ್ನ ಕವಿತ್ವವನ್ನು ಬಲಿ ಕೊಡುತ್ತಾಳೆ. ಹೀಗೆ ಹೆಣ್ಣು ತನ್ನ ಬಾಳಿನಲ್ಲಿ ಸದಾ ಪುರುಷ ಸಂಬಂಧದಿಂದ ತನ್ನ ತನವನ್ನು ಒತ್ತೆ ಇಟ್ಟು ಬದುಕುವ ಸಂದರ್ಭವನ್ನು ಈ ಕಿರು ಕಾದಂಬರಿ ಪ್ರಸ್ತಾಪಿಸುತ್ತದೆ. ಹೆಣ್ಣು ಗಂಡಿನ ಸಂಬಂಧಗಳಲ್ಲಿ ಹೆಣ್ಣು ಅನುಭವಿಸುವ ಸಂದಿಗ್ಧ ಸಂದರ್ಭಕ್ಕೆ ಪುರುಷ ಹೇಗೆ ಕಾರಣ ಎನ್ನುವುದನ್ನು ಕಥನ ಸಾಹಿತ್ಯ ಚರ್ಚಿಸುತ್ತದೆ.

ಕಮಲಾದಾಸ್ ರವರ 'ಮೇಷ್ಟ್ರು' ಕತೆಯಲ್ಲಿ ಮೇಷ್ಟ್ರ ಹೆಂಡತಿ ಸದಾ ಮನೆಕೆಲಸದಲ್ಲಿ ನಿರತರಾಗಿರುತ್ತಿದ್ದಳು. ತಮ್ಮ ವಿದ್ಯಾರ್ಥಿಗಳ ಕಡೆಗೆ ಮೇಷ್ಟ್ರಿಗೆ ಗಮನ. ಅವರ ಪ್ರಯತ್ನಕ್ಕೆ ಅರಿತೂ ಅರಿಯದೆ ವಿದ್ಯಾರ್ಥಿನಿಯರು ಅವರ ಗಾಳಕ್ಕೆ ಬೀಳುತ್ತಿದ್ದರು. ಗುರು ಶಿಷ್ಯೆಯ ಸಂಬಂಧ ತಂದೆ ಮಗಳ ಸಂಬಂಧದಂತೆ, ದೈವ ಭಕ್ತರ ಸಂಬಂಧದಂತೆ ಆದರೆ ಬದಲಿಗೆ ದೈಹಿಕ ಕಾಮನೆಯ ಮೇಷ್ಟ್ರು ಸದಾ ವಿದ್ಯಾರ್ಥಿನಿಯರನ್ನು ತನ್ನತ್ತ ಆಕರ್ಷಿಸುವುದರ ಕಡೆಗೆ ಕಾರ್ಯ ಪ್ರವೃತ್ತರಾಗಿದ್ದರೆ, ಏನೂ ಅರಿಯದ ವಿದ್ಯಾರ್ಥಿನಿ ದಾಕ್ಷಾಯಿಣಿಗೆ ಮೊದಲ ಪ್ರೇಮಕ್ಕೆ ಸಿಲುಕುತ್ತಾಳೆ. 150 ಕಿ.ಮಿ. ದೂರದಲ್ಲಿರುವ ಸಾಹಿತಿಯನ್ನು ನೋಡಿ ಬರುವ ನೆಪದಲ್ಲಿ ಮೇಷ್ಟ್ರ ಜೊತೆಗೆ ಹೊರಟ ದಾಕ್ಷಾಯಿಣಿಗೆ ಅವರ ನಡವಳಿಕೆ, ಮಾತು, ಹೋಟೆಲ್‌ನಲ್ಲಿ ಬಿರಿಯಾನಿ ತಿಂದ ರೀತಿ ಅಸಹ್ಯ ಮೂಡಿಸುತ್ತದೆ. ಸ್ವಲ್ಪ ತಾಳ್ಮೆಯಿಂದ ಇರಬಹುದೆನಿಸುವ ಹಾಗೆ ದಾಕ್ಷಾಯಿಣಿ ತನ್ನ ಮನಸಿಗೆ ಕಡಿವಾಣ ಹಾಕಿ ಅಲ್ಲಿಂದ ಓಟ ಕೀಳುತ್ತಾಳೆ. ತನ್ನ ವರ್ತನೆ ಅಸಹ್ಯವೆನಿಸುವಂತಿದೆ ಎಂಬ ಪ್ರಜ್ಞೆಯೂ ಮೇಷ್ಟ್ರಿಗೆ ಇಲ್ಲದೆ ವಿಚಿತ್ರವಾಗಿ ನಡೆದುಕೊಳ್ಳುವ ಅಸಹ್ಯ ವ್ಯಕ್ತಿತ್ವಕ್ಕೆ ಹದಿನೆಂಟರ ಹರೆಯದ ದಾಕ್ಷಾಯಣಿ ಮನಸೋತವಳು ಎಚ್ಚೆತ್ತ ಸಂದರ್ಭ ಉಳಿದ ಹೆಣ್ಣುಮಕ್ಕಳಿಗೆ ಮಾದರಿಯಾಗುವಂತಿದೆ.

'ಕಮಲಾದಾಸ್' ರವರ 'ಮತಿಭ್ರಮಣೆ' ಕತೆಯಲ್ಲಿ ಗೆಳತಿಯರಾದ ಅರುಣಾ ಮತ್ತು ವಿಮಲಾ ನಡುವಿನ ಮಾತು ಅರುಣಾಳ ಸಂಬಂಧವನ್ನು ಪರಿಚಯಿಸುತ್ತದೆ. ಅರುಣಾಳಿಗೆ ಮತಿಭ್ರಮಣೆಯಾಗಿದೆ ಎಂದು ಯಾರೋ ಎಬ್ಬಿಸುತ್ತಿರುವ ಗುಮಾನಿ, ಗಂಡನ ಬಗೆಗಿನ ಗುಮಾನಿ ಎಲ್ಲವೂ ಸೇರಿ ಅಭದ್ರ ವಾತಾವರಣದಲ್ಲಿರುವ ಅರುಣಾಳಿಗೆ ವಿಮಲಾ ನಿನ್ನಪ್ಪನ ಮನೆಗೆ ಹೋಗೆಂದು ನೀಡಿದ ಸಲಹೆಗೆ, ಅರುಣಾ ನಾನು ನನ್ನ ಪತಿಯನ್ನು ಬಿಟ್ಟು ಎಂದೂ ಹೋಗಲಾರೆ ಎಂದು ನುಡಿಯುತ್ತಾಳೆ. ತನ್ನ ಪತಿ ನನ್ನ ಮಗ್ಗುಲು ಒಬ್ಬ ಪುಟ್ಟ ಗಂಡು ಮಗುವಿನಂತೆ ಮಲಗಿರುತ್ತಾರೆ. ಅವರು ಹಾಗೆ ಮಲಗಿದಾಗ ನನ್ನ ಬೇಸರವನ್ನು ಮರೆತು ಬಿಡುತ್ತೇನೆ ಅವರನ್ನೆಂದು ಬಿಟ್ಟು ಹೋಗಲಾರೆ ಎಂದು ನುಡಿಯುತ್ತಾಳೆ. ಓರೆಕೋರೆಯನ್ನು ಒಪ್ಪಿ ನಡೆಯುವ ಅಲ್ಲಿಯೇ ಹರುಷ ಕಾಣುವ ಹೆಣ್ಣಿನ ಮನಸಿನ ಚಿತ್ರಣವಿದೆ.

ವೀಣಾಶಾಂತೇಶ್ವರ ಅವರ 'ಹೀಗೊಂದು ಕತೆ'ಯನ್ನು ನೆನಪು ಮಾಡುವ ಕಮಲಾದಾಸ್‌ರವರ 'ಸ್ವತಂತ್ರ ಜೀವಿಗಳು' ಕತೆಯಲ್ಲಿ ಬರುವ ಪಾರ್ಥಸಾರಥಿ ಮತ್ತು ಆಕೆಯ ಸಂಬಂಧಕ್ಕೆ ಯಾವ ಹೆಸರೂ ಇಲ್ಲ. ಗೆಳತಿಯಾಗಬಹುದು, ಅಪ್ಪ ಮಗಳಾದರೂ ಅಗಬಹುದು. ಆಕೆಗೆ ಅನಿಸುತ್ತಿದೆ ನಾನು ಪ್ರೀತಿಸುವ ವ್ಯಕ್ತಿ ಈತನೇ ಏನು ಎನಿಸುತ್ತದೆ. ಆದರೆ ಆತನಿಗೆ ತನ್ನ ಹೆಂಡತಿ ಮಕ್ಕಳ ಭಯ ಹಾಗೆಂದಾಗ ಆಕೆಯಲ್ಲಿನ ಗಾಂಭೀರ್ಯ. ಆದರೆ ಅವಳ ಗಾಂಭೀರ್ಯ ಆತನಿಗೆ ಅಸಹಜವೆನ್ನಿಸಿತು. ಆಕೆ ಪ್ರತಿಯಾಗಿ ಕೇಳಿದ್ದು ಹೀಗೆ "ಈ ಕೋಣೆ, ಸುಳ್ಳು ಹೆಸರು, ಹುಸಿ ಸಂಬಂಧ, ನಿಮ್ಮ ಈ ಕಪ್ಪು ಗ್ಲಾಸು ! ಛೆ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:96) ಎನ್ನುವುದು ಒಂದೆಡೆಯಾದರೆ "ಎಂದಾದರೊಮ್ಮೆ ನಾವಿಬ್ಬರು ಈ ಭೇಟಿಯನ್ನು ನಿಲ್ಲಿಸಲು ತಯಾರಾಗುತ್ತೇವೆ. ಅಂದು ನಾವು ಪರಸ್ಪರ ಗುಡ್ ಬೈ ಹೇಳಿ ನಮ್ಮ ನಮ್ಮ ದಾರಿ ಹಿಡಿಯುತ್ತೇವೆ, ಅಷ್ಟೆ ಅಳುವಿಲ್ಲ, ಬೇಸರವಿಲ್ಲ, ಯಾವ ರೀತಿಯ ಜವಾಬ್ದಾರಿಗಳು ಇಲ್ಲ. ನನಗೆ ಕೊಂಚವೂ ಇರಲಾರದು. ಇಬ್ಬರು ಸ್ವತಂತ್ರ ಜೀವಿಗಳಾಗುತ್ತೇವೆ." (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:99) ಆತನಿಂದ ತಾಯಿಯಾಗುವ ಯೋಗವಿಲ್ಲವೆಂದು ಕೊರಗಿದಳು. ಎಲ್ಲವನ್ನು ಮೀರಿದ ಬಾಂಧವ್ಯವೆಂದು ತನ್ನ ಮನಸ್ಸಿಗೆ ತಾನೆ ಸಮಾಧಾನ ಹೇಳಿಕೊಂಡರು ಅರ್ಥವಿಲ್ಲದ ಅಸ್ಥಿತ್ವವಿಲ್ಲದ ಸಂಬಂಧದ ಸೆಣಸಾಟದಲ್ಲಿ ಸಿಲುಕಿ ನಲುಗುವ ಕತೆ ಇದಾಗಿದೆ.

'ಕಮಲಾದಾಸ್'ರವರ 'ಡಾಕ್ಟರ್ ಜವಹರ್‌ರವರ ಪ್ರಣಯ ಪ್ರಸಂಗ' ಕತೆಯಲ್ಲಿ 'ಜವಹರ್' ಮುನ್ನೂರ ಮೂರನೆಯ ನಂಬರ್ ವಾರ್ಡಿನ ರೋಗಿ ತೋರಿದ ಪ್ರೀತಿಗೆ ಮನಸೋತು ಹೋಗದಿದ್ದರು ಶಸ್ತ್ರ ಚಿಕಿತ್ಸೆಯ ನಂತರ ಅವಳು ಸಾಯಬಹುದೆಂದು

ಅಂದುಕೊಂಡರು. ವೈದ್ಯ ರೋಗಿಯ ಸಂಬಂಧವನ್ನು ಮೀರಿ ಅವರು ಆತ್ಮೀಯವಾಗಿ ನಡೆದುಕೊಂಡಿದ್ದರು. ಎಷ್ಟೇ ದೂರವಾಗಬೇಕೆಂದು ಕೊಂಡರೂ ಅವರಿಬ್ಬರ ನಡುವೆ ಸಂಬಂಧ ಏರ್ಪಟ್ಟಿತು. ವಿವಾಹ ಬಂಧನವನ್ನು ಒಪ್ಪಿ ನಡೆವ ಸಾಮಾಜಿಕ ಸಂಸ್ಥೆಯ ಜೊತೆಗೆ ಸಮಾಜದ ಎಲ್ಲಾ ಕಟ್ಟಲೆಗಳನ್ನು ಮೀರಿ ಬೆಳೆವ ಹೆಣ್ಣು-ಗಂಡಿನ ಸಂಬಂಧದ ಚಿತ್ರಣ ಕತೆಗಳಲ್ಲಿವೆ. ಭಾವುಕ ಲೋಕದಲ್ಲಿನ ವಿಭಿನ್ನ ಬದುಕಿನ ಅನುಭವಗಳು ಕತೆಗಳ ಮೂಲಕ ವ್ಯಕ್ತಗೊಂಡಿದೆ.

ಇ. ಹೆಣ್ಣು – ಹೆಣ್ಣಿನ ನಡುವಿನ ಸಂಬಂಧ :

"ಹೆಣ್ಣಿಗೆ ಹೆಣ್ಣೆ ಶತ್ರು" ಎಂಬ ಮಾತಿದೆ. ಆದರೆ ಸಮಾಜದಲ್ಲಿ ಸ್ತ್ರೀ ಪುರುಷ ಸಂಬಂಧ ಎಷ್ಟು ಮುಖ್ಯವೋ ಹೆಣ್ಣು ಹೆಣ್ಣಿನ ನಡುವೆ ಹಿತಕರವಾದ ಸಂಬಂಧವಿದ್ದಾಗ ಮಾತ್ರ ಬದುಕು ನಡೆಸಲು ಸಾಧ್ಯ. ಇಬ್ಬರು ಲೇಖಕಿಯರಲ್ಲಿ ಹೇರಳವಾದ ಸ್ತ್ರೀ ಪಾತ್ರಗಳು ವೈವಿಧ್ಯಮಯವಾಗಿ ಮೂಡಿ ಬಂದಿದೆ. ಆದರೂ ಹೆಣ್ಣು ಹೆಣ್ಣುಗಳ ನಡುವಿನ ಸಂಬಂಧ ಕೆಲವು ಕಡೆ ಮಾತ್ರ ಪ್ರಸ್ತಾಪವಾಗಿದೆ. ಇಂತಹ ಹಲಕೆಲವು ಉದಾಹರಣೆಗಳನ್ನು ಕತೆಗಳ ಮೂಲಕ ಚರ್ಚೆ ನಡೆಸಬಹುದಾಗಿದೆ.

ಆಸೆ-ಆಕಾಂಕ್ಷೆಗಳು, ಪ್ರೀತಿ, ವಾತ್ಸಲ್ಯ, ಮೋಹ, ಮಮಕಾರ, ದ್ವೇಷ ಇವೆಲ್ಲವೂ ಎಲ್ಲಾ ಮನುಷ್ಯರಲ್ಲಿ ಇರಬಹುದಾದ ಗುಣಗಳು. ಹೆಣ್ಣು-ಹೆಣ್ಣಿನ ನಡುವೆ ಇಂಥಹ ಅಂಶಗಳು ಮೂಡಿ ಬಂದಿರುವ ಬಗ್ಗೆ ಹಲವು ಕತೆಗಳಲ್ಲಿ ಪ್ರಸ್ತಾಪವಿದೆ. ತಾಯಿಯಾಗಿ, ಗೆಳತಿಯಾಗಿ, ಮಗಳಾಗಿ, ಪ್ರಿಯತಮೆಯಾಗಿ, ಹಲವು ಸಂಬಂಧಗಳ ಪಾತ್ರ ನಿರ್ವಹಿಸುತ್ತಾ ಸಾಗುವಾಗ ಅನೇಕ ವೈರುಧ್ಯಗಳು ಸಮಾನ ಅಂಶಗಳು ಪಾತ್ರಗಳಲ್ಲಿ ಕಾಣಬರುತ್ತದೆ.

ಕಮಲಾದಾಸ್‌ರವರ 'ಹೆಣ್ಣು' ಎಂಬ ಕತೆಯಲ್ಲಿ ಪ್ರಸನ್ನ ಮತ್ತು ರಮಣಿಯ ಇಬ್ಬರು ಗೆಳತಿಯರ ಸ್ನೇಹದ ಚಿತ್ರಣವಿದೆ. ಹೆಣ್ಣುಗಳ ನಡುವಿನ ಗೆಳೆತನದ ಪ್ರಾಮಾಣಿಕತೆ ಕತೆಯಲ್ಲಿದೆ. ರಮಣಿ ಮತ್ತು ಪ್ರಸನ್ನಳ ಸ್ನೇಹ ಅಪರೂಪದ್ದು. ಪ್ರಸನ್ನಳನ್ನು ಮನಸಾರೆ ಪ್ರೀತಿಸಿದ್ದ ರವೀಂದ್ರ ಆಕೆಯನ್ನು ಬಿಟ್ಟುಕೊಡಲು ಆತನ ಹೇಡಿತನ ಕಾರಣವೋ, ರಮಾಳ ಪ್ರೀತಿ ಕಾರಣವೋ ಅರಿಯದು. ಇಷ್ಟಾದರೂ ವಿಷಮ ಜ್ವರದಿಂದ ತೀರಿಕೊಂಡ ಪ್ರಸನ್ನ ಮರುದಿನವೇ ಗಂಗಾನದಿ ಪಾಲಾದ ರಮಣಿ ಇಬ್ಬರದು ಎಂತಹ ಸ್ನೇಹ ಎಂದು ಅಚ್ಚರಿ ಮೂಡಿಸುವಂತಿದೆ. ಈ ಸ್ಥಿತಿಗೆ ಪರೋಕ್ಷವಾಗಿ ರವೀಂದ್ರನೇ ಕಾರಣ ಎಂದು ಎನಿಸಿ ಅವನ ಮನಸ್ಸು ತಲ್ಲಣಗೊಂಡಿತು.

"ರಮ ಒಂದು ಅದ್ಭುತ ಸೃಷ್ಟಿಯಾಗಿದ್ದಳು. ಅವಳು ಮಾತ್ರವಷ್ಟೇ ಅಲ್ಲ ಎಲ್ಲಾ ಹೆಣ್ಣು ಮಕ್ಕಳು ಅದ್ಭುತ ಸೃಷ್ಟಿಗಳೇ, ಅವರು ಅಸಾಮಾನ್ಯರು ಅವರಿಗೆ ಭಯ ಪಡಲೇಬೇಕು"

(ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:27) ಹೀಗೆ ರವೀಂದ್ರನಲ್ಲಿ ನಂಬಿಕೆಯೊಂದು ಬಲವಾಗಿ ಬೇರೂರಿ ಬಿಟ್ಟಿತು. ರಮಾ ಕೇಳಿದ ಪ್ರಶ್ನೆ ರವೀಂದ್ರನನ್ನು ಕಾಡುತ್ತಲೇ ಇತ್ತು. "ಸೋದರಾ, ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಪ್ರೀತಿಸಬಾರದೆಂದೇನಾದರೂ ಇದೆಯೇ?" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:27) ಹೀಗೊಂದು ಆಪ್ತ ಸ್ತ್ರೀ ಸಂಬಂಧ ಚಿತ್ರಣಗೊಂಡಿದೆ.

ವೀಣಾಶಾಂತೇಶ್ವರ ಅವರ ಕತೆಗಳಲ್ಲಿ ಹೇರಳವಾದ ಮಹಿಳೆಯರ ಪಾತ್ರ ಸೃಷ್ಟಿ ಇದೆ. ಹೆಣ್ಣಿನ ಪಾತ್ರಗಳು ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳಿಗೆ ಮುಖಾಮುಖಿಯಾಗುವಂತೆ ಮೂಡಿ ಬಂದಿದೆ. 'ಅನಾಥೆ' ಕತೆಯಲ್ಲಿ ಮೇಲ್ವಿಚಾರಕಿ ಕಮಲಮ್ಮ ದೇಸಾಯಿ ಅನಾಥ ಹೆಣ್ಣು ಮಕ್ಕಳ ಜೊತೆಗೆ ನಡೆಸಿಕೊಳ್ಳುವ ರೀತಿ ಪಾಶವಿ ಪ್ರವೃತ್ತಿಯದ್ದಾಗಿದೆ. 'ಸೋನಿಯಾ' ಕತೆಯಲ್ಲಿ ಗೆಳತಿಯರಾದ ಮಿಲಿ ಮತ್ತು ಸೋನಿಯರ ಸ್ನೇಹದ ಚಿತ್ರಣ ಬದುಕಿನುದ್ದಕ್ಕೂ ಒಟ್ಟಿಗೆ ಓದಬೇಕೆಂಬ ಆಸೆ ಹೊತ್ತ ಗೆಳತಿಯರ ಚಿತ್ರಣವಿದೆ.

ವೀಣಾಶಾಂತೇಶ್ವರ ಅವರ ಕತೆಗಳಲ್ಲಿ ಹೆಣ್ಣುಗಳು ಪುರುಷನಂತೆ ಹೊರಗಿನ ಲೋಕದಲ್ಲಿ ದುಡಿಯುವವರು. 'ಮುಳ್ಳುಗಳು' ಕತೆಯಲ್ಲಿನ 'ಶಾಂತಿ' ಅವಳ ಅಕ್ಕ, ಪಿ.ಯು.ಸಿ. ಓದುವ ಹೆಣ್ಣು ಮಕ್ಕಳ ಪಾತ್ರಗಳಿವೆ. ಅವರ ನಡುವಿನ ಒಡನಾಟವಿದೆ. ಅತಿಥಿ ಕತೆಯ ಹಾಸ್ಟೆಲ್ ವಾರ್ಡನ್ ಪ್ರೊ. ಲೀಲಾವತಿ ಅದೇ ಹಾಸ್ಟಲ್‌ನಲ್ಲಿ ಉಳಿದಿದ್ದ ಹದಿಹರೆಯದ ಹುಡುಗಿಯರ ಚೆಲುವು, ಚೆಲ್ಲಾಟಗಳನ್ನು ನೋಡಿ ಬದುಕು ಸಾಗಿಸುತ್ತಾಳೆ. 'ಶೋಷಣೆ ಬಂಡಾಯ' ಕಾದಂಬರಿಯ ಆರು ಜನ ಹೆಂಗಸರು ಪರಸ್ಪರ ಸಂಬಂಧವಿಲ್ಲದೆ ಇದ್ದರೂ ಅವರ ಬದುಕು ಶೋಷಣೆಗಳಲ್ಪಡುತ್ತಿರುವ ಚಿತ್ರಣವಿದೆ. 'ಒಂದು ರವಿವಾರ' ಕತೆಯಲ್ಲಿ ಮಾಲತಿ, ರೇಖಾ ಶಾಂತಾ ಇವರೆಲ್ಲರ ನಡುವಿನ ಒಡನಾಟವಿರುವುದನ್ನು ಕಾಣಬಹುದಾಗಿದೆ.

ಕಮಲಾದಾಸ್‌ರವರ 'ಆ ಸ್ತ್ರೀ' ಕತೆಯಲ್ಲಿ ಗಂಡ ಬೇರೊಬ್ಬ ಯುವತಿಯೊಂದಿಗಿದ್ದು ಕಡೆ ಕ್ಷಣವನ್ನು ಕಳೆದ. ಆದರೆ ಆತನ ಸಾವು ಮೊದಲನೆಯ ಹೆಂಡತಿಯನ್ನು ಅವರಿಬ್ಬರು ಇದ್ದಲ್ಲಿಗೆ ಕರೆತಂದಿತು. ಇರುವ ಆಸ್ತಿಯನ್ನು ಯುವತಿಯಿಂದ ಕಸಿಯ ಬೇಕೆಂದು ಅಲ್ಲಿಂದ ಹೊರಡಲು ಹೇಳಿದಳು. ಆದರೆ ಆ ಸ್ತ್ರೀ ಉಟ್ಟ ಬಟ್ಟೆಯಲ್ಲಿ ಇಲ್ಲಿ ನನ್ನದೇನು ಇಲ್ಲವೆಂದು ಹೊರಟು ಬಿಟ್ಟಳು. ಹೆಂಡತಿ ಗಂಡನ ಸಾವಿನ ನಂತರ ಆಸ್ತಿಗಾಗಿ ಬಂದರೆ ಆ ಹೆಂಗಸು ಆತನನ್ನು ಕಳೆದುಕೊಂಡು ಏನು ಇಲ್ಲವೆಂಬಂತೆ ಉಟ್ಟ ಬಟ್ಟೆಯಲ್ಲಿ ದೂರವಾದಳು. ಇಬ್ಬರೂ ಒಬ್ಬ ಪುರುಷರ ಸಾಂಗತ್ಯದಲ್ಲಿದ್ದು ಭಿನ್ನವಾಗಿ ವರ್ತಿಸುವುದನ್ನು ಕಾಣಬಹುದು.

'ಶಿಕ್ಷೆ' ಎಂಬ ಕತೆಯಲ್ಲಿ ಅಜ್ಜಿ–ಮೊಮ್ಮಗಳ ಸಂಬಂಧದ ಚಿತ್ರಣವಿದೆ. ಪರೀಕ್ಷೆಯಲ್ಲಿ ಚೆನ್ನಾಗಿ ಬರೆದು ಪಾಸಾಗಿದ್ದರೆ ಇಷ್ಟು ಬೇಗ ನನ್ನನ್ನು ಮದುವೆ ಮಾಡಿಕೊಡುತ್ತಿರಲಿಲ್ಲ ಎಂದು ಅಜ್ಜಿಯನ್ನು ಕೇಳಿದ್ದಕ್ಕೆ "ಹೆಣ್ಣು ಮಕ್ಕಳಾದರೆ ಮದುವೆಯಾಗೋದು ಬೇಡ್ವಾ? ಹೆಚ್ಚು ಓದಿ ಏನು ಉಪಯೋಗ?" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:181) ಎಂದು ಅಜ್ಜಿಯ ಮಾತಿಗೆ ಓದದೇ ಪೇಲಾದ ನನಗೆ ಮದುವೆಯೇ ಶಿಕ್ಷೆ ಎಂದು ಕೊಂಡಳು. ಹೆಣ್ಣಿನ ಶಿಕ್ಷಣಕ್ಕಿಂತ ಮದುವೆಯ ಜೀವನ ನಡೆಸುವುದೇ ಸರಿ ಎನ್ನುವ ಅಜ್ಜಿಯ ಅಭಿಪ್ರಾಯಕ್ಕೆ ಮೊಮ್ಮಗಳು ಗೊಣಗಿಕೊಂಡು ಪಶ್ಚಾತ್ತಾಪ ಪಟ್ಟಳು. ಹೆಣ್ಣು ಕೇವಲ ಮದುವೆ ಮಾಡಿಕೊಂಡು ಗಂಡನ ಇಚ್ಛೆಯಂತೆ ಬದುಕು ನಡೆಸಬೇಕೆಂಬ, ಅದಕ್ಕಿಂತ ಹೆಚ್ಚಿನದು ಬದುಕಿನಲಿ ಯಾವ ಸಾಧನೆಯು ಇಲ್ಲ ಎನ್ನುವ ಅಂಶ ಕತೆಯಲ್ಲಿ ಕಾಣ ಸಿಗುತ್ತದೆ. ನಿಜವಾದ ಸಂತೋಷ ವಿದ್ಯೆಯೋ, ಕುಟುಂಬವೋ ಅರಿಯದು. ಅದರ ಹುಡುಕಾಟವಾಗಬೇಕಿದೆ.

'ದನಗಳ ಜಾತ್ರೆ' ಕತೆಯಲ್ಲಿ 'ಕಮಲಾಕ್ಷಿ' ಮತ್ತು ಅಜ್ಜಿಯ ನಡುವೆ ನಡೆಯುವ ಘಟನೆಯನ್ನು ಉದಾಹರಿಸಬಹುದು. ಅಪರಿಚಿತ ಆಗಂತುಕನನ್ನು ತನ್ನ ಮೊಮ್ಮಗಳು ಕಮಲಾಕ್ಷಿಗೆ ಮದುವೆ ಮಾಡಿಕೊಳ್ಳಬಹುದೆಂದು ಅಜ್ಜಿಯ ಆಸೆ. ಕಾಮಾಕ್ಷಿಯ ಸ್ವಭಾವವನ್ನು ಕುರಿತು ಅಜ್ಜಿ ಆತನ ಮಾತನಾಡ ತೊಡಗಿದಳು. ಈ ಅಜ್ಜಿಗೇನು ಹುಚ್ಚು ಹಿಡಿದಿದೆಯೇ ನನ್ನ ಬಗೆಗಿನ ವಿವರಗಳನ್ನು ಆತನಿಗೆ ಹೇಳುತ್ತಿರುವುದೇಕೆ ಎಂದುಕೊಂಡಳು. ಆದರೆ ಅಜ್ಜಿ ತನ್ನ ಮೊಮ್ಮಗಳಿಗೆ ಆತನನ್ನು ಕೇಳಬೇಕೆನ್ನುವಷ್ಟರಲ್ಲಿ ಆತನಿಗೆ ಮದುವೆಯಾಗಿ ಮಕ್ಕಳಿರುವ ವಿಷಯ ತಿಳಿಯಿತು. ಕಮಲಾಕ್ಷಿ–ಅಜ್ಜಿ ಹೆಚ್ಚೇನೂ ಮಾತನಾಡದೆ ಹೋದರು ಇಬ್ಬರಯ ನಿರಾಶೆಯನ್ನು ಹೊತ್ತು ಮಲಗಿದರು.

'ಒಂದು ಮುಂಜಾನೆ' ಕತೆಯಲ್ಲೂ ಅಜ್ಜಿ ಮೊಮ್ಮಗಳ ಚಿತ್ರಣವಿದೆ. ಗರ್ಭಿಣಿ ಮೊಮ್ಮಗಳನ್ನು ನೋಡುತ್ತಾ ಹಿಂದಿನದಲ್ಲ ನೆನೆಯುವ ಅಜ್ಜಿ ತನ್ನ ಮೊಮ್ಮಗಳನ್ನು ಆಕೆಯ ಗಂಡ ಒರಟಾಗಿ ನಡೆಸಿಕೊಂಡಿಲ್ಲವೆಂದು ಎಣಿಸುತ್ತಾಳೆ. ಬಸಿರು ತೀರಾ ಸಹಜವಾಗಿ ತೆಗೆದುಕೊಂಡು ಆರಾಮವಾಗಿದ್ದ ಮೊಮ್ಮಗಳ ಜೊತೆ ಇನ್ನು ಕೆಲವು ದಿವಸ ಇಲ್ಲೇ ಇರ್ತೀಯಾ ಎಂದು ಮೊಮ್ಮಗಳನ್ನು ಕೇಳಿ ಸುಮ್ಮನಾಗುತ್ತಾಳೆ.

'ಕೆಂಪುಲಂಗ' ಕತೆಯಲ್ಲಿ ಯಜಮಾನಿ ಪುಟ್ಟ ಹುಡುಗಿ ಕೆಲಸದಾಕೆ 'ರಾಧಾ'ಳನ್ನು ನಡೆಸಿಕೊಳ್ಳುವ ಬಗೆ ಇದೆ. ತಾನು ಹೆರಿಗೆಗೆ ಹೋದಾಗ ತನ್ನ ಗಂಡ ಅವಳೊಂದಿಗೆ ಹೇಗೆ ನಡೆದು ಕೊಳ್ಳಬಹುದೆಂಬ ಆತಂಕವೂ ಹೆಂಡತಿಯಲ್ಲಿದೆ. ಇವಳ ಅನುಮಾನ ರಾಧಳಿಗೆ ಶಿಕ್ಷೆ

ನೀಡಿತು. ಮನೆಯೊಡತಿ ಲಕ್ಷ್ಮಿಯ ಅನುಮಾನ ಸ್ವಭಾವದಿಂದ ಒಡೆಯನನ್ನು ರಾಧಾಳಿಗೆ ಹೊಡೆವಂತೆ ಮಾಡಿತು. ಒಡೆಯನ ಅಸಹಾಯಕ ಸ್ಥಿತಿ, ಒಡತಿ ಲಕ್ಷ್ಮಿಯ ಅನುಮಾನದ ಮಾತುಗಳು ರಾಧಳ ಮುಗ್ಧ ಸ್ವಭಾವ ಕತೆಯಲ್ಲಿ ಕಾಣಬಹುದಾದ ಸಂಗತಿಯಾಗಿದೆ. ಇಷ್ಟೆಲ್ಲಾ ಆದ ಮೇಲೂ ರಾಧಾಳಿಗೆ ಓಣಂ ಹಬ್ಬದಲ್ಲಿ 'ಕೆಂಪುಲಂಗ' ತೊಡುವ ಆಸೆ. ಯಜಮಾನರ ಹಿಂಸಾತ್ಮಕ ನಡವಳಿಕೆಗೆ ಯಜಮಾನಿ ಕಾರಣ ಎನ್ನುವುದು ರಾಧೆಗೆ ಅರ್ಥವಾಗದೆ ಹೋದ ವಿಷಯವಾಗಿದೆ.

'ಸುಂದರಿಯಾದ ಮಗಳು' ಕತೆಯ ಮಾಧವಿಯ ಮಗಳನ್ನು ಸದಾ ಗುಮಾನಿಯಿಂದಲೇ ನೋಡುತ್ತಿದ್ದಳು. ಗದರಿಯೇ ಮಾತನಾಡಿಸುತ್ತಿದ್ದಳು. ತನ್ನ ಮಗಳಿಗೆ ಪ್ರೇಮಿಯಿರಬಹುದು ಎಂಬ ಅಭಿಪ್ರಾಯ ಅಮ್ಮನದ್ದು. ಆದರೆ ಮಗಳು ಕೆಲಸ ಮಾಡಿ ಬಂದ ಹಣವನ್ನು ಆಕೆಯ ಕೈಲೇ ಕೊಡುತ್ತಿದ್ದಳು. ಅಮ್ಮನ ಬೇಕು ಬೇಡಗಳನ್ನು ನೋಡಿಕೊಂಡಿದ್ದಳು. ಇಷ್ಟಾದರೂ ಅವರ ಸಂಬಂಧ ಹಿತಕರವಾಗಿ ಇರದೆ ಅನುಮಾನದಲ್ಲೇ ಇತ್ತು. ಮುದುಕಿಯ ಅನುಮಾನ ಸ್ವಭಾವ, ಬೈಗುಳ ತಾಳಲಾರದೆ ಮನೆಕಟ್ಟುವ ವೇಲುವನ್ನು ಮದುವೆಯಾಗುತ್ತೇನೆ ಎಂದು ಹೇಳಿದಳು. ಇದಕ್ಕೆ ಅಮ್ಮನ ಸಮ್ಮತಿ ಇರಲಿಲ್ಲ. ಮಾಧವಿ ತನ್ನ ಬದುಕನ್ನು ಆರಿಸಿಕೊಂಡಳು. ಅಮ್ಮ ಒಂಟಿಯಾದಳು. ಅಮ್ಮನ ನಡವಳಿಕೆಯ ಮಗಳು ದೂರಾಗುವುದಕ್ಕೆ ಕಾರಣವಾಯಿತು ಎನ್ನಬಹುದು.

ಹೆಣ್ಣು ಮತ್ತೊಂದು ಹೆಣ್ಣಿನ ನಡುವಿನ ಸ್ನೇಹ, ಸಂಬಂಧಗಳು ಅನುಮಾನಗಳು, ಪ್ರಾಮಾಣಿಕತೆ, ವ್ಯಂಗ್ಯಗಳು, ಬಸುರಿನ ಅನುಭವಗಳು ಕತೆಯಲ್ಲಿ ಮೂಡಿ ಬಂದಿರುವ ಸಂಗತಿಗಳಾಗಿವೆ.

ಈ. ಹೆಣ್ಣು ಮತ್ತು ಸಮಾಜದ ಸಂಬಂಧ :

ಹೆಣ್ಣು ಸಮಾಜದೊಟ್ಟಿಗೆ ನಿಕಟ ಸಂಬಂಧಿಯಾಗೇ ಬದುಕುತ್ತಿರುತ್ತಾಳೆ. ಅಧಿಕಾರ ರಚನೆಗಳು ಅದಕ್ಕೆ ತೋರುವ ಪ್ರತಿರೋಧಗಳು ತೀರಾ ಸಹಜವೆನಿಸುವಂತೆ ಮೂಡಿ ಬರುತ್ತದೆ. ಸ್ತ್ರೀ ಸಂವೇದನೆಯಲ್ಲಿ ಬರೆಯ ಹೊರಟ ಇಬ್ಬರು ಲೇಖಕಿಯರು ಸಾಮಾಜಿಕ ಪ್ರಜ್ಞೆಯನ್ನು ಮೀರಿಲ್ಲ. ಭಾವುಕ ಲೋಕ ತೆರೆದಿಡುವ ಪ್ರಯತ್ನದ ಜೊತೆಗೆ ಸಾಮಾಜಿಕ ಸ್ಪುಹೆಯನ್ನು ಮರೆತಿಲ್ಲ. ಹೆಣ್ಣು ಸಮಾದೊಟ್ಟಿಗೆ ಬೆರೆತು ಬಾಳುವ ಪ್ರಾಸಂಗಿಕ ಸಂಗತಿಗಳು ಕತೆಯಲ್ಲಿವೆ. ಸಮಾಜದೊಳಗೆ ಬದುಕಿ ಬಾಳುವ ಹೆಣ್ಣು–ಗಂಡಿಗೆ ಇತಿಮಿತಿಗಳನ್ನು ಕುರಿತು ಚಿಂತಿಸುವ, ಚರ್ಚಿಸುವ ಬಗ್ಗೆ ಕತೆಗಳ ವ್ಯಾಪ್ತಿ ಬೆಳೆದಿದೆ. ಪುರುಷ ಬರವಣಿಗೆಯಲ್ಲಿ ಸಮಾಜದ್ದು ಬಹುತೇಕ ಪಾಲಾದರೆ ಹೆಣ್ಣು

ಬರವಣಿಗೆಯಲ್ಲಿ ಕೇವಲ ತನ್ನ ಲೋಕವನ್ನು ಅಭಿವ್ಯಕ್ತಿಸುತ್ತಾಳೆ ಎಂಬ ಆರೋಪವೂ ಇದೆ. ಆದರೆ ಸ್ತ್ರೀ ಏನನ್ನೇ ಬರವಣಿಗೆಗೆ ಇಳಿಸಿದರೂ ಸಮಾಜದ ಜೊತೆಗೆ ನಡೆಯುತ್ತಿರುವ ಸಂದರ್ಭಕ್ಕೆ ಹಲವು ಉದಾಹರಣೆಗಳು ಕತೆಯ ಮೂಲಕ ಸಿಗುತ್ತದೆ.

ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾಗಿ ಬದುಕುವುದು, ಸಮಾಜದಲ್ಲಿದ್ದು ತನ್ನ ಆಯ್ಕೆಗಳನ್ನು ಈಡೇರಿಸಿಕೊಳ್ಳುವ ಸ್ವಚ್ಛಂದವಾಗಿ ಬದುಕ ಬಯಸುವ ಚಿತ್ರಣಗಳು ಕತೆಗಳಲ್ಲಿವೆ. ಭಾವುಕ ಲೋಕದ ಜೊತೆಗೆ ವೀಣಾ ಅವರ ಕತೆಗಳಲ್ಲಿ ಉದ್ಯೋಗಸ್ಥ ಮಹಿಳೆಯರಾಗಿ ಕಾಣಬರುವ ಪಾತ್ರಗಳು ಇವೆ. ಕಮಲಾದಾಸ್‌ರವರ ಕತೆಗಳಲ್ಲಿಯೂ ಮನೆ ಕೆಲಸದಾಕೆಯ ಪಾತ್ರದಿಂದ ಹಿಡಿದು ಒಂಟಿಯಾಗಿ ವಿದೇಶ ಸುತ್ತಿಬರುವ ಮಹಿಳೆಯರು ಇದ್ದಾರೆ. ಇವರು ಸಮಾಜದೊಟ್ಟಿಗೆ ನಿಕಟ ಸಂಪರ್ಕ ಹೊಂದಿರುವವರು. ಸಾಮಾಜಿಕವಾಗಿ ನಡೆಯುವ ಎಷ್ಟೋ ದುರಂತಗಳು ವೈಯಕ್ತಿಕ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಅಂತಹ ದುರಂತಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಮೂಲಕ ಹೆಣ್ಣಿನ ತೊಡಕುಗಳನ್ನು ಕತೆಗಳಲ್ಲಿ ಪ್ರಸ್ತಾಪಿಸಿದ್ದಾರೆ.

ವೀಣಾಶಾಂತೇಶ್ವರ ಅವರ 'ಅನಾಥೆ' ಕತೆಯ ಭಗಿನೀ ಸೇವಾ ಸಮಾಜದ ಘಟನೆಗಳು ಅನಾಥ ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಎದುರಾಗುವ ಪರಿಸ್ಥಿತಿಯನ್ನು ತಿಳಿಸಿದರೆ, ಜೊತೆಗೆ ಪುರುಷತ್ವದ ಪ್ರಭಾವದಿಂದ ಹೆಣ್ಣು ಮಕ್ಕಳು ಅನುಭವಿಸುವ ದೈಹಿಕ, ಮಾನಸಿಕ ಸಂಕಷ್ಟಗಳ ಚಿತ್ರಣವಿದೆ. 'ಸೋನಿಯಾ' ಕತೆ ಹೆಣ್ಣು ಮಕ್ಕಳ ಶಿಕ್ಷಣವನ್ನು ಕುರಿತದ್ದಾಗಿದೆ. ಓದುವ ಹಂಬಲ ಸಮಾಜದಲ್ಲಿನ ಮದುವೆಯ ಬಗೆಗಿನ ನಂಬಿಕೆಗಳು ಎಲ್ಲದರ ಮಧ್ಯೆ ಕೌಟುಂಬಿಕ ಜೀವನವೇ ಮುಖ್ಯವೆಂಬ ಬಲವಾದ ನಂಬಿಕೆಗಳು ಸಮಾಜದಲ್ಲಿ ಹೆಣ್ಣು ಮಕ್ಕಳ ಓದಿಗೆ ಕಡಿವಾಣ ಹೇರುತ್ತಲಿದೆ, ಎಂಬುದು ಕತೆಯ ಮೂಲಕ ತಿಳಿದು ಬರುತ್ತದೆ.

'ದ.ಬ್ರಾ. ಕೃಷ್ಣಪ್ಪ' ಕತೆಯಲ್ಲಿ ಹೌಸಿಂಗ್ ಸೊಸೈಟಿಯಲ್ಲಿ ಹಣ ಹೂಡಿದ ಕೃಷ್ಣಪ್ಪನಿಗೆ ಸೈಟು ಸಿಗದೆ ಹೋದುದಕ್ಕೆ ಮನನೊಂದು ಚಿಂತೆಗೆ ಬಿದ್ದ ತಾಯಿ ಸಾವಿಗೀಡಾಗುತ್ತಾಳೆ. ಕೃಷ್ಣಪ್ಪನ ಮಗಳು ರಮಾ ಕೂಡ ಬಿ.ಎಡ್ ಮುಗಿಸಿ ಊರಿನಲ್ಲಿ ಆರಂಭವಾದ ಬಾಲಕಿಯರ ಶಾಲೆಗೆ ಅರ್ಜಿ ಹಾಕುತ್ತಾಳೆ. ಅಲ್ಲಿಯೂ ಅಧಿಕಾರದಿಂದ ಆಕೆಗೆ ಸಿಗಬೇಕಿದ್ದ ಅವಕಾಶ ತಪ್ಪಿ ಹೋಗುತ್ತದೆ. ಪುರುಷ ಸಮಾಜದ ಅನೇಕ ಪ್ರಭಾವಗಳಿಗೆ ಹೆಣ್ಣು ಒಳಗಾಗುವ ಚಿತ್ರಣವಿದೆ.

ಎರಡನೆ ಮಹಾಯುದ್ಧ ಕಾಲದ ಕತೆ 'ಧೈರ್ಯದ ಮನುಷ್ಯ' ದೈಹಿಕವಾಗಿ ಬಲಶಾಲಿಯಾದ ಪೆರುಮಾಳ್ ಮಾನಸಿಕವಾಗಿ ಹೇಗೆ ಕುಗ್ಗಿ ಹೋಗುತ್ತಾನೆ. ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಸಾಮರ್ಥ್ಯ ಉಳ್ಳವನು. ಈ ಕತೆಯಲ್ಲಿ

ಹೆಂಡತಿ ಯಾರೊಟ್ಟಿಗೆ ಓಡಿ ಹೋಗುವ ಸಂದರ್ಭವಿದೆ. ಸಮಾಜದಲ್ಲಿ ಹೆಣ್ಣಿಗೆ ಪತಿನಿಷ್ಠಳಾಗಿ ಬದುಕಬೇಕೆಂಬ ನಿಯಮವಿದೆ. ಅದನ್ನು ಮೀರಿದ ಆಕೆಯ ಸಂದರ್ಭಕ್ಕೆ ಗಂಡನೇ ಬಲಿಯಾಗುತ್ತಾನೆ. ಸಾಮಾಜಿಕವಾಗಿ ಹೆಣ್ಣಿಗಿರುವ ಕಟ್ಟಲೆಗಳ ಬಗ್ಗೆ ಕತೆಯಿಂದ ತಿಳಿದು ಬರುತ್ತದೆ. ಇದನ್ನು ಕಟ್ಟಲೆ ಎಂದು ಹೇಳಲಾಗುವುದಿಲ್ಲ. ಸಮಾಜವೆನ್ನುವುದು ನಂಬಿಕೆಯ ಒಪ್ಪಂದ. ಈ ಒಪ್ಪಂದಗಳನ್ನು ಮೀರಿದರೆ ಸಂಬಂಧಗಳು ಉಳಿಯುವುದಿಲ್ಲ.

'ಗಂಡಸರು' ಕಿರು ಕಾದಂಬರಿಯಲ್ಲಿ 'ಶಾಂತಿ'ಯನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳಲು ಹೇಳಿದ್ದು. ಮದುವೆಯಾಗುವ ಸಲುವಾಗಿ ಮತಾಂತರ ಪ್ರಕ್ರಿಯೆ ನಡೆಯಬೇಕೆಂಬ ಜಾನ್ ಅಶೋಕ್ ಕುಮಾರನ ಅಭಿಪ್ರಾಯವನ್ನು ವಿರೋಧಿಸಿ 'ಶಾಂತಿ' ತನ್ನ ಬದುಕಿನ ಮುಂದಿನ ಆಯ್ಕೆಗೆ ತೆರಳುತ್ತಾಳೆ. 'ಕಾಯುತ್ತಲಿದ್ದ ಕರಿಯ' ಕತೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಅವಕಾಶಗಳಿಗಾಗಿ ಮುಂಬೈಗೆ ತೆರಳಿದ ಲಕ್ಷ್ಮಿ ತಂದೆಯನ್ನು ಅಲಕ್ಷಿಸುತ್ತಾಳೆ. ಆಧುನಿಕ ಸಮಾಜಕ್ಕೆ ತನ್ನನ್ನು ತೆರೆದಿಟ್ಟುಕೊಳ್ಳುವ ಚಿತ್ರಣವಿದೆ.

'ಮರ್ಯಾದೆ' ಕತೆಯಲ್ಲಿ ಮಗಳು 'ಕಮಲಾ' ಮತ್ತು ಸರಸವ್ವ ಎರಡನೆ ಮದುವೆಗೆ ಸಮ್ಮತಿಸುವ ಪ್ರೋತ್ಸಾಹಿಸುವ ಚಿತ್ರಣವಿದೆ. ಹೀಗೆ 'ಹರಿದು ಬಾ ತಾಯಿ', 'ಮುಂದಾಳುವಿನ ಜನತಾ ಸೇವೆ', 'ಒಂದು ಗಿಡ ಒಂದು ಬಾವಿ' ಹಲವು ಕತೆಗಳು ಸಾಮಾಜಿಕ ಕಳಕಳಿಯನ್ನು ತೋರುವ ಕತೆಗಳಾಗಿವೆ.

'ಕಮಲಾದಾಸ್'ರವರ ಕತೆಗಳಲ್ಲಿ ಹೆಣ್ಣು ತನ್ನ ಭಾವುಕ ಲೋಕ ತೆರೆದಿಡುವಲ್ಲಿ ಎಷ್ಟೇ ಯಶಸ್ವಿಯಾಗಿದ್ದರೂ ಸಾಮಾಜಿಕ ಕಟ್ಟಲೆಗಳನ್ನು ಪರೋಕ್ಷವಾಗಿಯೇ ಕತೆಗಳಲ್ಲಿ ಒಗ್ಗೂಡಿಸಿದ್ದಾರೆ. 'ಹಕ್ಕಿಯ ವಾಸನೆ' ಕತೆಯಲ್ಲಿ ಯುವತಿಯೊಬ್ಬಳು ಕೆಲಸ ಹುಡುಕಿಕೊಂಡು 'ಟೆಕ್ಸ್‌ಟೈಲ್ಸ್ ಇಂಡಸ್ಟ್ರೀಸ್'ಗೆ ಹೋಗುತ್ತಾಳೆ. ಆ ಹುಡುಕಿ ಹೋಗುವ ಪ್ರಕ್ರಿಯೆಯಲ್ಲಿ ಎಲ್ಲರೂ ಪುರುಷರೇ. ಪುರುಷ ಸಮಾಜದ ಬಿಗಿ ಮುಷ್ಟಿಯಲ್ಲಿ ಸಿಲುಕಿ ಹೊರ ಬರಲಾರದೆ ಕತ್ತಲಲ್ಲಿ ಸಿಲುಕುವ ಕಲ್ಪನೆ ಸಮಾಜದಲ್ಲಿ ಪುರುಷ ನಿರ್ಮಿತ ಸಮಾಜದ ಕಲ್ಪನೆಯ ಹಾಗೆ ಎಂಬುದು ಅರಿವಿಗೆ ಬರುತ್ತದೆ. ಪುರುಷ ಬಂಧನದ ಒಂದು ಚಿತ್ರಣ ಅಲ್ಲಿದೆ. ಕತ್ತಲು, ಉಸಿರುಗಟ್ಟುವ ಲಿಫ್ಟ್, 'ಆಮದು ಮತ್ತು ರಫ್ತು', 'ವೈನ್ ವ್ಯಾಪಾರ'ದ ಫಲಕಗಳು, 'Dying' ಇವೆಲ್ಲವೂ ನಾನಾರ್ಥಗಳನ್ನು ನೀಡುತ್ತಾ ಕಾಲ್ಪನಿಕ ಲೋಕವೊಂದಕ್ಕೆ ಓದುಗರನ್ನು ಕೊಂಡೊಯ್ಯುತ್ತದೆ. ಆದರೂ ಅದೆಲ್ಲಾ ಹೆಣ್ಣು ಸಮಾಜದಲ್ಲಿ ಎದುರಿಸುವ ಸಂದರ್ಭಗಳೇ ಆಗಿವೆ.

'ಬೇಟೆಗಾರ' ಕತೆಯಲ್ಲಿ ಬೇಟೆಗಾರನನ್ನು ಕಾಣಲು ಬಂದ ಮಿಸೆಸ್ ಅಂಡ್ ಮಿಸ್ಟರ್ ಸುಕುಮಾರನ್‌ಗೆ ಆತನನ್ನು ಕಾಣಲು ಮಗಳು 'ಲಿಸ್ಸಿ' ಮತ್ತು ಹೆಂಡತಿ ಬಿಡಲಿಲ್ಲ. ಆದರೂ ಬೇಟೆಗಾರನ ಮಾತನಾಡಿಸುವ ಅವಕಾಶ ಸಿಕ್ಕಿತು. ಬೇಟೆಗಾರನ ಹೆಂಡತಿ ಎಂದೂ ಆತನ ಬೇಟೆಗೆ ಪ್ರೋತ್ಸಾಹ ನೀಡಿರಲಿಲ್ಲ ಎಂದು ಹೇಳಿಕೊಂಡಳು. ಮಿಸ್ಟರ್ ಮೆನನ್‌ಗೆ ಆನೆಯ ಕಡು ಹಳದಿ ಬಣ್ಣದ ಆಫ್ರಿಕಾ ಆನೆಯ ದಂತ ಉಡುಗೊರೆ ನೀಡ ಹೊರಟರು 'ಲಿಸ್ಸಿ' ನೀಡಿದ್ದು ಎರಡು ಕಟ್ಟಿಗೆಯ ತುಂಡುಗಳಾಗಿದ್ದವು. ಆನೆ ದಂತ ನೀಡಬಾರದು, ಬೇಟೆಗಾರನನ್ನು ಮಾತನಾಡಿಸಬಾರದು ಎಂಬ ಮನೋಭಾವವು ಬೇಟೆಗಾರನ ಮಗಳು ಮತ್ತು ಹೆಂಡತಿಯಲ್ಲಿ ಇತ್ತು.

'ಬ್ಲಡ್‌ಪ್ರೆಷರ್' ಕತೆಯಲ್ಲಿ ಡಾಕ್ಟರ್ ಶಾರದ ಹಗಲಿಡಿ ಆಸ್ಪತ್ರೆಯಲ್ಲಿ ರೋಗಿಗಳ ಸೇವೆ ಮಾಡುವವಳು. ಮನೆಗೆ ಬಂದೊಡನೆ ಮುದುಕ, ಕುಡುಕ ರೋಗಿ 'ಕುರುಪ್'ನ ಕಾಟ. ದಿನ ನಿತ್ಯವೂ ಬ್ಲಡ್ ಪ್ರೆಷರ್ ನೋಡಲು ಶಾರದಾಳನ್ನು ಹುಡುಕಿ ಬರುವವನು. ಆಸ್ಪತ್ರೆಯ ದುಡಿಮೆ. ಮನೆಗೆ ಬಂದರೂ ವೈಯಕ್ತಿಕ ಬದುಕಿಗೆ ಬಿಡುವಿಲ್ಲದ ಡಾಕ್ಟರ್ ಶಾರದಾಳ ಚಿತ್ರಣ ಕತೆಯಲ್ಲಿದೆ.

'ಅಮ್ಮ' ಕತೆಯಲ್ಲಿ ತಾಯಿಯನ್ನು ಒಂಟಿಯಾಗಿ ಬಿಟ್ಟು ವಿದೇಶಕ್ಕೆ ತೆರಳಿದ್ದರು. ಅಮ್ಮ ಒಬ್ಬಂಟಿ ತರಕಾರಿ ತರಲು ಹೋದಾಗ ಕಾಲಿನ ಮೇಲೆ ವಿದೇಶಿ ಕಾರು ಹರಿದಿತ್ತು. ಈ ಅಪಘಾತದ ವಿಚಾರಣೆಯ ಸಂದರ್ಭದಲ್ಲಿ ಪೋಲಿಸಿನವರಿಗೆ ಉತ್ತರ ನೀಡಿ ಹಾಲು ಮಾರುವ ವ್ಯಕ್ತಿ ಆಸ್ಪತ್ರೆಗೆ ಕರೆದು ಒಯ್ದನು. ಚಿಕಿತ್ಸೆ ನೀಡಿದ ಡಾಕ್ಟರ್ ಟ್ಯಾಕ್ಸಿಯವನೊಡನೆ ಮನೆಗೆ ಕಳುಹಿಸಿದರು ಹೀಗೆ ಮುಪ್ಪಿನಲ್ಲೂ ಒಂಟಿ ಬದುಕುವ ಹೆಣ್ಣಿನ ಚಿತ್ರಣ ಕತೆಯಲ್ಲಿದೆ.

'ನಗ್ನ ದೇಹಗಳು' ಕತೆಯಲ್ಲಿ ವಿಧವೆಯ ಚಿತ್ರಣವಿದೆ. ಆಕೆ ಕಲಾವಿದೆ ಆದರೂ ಅವಳ ಕಲೆಗೆ ಬೆಲೆಯಿಲ್ಲ. ಅವಳನ್ನು ಮಾನಸಿಕವಾಗಿ ಸಂಬಂಧಿಕರು ಕುಗ್ಗಿಸಿ ಬಿಟ್ಟಿದ್ದರು. ಆಕೆಯ ಸಾಮಾಜಿಕ ಜೀವನಕ್ಕೆ ಸಂಬಂಧಿಕರು ಪೂರ್ಣ ಅಡ್ಡಿ ಉಂಟು ಮಾಡಿದರು. ಹೆಣ್ಣನ್ನು ಗುರುತಿಸುವುದು ಗಂಡಿನ ಮೂಲಕ, ಗಂಡನಿಲ್ಲದ ಜೀವನ ಏಕಾಂತತೆಯನ್ನು ಉಲ್ಬಣಿಸುವ ಹಾಗೆ ಮಾಡಿತು.

ವ್ಯವಸ್ಥೆಯ ನಿಯಮಿತ ಚೌಕಟ್ಟಿನೊಳಗೆ ಹೆಣ್ಣು ಬದುಕಬೇಕು. ನೈತಿಕ–ಅನೈತಿಕಗಳ ಹಂಗಿನಲ್ಲಿ ಸಾಮಾಜಿಕ ಸಂದರ್ಭಗಳ ಒಳಗೆ ಹೆಣ್ಣು ಬದುಕು ಸಾಗಿಸಬೇಕು. ಇಬ್ಬರು ಲೇಖಕಿಯರು ಸಾಮಾಜಿಕ ನಿಯಮಗಳ ಒಳಗಿನ ಹೆಣ್ಣಿನ ಜೀವನದ ಹಲವು ಸೂಕ್ಷ್ಮ ಸಂಗತಿಗಳನ್ನು ಕತೆಯೊಳಗೆ ಮೂಡಿಸಿದ್ದಾರೆ.

ಉ. ಕತೆಯಲ್ಲಿ ಮೂಡಿ ಬಂದಿರುವ ಇತರ ಸಂಗತಿಗಳು :

ನಾವೆಲ್ಲರೂ, ನಮ್ಮ ಜೀವನದಲ್ಲಿ ಪ್ರತಿಯೊಂದು ಕ್ಷಣ ಕ್ಷಣವೂ ನಮ್ಮ ಬೇಕುಗಳನ್ನು ಹೊಂದಿಸಿಕೊಳ್ಳುವುದಕ್ಕಾಗಿ, ಈ ಜಗತ್ತಿನಲ್ಲಿ ಸುಖವನ್ನು ಹುಡುಕಿಕೊಂಡು ಹೋಗುತ್ತಿರುತ್ತೇವೆ. ಸುಖ ಸಂತೋಷಗಳು ಈ ಪ್ರಪಂಚದಲ್ಲಿ ಅಪಾರವಾಗಿದೆ ಎನ್ನುವುದಕ್ಕೆ ನಮ್ಮ ಹೃದಯದ ಅಂತರಾಳವು ಈ ಸುಖದ ಬಗ್ಗೆ ಧ್ಯಾನಿಸುತ್ತಿರುವುದೇ ಸಾಕ್ಷಿ. ಆದರೂ ಕಡೆಗೊಮ್ಮೆ ಈ ಬದುಕು ಇಂತಿಷ್ಟೇ ಎಂಬ ಭಾವ, ಕಾಡುವ ಒಂಟಿತನಗಳು, ಬದುಕು ಬಂದ ಹಾಗೆ ಸ್ವೀಕರಿಸಬೇಕೆಂಬ ನಿತ್ಯ ಸತ್ಯಗಳು ನಮ್ಮನ್ನು ಸದಾ ಸುತ್ತುವರೆದಿರುತ್ತವೆ.

ಮಾನವೀಯತೆಯ ಪರಾಕಾಷ್ಠೆಯೇ ಬದುಕಿನ ಸಾರ್ಥಕತೆಯ ಅರಿವನ್ನು ಜಾಗೃತಗೊಳಿಸುತ್ತದೆ. ಹೀಗಿರುವಾಗ ಸಾಹಿತ್ಯದ ಮುಖೇನ ಅನಿರೀಕ್ಷಿತವಾಗಿ ತಮಗಿರವಿಲ್ಲದಂತೆಯೇ ಲೇಖಕಿಯರ ಕಥೆಗಳಲ್ಲಿ ಬದುಕಿನಾಚೆಗಿನ ವಾಸವಗಳು ಮೂಡಿ ಬಂದಿರುವುದನ್ನು, ಪ್ರಸ್ತುತ ಭಾಗದಲ್ಲಿ ಕತೆಗಳಲ್ಲಿನ ಉದಾಹರಣೆಯ ಮೂಲಕ ಕಾಣಲು ಸಾಧ್ಯವಿದೆ. ಅಂತಹ ಆಯ್ದ ಕತೆಗಳ ಚರ್ಚೆಯನ್ನಾಗಿ ನಡೆಸಲಾಗಿದೆ. 'ವೀಣಾಶಾಂತೇಶ್ವರ' ಅವರ 'ಅತಿಥಿ' ಕತೆಯ ಪ್ರೊ. ಲೀಲಾವತಿ ವೇದಿಕೆಯ ಮೇಲೆ ಭಾಷಣ ಮಾಡುವ ಅತಿಥಿ. ಒಂಟಿಯಾಗಿ ಬದುಕುತ್ತಿದ್ದ ಲೀಲಾವತಿಯ ಮನಸ್ಸನ್ನು ಕದಡಿತ್ತು. ಬರೇ ಅತಿಥಿಯಾಗಿ ಅಲ್ಲಲ್ಲಿ ತಿರುಗುವುದರೊಳಗೇ ತನ್ನ ಜೀವನ ಸವೆದು ಹೋಗುತ್ತಿದೆಯೇ? ಈ ಕಾರ್ಯಕ್ರಮಗಳಿಗೆ ಮಾತ್ರವಲ್ಲ, ಈ ಜೀವನಕ್ಕೆ ತಾನು ಅತಿಥಿಯಾಗಿ ಬಂದವಳೇ? ದುಡಿದು–ದಣಿದು ಬಂದಾಗ ತನ್ನನ್ನು ಸ್ವಾಗತಿಸುವ ದಣಿವು ಕಡಿಮೆ ಮಾಡುವ ಪ್ರೀತಿಸುವ ಯಾವ ಜೀವವೂ ಇಲ್ಲಿಲ್ಲವೇ? ಎನ್ನುವ ಸ್ವಗತವು ಬದುಕಿನಲ್ಲಿ ಒಂಟಿತನ ಕಾಡುವ ಲೀಲಾವತಿಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ತಾನು ಎಲ್ಲಿ ಹೋದರೂ, ಬಂದರೂ, ಸತ್ತರೂ, 'ಮನೆ' ಯವಳಲ್ಲವೆಂಬ, ಬರೇ 'ಅತಿಥಿ' ಯೆಂಬ ಈ ಪ್ರಜ್ಞೆ ತೀಕ್ಷ್ಣವಾಗಿ ಕೊರೆಯತೊಡಗಿದೆಯಲ್ಲ ಲೋಕಕ್ಕೆ ಕೇವಲ ಅತಿಥಿಯಾಗ ಬಂದವಳು ತಾನೆಂದು ಮರುಗುವ ಒಂಟಿಯಾಗಿ ಬದುಕಿದ ಲೀಲಾವತಿಯ ಸ್ವಗತ ಬದುಕಿನ ಅಗತ್ಯ ಸಾಂಗತ್ಯ ಎಂಬುದನ್ನು ನೆನಪಿಸುವುದನ್ನು ಕಾಣಬಹುದಾಗಿದೆ.

ಕಮಲಾದಾಸ್‌ರವರ 'ಲಾಕಪ್' ಕತೆಯಲ್ಲಿನ ರತ್ನಮ್ಮ ರಾಜಕೀಯವನ್ನು ಕುರಿತು ಭಾಷಣ ಮಾಡಿದ್ದಕ್ಕಾಗಿ ಜೈಲು ಸೇರಬೇಕಾಯಿತು. ಎದೆಹಾಲು ಕುಡಿಯುವ ಒಂಭತ್ತು ತಿಂಗಳ ಮಗು ನೆನಪಾಗಿ ಮರುಗುವಾಗ ಜೈಲಿನಲ್ಲಿ ತನ್ನಜೊತೆಗೆ ಲಾಕಪ್‌ನಲ್ಲಿ ಇದ್ದ ವೇಶ್ಯೆ ಇನ್ನು ಮುಂದೆ ಭಾಷಣ ಮಾಡುವುದಿಲ್ಲವೆಂದು ಹೇಳಿಬಿಡು ಇದರಿಂದ ಬಿಡುಗಡೆ ಸಿಗಬಹುದೆಂದು ಹೇಳುತ್ತಾ

"ಹೆಣ್ಣಾಗಿ ಹುಟ್ಟಿದ ಮೇಲೆ ಅನುಭವಿಸಬೇಕಾದುದನ್ನೆಲ್ಲಾ ಅನುಭವಿಸಲೇ ಬೇಕು" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:277) ಎಂದು ನುಡಿಯುವಳು. ಪುರುಷ ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಅನುಭವಿಸುವ ತಲ್ಲಣ, ಹೆಣ್ಣು ಅನುಭವಿಸಬೇಕಾದ ಯಾತನೆಯನ್ನು ಇಲ್ಲಿ ಅನುಭವಿಸಿಯೇ ತೀರಬೇಕೆಂದುಕೊಳ್ಳುವ ಸಹನೆಯಿಂದ ಹಿಂಸೆಯನ್ನು ಸಹಿಸಿಕೊಳ್ಳುವುದನ್ನು ಗಮನಿಸಬಹುದು.

ಕಮಲಾದಾಸ್‌ರವರ ಮತ್ತೊಂದು ಕತೆ 'ಗೂಡುಗಳು' ಎಲ್ಲರ ಬಾಯಲ್ಲೂ 'ಅಮ್ಮ' ಎಂದು ಕರೆಸಿಕೊಳ್ಳುತ್ತಿದ್ದ ವೇಶ್ಯೆ ಮಗನ ಬಾಯಿಂದ ಹಿಂದೊಮ್ಮೆ 'ಮಹಾಪಾಪಿ' ಎಂದು ಕರೆಸಿಕೊಂಡಿದ್ದಳು. ಆದರೆ ಒಂದು ದಿನ ಮಗನಿಂದ ಬಂದ ಪತ್ರದಲ್ಲಿ ಹೀಗೆ ಬರೆದಿತ್ತು. "ನೀನು 'ಮಹಾಪಾಪಿ'ಯೆಂದೇನೂ ನನಗನ್ನಿಸುತ್ತಿಲ್ಲಮ್ಮ. ಈ ಜಗತ್ತಿನಲ್ಲಿ ಬದುಕಲು ಪ್ರತಿಯೊಬ್ಬರಿಗೂ ಕೆಲಸವಿರಬೇಕೆಂಬ ನಿಯಮವೇನೂ ಇಲ್ಲ. ನಾನು ಕೆಲಸ ಮಾಡುತ್ತಿರುವ ಹೋಟಲಿಗೆ ಬರುವ ಅನೇಕರ ಬದುಕನ್ನು ನಾನು ಕಂಡಿದ್ದೇನೆ. ಸಿನಿಮಾದವರನ್ನು, ನೃತ್ಯದಿಂದ ಹಾಡುವುದರಿಂದ ಹಣ ಸಂಪಾದಿಸುವವರನ್ನು, ಶಾಲೆಗಳಲ್ಲಿ ಪಾಠಮಾಡುವವರನ್ನು, ಖಾಯಿಲೆ ವಾಸಿ ಮಾಡುವವರನ್ನು, ಕಕ್ಕಸು ತೊಳೆಯುವವರನ್ನು ಹೀಗೆ ಹಲವಾರು ಮಂದಿ ನಾನಿರುವ ಹೋಟಲಿಗೆ ಬರುತ್ತಾರೆ. ಎಲ್ಲರ ಅಗತ್ಯ ತಿನ್ನಲು ರೊಟ್ಟಿ ಮತ್ತು ಮಲಗಲು ಸ್ಥಳ ಎಲ್ಲರೂ ಮನುಷ್ಯರೇ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:50) ಹೀಗೆ ಮನುಷ್ಯನ ಮೂಲಭೂತ ಅಗತ್ಯಗಳಿಗಾಗಿ ಒಬ್ಬೊಬ್ಬರು ಒಂದೊಂದು ದಾರಿಯನ್ನು ಹಿಡಿಯುತ್ತಾರೆ. ಬದುಕಲಿಕ್ಕೆ ತನ್ನ ತಾಯಿ ಆರಿಸಿಕೊಂಡ ವೇಶ್ಯಾವೃತ್ತಿಯ ಬಗ್ಗೆ ಯಾವ ಅಳುಕಿಲ್ಲದಂತೆ ಮನುಷ್ಯನ ಅಗತ್ಯ ಪೂರೈಸಿಕೊಳ್ಳಲು ಹಿಡಿದ ದಾರಿ ಎಂಬ ವಾಸ್ತವ ಅಂಶಗಳನ್ನು ಒಪ್ಪಿ ತಾಯಿಯ ಬಗ್ಗೆ ಮರುಕ ವ್ಯಕ್ತಪಡಿಸುವ ಚಿತ್ರಣವಿದೆ. ಮಾನವೀಯತೆಯ ನಡುವೆ ಸಂಬಂಧಗಳು ಬೆಸೆಯುವಾಗ ಲೋಕ ವ್ಯವಹಾರಗಳು ನಗಣ್ಯವೆನಿಸುವ ಸ್ಥಿತಿ ಇದೆ. ಮನುಷ್ಯ ಸಂಬಂಧಗಳು ಮುಖ್ಯವೆನಿಸುತ್ತದೆ.

ವೀಣಾಶಾಂತೇಶ್ವರ ಅವರ 'ನೆನಪು...ಬರಿ ನೆನಪು' ಕತೆಯಲ್ಲಿ 'ಪಾವನ' ತನ್ನ ಬಾಲ್ಯದ ಗೆಳೆಯ 'ಎಲಿಸನ್'ನ ನೆನಪಿನೊಡನೆ ಕಾಲ ಕಳೆಯುತ್ತಾಳೆ. ಎಲಿಸನ್ ನೆನಪಿನ ಹಿಂದೆ ಮೂರ್ತಿಯ ನೆನಪು. 'ಇಷ್ಟು ಸಣ್ಣ ಆ್ಯಕ್ಸಿಡೆಂಟ್ಸ್‌ಗೆ'.. ಪಾವನಾಳ ಮನಸಿನ ಮಾತು ಹೀಗಿದೆ. 'ನಿಜ ಜೀವನದಲ್ಲಿ ಎಂತೆಂತಹವೋ ಅಪಘಾತಗಳು ಸಂಭವಿಸುತ್ತವೆ'. ಹೀಗೆ ಬದುಕಿನಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳು ಕೇವಲ ಆ್ಯಕ್ಸಿಡೆಂಟ್ ಎಂದೇ.. ಭೇಟಿಯಾಗುವ ಅನೇಕರು ಪ್ರಯಾಣಿಕರಂತೆ, ನಿಲ್ದಾಣದಲ್ಲಿ ಇಳಿದು ಹೋಗುವ ಪ್ರಯಾಣಿಕರಂತೆ ಬದುಕಿನಲ್ಲಿ ಪ್ರವೇಶ

ಪಡೆದವರು. ಕೇವಲ ತಾತ್ಕಾಲಿಕ ಬದುಕಿನ ಜೀವನ ಎಂಬಂತೆ ಎಲಿಸನ್‌ನ ನೆನಪು ಕಾಡುತ್ತಾ ಪಾವನಾಳ ಕೈಯಿಂದ ಕವಿತೆಯ ರೂಪ ಪಡೆಯುತ್ತದೆ.

'ಘನಶ್ಯಾಂ' ಕತೆಯಲ್ಲಿ ಶ್ಯಾಂನನ್ನು ಮಿಥ್ ಆಗಿ ಕಾಣಲಾಗಿದೆ. ಹೃದಯದ ಹೂದೋಟದಲ್ಲಿ ಕೋಗಿಲೆಯಂತೆ. ಬದುಕೆಂದರೆ ನೀರು, ಸಾವೆಂದರೆ ಕ್ಷಾಮ. ಪ್ರೀತಿ ಎನ್ನುವುದನ್ನು ಕುರಿತು ಹೀಗೆನ್ನುತ್ತಾನೆ. "ಕುರುಡನಿಗೆ ನೂರು ರೂಪಾಯಿಯ ನೋಟು ಕೊಟ್ಟಂತಿತ್ತು. ತಾನು ಆತನನ್ನು ಪ್ರೀತಿಸಿದ್ದು. ಕಾರಣ ಅವನು ನನ್ನ ಪ್ರೀತಿಯನ್ನು ನಂಬಲಿಲ್ಲ. ಬೆಳಕು ಹಚ್ಚಿ ನಾನು ಆಟವಾಡಿದೆ. ಅಂದು ಅವನ ಅಂತರಂಗದಲ್ಲಿ ಅಂಧಕಾರವಿತ್ತು". (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:217) ಹೀಗೆ ಅಂಧಕಾರದ ಸಂಬಂಧಗಳಲ್ಲಿ ಬೆಳಕು ಕಾಣುವ ಹಂಬಲ. ಗಾಳಿಯಂತೆ ಸುಳಿದು ಬರುವ ನೆನಪಿನಂತೆ, ಒಳ ಮನಸ್ಸಿನ ಕಡಲಿಗೆ ಬೀಸಿದ ಬಲೆಯಂತೆ ಸಂಬಂಧಗಳು ಎಂಬುದರ ಪ್ರಸ್ತಾಪವಿದೆ.

ಕತೆಗಳಲ್ಲಿ ತಮಗರಿವಿಲ್ಲದೆಯೇ ಅಡಕಗೊಂಡಿರುವ ಹಲವು ಸಂಗತಿಗಳು ಲೌಕಿಕ ಬದುಕಿನಾಚೆಯ ವಾಸ್ತವಗಳು, ಮಾನವೀಯತೆ, ಬದುಕು ಬಂದ ಹಾಗೆ ಸ್ವೀಕರಿಸಿ ನಡೆಯಬೇಕೆಂಬ ಸಾಂತ್ವನ, ಅನಿರೀಕ್ಷಿತ ಅಘಾತಗಳನ್ನು ಸಮದೂಗಿಸುವ, ಸಂಬಂಧಗಳ ಜಿಜ್ಞಾಸೆಯನ್ನು ಕತೆಗಳಲ್ಲಿ ಕಾಣಬಹುದಾಗಿದೆ.

ಆಕೃತಿಕೇಂದ್ರಿತ ವಿಶ್ಲೇಷಣೆ

ಅ. ಕಥನದಲ್ಲಿ ಮೂಡಿ ಬಂದಿರುವ ಸ್ತ್ರೀ ಪುರುಷ ಪಾತ್ರ ಚಿತ್ರಣ :

ಸ್ತ್ರೀ, ಪುರುಷ ಸಂಬಂಧಗಳು ಲೇಖಕಿಯರನ್ನು ಗಾಢವಾಗಿ ಕಾಡಿರುವುದಕ್ಕೆ ಇದ್ದ ಕಾರಣಗಳು ಈ ಸಂದರ್ಭದಲ್ಲಿ ಬಹುಮುಖ್ಯ ಪ್ರಶ್ನೆಯಾಗುತ್ತದೆ. ಸಂಬಂಧಗಳ ತೀವ್ರತೆ ಲೇಖಕಿಯರಿಗೆ ಕಾಡಿರುವ ಬಗೆ ಹೇಗೆ ಎಂಬುದನ್ನು ಅವಲೋಕಿಸುವ ಪ್ರಯತ್ನದಲ್ಲಿ ಹೆಣ್ಣು ಗಂಡಿನ ಪಾತ್ರಗಳು ಮುಖಾಮುಖಿಯಾಗುವ ಕ್ರಮವನ್ನು ಚರ್ಚಿಸಲಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಪಡಿಯಚ್ಚಿನ ಪಾತ್ರಗಳಲ್ಲಿ, ಪುರುಷ ಅಪೇಕ್ಷಿತ ನಿಲುವಿನಲ್ಲಿ ಮೂಡಿ ಬಂದಿದ್ದಾಳೆ. ಸ್ತ್ರೀವಾದಿ ವಿಮರ್ಶೆ ಎಂಬ ಗಂಭೀರ ಚಿಂತನೆ ಆರಂಭವಾಗುವ ಮುನ್ನ ಹೆಣ್ಣಿನ ಮನೋಲೋಕ ಸಾಹಿತ್ಯದ ಮೂಲಕ ಮೂಡಿ ಬಂದಿತ್ತು. ಮತ್ತೆ ಮತ್ತೆ ಹೆಣ್ಣನ್ನು ಕಾಡುವ ಸಂಗತಿಗಳು, ವ್ಯವಸ್ಥೆಯಲ್ಲಿನ ತೊಡಕುಗಳು ಇಬ್ಬರೂ ಲೇಖಕಿಯರ ಮೂಲಕ ವ್ಯಕ್ತವಾಗಿದೆ. ಹಾಗೆಂದೊಡನೆ ಸಾಹಿತ್ಯವನ್ನು ಸ್ತ್ರೀ ಪುರುಷ ಜಟಾಪಟಿಯ ಕತೆಯಾಗಿ ಬಿಂಬಿಸಿಲ್ಲ. ಪುರುಷನೊಡನೆ ಯಾವ ಶತ್ರುತ್ವವನ್ನು ತೋರುವ ಅಂಶವು ಮುಖ್ಯವಾಗಿಲ್ಲ. ಒಟ್ಟಾಗಿ ಬಾಳುತ್ತಿರುವ ಸಮಾಜದಲ್ಲಿ ಹೆಣ್ಣಿಗೆ ಎದುರಾಗುತ್ತಿರುವ ದೈಹಿಕ ಮತ್ತು ಮಾನಸಿಕ ಸವಾಲುಗಳು ಒಮ್ಮೊಮ್ಮೆ ಹಿಂಸೆಯ ರೂಪ ಪಡೆದುಕೊಳ್ಳುತ್ತದೆ. ಅಂತಹ ಸೂಕ್ಷ್ಮ ಸಂಗತಿಗಳು ಸಾಹಿತ್ಯದ ವಸ್ತುವಾಗಿದೆ.

ಆಶಯ ಕೇಂದ್ರಿತ ಚರ್ಚೆ ನಡೆಸುವ ಸಂದರ್ಭದಲ್ಲಿ ಉಭಯ ಲೇಖಕಿಯರ ಸಾಹಿತ್ಯವನ್ನು ಜೊತೆಗಿಟ್ಟು ತೌಲನಿಕವಾಗಿ ನೋಡಲಾಗಿದೆ. ಆಕೃತಿಯ ಚರ್ಚೆ ನಡೆಸುವಾಗ ಇಬ್ಬರು ಲೇಖಕಿಯರನ್ನು ಬೇರೆ ಬೇರೆಯಾಗಿ ಚರ್ಚಿಸಲಾಗುವುದು. ತೌಲನಿಕವಾಗಿಟ್ಟು ನೋಡುವಾಗ ಆಕೃತಿಯ ವೈಶಿಷ್ಟ್ಯತೆಯು ಬೆರೆತು ಹೋಗಬಾರದೆಂಬ ಉದ್ದೇಶ. ಇಬ್ಬರು ಲೇಖಕಿಯರ ಚರ್ಚೆಯ ನಂತರ ಸಾಧಿತವಾಗಿರುವ ಫಲಿತಗಳನ್ನು ಒಟ್ಟಾಗಿಸಿ ನೋಡುವ ಮೂಲಕ ಸಾಮ್ಯತೆ, ಭಿನ್ನತೆ, ಅನನ್ಯತೆಯ ಅಂಶಗಳು ಮೂಡಿ ಬರುತ್ತದೆ. ಜೊತೆಗೆ ಕತೆಗಾರ್ತಿಯರ ಕತೆ ಹೆಣೆಯುವ ಕ್ರಮ, ಅವರ ಶೈಲಿ, ತಂತ್ರಗಾರಿಕೆಯೂ ಸ್ಪಷ್ಟವಾಗುತ್ತದೆ. ಆಕೃತಿಯ ತುಲನೆಯನ್ನು ಒಟ್ಟಾರೆ ನಡೆಸಲಾಗುವುದು.

ವೀಣಾಶಾಂತೇಶ್ವರ ಅವರ ಕತೆಗಳಲ್ಲಿ ಸ್ತ್ರೀ ಪುರುಷ ಪಾತ್ರಗಳು ಮುಖಾಮುಖಿಯಾಗುವ ಕ್ರಮವನ್ನು ಪ್ರಸ್ತುತ ಭಾಗದಲ್ಲಿ ಚರ್ಚಿಸಲಾಗಿದೆ. ಬಹುತೇಕ ಇವರ ಕತೆಗಳು ನಡೆಯುವುದು ನಗರ ಪ್ರದೇಶದಲ್ಲಿ, ಕುಟುಂಬ ಮತ್ತು ಉದ್ಯೋಗಸ್ಥ ಮಹಿಳೆಯರ ಚಿತ್ರಣವಿದೆ. ಈ

ಸಂದರ್ಭದಲ್ಲಿ ಹೆಣ್ಣಿಗೆ ಎದುರಾಗುವ ಮನೋವ್ಯಾಪಾರಗಳನ್ನು ಚಿತ್ರಿಸಿದ್ದಾರೆ. ಮಾನಸಿಕ ಜಂಜಾಟಗಳು, ಪ್ರೀತಿಯ ನಿರಂತರ ಹುಡುಕಾಟ, ನಂಬಿಕೆ, ನಿಷ್ಠೆ ಈ ಪ್ರಶ್ನೆಗಳು ಕಾಡಿರುವುದು ಸ್ತ್ರೀ ಪಾತ್ರಗಳಿಗೆ ಹೊರತು, ಪುರುಷನಿಗಲ್ಲ. ಯಾಕೆಂದರೆ ವ್ಯವಸ್ಥೆ ಪುರುಷ ನಿರ್ಮಿತವಾದುದು ಅದರ ಅನ್ವಯ ಹೆಣ್ಣು ಬದುಕಬೇಕಾದುದು ಅದೇ ಚೌಕಟ್ಟಿನಲ್ಲಿ. ಹೆಣ್ಣು-ಗಂಡುಗಳಿಬ್ಬರೂ ಕೂಡಿ ಬದುಕುತ್ತಿರುವ ಸಮಾಜದಲ್ಲಿನ ಅಸಮತೋಲನವನ್ನು ಬಿತ್ತರಿಸುವ ಅಂಶಗಳು ಕತೆಯಲ್ಲಿ ಮೂಡಿ ಬಂದಿವೆ. ಕತೆಯಲ್ಲಿ ಬರುವ ಎಲ್ಲಾ ಪುರುಷ ಪಾತ್ರಗಳು ಕೆಡುಕಿನ ಪಾತ್ರಗಳಲ್ಲ. ಪುರುಷ ದ್ವೇಷದ ಕತೆಗಳಲ್ಲ, ಬದಲಿಗೆ ಸಂದರ್ಭಕ್ಕೆ ಅನುಗುಣವಾಗಿ ಒದಗುವ ಸಂದಿಗ್ಧತೆಗಳಿಗೆ, ಮನುಷ್ಯರು ಪ್ರತಿಕ್ರಿಯಿಸುತ್ತಿರುತ್ತಾರೆ. ಹೆಣ್ಣಿಗೆ ಎದುರಾಗುವ ಬಿಕ್ಕಟ್ಟುಗಳಿಗೆ ಕಾರಣವು ಮುಖ್ಯವಾಗುತ್ತದೆ.

ಪುರುಷ ಲೋಕದ ಕ್ರೌರ್ಯ, ನಡವಳಿಕೆಯನ್ನು ಹಿಂದೆ ಚರ್ಚಿಸಲಾಗಿದೆ. ಪುರುಷ ಪ್ರಜ್ಞೆಯ ನಿರೂಪಣೆಯನ್ನು ಕತೆಗಳ ಮೂಲಕ ಉದಾಹರಿಸಿ ನೋಡಲಾಗುವುದು. ಸಾಮಾಜಿಕವಾಗಿ ಪುರುಷನಿಗಿರುವ ಅಗ್ರಸ್ಥಾನ ಪುರುಷ ಸ್ವಾರ್ಥ ಚಿತ್ರಣವನ್ನು, ಸಮಾಜದಲ್ಲಿನ ಅಸಮತೋಲನಕ್ಕೆ ಕಾರಣವಾಗಿದೆ. ಉಭಯ ಲೇಖಕಿಯರು ಪುರುಷರು ಎಂದರೆ ಯಾರು? ಸ್ವಭಾವ ಎಂಥದ್ದು? ಸಮಾಜದಲ್ಲಿ ಹೆಣ್ಣನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆ ಕಥನ ರಚಿಸಿದ್ದಾರೆ. ಮಾನಸಿಕ ಸಖ್ಯವನ್ನು ಬಯಸುವ ಹೆಣ್ಣಿಗೆ ಪ್ರೀತಿಯ ಅಂತ್ಯ ಕಾಮದೊಟ್ಟಿಗೆ ದೇಹಕೇಂದ್ರಿತವಾಗಿಯಷ್ಟೆ ಹೆಣ್ಣನ್ನು ಕಾಣುವ ಪುರುಷ ವರ್ತನೆಯ ಚಿತ್ರಣವಿದೆ. ಸಂಬಂಧಗಳನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವೇನು ಎಂದೆನಿಸುವಂತಿದೆ.

ಆ. ಕಮಲಾದಾಸ್ ಕಥನದಲ್ಲಿ ಸ್ತ್ರೀ ಪುರುಷ ಪಾತ್ರ ಚಿತ್ರಣ :

"ಅನುರಾಗ ಪ್ರೀತಿಗಳೆಲ್ಲಾ ಕೇವಲ ಒಂದು ಮತ್ತು ಬರಿಸುವ ಪದಾರ್ಥ ಮಾತ್ರ, ಕೇವಲ ಲಹರಿ ಅಷ್ಟೆ" (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:129) ಅನುರಾಗ, ಪ್ರೀತಿಯ ಹುಡುಕಾಟದಲ್ಲಿ ಸ್ತ್ರೀ ಪುರುಷ ಪಾತ್ರಗಳು ಚಿತ್ರಿತವಾಗಿದೆ. ಇರುವಷ್ಟು ಪ್ರೀತಿ ಇದ್ದಷ್ಟು ದಿನ ಅನುಭವಿಸಿ ಸಂತಸ ಪಡುವುದೇ ಸುಖ, ಅದುವೇ ಬದುಕು. ಪ್ರೀತಿಯೆಂಬ ಭ್ರಮೆಯ ಅರಸಿ ಹೊರಟ ಪಾತ್ರಗಳು ಕತೆಯಲ್ಲಿ ಸೃಷ್ಟಿಯಾಗಿವೆ. ಈ ಮೇಲಿನ ಅಂಶಗಳನ್ನಾಧರಿಸಿ ಪಾತ್ರಗಳು ಬೆಳೆಯುತ್ತಾ ಸಾಗುತ್ತವೆ. ಸ್ತ್ರೀ ಪುರುಷ ಪಾತ್ರಗಳ ಮುಖಾಮುಖಿಯನ್ನು ಕಾಣಬಹುದಾಗಿದೆ. ಅದನ್ನು ಹೀಗೆ ಗುರುತಿಸಲಾಗಿದೆ.

- ಸ್ತ್ರೀ ಸಹಜ ಆಸೆಗಳ ಚಿತ್ರಣ.
- ದಿಟ್ಟ ಸ್ವಭಾವದ ಹೆಣ್ಣು.
- ಸಹನೀಯ ರೂಪದಲ್ಲಿ ಹೆಣ್ಣು.

ಕಮಲಾದಾಸ್ ಸ್ತ್ರೀ ಪಾತ್ರಗಳನ್ನು ವಿಜೃಂಭಣೆಯ ಹೊಳಹಿನಲ್ಲಿ ಬಿಂಬಿಸಿದವರಲ್ಲ. ಇವರ ಕಥನದಲ್ಲಿ ಸ್ತ್ರೀ ಬಹುತೇಕ ಕೌಟುಂಬಿಕ ಲೋಕದ ಪರಿಧಿಯಲ್ಲೇ ಇರುವವರು. ಭಾವುಕ ಲೋಕವೆಂದರೆ ಹೆಣ್ಣಿನ ಮನೋಜಗತ್ತು. ಆದರೆ ಇವರ ಕಥೆಯ ನಾಯಕಿಯರುಗಳಿಗೆ ಅವರದೇ ಆದ ಭಿನ್ನ ಅನನ್ಯತೆಯಿದೆ. ಅದು ಮೈ ಬಣ್ಣವಾಗಬಹುದು, ಉಡುವ ಉಡುಗೆಯಾಗಿರಬಹುದು. ಅಭಿವ್ಯಕ್ತಿಸುವ ರೀತಿಯಾಗಿರಬಹುದು. ಮೌನ/ಆಕ್ರೋಶವೂ ಆಗಿರಬಹುದು. ಕೆಲಸ ಹುಡುಕಿ ಹೋಗುವಾಗಿನ ಬದುಕಿನ ವೈಫಲ್ಯ, ಡಾಕ್ಟರ ವೃತ್ತಿಯಲ್ಲಿ ತೊಡಗಿದ ಮಹಿಳೆಯರು ಕಂಡು ಬರುತ್ತಾರೆ. ಮುಗ್ಧತೆ ಮತ್ತು ಅಪನಂಬಿಕೆಗಳು ವ್ಯಕ್ತಗೊಂಡಿರುವುದು ಹೆಣ್ಣಿನಿಂದ. 'ಹೆಜ್ಜೆಸದ್ದು' ಕತೆಯಲ್ಲಿ ಆತ ಸತ್ತ ಸುದ್ಧಿ ಅವಳಿಗೆ ಮುಕ್ತಿಯನ್ನು ತರುತ್ತದೆ. ಅಂತೆಯೇ ಹೆಂಡತಿ ಸತ್ತಾಗ ಮರುಗುವ ಗಂಡ ಹೊರೆ ಇಳಿಯಿತೆಂಬ ಫಲಾಯನವಾದದ ಚಿತ್ರಣಗಳು ಪುರುಷ ಸ್ವಭಾವವನ್ನು ಬಿಂಬಿಸುತ್ತದೆ.

'ಶಿಕ್ಷೆ' ಕತೆಯಲ್ಲಿ ಮೊಮ್ಮಗಳು ನನ್ ಬದುಕು ಹೀಗಾಗಲು ನಾನೇ ಕಾರಣ ಎನ್ನುವ ಭಾವನೆ ಮೂಡುವಂತದ್ದು, ಅಜ್ಜಿಯೊಂದಿಗೆ ತನ್ನ ಭಾವನೆಯನ್ನು ಅಭಿವ್ಯಕ್ತಿಸಿದ್ದು, 'ದನಗಳ ಜಾತ್ರೆ' ಕತೆಯ ಕಮಲಾ ಮಾತನಾಡುವುದೇ ಇಲ್ಲ, ಮಾತನಾಡುವುದು ಅಜ್ಜಿ ಮತ್ತು ಆಗಂತುಕ. ಆದರೆ ಭಾವ ಲೋಕಕ್ಕೆ ಸಣ್ಣದೊಂದು ಪೆಟ್ಟು ತಟ್ಟುವುದು ಕಮಲಾಳಿಗೆ.

'ಮೆಹೆಂದಿ', 'ಹವಳದಸರ' ಕತೆಯಲ್ಲಿ ಕಾಣುವ ನಾಯಕಿಯರಿಗೆ ವಿರುದ್ಧವಾದ ಪಾತ್ರ 'ಬಳೆಗಳು' ಕತೆಯ ಹುಡುಗಿಯದಾಗಿದೆ. ಬಳೆತೊಡುವ ಹೆಣ್ಣಿನ ಸಹಜ ಆಕಾಂಕ್ಷೆಯನ್ನು ಸಂಪೂರ್ಣವಾಗಿ ನಿರಾಕರಿಸುವ ಪುರುಷ ಲೋಕವಿದೆ. ಮಾತನಾಡದೆ ಅಳು, ಆಕ್ರಂದನವನ್ನೇ ರೋದಿಸುವ ಮೂಲಕವೆ 'ಮಂಜು' ಕತೆಯ ನಾಯಕಿ ಹೀಗೆ ಉತ್ತರಿಸುತ್ತಾಳೆ. "ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ನಿಮ್ಮ ಮಗುವನ್ನು ನಾನು ಸಾಯಿಸುತ್ತೇನೆ". (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:174) ಎನ್ನುವ ಆಕ್ರೋಶವನ್ನು ಕಾಣಬಹುದು.

ಕಮಲಾದಾಸ್ ಕಥನದಲ್ಲಿ ಸ್ತ್ರೀ ಪಾತ್ರಗಳ ವೈವಿಧ್ಯತೆಯಿರುವುದನ್ನು ಕಾಣಬಹುದು. ಇಲ್ಲಿ ಪ್ರೇಯಸಿ, ಗೆಳತಿ, ಹೆಂಡತಿ, ತಾಯಿ, ಅಜ್ಜಿ, ಮೊಮ್ಮಗಳು, ವೇಶ್ಯೆ, ಸಾವು–ಬದುಕು ಎಲ್ಲಾ

ಪಾತ್ರಗಳು ಸೃಷ್ಟಿಯಾಗಿದೆ. ತಾಯ್ತನದ ಪರಮ ಸುಖ ಪುಟ್ಟ ಕೂಸಿಗೆ ಹಾಲೂಡಿಸುವುದರಲ್ಲಿದೆ ಈ ಅಂಶವನ್ನು 'ಲಾಕಪ್' ಕತೆಯಲ್ಲಿ ಚಿತ್ರಿಸಲಾಗಿದೆ.

ಲೇಖಕಿ 'ಹಸಿರು ರೇಷಿಮೆ' ಸೀರೆ, ತಿಳಿ ಹಳದಿ ಬಣ್ಣದ ಸೀರೆ, ಕೆಂಪು ಲಂಗ ಜಾಕೇಟುಗಳನ್ನು ಕಥನದಲ್ಲಿ ತರುತ್ತಾರೆ. ಕೇಶರಾಶಿಯ ಬಗೆಗೆ ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ತುರುಬಿಗೆ ಮಲ್ಲಿಗೆ ಗುಲಾಬಿಯನ್ನು ಮುಡಿವ ಸಂಗತಿಗಳು ಪ್ರಸ್ತಾಪವಾಗುತ್ತದೆ. ವೈವಿಧ್ಯಮಯವಾದ ಬದುಕಿನ ಹಲವು ಸಂಗತಿಗಳನ್ನು ಕಮಲಾದಾಸ್ ತಮ್ಮ ಕಥನದ ಮೂಲಕ ಬಿಂಬಿಸಿದ್ದಾರೆ.

ಸಾಹಿತ್ಯ ಸಾಮಾಜಿಕ ಜೀವನದ ಪ್ರತಿಬಿಂಬ, ಸ್ತ್ರೀ ಪುರುಷ ಪಾತ್ರಗಳು ಮುಖಾಮುಖಿಯಾಗುವುದನ್ನು ಕಾಣಬಹುದಾಗಿದೆ. ಸಾಮಾನ್ಯ ಪುರುಷರಿಂದ ಕ್ರೌರ್ಯತೆ, ಹಿಂಸೆ, ಮಾನವೀಯತೆಯ ಕಡೆಗೆ ಸಾಗುವ ಪಾತ್ರಗಳ ಪುರುಷ ಚಿತ್ರಣ ಇವರ ಕತೆಗಳಲ್ಲಿ ಸಹಜವಾಗಿ ಮೂಡಿ ಬಂದಿದೆ.

'ಮೆರವಣಿಗೆ' ಕತೆಯಲ್ಲಿ ಸಮಾಜ ಸೇವಕಿಯಾದ ಬಾನು ಮತ್ತು ಪತಿಯ ದಾಂಪತ್ಯದ ಚಿತ್ರಣವಿದೆ. ಹೆಣ್ಣು ಹೆಚ್ಚು ಹೊರಗೆ ಕಾಲ ಕಳೆದು ಬರುವ ಸಂದರ್ಭವನ್ನು ವ್ಯವಸ್ಥೆ ಒಪ್ಪುವುದಿಲ್ಲ. ಬಾನು ಸಮಾಜ ಸೇವಕಿ. ಅವಳ ಬದುಕು ಕುಟುಂಬಕ್ಕಿಂತ ಸಮಾಜ ಸೇವೆಗೆ ಮೀಸಲಾದದ್ದು. ಹೆಚ್ಚು ಸಮಯ ಹೊರಗೆ ಕಳೆದು ಬಂದ ಹೆಂಡತಿಯನ್ನು ಬಾನುವಿನ ಗಂಡ ಆದರಿಸುವ ಪರಿಯೇ ಮಹತ್ವದ್ದು. ಸಂಬಂಧದಲ್ಲಿನ ಅನ್ಯೋನ್ಯತೆ, ಪ್ರೀತಿ, ಹೆಂಡತಿಗಾಗಿ ಮರುಗುವ ಮನಸ್ಸುಳ್ಳ ಗಂಡನ ಚಿತ್ರಣವಿದೆ. ಆಕೆಗಾಗಿ ಕಾಯುವ, ಅವಳ ಆಯಾಸಕ್ಕೆ ಮರುಗುವ ಪುರುಷ ಚಿತ್ರಣವಿದೆ. ಇಂತಹ ಪರಿಸ್ಥಿತಿ ಹೆಣ್ಣಿಗಿರುವುದು ಅಪರೂಪ. ಲೇಖಕಿ ಇದನ್ನು ವ್ಯಂಗ್ಯವಾಗಿಯೂ ಚಿತ್ರಿಸಿರಬಹುದಾದ ಕತೆಯಾಗಿದೆ.

'ಕಡಲ ಕಿನಾರೆಯಲ್ಲೊಂದು ಮನೆ' ಕತೆಯಲ್ಲಿ ಆರ್ಮುಗಂ ತಾನು ಕುಡಿದು ಇದ್ದ ಕೆಲಸವನ್ನು ಕಳೆದುಕೊಂಡು ಬೀದಿ ಪಾಲಾಗುತ್ತಾನೆ. ಅಪರಿಚಿತನೊಬ್ಬ ಕೆಲಸದ ಆಸೆ ತೋರಿಸಿ ಹಾಡಿ ಹೆಂಡತಿಯ ಬಳಿ ಇದ್ದ ಒಂದು ಕಂಬಳಿಯನ್ನು ಕೊಂಡು ಹೋಗುತ್ತಾನೆ. ಬೇಜವಾಬ್ದಾರಿಯುತ ಗಂಡನ ಚಿತ್ರಣವಿದೆ.

'ಸ್ವಾತಂತ್ರ್ಯ ಹೋರಾಟಗಾರನ ಮಗಳು' ಕತೆಯಲ್ಲಿ ಭಾರತಿಯ ತಂದೆ, ಗಾಂಧೀಜಿಯವರ ಅನುಯಾಯಿಯಾಗಿದ್ದರು. ಸರ್ಕಾರದಿಂದ ತಾಮ್ರ ಪತ್ರ ಪಡೆದ ಅನುಭವಿ ವ್ಯಕ್ತಿ. ಸ್ವಾತಂತ್ರ್ಯ ಹೋರಾಟ ಸಾಮಾಜಿಕ ಕ್ರಿಯೆಯಂತೆ, ವೈಯಕ್ತಿಕವಾಗಿ ನಾವೆಲ್ಲ ಬಂಧನದಲ್ಲಿರುವವರು. ಆತನ

ಕುರೂಪಿ ಮಗಳು ಶಿಕ್ಷಕಿಯಾಗಿದ್ದಳು. ಅವಳು ಕುರೂಪಿಯಾಗಿದ್ದರಿಂದಲೇನೋ ಅವಳಿಗೆ ವಿವಾಹವಾಗಿರಲಿಲ್ಲ.

ಹೆಣ್ಣಿನ ದೃಷ್ಟಿಕೋನದಲ್ಲಿ, ಹೆಣ್ಣೊಬ್ಬಳು ಕಥನ ಸಾಹಿತ್ಯವನ್ನು ಸೃಷ್ಟಿಸುವಾಗ ಪುರುಷರ ಚಿತ್ರಣ ಹೇಗಿರುತ್ತದೆ ಎಂಬುದನ್ನು ಈ ಮೂಲಕ ಚರ್ಚೆ ಮಾಡಲಾಗಿದೆ. ಪುರುಷ ದೃಷ್ಟಿಕೋನದಲ್ಲಿ ಹೆಣ್ಣು ಪರಂಪರೆಯ ಸಿದ್ಧ ಪಡಿಯಚ್ಚಿನ ಪಾತ್ರಗಳಲ್ಲಿ ರೂಪಿತವಾಗುವುದು ಬಹುತೇಕ ಸಂದರ್ಭದಲ್ಲಿ ಚಿತ್ರಿತವಾಗಿರುವ ಸಂಗತಿ. ಉಭಯ ಲೇಖಕಿಯರು ಸ್ತ್ರೀವಾದಿ ಅಧ್ಯಯನದ ಶಿಸ್ತು, ವಿಮರ್ಶಾ ಕ್ರಮಗಳು ಆರಂಭವಾಗುವುದಕ್ಕೆ ಮುಂಚೆಯೆ ಸ್ತ್ರೀ ಪರ ಕಾಳಜಿಯಲ್ಲಿ ಬರೆದವರು. ಸ್ತ್ರೀವಾದಿ ವಿಮರ್ಶೆ ಎಂಬ ಗಂಭೀರ ಚಿಂತನೆ ಆರಂಭವಾಗುವ ಮುನ್ನ ಹೆಣ್ಣಿನ ಮನೋಲೋಕ, ರೂಢಿಯಲ್ಲಿರುವ ಪುರುಷಾಪೇಕ್ಷಿತ ಸಂಗತಿಗಳು, ಮತ್ತೆ ಮತ್ತೆ ಹೆಣ್ಣನ್ನು ಕಾಡುವ ಸಂಗತಿಗಳು ಇವೆಲ್ಲವನ್ನು ಕಥನ ಸಾಹಿತ್ಯದ ಮೂಲಕ ಕಟ್ಟಿಕೊಡುವ ಸಂದರ್ಭದಲ್ಲಿ ಹೆಣ್ಣಿನ ಅನೇಕ ಸಂದರ್ಭಗಳಿಗೆ ತೊಡಕೆನಿಸುವ ವ್ಯವಸ್ಥೆಯ ಕುರಿತ ಪ್ರಸ್ತಾಪ ಇಬ್ಬರು ಲೇಖಕಿಯರಲ್ಲೂ ಮೂಡಿ ಬಂದಿದೆ. ಹಾಗೆಂದೊಡನೆ ಕತೆಗಳು ಸ್ತ್ರೀ ಪುರುಷರ ಜಟಾಪಟಿಯ ಕತೆಗಳಲ್ಲ, ಪುರುಷರೊಡನೆಯಾದ ಶತ್ರುತ್ವವನ್ನೂ ತೋರುವುದಿಲ್ಲ. ಅಲ್ಲದೆ ಪ್ರಮೀಳಾ ರಾಜ್ಯದ ಕತೆಗಳು ಇವಲ್ಲ.

ಹೆಣ್ಣು–ಗಂಡುಗಳಿಬ್ಬರೂ ಕೂಡಿ ಬದುಕುತ್ತಿರುವ ಸಮಾಜದಲ್ಲಿನ ಅಸಮತೋಲನವನ್ನು ಬಿತ್ತರಿಸುವ ಕತೆಗಳೆನ್ನಬಹುದು. ಕತೆಯಲ್ಲಿ ಬರುವ ಎಲ್ಲಾ ಪುರುಷ ಪಾತ್ರಗಳು ಕೆಡುಕಿನ ಪಾತ್ರಗಳಲ್ಲ ಆದ್ದರಿಂದಲೇ ಇವು ಪುರುಷ ದ್ವೇಷದ ಕತೆಗಳಲ್ಲ. ಹಾಗೆಂದೊಡನೆ ಕತೆಯಲ್ಲಿ ಕೆಡುಕು ಒಳಿತುಗಳ ಚಿತ್ರಣವಿದೆ. ಸ್ತ್ರೀಪರ ಚರ್ಚೆ ನಡೆಸುವಾಗ ಪುರುಷ ಲೋಕದ ಕ್ರೌರ್ಯ, ನಡವಳಿಕೆಯನ್ನು ಚಿತ್ರಿಸಲಾಗಿದೆ. ಈ ಭಾಗದಲ್ಲಿ ಪುರುಷ ಮನೋಪ್ರಜ್ಞೆಯು ನಿರೂಪಿತವಾಗಿರುವ ಸಂದರ್ಭವನ್ನು ಕತೆಗಳ ಮೂಲಕ ಉದಾಹರಿಸುವ ಪ್ರಯತ್ನ ಮಾಡಲಾಗಿದೆ. ವೀಣಾಶಾಂತೇಶ್ವರ ಅವರ ಕತೆಗಳಲ್ಲಿ ಪುರುಷ ಸ್ವಭಾವ ಅನಾವರಣಗೊಂಡಿದೆ. ಸಂಬಂಧಗಳಲ್ಲಿನ ಪುರುಷ ಸ್ವಾರ್ಥದ ಚಿತ್ರಣವಿದೆ. ಆದರೆ ಸಾಮಾಜಿಕ ಸಂದರ್ಭದಲ್ಲಿ ಪುರುಷ ಪ್ರಧಾನತೆ ಬೆರೆತಿರುವುದರ ಹುಡುಕಾಟ ನಡೆಸಲಾಗಿದೆ.

ಉಭಯ ಲೇಖಕಿಯರು ಪುರುಷರು ಎಂದರೆ ಯಾರು? ಸ್ವಭಾವ ಎಂಥದ್ದು? ಸಾಮಾಜಿಕ ವ್ಯವಸ್ಥೆಯಲ್ಲಿ ಅವರು ಹೆಣ್ಣನ್ನು ನಡೆಸಿಕೊಳ್ಳುತ್ತಿರುವುದರ ವಿಧಾನದ ಬಗ್ಗೆ ಚಿತ್ರಿಸಿದ್ದಾರೆ. ಹೆಣ್ಣಿನ ಮನಸ್ಸು ಪ್ರೀತಿಯನ್ನು ಬಯಸಿದರೆ ಪ್ರೀತಿಯ ಅಂತ್ಯ ಕಾಮವೆನ್ನುವಂತೆ

ನಡೆದುಕೊಳ್ಳುವ ಪುರುಷರು ಕತೆಗಳಲ್ಲಿ ಕಾಣಬರುತ್ತಾರೆ. ಕೆಲವೊಮ್ಮೆ ಸಂಬಂಧಗಳನ್ನು ಗಂಭೀರವಾಗಿ ಪರಿಗಣಿಸಲು ಅಗತ್ಯವಾದರೂ ಇದೆಯೇ ಎಂದೆನಿಸುತ್ತದೆ. ಸಂಬಂಧಗಳ ಭ್ರಮಾಲೋಕದ ತೆರೆ ಸರಿಸುವ ಆ ಮೂಲಕ ವಾಸ್ತವಗಳನ್ನು ಒಪ್ಪಿ ಬದುಕ ಸಾಗಿಸುವ ಸಂದರ್ಭವಿದೆ. ಗೋಣು ಹಾಕುವ ಸ್ವಭಾವಗಳ ಪರದೆ ಸರಿಸಿದ್ದಾರೆ. ಒಟ್ಟಾರೆಯಾಗಿ ಪುರುಷ ನಿರ್ಮಿತ ಸಮಾಜದಲ್ಲಿನ ಹೆಣ್ಣಿನ ನೋಟಕ್ರಮದ ಮೂಲಕ ಸ್ವಭಾವ ಶೋಧ ನಡೆಸಿರುವುದು ವಿಶಿಷ್ಟ ಸಂಗತಿ. ಆತ್ಮಶೋಧ, ಮನೋವ್ಯಾಪಾರಗಳ ನಡುವೆ ಪುರುಷನ ವೈವಿಧ್ಯಮಯ ಚಿತ್ರಣ ಕಾಣಬರುತ್ತದೆ.

ಕಮಲಾದಾಸ್'ರವರ ಕತೆಗಳಲ್ಲಿ ಪುರುಷ ಚಿತ್ರಣ ಸಾಮಾಜಿಕ ಸಂದರ್ಭಕ್ಕೆ ಪ್ರತಿಕ್ರಿಯೆ ನೀಡುವಂತಿದ್ದರೂ ಕೆಲವು ಕತೆಗಳಲ್ಲಿ ಪುರುಷ ಪಾತ್ರಗಳು ಮಾನವೀಯತೆಯ ಕಡೆಗೆ ಸಾಗುವ ಚಿತ್ರಣಗಳು ಕತೆಗಳಲ್ಲಿರುವುದು ಕಾಣಬಹುದು. 'ರಾಣಿ' ಕತೆಯಲ್ಲಿ ಮುಪ್ಪು ಅಡರಿದ ಮುದುಕನ ತೋಳಿನ ಮೇಲೆ ಮುದುರಿ ಅಳುತ್ತಿದ್ದ ಹುಡುಗಿಗೆ ಸಾಂತ್ವಾನ ಹೇಳಿದ್ದು ಹೀಗೆ. "ನಿನ್ನ ಅಳುವಿನ ಧ್ವನಿ ಕೇಳಿದಾಗ, ನನಗೆ ನನ್ನ ಮಗಳ ನೆನಪಾಗುತ್ತದೆ. ಅವಳು ಈಗ ಬದುಕಿದ್ದಿದ್ದರೆ ನಿನಗಿಂತಲೂ ಅವಳಿಗೆ ನಾಲ್ಕು ವರ್ಷ ವಯಸ್ಸು ಹೆಚ್ಚಿರುತ್ತಿತ್ತು. ನಾನು ಅವಳನ್ನು ರಾಣಿ ಎಂದು ಕರೆಯುತ್ತಿದ್ದೆ." (ಡಾ. ಕಮಲಾದಾಸ್‌ರವರ ಸಮಗ್ರ ಕಥೆಗಳು:186) ಹೀಗೆ ಹೆದರಿದ್ದ ಆ ಹುಡುಗಿಗೆ ಆತನ ನಡವಳಿಕೆ ಅನಿರೀಕ್ಷಿತವಾಗಿ ಸಾಂತ್ವನವನ್ನು ನೀಡಿತ್ತು. ಕೇವಲ ಆ ಹುಡುಗಿಗೆ ನೀಡಿದ ಸಾಂತ್ವನವಲ್ಲ. ಕತೆಯನ್ನು ಓದುವರಿಗೂ ಕೂಡ ಆತನ ನಡವಳಿಕೆ, ಮಗಳನ್ನು ನೆನಪು ಮಾಡಿಕೊಳ್ಳುವ ರೀತಿ ಮನಕಲಕುವಂತ ಅನುಭವವನ್ನು ಮೂಡಿಸುತ್ತದೆ.

ಕಮಲಾದಾಸ್'ರವರ 'ಪ್ರಭಾತದ ರಹಸ್ಯ' ಕತೆಯಲ್ಲಿ ಆಕೆ ಕಿವುಡು-ಮೂಗಳೆಂದು ತಿಳಿದು ಮೃಗೀಯವಾದ ಆಸಕ್ತಿ ಹೆಚ್ಚಾಯಿತು. ನಸುಕಿನಲ್ಲಿ ಅನಿರೀಕ್ಷಿತವಾಗಿ ಆಕೆಯನ್ನು ಹಿಂಬಾಲಿಸುವಾಗ ಅನೇಕ ಆಸೆಗಳು ಆತನನ್ನು ಕಾಡಿತ್ತು. ಬೆಟ್ಟದ ತುದಿಗೆ ತಲುಪಿದಾದ ಬರಸೆಳೆದು ಅವಳನ್ನು ತನ್ನತ್ತ ಸೆಳೆದುಕೊಂಡ. ಆದರೆ ಉದಯದ ಸೂರ್ಯನನ್ನು ಆಕೆ ಕಾಣಲು ಬಂದಿಹಳೆಂಬ ಸತ್ಯ, ಆಕೆಯ ಕಣ್ಣುಗಳ ಹೊಳಪು, ಆತನ ಎಲ್ಲಾ ಆಸೆಗಳನ್ನು ಮರೆಸಿತ್ತು. ಪುರುಷನೊಬ್ಬ ತಕ್ಷಣಕ್ಕೆ ಹಾಗೆ ಬದಲಾಗುವನೆ? ಆದರೆ ಆತನ ಹೇಳಿದ್ದು ಬಾ, ತಂಗಿ ನಾವಿನ್ನು ಹೊಟೇಲಿಗೆ ಹಿಂತಿರುಗೋಣ. ನಿನ್ನ ತಾಯಿ ನಿನ್ನನ್ನು ವಿಚಾರಿಸುತ್ತಿರಬಹುದೇನೋ ಹೀಗೆ ತನ್ನ ಪಾಶವಿ ವಿಕೃತ ಬುದ್ಧಿ ಬದಲಾಗುವ ಸ್ವಭಾವ ಗಮನಾರ್ಹವಾದದ್ದು.

'ಸ್ವಾತಂತ್ರ್ಯ ಹೋರಾಟಗಾರನ ಮಗಳು'-ಕತೆಯಲ್ಲಿ ಭಾರತಿ ತಂದೆ ಗಾಂಧೀಜಿಯವರ ಅನುಯಾಯಿ, ಸರ್ಕಾರದಿಂದ ತಾಮ್ರ ಪತ್ರ ಪಡೆದ ವ್ಯಕ್ತಿ. ಆತನ ಕುರೂಪಿ ಮಗಳು ಶಿಕ್ಷಕಿಯಾಗಿದ್ದಳು. ಅವಳ ಸೌಂದರ್ಯ ಹಾಗಿದ್ದಿದ್ದರಿಂದಲೇ ಅವಳಿಗೆ ವಿವಾಹವಾಗಿರಲಿಲ್ಲ. ಅವಳು ತನ್ನ ತಂದೆಯ ಎಲ್ಲಾ ಹೊಣೆಯನ್ನು ಹೊತ್ತು ಆರೈಕೆ ಮಾಡುತ್ತಿದ್ದಳು. ಬಹುಶಃ ಅವಳು ಸುಂದರಿಯಾಗಿದಿದ್ದರೆ ಮದುವೆಯಾಗಿ ಗಂಡನ ಮನೆ ಸೇರಿರುತ್ತಿದ್ದಳೇನೋ. ತಂದೆಯ ಆದರ್ಶವನ್ನು ಮೀರಿ ಪರಿಸರಕ್ಕೆ ಒಗ್ಗಿದ್ದಳು ಭಾರತಿ. ಆತನ ಆಕೆಯನ್ನು ಮದುವೆ ಮಾಡಿಕೊಡುವ ಯೋಚನೆಯೇ ಮಾಡದೆ ತನ್ನ ಸ್ವಾರ್ಥಕ್ಕೆ ಅವಳ ಬದುಕು ಪಣವಾಗಿರಿಸಿಕೊಂಡ. ಆಕೆಗೆ ವ್ಯರ್ಥ ಯೌವ್ವನ ಎನಿಸುವಂತೆ ಇತ್ತು. ಇಂತಹ ಎಷ್ಟೋ ಮಹಿಳೆಯರ ಚಿತ್ರಣ ಜೀವನದಲ್ಲಿದೆ.

ಸಂಘರ್ಷದ ನೆಲೆಗಳು ಅಧ್ಯಾಯದಲ್ಲಿ ಹೆಣ್ಣು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಡೆಸಿರುವ, ತನ್ನತನವನ್ನು ಉಳಿಸಿಕೊಳ್ಳಲು ಪಡುವ ಹೆಣಗಾಟದ ಚರ್ಚೆ ನಡೆಸಲಾಗಿದೆ. ಭೂಮಿಯ ಮೇಲೆ ಹೆಣ್ಣಿನ ಪಾತ್ರ ಅನೇಕತೆರನಾಗಿ ವಿಶಿಷ್ಟದ್ದಾಗಿದೆ. ಇಬ್ಬರು ಕತೆಗಾರ್ತಿಯರು ಸಂದರ್ಭೋಚಿತವಾಗಿ ಅಂತಹ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಕಥನದಲ್ಲಿ ಮೂಡಿರುವ ಸಂಬಂಧದ ಸಂಘರ್ಷಗಳನ್ನು ವ್ಯವಸ್ಥೆಯ ಒಳಹೊರಗು ಆಗು-ಹೋಗುಗಳನ್ನು ಗ್ರಹಿಸಿ ನಾಲ್ಕು ವಿಭಾಗಗಳಲ್ಲಿ ಚರ್ಚಿಸಲಾಗಿದೆ. ಪತಿ-ಪತ್ನಿಯರ ವಿರಸ, ಸಂತಸದ ಚಿತ್ರಣಗಳಿವೆ. ಉಸಿರು ನಿಲ್ಲುವ ಹೊತ್ತಿಗೆ ಜ್ವಲಿಸುವ ಸಂಬಂಧದ ಭರವಸೆಗಳು ಆಸೆ ನಿರಾಶೆಗಳು ಚರ್ಚೆಯಾಗಿವೆ.

ಅನಿರೀಕ್ಷಿತವಾಗಿ ಬದುಕಿನಲ್ಲಿ ಎದುರಾಗುವ ಹಲವು ಸಂಬಂಧಗಳು ನೈತಿಕತೆಯ ಭಯ, ಆತಂಕಗಳ ನಡುವೆ ಸರಿದೂಗಿಸುವ ಬದುಕಿನ ಅನೇಕ ದ್ವಂದ್ವಗಳು ಕತೆಗಳಲ್ಲಿ ಕಾಣಬರುತ್ತದೆ. ಸಂಬಂಧಗಳ ಹುರುಳು ಏನು? ಕಾಡುವ ನಂಟುಗಳಲ್ಲಿನ ಸಂತಸ, ದುಃಖ ಎಲ್ಲವೂ ಕತೆಗಳಲ್ಲಿ ಅಡಕಗೊಂಡಿದೆ.

ದೇಹ ಮತ್ತು ಆತ್ಮಗಳನ್ನು ವಿಭಜಿಸಿ ಅಂದರೆ ಮನಸ್ಸೆಂಬ ಮರೀಚಿಕೆಯ ಬೆನ್ನ ಏರಿ ಹೊರಟಾಗ ಸಿಗುವ ಫಲ ಯಾವುದು? ಯಾವುದು ವ್ಯರ್ಥ ಹಂಬಲ, ಭಾವನೆಗಳ ತಾಕಲಾಟ ಇಬ್ಬರು ಲೇಖಕಿಯರಲ್ಲಿದೆ. ಆದರೆ ವೀಣಾಂಶಾಂತೇಶ್ವರ ಅವರು ತಮ್ಮ ಕತೆಗಳಲ್ಲಿ ಹೆಣ್ಣಿನ ಮನೋಲೋಕದ ಎಲ್ಲ ತೆರನಾದ ತಲ್ಲಣಗಳನ್ನು ಭಾವ ವ್ಯಾಪಾರವನ್ನು ತೆರೆದಿಟ್ಟಿದ್ದಾರೆ. 'ಕಮಲಾದಾಸ್'ರವರು ಭಾವುಕ ಲೋಕದ ಅನಾವರಣ ಮಾಡಿದ್ದಾರೆ. ಆದರೆ ಇದು ಕೇವಲ

ಹೆಣ್ಣಿನ ಮನಸ್ಸಿಗೆ ಸಂಬಂಧಿಸುವುದು ಎನ್ನುವುದಕ್ಕಿಂತ ಮನುಷ್ಯ ಸಂಬಂಧಗಳಲ್ಲಿನ ಸೂಕ್ಷ್ಮತೆಯನ್ನು, ಬದುಕಿನ ಅನಿರೀಕ್ಷಿತತೆಯನ್ನು ಸಹಜವಾಗಿ ಹೆಣೆದಿರುವ ನೈಪುಣ್ಯ ಇವರದ್ದು. ಪುರುಷ ಹೆಣ್ಣಿನ ಬಗೆಗೆ ತಳೆದಿರುವ ಧೋರಣೆಗಳನ್ನು ಕುರಿತು ವೀಣಾರವರ ಕತೆಗಳು ಬಿಂಬಿಸುತ್ತದೆ. ಪುರುಷ ಸ್ವಭಾವದ ಹೆಣ್ಣು ವ್ಯವಹರಿಸುವುದು ಪುರುಷನೊಟ್ಟಿಗೆ, ವ್ಯವಸ್ಥೆಯೊಟ್ಟಿಗೆ ಎಂದೊಡನೆ ಪರಸ್ಪರ ಸಂಬಂಧಗಳು ಬೆರೆಯುತ್ತದೆ. ಈ ದೃಷ್ಟಿಯಿಂದಲೇ ಪ್ರಸ್ತುತ ಅಧ್ಯಾಯದಲ್ಲಿ ಹೆಣ್ಣು ಹೆಣ್ಣಿನ ನಡುವಿನ ಸಂಬಂಧ ಮತ್ತು ಸಮಾಜದ ಭಾಗವಾಗಿ ಹೆಣ್ಣು ಕಾಣುವ, ಅನುಭವಿಸುವ ಎಲ್ಲ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಸಿದ್ಧವಿರುವ ಸಾಮಾಜಿಕ ಮೌಲ್ಯಗಳಿಗೆ ಬಗ್ಗು ಬಡಿಸುವ ಪ್ರತಿರೋಧ ತೋರುವ, ಅನುಸಂಧಾನಕ್ಕಾಗಿ ಕಾಯುವ, ಅನುಸರಿಸಿ ಮನಸ್ಸು ಹಗುರಾಗುವ ಭಾವಶೋಧವಾಗಿ ಪ್ರಸ್ತುತ ಅಧ್ಯಯನವನ್ನು ಮುನ್ನೆಡೆಸಲಾಗಿದೆ.

ಆ. ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನದ ವಸ್ತು, ತಂತ್ರ – ಶೈಲಿ

ಆಶಯಕೇಂದ್ರಿತ, ಪರಿಕಲ್ಪನೆ ಇವುಗಳ ಅಧ್ಯಯನದ ನಂತರ ಲೇಖಕಿಯರು ಕಥನ ರಚನೆಗೆ ಆಯ್ಕೆ ಮಾಡಿಕೊಂಡಿರುವ ವಸ್ತು, ತಂತ್ರ–ಶೈಲಿಯನ್ನು ಕುರಿತ ಚರ್ಚೆ ಬಹು ಮುಖ್ಯವಾದುದು. ಕಾರಣವೇನೆಂದರೆ ಬರವಣಿಗೆಯ ಧೋರಣೆ ಅರಿಯದೆ ಲೇಖಕಿ/ಲೇಖಕನು ಸೃಜಿಸುವ ಅರ್ಥದ ಮೂಲ ಅಂಶವನ್ನು ಗ್ರಹಿಸಲು ಸಾಧ್ಯವಿಲ್ಲ. ಸಾಧ್ಯವಾದರೂ ಆ ಅಧ್ಯಯನ ಅಪೂರ್ಣ ಮತ್ತು ಮೇಲಸ್ತರದ ಗ್ರಹಿಕೆಯಾಗುತ್ತದೆ. ಪಠ್ಯಕ್ಕೆ ಖಚಿತ ಅರ್ಥವೆಂಬುದಿರುವುದಿಲ್ಲ. ಆದಾಗ್ಯೂ ಪಠ್ಯ ಕೇಂದ್ರಿತ ಅಧ್ಯಯನದ ಮುಂದುವರೆದ ಭಾಗವಾಗಿ ಒಳವಿವರಗಳ ರಚನೆಯ ಕಡೆಗೆ ಗಮನ ಹರಿಸುವುದು ಮಹತ್ವವಾದದ್ದು ಈ ಒಳವಿವರಗಳು ಮತ್ತೆ ಮತ್ತೆ (ಪಠ್ಯ) ಸಾಹಿತ್ಯ ಸೃಜಿಸುವಿಕೆಗೆ ಇದ್ದ ಎಲ್ಲಾ ಕಾರಣೀಭೂತ ಸಂಗತಿಗಳ ಕಡೆಗೆ ಬೆಳಕು ಚೆಲ್ಲುತ್ತದೆ. ಅಷ್ಟೇ ಅಲ್ಲ ಈ ಚರ್ಚೆಯ ಕೊನೆಯ ಭಾಗದಲ್ಲಿ ಪಠ್ಯ ಸೃಷ್ಟಿಗಿದ್ದ ಎಲ್ಲಾ ಅವಕಾಶಗಳು ತೆರೆದುಕೊಳ್ಳುವ ಬಗೆಯನ್ನು ಗಮನಿಸಲು ಸಾಧ್ಯವಿದೆ ಎಂಬ ಉದ್ದೇಶದೊಂದಿಗೆ ನನ್ನ ಚರ್ಚೆಯನ್ನು ಮುಂದುವರೆಸುತ್ತೇನೆ.

ವೀಣಾರವರ ಬಹುತೇಕ ಕತೆಗಳು ನಾಯಕಿಯರಿಂದ ನಿರೂಪಿತವಾದ ನಾಯಕರುಗಳ ಕಥನ, ಅಂದರೆ ನಿರೂಪಣೆಯು ನಾಯಕಿಯರ ಮೂಲಕ ನಡೆಯುತ್ತಾ ಪ್ರೀತಿ, ಸಂಬಂಧಗಳಲ್ಲಿ ಪುರುಷರ ಸ್ವಭಾವವನ್ನು ಅನಾವರಣ ಮಾಡುವಂತಿದೆ. ಖಚಿತವಾದ ನಿರ್ಣಯಗಳನ್ನು ನೀಡದೆ ಓದುಗರ ಮನಸಿನಲ್ಲೇ ಮೂಡುವ ಪ್ರಶ್ನೆಗಳು ಕಾಡುವಂತೆ ಕತೆಗಳು ಪ್ರೇರೇಪಿಸುತ್ತವೆ. ಪ್ರತಿ ಕತೆಗಳು ಹೆಣ್ಣು–ಗಂಡಿನ ನಡುವಿನ ಸಂಘರ್ಷವನ್ನು ಹೊರಹಾಕುತ್ತದೆ. ಋತುಮಾನಗಳು

ಬದಲಾಗುವಂತೆ, ಬೇಸಿಗೆ, ಮಳೆಯ ಚಿತ್ರಣಗಳು ಕತೆಯಲ್ಲಿ ಮೂಡಿ ಬರುವಂತೆ ಮನಸಿನಲ್ಲಿ ಮೂಡುವ ಭಾವಗಳು ಬದಲಾಗುತ್ತದೆ. ಸಹಜವಾಗಿಯೇ ಹಲವು ಕಡೆಗಳಲ್ಲಿ ಆತ್ಮವಿಮರ್ಶೆಯ ಅಂಶವನ್ನು ಕಾಣಬಹುದಾಗಿದೆ. 'ಮೈ ಮನಸು ಹಗುರಾಗುವ ಭಾವ' ಎನ್ನುವ ಅಂಶ ಕಥನದಲ್ಲಿ ಹಲವೆಡೆ ಪ್ರಸ್ತಾಪವಾಗುತ್ತದೆ. ಈ ಭಾವಕ್ಕಾಗಿ ಹಾತೊರೆಯುವುದು ಹೆಣ್ಣು ಮಾತ್ರ, ಏಕೆ ಹಗುರಾಗುವ ಭಾವ ಪುರುಷನ ಅಗತ್ಯವಲ್ಲ? ಈ ಸಂದರ್ಭಕ್ಕಾಗಿ ಆತ ಏಕೆ ಹವಣಿಸುತ್ತಿಲ್ಲ ಎನ್ನುವ ಪ್ರಶ್ನೆ ಕಾಡುತ್ತದೆ.

ವೀಣಾಶಾಂತೇಶ್ವರ ಕಥನದ ವಸ್ತು :

ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಇವರ ಕಥನದ ಆಶಯ ಕೇಂದ್ರಿತ ವಿಶ್ಲೇಷಣೆಯ ನಂತರ ವಸ್ತು ವಿಶ್ಲೇಷಣೆ ಎನ್ನುವುದು ಒಂದು ಆಯಾಮ. ಆಶಯ ಮತ್ತು ವಸ್ತು ಈ ಎರಡು ಅಂಶಗಳ ನಡುವಿನ ಅಂತರವನ್ನು ಸ್ಪಷ್ಟ ಪಡಿಸಿಕೊಳ್ಳುವುದಾದರೆ ವಸ್ತು ಹುಟ್ಟಿದ ನಂತರ ವಿಶ್ಲೇಷಣೆ. ವಿಶ್ಲೇಷಣೆಯು ಕೃತಿಯ ಆಶಯವನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ ಅವರ ಕಥನದ ವಸ್ತುವಿಗೆ ಇದ್ದಿರುವ ಶಕ್ತಿಯನ್ನು ಅರಿಯಬೇಕಾದರೆ ಬಿಡಿಯಾಗಿ ವಸ್ತು ವಿಶ್ಲೇಷಣೆ ಅಗತ್ಯ. ಪೂರಕವಾಗುವಂತೆ ಕೆಲವು ಅಂಶಗಳ ಮೂಲಕ ವೀಣಾಶಾಂತೇಶ್ವರ ಅವರ 'ವಸ್ತು'ವನ್ನು ವಿವರಿಸಿಕೊಳ್ಳುತ್ತಿದ್ದೇನೆ.

ಅ. ಪ್ರೀತಿಯ ನಿರಂತರ ಹುಡುಕಾಟ.

ಆ. ಪುರುಷ ಸ್ವಭಾವಕ್ಕೆ ದಕ್ಕಿದ ಪ್ರತಿಕ್ರಿಯೆ.

ಇ. ಮೌನ ಸಂಘರ್ಷ.

ಈ. ಕತೆಗಳ ಶೀರ್ಷಿಕೆ.

ಅ. ಪ್ರೀತಿಯ ನಿರಂತರ ಹುಡುಕಾಟ :

ದೇಹಕೇಂದ್ರಿತವಾಗಿಯೇ ಹೆಣ್ಣನ್ನು ಗ್ರಹಿಸುವ ಸಮಾಜದಲ್ಲಿ ಮಾನಸಿಕ ಸಖ್ಯಕ್ಕಾಗಿ ಹಾತೊರೆಯುವ ಹೆಣ್ಣಿನ ಚಿತ್ರಣವಿದೆ. ಸಂಬಂಧಗಳಲ್ಲಿನ ವೈಫಲ್ಯ ಮತ್ತೆ ಮತ್ತೆ ಕಾಡುವ ಪ್ರಶ್ನೆಯಾಗಿದೆ. ನಿರಂತರ ಪ್ರೀತಿಯ ಹುಡುಕಾಟದಲ್ಲಿ ಸುರಕ್ಷತೆಯ ಪ್ರಶ್ನೆಯು ಕಾಡುತ್ತದೆ. ಅದಕ್ಕೆ ಪ್ರತಿಕ್ರಿಯೆ ಎಂಬಂತೆ 'ಮುಳ್ಳುಗಳು' ಕತೆಯನ್ನು ನೆನಪಿಸಿಕೊಳ್ಳಬಹುದು. ಸ್ತ್ರೀ ಸಹಜ ಆಸೆಗಳ, ವೇಷಭೂಷಣ ತೊಡುವ ಹೆಣ್ಣಿನ ಚಿತ್ರಣವಿದೆ. ಕೆಂಪು ಜಾರ್ಜೆಟ್ ಸೀರೆ, ನೈಲಾನ್ ಸೀರೆ, ಹಳದಿ ಸೀರೆ ಇವುಗಳ ಪ್ರಸ್ತಾಪವಿದೆ. ಒಟ್ಟಾರೆ ಇವರ ಕತೆಗಳು ಹೆಣ್ಣಿನ ಚಿತ್ರಣದಲ್ಲಿ ಆಕೆ ದೇಹದ ಬಗ್ಗೆ

ಬಹಳ ಜಾಗರೂಕಳಾಗಿದ್ದಾಳೆ. ಸದಾ ಒಬ್ಬರ ಆಸರೆ ಬೇಕು ಮಳ್ಳ ಅಂಜುಬುರುಕ ಹುಡುಗಿಯರಿಗೆ ಎನ್ನುವ ಲೇಖಕಿ, ಪರಸ್ಪರ ತೀರದ ದಾಹವನ್ನು ಅತೃಪ್ತಿಯನ್ನು ಹೆಣ್ಣು ಗಂಡಿನ ಪಾತ್ರದ ಮೂಲಕ ಚಿತ್ರಿಸುತ್ತಾರೆ. ಆದರೂ ರೊಮ್ಯಾಂಟಿಕ್ ಕಲ್ಪನೆ ಮಜಾ ಎನಿಸುವಂತದ್ದು ಎಂದು ಹೇಳುವ ಮೂಲಕ ಕುತೂಹಲವನ್ನು ಮೂಡಿಸುತ್ತಾರೆ.

ಕನಸನ್ನು ಬಹುಪ್ರಮುಖ ಅಂಶವಾಗಿ ಬಳಸಿಕೊಳ್ಳುತ್ತಾರೆ. ವಾಸ್ತವದ ಕಟು ಸಂಗತಿಗಳನ್ನು ಕನಸಿನ ಮೂಲಕ ಕಳಚುವ ಭ್ರಮೆಯಾಗಿ ಬಿಂಬಿಸುತ್ತಾರೆ. 'ಪ್ಲೆಟಾನಿಕ್ ಪ್ರೇಮ' ತೀರಾ ಸಹಜವಾದುದೆಂಬ ಅಂಶವನ್ನು ಸ್ಪಷ್ಟಪಡಿಸುತ್ತಾ ನಾಯಕಿಯರು ಸ್ಥಿತಪ್ರಜ್ಞೆಯ ಕಡೆಗೆ ಸಾಗುವ ಕಥನವಾಗಿ ಮೂಡಿ ಬಂದಿದೆ. ಇರಲಾರದ್ದನ್ನೇ ಬಯಸುವ ಮನಸಿನ ತೊಳಲಾಟವನ್ನು ಕತೆ ಚಿತ್ರಿಸುತ್ತದೆ.

'ಕೊನೆಯದಾರಿ' ಕತೆಯಲ್ಲಿ ಕತೆಯ ನಾಯಕ 'you are a perfect woman' ಎನ್ನುತ್ತಾನೆ. perfect men ನ ಹುಡುಕಾಟವಿಲ್ಲ. perfection ಅನ್ನುವುದು ಹೆಣ್ಣಿಗೆ ಮೀಸಲಾದ ಸಂಗತಿ ಮಾತ್ರವೇ? 'ಮಳೆ ಬಂದಾಗ' ಕತೆಯಲ್ಲಿ ಪ್ರೀತಿ incurable case ಆಗಿ ಕಾಡುತ್ತದೆ. 'ನೆರಳು' ಕತೆಯಲ್ಲಿ ಅವ್ವನಿಗೆ ಸದೂ–ಸದ್ಯಾ ಯಾವಾಗಲೂ ನೆನಪು ಅವಳ ಅನುಭವವೇ ಮುಖ್ಯವಾಗುತ್ತದೆ ಮತ್ತು ಮುಂದಿನ ಮೊಮ್ಮಗಳ ಬಗೆಗಿನ ಊಹೆಯೂ ಸತ್ಯ.

'ಕವಲು' ಕತೆಯ ಬತ್ತದ ಆಸೆಯ ಪುರುಷನ ಸ್ವಾರ್ಥ ನಿರೂಪಣೆಯಿದೆ. ಪ್ರತಿಯಾಗಿ ಅವಳ ದಾರಿಯನ್ನು ದಿಟ್ಟವಾಗಿ ಆರಿಸಿಕೊಂಡಳು. ಆಯ್ಕೆಗೆ ಪುರುಷ ಸ್ವಭಾವವೇ ಕಾರಣ. 20 ವರ್ಷಗಳಿಂದ ಕಳೆದ ಒಂಟಿತನದ ಬದುಕು. ಈಗ ಆಕೆಗೆ ಆಸರೆಯ ಅಗತ್ಯವಿಲ್ಲ. ಮಧ್ಯವಯಸ್ಸಿನ ಒಂಟಿ ಹೆಣ್ಣಿನ ತಳಮಳವಿದೆ. 'ಒಂದು ರವಿವಾರ' ಕತೆಯಲ್ಲಿ ಶಾಂತಿಯ ನೆನಪಿನಲ್ಲಿ ಪುರುಷರ ಸರಮಾಲೆಯಿದೆ. ಸ್ವಾತಂತ್ರ್ಯಕ್ಕಾಗಿ ತಹತಹಿಕೆಯಿದೆ. ಬಿಡುಗಡೆಯ ಭಾವವಿದೆ. ಸಂಪೂರ್ಣ ವ್ಯಂಗ್ಯವೂ ಇದೆ. ಬದುಕಿನಲ್ಲಿ ಕಾಡುವ ಅಪೂರ್ಣತೆಯ ಕಥನದ ವಸ್ತುವಾಗಿ ಸ್ತ್ರೀ ಪುರುಷ ಪಾತ್ರ ಚಿತ್ರಣ ಮೂಡಿ ಬಂದಿದೆ.

ಆ. ಪುರುಷ ಸ್ವಭಾವಕ್ಕೆ ದಕ್ಕಿದ ಪ್ರತಿಕ್ರಿಯೆ :

ಪ್ರಚೋದನೆಗೆ ತಕ್ಕ ಪ್ರತಿಕ್ರಿಯೆ ಎಂಬ ಮಾತಿನಂತೆ ಪುರುಷ ಸ್ವಾರ್ಥ ಸ್ವಭಾವಕ್ಕೆ ಆಘಾತ ನೀಡುವಂತ ಪ್ರತಿಕ್ರಿಯೆಯು ವ್ಯಕ್ತವಾಗಿದೆ. 'ಬಿಡುಗಡೆ' ಕತೆಯ 'ಸರೋಜಾಳ ಸ್ವಭಾವ', 'ಕೊನೆಯದಾರಿ'ಯ ಲಿಲಿಯ ಆಯ್ಕೆ, 'ನೆನಪು ಬರೀ ನೆನಪು' ಕತೆಯಲ್ಲಿ ಎಲಿಸನ್ ಸ್ಥಾನವನ್ನು ಮೂರ್ತಿ ತುಂಬಬಲ್ಲನೆಂಬ ಭಾವನೆ. 'ಕವಲು' ನಾಯಕಿಯ ನಿರಾಕರಣಾ ಮನೋಭಾವ 'ತಿರುಗಿ

ಹೋದಳು' ಕತೆಯ ಹಮೀದಾಳ ಮನಸ್ಥಿತಿ, ಲಕ್ಷ್ಮಿಯ ದ್ವಂದ್ವ 'ಹೀಗೊಂದು ಕತೆ'ಯ ತಾಯ್ತನದ ಆಯ್ಕೆ, ಗೆಳೆಯನ ನಿರಾಕರಿಸಿದ್ದು, 'ನಿರಾಕರಣೆ' ಕತೆಯ ಶಾಕುಂತಲಾ, 'ಒಂದು ರವಿವಾರ' ಕತೆಯ ಶಾಂತಾ ಹೀಗೆ ವಿಭಿನ್ನ ರೀತಿಯ ಪ್ರತಿಕ್ರಿಯೆಗಳು ಕತೆಯಲ್ಲಿ ಮೂಡಿ ಬಂದಿದೆ. ಅಳುತ್ತಾ ಕೂರುವ ಅಂಜುಬುರುಕಿಯರ ಚಿತ್ರಣ ಇವರ ಕತೆಯಲಿಲ್ಲ. ವಾಸ್ತವ ಇದೆ ಎಂದು ಅರಿತು ಬರುವ ಹಲವು ಬಗೆಯ ಪ್ರತಿಕ್ರಿಯೆಗಳು ಮೂಡಿ ಬಂದಿವೆ.

ಇ. ಮೌನ ಸಂಘರ್ಷ :

ಸ್ವಭಾವ ಶೋಧದ ಸಂದರ್ಭದಲ್ಲಿ ಖಚಿತ ನಿಲುವಿದ್ದು ಹೇಳಬೇಕೆನಿಸಿದ್ದನ್ನು ಲೇಖಕಿ ಮುಕ್ತವಾಗಿ ಅಭಿವ್ಯಕ್ತಿಸಿದ್ದಾರೆ. ಕೆಲವೊಮ್ಮೆ ಮೌನವೇ ಆಘಾತ ತರುವಂತೆ ಚಿತ್ರಿತವಾಗಿದೆ. ಎಲ್ಲಾ ರೀತಿಯ ಪುರುಷ ಕ್ರೌರ್ಯಗಳಿಗೆ, ನಿರಾಶೆ, ಹತಾಶೆ, ನೋವಿಗೆ ಮೌನವೇ ಉತ್ತರವಾಗುತ್ತದೆ. ಮೌನವು ಪುರುಷ ವರ್ತನೆಗೆ ತೋರುವ ಪ್ರತಿರೋಧವೂ, ಆಕ್ರೋಶವೂ ಇಷ್ಟು ದಿನ ಅನುಭವಿಸಿದ ಯಾತನೆಗೆ ತಿರಸ್ಕಾರ ಭಾವವೋ, ಎನ್ನುವಂತೆ ಉತ್ತರಿಸುತ್ತದೆ.

'ಗಂಡಸರು' ಕಿರು ಕಾದಂಬರಿಯಲ್ಲಿ 'ಶಾಂತಿ' ತಲುಪುವ ನಿರ್ಭಾವುಕ ಸ್ಥಿತಿ, 'ಬಿಡುಗಡೆ'ಯ ಸರೋಜಾಳ ಅಪ್ರಜ್ಞೆ, ಹಾಲು ಕುಡಿಯುವ ಮೂಲಕ ತೋರುವ ಮೌನ ಪ್ರತಿರೋಧ, ಛದ್ಮವೇಷ ಧರಿಸಿರುವ ಪುರುಷ ಸ್ವಭಾವಕ್ಕೆ ಕನಲುವ ಎಷ್ಟೋ ಮಹಿಳೆಯರ ಮೌನ ಪ್ರತಿರೋಧ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ವಿಷಾದದಿಂದ ಆರಂಭವಾಗುವ ಭೂತದ ಕರಿನೆರಳುಗಳ ಎಣಿಕೆಯೂ ಮೌನದಲ್ಲೆ, ಕಾಡುವ ಪ್ರಶ್ನೆಗೆ ಉತ್ತರವೂ ಮೌನವೇ, ಆತ್ಮ ಸಂಬಂಧದ ಸಾಫಲ್ಯತೆಯ ನಿರಂತರ ಹಂಬಲದಲ್ಲಿ ಹುಡುಕಾಟ ನಡೆವುದು ಮೌನದಲ್ಲೇ. ಇಲ್ಲಾವ ಜಗಳವಿಲ್ಲ, ಬರೀ ಸ್ವಗತಗಳೇ. 'ಮಳೆ ಬಂದಾಗ' ಕತೆಯಲ್ಲಿನ ಪ್ರೀತಿಯ ಹುಚ್ಚು ಹುಡುಕಾಟ, ಕಲೆಯನ್ನು ಮಾಧ್ಯಮವಾಗಿಸಿ ಮಳೆಹನಿಯಲ್ಲಿ ಕಣ್ಣೀರ ತೊಯ್ಸಿ ತನ್ನ ಭಾವವನ್ನು ನೀರಾಗಿ ಹರಿಸಿ ಬಿಡುವ ಚಿತ್ರಣ ಮುಖ್ಯವಾದುದೆನಿಸುತ್ತದೆ.

ಈ. ಕತೆಗಳ ಶೀರ್ಷಿಕೆ :

ವೀಣಾಶಾಂತೇಶ್ವರ ಅವರ ಕತೆಗಳ ಶೀರ್ಷಿಕೆಗಳು ಇಡೀ ಅವರ ಕತೆಗಳ ಆಶಯವನ್ನು ಶಕ್ತವಾಗಿ ಬಿಂಬಿಸುತ್ತವೆ. ಇಡೀ ಸಮಾಜದಲ್ಲಿನ ಹೆಣ್ಣಿನ 'ಬಿಡುಗಡೆ'ಯ ಆಶಯವನ್ನು ಶೀರ್ಷಿಕೆ ಹಿಡಿದಿಡುತ್ತದೆ. ಹೆಣ್ಣನ್ನು ಕಾಡುವ 'ಮುಳ್ಳುಗಳು' ತನ್ನ ಆಯ್ಕೆಯ ದಾರಿ, ಕಾಡುವ ನೆನಪುಗಳು ಪ್ರಶ್ನೆಗಳು, ಕತೆಯ ಶೀರ್ಷಿಕೆಗಳಾಗಿವೆ.

'ನೀನೇ–ತಂತಿ', 'ಒಲವೇ ಜೀವನ' ಈ ಶೀರ್ಷಿಕೆಗಳು ಸಾಮರಸ್ಯ ಸಾಧಿಸುವ ಹಂಬಲವನ್ನು ತಂದಿದೆ. ಕವಲು, ನಿರಾಕರಣೆ, ಅನಾಥೆ, ಮರೀಚಿಕೆ ಸಂದರ್ಭಗಳಿಗೆ ಉತ್ತರದಂತಿದೆ. 'ನಡೆದದ್ದೇ ದಾರಿ' ಇವರ ಸಮಗ್ರ ಕಥಾ ಸಂಕಲನದ ಶೀರ್ಷಿಕೆ. ತನ್ನ ಆಯ್ಕೆಯನ್ನು ಸಮರ್ಥವಾಗಿ ಎದುರಿಸಬಲ್ಲ ಹೆಣ್ಣಿನ ಹಾದಿಯನ್ನು ಆಯ್ಕೆ ಮಾಡಿಕೊಂಡಿರುವ ರೀತಿ ಕತೆಗಳ ಶಕ್ತಿಯನ್ನು ಹೆಚ್ಚಿಸಿವೆ.

ಉ. ಕಥನ ತಂತ್ರ–ಶೈಲಿ :

ಋತುಮಾನದ ನಿರೂಪಣೆ ಮಾಡುತ್ತಾ ಕತೆಗಳು ಆರಂಭಗೊಳ್ಳುವುದಕ್ಕೆ ಹಲವು ಉದಾಹರಣೆಗಳಿವೆ. ಸ್ತ್ರೀ ನಿರೂಪಣಾ ಕತೆಗಳು ಹೆಚ್ಚಾಗಿ ಇವೆ. ಪ್ಲಾಶ್‌ಬ್ಯಾಕ್ ತಂತ್ರ ಬಹುತೇಕ ಬಳಕೆಯಾಗಿದೆ. ಕನಸಿನ ಮೂಲಕ ಕಟ್ಟಿಕೊಡುವ ಚಿತ್ರಣಗಳು ವಾಸ್ತವ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ನೆನಪಿನ ಲಹರಿಯಲ್ಲಿ ಕಾಡುವ ಚಿತ್ರಣಗಳಿವೆ. ಬಹುತೇಕ ಉದ್ಯೋಗಸ್ಥ ಮಹಿಳೆಯರ ಚಿತ್ರಣವಿದೆ. ಕುಟುಂಬ ಮತ್ತು ಹೊರಗಿನ ಎರಡು ಹೊಣೆಯನ್ನು ನಿರ್ವಹಿಸಬಹುದಾದ ಸೂಕ್ಷ್ಮತೆ ಮುಖ್ಯ ಅಂಶವಾಗಿದೆ. ಯಾವುದೋ ಸಮಸ್ಯೆಯ ಗೊಂದಲದಲ್ಲೆ ಎಚ್ಚರಗೊಂಡ ರೀತಿಯಲ್ಲಿ ಕತೆಗಳು ಆರಂಭವಾಗುತ್ತದೆ. ಕತೆಗಳ ಅಂತ್ಯ ಇಂತದ್ದೇ ಎಂದು ಹೇಳಲಾಗುವಂತದಲ್ಲ. ಓದುಗರಿಗೆ ಬಿಟ್ಟಿದ್ದು. ಅಂಜುಬುರುಕ, ಅಳುಬುರುಕ ನಾಯಕಿಯರಿಲ್ಲ. ಮಕ್ಕಳ ಚಿತ್ರಣ, ಪ್ರಾಣಿಗಳ ಚಿತ್ರಣವಿಲ್ಲ, ಬದಲಿಗೆ ಹೆಣ್ಣಿನ ಭಾವುಕ ಲೋಕದ ಕತೆಗಳು ಇದಾಗಿವೆ.

ಕಮಲಾದಾಸ್ ಕಥನದ ವಸ್ತು :

ಕಮಲಾದಾಸ್ ಕಥನದ ವಸ್ತುವನ್ನು ವಿವರಿಸುವ ಸಂದರ್ಭದಲ್ಲಿ ಕೆಲವು ಅಂಶಗಳನ್ನು ವಿವರಿಸಲು ಪ್ರಯತ್ನಿಸಿದ್ದೇನೆ.

ಅ. ಸಂಬಂಧದಲ್ಲಿನ ತಹತಹಿಕೆ

ಆ. ಹತಾಶೆ–ವಿಷಾದ

ಇ. ಮಧ್ಯಮವರ್ಗದ ಚಿತ್ರಣ

ಈ. ಅಜ್ಜಿಯ ಪಾತ್ರ ಚಿತ್ರಣ.

ಉ. ಕತೆಗಳ ಶೀರ್ಷಿಕೆ.

ಅ. ಸಂಬಂಧದಲ್ಲಿನ ತಹತಹಿಕೆ :

ಪ್ರತಿಯೊಬ್ಬರಿಗೂ ಅವರವರದೇ ಆದ ಜವಾಬ್ದಾರಿಗಳಿವೆ. ಅದನ್ನು ನಿರ್ವಹಿಸುವುದೇ ಬದುಕಿನ ಗುರಿಯಾಗಬೇಕು. ಅವರ ಜವಾಬ್ದಾರಿಗಳನ್ನು ನಿರ್ವಹಿಸುವ ನೆಪದಲ್ಲಿ ನಮ್ಮ ಬದುಕನ್ನು ಒತ್ತೆ ಇಡುವ, ಬದುಕಿಷ್ಟೆ ಎನಿಸುವಂತೆ ಉಸಿರುಗಟ್ಟಿಸುವ ಎಷ್ಟೋ ಗಳಿಗೆಗಳು ಬಂದು ಹೋಗಬಹುದು. ನಿತ್ಯ ದಿನಚರಿಯಲ್ಲೇ ತಮ್ಮ ಇಡೀ ಜೀವನ ಸವೆಸುವ ಉದಾಹರಣೆಗಳು ಕಣ್ಣ ಮುಂದೆಯೇ ಮೌನವಾಗಿರುತ್ತವೆ. ಆ ಜೀವಂತ ಪಾತ್ರಗಳು ಏನನ್ನೂ ಅಭಿವ್ಯಕ್ತಿಸುವುದಿಲ್ಲ. ಮನಸಿನೊಳಗಣ ಮಾತನ್ನು ಮೌನವಾಗಿ ಸಹಿಸುವ ಸಹ್ಯ ಹೃದಯಗಳನ್ನು ಲೇಖಕಿ ಚಿತ್ರಿಸಿರುವ ಕ್ರಮವು ವೈಶಿಷ್ಟ್ಯವಾದದ್ದು.

ಸಂಬಂಧಗಳಲ್ಲಿನ ತಹತಹಿಕೆಯನ್ನು, ಕುತೂಹಲ ಕಾತರವನ್ನು ಬಹುತೇಕ ಕತೆಗಳು ಬಿಂಬಿಸುತ್ತವೆ. ಹೆಣ್ಣಿನ ನಿರೂಪಣೆಯೇ ಇಲ್ಲದೆ ಆತನೇ (ಗಂಡ) ತನ್ನ ಸಂಬಂಧವನ್ನು ವಿವರಿಸಿಕೊಳ್ಳುವ ಪಶ್ಚಾತಾಪ ಪಡುವ 'ಡಾಕ್ಟರನ ಸಾವು' ಕತೆಯನ್ನು ನೆನಪಿಸಿಕೊಳ್ಳಬಹುದು. 'ಪಾತಿವ್ರತ್ಯ' ಕತೆಯ ಗಂಡನ ಪ್ರೇಯಸಿಯ ಮೌನವೂ ಸಾಕಷ್ಟು ಅರ್ಥಗಳನ್ನು ನೀಡುತ್ತದೆ. ಅನಿರೀಕ್ಷಿತತೆ ಬದುಕನ್ನು ಛಿದ್ರಗೊಳಿಸುವ ಚಿತ್ರಣವು 'ತುಪ್ಪದ ಪಾಯಸ' ಕತೆಯಲ್ಲಿ ಬರುತ್ತದೆ. ಹೆಂಡತಿ ಬದುಕಿದ್ದಾಗ ನಿರಾಕರಣಾ ಭಾವ, ಆ ಸ್ಥಳ ಖಾಲಿಯಾದಾಗ ಅವಳ ಹೊಣೆಗಾರಿಕೆಯನ್ನು ನಿರ್ವಹಿಸುವರು ಯಾರು ಎಂದು ಕಾಡುವ ಪ್ರಶ್ನೆಯೂ ಇದೆ, ಹೆಂಡತಿಯ ಸಾವಿನ ನಂತರ ಗುಣಗಾನ ಮಾಡಲಾರಂಭಿಸಿದ ಗಂಡನ ಚಿತ್ರಣ ಅದಾಗಿದೆ.

ಯಾವ ಘಟನೆಯೂ ಜರುಗದೆ ನಡೆಯುವ ಅಪರಾಧ ಮತ್ತು ಸಂಭವಿಸುವ ದುಃಖಕ್ಕೆ 'ಕೆಂಪುಲಂಗ' ಕತೆ ಉದಾಹರಣೆಯಾಗಿದೆ. ರಾಧಾಳ ಮುಗ್ಧತೆ, ಯಜಮಾನನ ಮೌನ, ಹೆಂಡತಿಯ ಅನುಮಾನದ ಸುತ್ತ ಹೆಣೆದಿರುವ ಕತೆ ಇದಾಗಿದೆ. ಹಿಂದೆ ನಡೆದ ಬದುಕಿನ ಘಟನೆಗಳನ್ನು ಮೀರಿ ಇಂದಿನ ಬದುಕಷ್ಟೇ ಮುಖ್ಯವೆಂದೆನುವ 'ಜಿಜ್ಞಾಸೆ' ಕತೆ ಆಧುನಿಕ ಬದುಕಿಗೆ ಪ್ರಸ್ತುತವೆನಿಸುತ್ತದೆ. 'ವೇಲಾಯುಧನ ಹೆಂಡತಿ' ಕತೆಯಲ್ಲಿ ವೇಲಾಯುಧನಂತೆ ಕೋಪದಲ್ಲಿ ವರ್ತಿಸಿ ಪ್ರೀತಿಗೆ ಶರಣಾಗುವನ ವಿಚಿತ್ರವರ್ತನೆಯೂ ಕಾಣಬಹುದು.

ಕಾಮತೀವ್ರತೆಯ ಅದಮ್ಯ ಮೋಹ, ಮೌನದಿಂದಲೇ ಮನಸ್ಸು ಬದಲಿಸುವ, ಸತ್ಯ ಸದಾ ನಿಗೂಢವೆನಿಸುವ, ನಂಬಿಕೆ-ಅಪನಂಬಿಕೆಯ ಸುಳಿವ, ಉದಾಸೀನ, ಪಶ್ಚಾತ್ತಾಪದ ಮಡುವಲ್ಲಿ ಕಳೆದು ಹೋದ ಹೆಣ್ಣು ಗಂಡಿನ ಸಂಬಂಧದ ಚಿತ್ರಣಗಳು ಕತೆಯಲ್ಲಿವೆ.

ಸಂಬಂಧಗಳ ತಹತಹಿಕೆಯನ್ನು ಚರ್ಚಿಸುವ ಸಂದರ್ಭದಲ್ಲಿ ಮೂರು ಮುಖ್ಯ ಭಿನ್ನ ಕತೆಗಳನ್ನು ಪ್ರಸ್ತಾಪಿಸುತ್ತೇನೆ.

ಮನುಷ್ಯ ತನ್ನ ಪ್ರೇಮ ಭಾವವನ್ನು ಎಂದೂ ತಡೆಹಿಡಿದು ಅವಿತಿಟ್ಟುಕೊಳ್ಳಲಾರ ಆ ತಹತಹಿಕೆಯನ್ನು ಅನುಭವಿಸಿ ಮೌನವಾಗಿರಲು ಸಾಧ್ಯವಿಲ್ಲ. ಅತೃಪ್ತಿ ಬದುಕನ್ನು, ಬುದ್ಧಿಯನ್ನು ನಾಶಗೊಳಿಸುತ್ತದೆ. ಬಂದದ್ದನ್ನು ಸ್ವೀಕರಿಸುವ, ಒಪ್ಪಿತ ಸಂದರ್ಭಗಳು ಬದುಕಿನ ದಿಕ್ಕನ್ನೇ ಬದಲಿಸಿ ಬಿಡುತ್ತದೆ. ಬದುಕಿನ ಕೊನೆಯಲ್ಲೂ ಪ್ರೀತಿಯ ಹಚ್ಚ ಹಸಿರಿನ ನೆನಪು, ಪ್ರೇತದಂತೆ ಕಾಡುವ ಪ್ರೀತಿ 'ಕಳೆದುಹೋದ ನೀಲಾಂಬರಿ' ಕತೆಯ ಸುಭದ್ರ ಮತ್ತು ಜ್ಞಾನಂ ಕಾಡುವ ಪಾತ್ರಗಳಾಗಿ ನಮ್ಮ ಮುಂದೆ ನಿಲ್ಲುತ್ತದೆ.

'ಸ್ವಾತಂತ್ರ್ಯ ಹೋರಾಟಗಾರನ ಮಗಳು' ಕತೆಯ 'ಭಾರತಿ' ಪರಂಪರೆಯ ಪುರುಷ ರಕ್ಷಣೆಯಲ್ಲಿ ಬೆಚ್ಚಗೆ ಬದುಕ ಕಳೆಯುವವಳು. ಭವಿಷ್ಯದ ಆಶೋತ್ತರಗಳ ಕನಸು ಕಾಣುವ ಕಲ್ಪನೆ ಸ್ವಾತಂತ್ರ್ಯ ಇಲ್ಲದೆ ಬದುಕಿನ ಹೋರಾಟದ ಕತೆಯಾಗಿದೆ. ಭಾರತಿ ಚಿತ್ರಿತವಾಗುವುದು ತಂದೆಯ ಕಣ್ಣೋಟದ ಮೂಲಕ ಅವಲಂಬಿತ ಗೃಹೀತದಲ್ಲಿ ತೊಡಗಿರುವ ಭಾರತೀಯ ಹೆಣ್ಣಿನ ಚಿತ್ರಣವು ತನ್ನದೇ ದಾರಿಯಲ್ಲಿ ಬೆಳೆಯುತ್ತಾ ಸಾಗುವ ಸಾಧ್ಯತೆಗಳ ಕಡೆಗೆ ಮುನ್ನಡೆಯುವಂತಿದೆ.

ಯಾವ ಒಡವೆಯೂ ಬೇಡ ನನಗೆ, ಗಂಡನಗೊಡವೆಯೂ ಬೇಡವೆಂದು ಲೌಕಿಕದ ಹಂಬಲವನ್ನು ತೊರೆದು ತಟಸ್ಥಭಾವ ತಳೆಯುವಂತೆ ಕಾಡುವ ಕತೆ 'ಅಮ್ಮಾಳು ಕುಟ್ಟಿಯ ಗಂಡ' ಈ ಕತೆಯಲ್ಲಿ ಅಮ್ಮಾಳುಕುಟ್ಟಿ 'ಅಕ್ಕ'ನಂತೆ ಕಾಣಬರುತ್ತಾಳೆ. ಎಲ್ಲ ಲೌಕಿಕದ ಆಸೆಗಳನ್ನು ಬದಿಗಿಡುವ ಸಂಬಂಧಗಳ ಹಂಗನ್ನು ಮೀರುವ ಪಾತ್ರದಲ್ಲಿ ಆಕೆ ದಿಟ್ಟವಾಗಿ ಕಾಣಬರುತ್ತಾಳೆ.

ಅಪಾರ ಜೀವನಾನುಭವದಲ್ಲಿ ಬೆಳೆದ ಲೇಖಕಿ ತಾನು ಕಂಡ ಲೋಕದಲ್ಲಿನ ಸಂಬಂಧಗಳ ವೈಚಿತ್ರ್ಯ, ಸ್ವಾರ್ಥ, ಕಾತುರತೆ, ಮೋಹ, ಸತ್ಯಗಳನ್ನು ಪಾರದರ್ಶಕವಾಗಿ ಚಿತ್ರಿಸುತ್ತಾರೆ, ಹಲವು ತೆರನಾದ ಸಂಬಂಧಗಳನ್ನು ವಿವಿಧ ಸ್ತರಗಳಲ್ಲಿ ಕಾಣಬಹುದಾಗಿದೆ. ಪರಂಪರಾನುಗತವಾಗಿ ಬರೆಯುತ್ತಿದ್ದ ಆ ಕಾಲದ ಲೇಖಕರ ಜೊತೆಗೆ ಸಹಜ ಸಂಬಂಧಗಳನ್ನು ಚಿತ್ರಿಸಿದ ಬಹು ಮುಖ್ಯ ಲೇಖಕಿಯಾಗಿ ಕಮಲಾದಾಸ್ ಕಾಣಬರುತ್ತಾರೆ. ಪ್ರೀತಿಯನ್ನು ಸಂಬಂಧಗಳ ಮೂಲಕ ಅರಸಿ ಹೊರಟ ಬರಹಗಾರ್ತಿ ಮಾಧವಿಕುಟ್ಟಿ.

ಆ. ಹತಾಶೆ–ವಿಷಾದ :

ಹತಾಶೇ–ವಿಷಾದವಿಲ್ಲದ ಬದುಕಿಲ್ಲ. ಹತಾತ್ತನೆ ಬದುಕಿಗೆ ಎರಗಬಹುದಾದ ಸಂಗತಿಗಳಿವು. ಕಮಲಾದಾಸ್ ತನ್ನ ಹತ್ತನೇ ವಯಸ್ಸಿನಲ್ಲಿ ಬರೆದ 'ಸುಮುಖಿ'ಯ ಕತೆ

ಒಂದುವರೆ ಪುಟದ್ದಾಗಿದೆ. ಇಡೀ ಬದುಕಿನ ವಾಸ್ತವವನ್ನು ಕಟ್ಟಿ ಹಿಡಿವ ವಸ್ತು ಹತಾಶೆ–ವಿಷಾದ ಎರಡನ್ನೂ ಹೊಂದಿದೆ. ಪ್ರೀತಿಕೊಟ್ಟ ಪ್ರತಿಫಲವನ್ನು ಆಕ್ರೋಶವಿಲ್ಲದೆ ಸ್ವೀಕರಿಸಿ ಬದುಕನ್ನು ಒಪ್ಪಿ ನಡೆವ ಕತೆಯಾಗಿದೆ. ಇಡೀ ಬದುಕಿನುದ್ದಕ್ಕೂ ನೋವನ್ನು ಉಳಿಸಿಹೋದ 25 ವರ್ಷಗಳ ಹಿಂದಿನ ನೆನಪು ರವಿಯನ್ನು ಕಾಡುವ ನಶ್ವರ ಭಾವದ 'ಹೆಣ್ಣು' ಕತೆಯೂ ಇದೆ.

'ಹಕ್ಕಿಯ ವಾಸನೆ'ಯಂತ ಸಾವಿನ ಸುಳಿವನ್ನು ಬಿಂಬಿಸುವ ಕಥಾ ನಾಯಕಿಗೆ ಕಾದಿದ್ದ ಹತಾಷೆ ಇಡೀ ಸ್ತ್ರೀ ಕುಲ ಎದುರಿಸುವ ಅಂಶವಾಗಿದೆ. ಗಂಡನ ಮಾತನ್ನು ಮೀರಿದರೆ ಹತಾಷೆ ಕಾದಿರುವುದು ಪರಮ ಸತ್ಯವೆಂಬ ಅಂಶ ಈ ಕಥೆಯಲ್ಲಿ ಸಾಬೀತುಕೊಂಡಿದೆ. ಪುರುಷ ಮುಷ್ಠಿಯಲ್ಲಿ ಹೆಣ್ಣು ಬದುಕಿ ಬಾಳಬೇಕೆಂಬ ಸಂಗತಿಯ ಸೂಚನೆ ಇದೆ.

ಮಧುಚಂದ್ರನ ಕನಸಿನಲ್ಲಿ ಹೊಸ ಬದುಕನ್ನು ಆರಂಭಿಸಿದಾಗಲೂ ಆವರಿಸುವ ಸಾವು ಯಾರನ್ನೂ ಸುಮ್ಮನೆ ಬಿಡದು ಎನ್ನುವುದಕ್ಕೆ ಸಾಕ್ಷಿಯಾಗಿ ನವದಂಪತಿಗಳು ಕೊಲೆಗೀಡಾಗುವ ಸನ್ನಿವೇಶವಿದೆ. 'ಹಸಿರು ರೇಷ್ಮೆ ಸೀರೆ'ಗಾಗಿ ಬಯಸಿ ಸಾವನ್ನಪ್ಪಿದ ಚಿತ್ರಣವೂ ವಿಷಾದವೆ ಸರಿ.

ನಿರಾಶೆ, ವಿಷಾದ, ಹತಾಶೆ ಬದುಕಿನ ಪ್ರತಿಹಂತದಲ್ಲೂ ಮನುಷ್ಯ ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಬದುಕಿನಲ್ಲಿ ಸಂತಸ ನೆಮ್ಮದಿಯ ಹಾಗೆ ಒಂದೇ ನಾಣ್ಯದ ಎರಡು ಮುಖವೆಂಬಂತೆ. ವಿಷಾದದ ಕರಾಳ ಛಾಯೆಯ ನೆರಳು ಕತೆಗಳಲ್ಲಿದೆ. ಹತಾಶೆಯ ಅಭಿವ್ಯಕ್ತಿ ಬದುಕಿನ ಕ್ರಮಕ್ಕೆ ಹೊಸ ನೋಟವನ್ನು ನೀಡುತ್ತದೆ. ವಿಷಾದದ ಸುಳಿಯಿಂದ ನುಸುಳುವ ಹೊತ್ತಿಗೆ ನಿರಾಶೆ ಮನುಷ್ಯನನ್ನು ಕಾಡುತ್ತದೆ ಎಂಬ ಸತ್ಯದ ಬೆನ್ನೇರಿ ಹೊರಟವರು ಕಮಲಾದಾಸ್. ಮತ್ತೆ ಮತ್ತೆ ಕಾಡುವ ಬದುಕಿನ ತಾಕಲಾಟಗಳು ಕತೆಗಳಲ್ಲಿ ಬೆರೆತು ಭಾಗವಾಗಿ ಹೋಗಿದೆ. ಸಂಬಂಧಗಳ ಜೊತೆಗೆ ಉಡುಗೊರೆಯಾಗಿ ಬರುವ ಎಲ್ಲ ಭಾವಗಳು ಸಾಹಿತ್ಯದೊಂದಿಗೆ ಬೆಸೆದುಕೊಂಡಿದೆ.

ಇ. ಮಧ್ಯಮವರ್ಗದ ಚಿತ್ರಣ :

ಕಮಲಾದಾಸ್ ಕತೆಗಳಲ್ಲಿ ಮಧ್ಯಮ ವರ್ಗದ ಚಿತ್ರಣವೇ ಬಹುತೇಕ. ಶ್ರೀಮಂತ ಬದುಕಿನ ಚಿತ್ರಣ ಕಡಿಮೆಯಾಗಿ ಮಧ್ಯಮ ವರ್ಗದ ಹೆಣ್ಣೊಬ್ಬಳ ಆಸೆಯನ್ನು ಹಸಿಹಸಿಯಾಗಿ ಬಿಡಿಸುವ ಸಲುವಾಗಿ ಕತೆಗಳು ರೂಪುಗೊಂಡಿವೆ. ಹಸಿರು ರೇಷಿಮೆ ಸೀರೆಯನ್ನು ಸಿಂಗರ್ ಮಿಷಿನ್ ಕೊಡಿಸುವ ಆಸೆಯಲ್ಲೇ ಬದುಕು ಕೊನೆಯಾಗುವ ಕತೆಗಳಿವೆ. ಸಾಯುವ ಹಂತದಲ್ಲಿ ಹೆಂಡತಿಯನ್ನು ಉಳಿಸಿಕೊಳ್ಳುವ ಸಂದರ್ಭದಲ್ಲಿ ನಡೆಸುವ ಆರ್ಥಿಕತೆಯ ಲೆಕ್ಕಾಚಾರದ ಸಂದರ್ಭವಿದೆ. ಪ್ರೀತಿಗಾಗಿ ಹಾತೊರೆಯುವ ಅಥವಾ ಹಣಕ್ಕಾಗಿ ಮಿಡಿಯುವ ಚಿತ್ರಣವೂ ಇದೆ.

ಕಮಲಾದಾಸ್ ವರ್ಗ ದೃಷ್ಟಿಗಿಂತ ಭಾವುಕನೋಟ ತೆರೆದವರು. ಇವರ ಕತೆಗಳಲ್ಲಿ ಮಧ್ಯಮ ವರ್ಗದ ಮಹಿಳೆಯರಿಗೆ ಕುಟುಂಬದಲ್ಲಿ ಒದಗಿ ಬರುವ ಭಾವ ತಾಕಲಾಟದ ಚಿತ್ರಣವೇ ಮುಖ್ಯವೆನಿಸುತ್ತದೆ. ಜಾತಿಯನ್ನು ಕುರಿತಾದ ಪ್ರಸ್ತಾಪವೂ ಕಡಿಮೆ. ಬಹುಶಃ ಲೇಖಕಿಯ ದೃಷ್ಟಿಕೋನ ಬಹುತೇಕ ಹರಿದಿದ್ದು ಹೆಣ್ಣಿನ ಬದುಕಿನ ಮೇಲಾದ್ದರಿಂದ ಭಾವಲೋಕಕ್ಕೆ ಹೆಚ್ಚು ಪ್ರಾಧಾನ್ಯತೆ ದೊರೆತಿದೆ.

ಈ. ಅಜ್ಜಿಯ ಪಾತ್ರ ಚಿತ್ರಣ :

ಬದುಕಿಗೂ ಸಾಹಿತ್ಯಕ್ಕೂ ನೇರ ಸಂಬಂಧವಿದೆ. ಕಮಲಾದಾಸ್ ಕಥನದಲ್ಲಿ ಅಜ್ಜನ ಚಿತ್ರಣ ಕಡಿಮೆಯೆ. ಬಾಲ್ಯದ ತುಂಬಾ ಅಜ್ಜಿಯ ಒಡನಾಟದಲ್ಲಿ ಬೆಳೆದ ಕಮಲಾದಾಸ್‌ಗೆ ಮಧ್ಯವಯಸ್ಸಿನ, ಅನುಭವಿ ಹೆಣ್ಣುಗಳ ಪಾತ್ರ ಸೃಷ್ಟಿಯ ಬಗ್ಗೆಯೇ ಕಾಳಜಿ. 'ಶಿಕ್ಷೆ' ಮತ್ತು 'ದನಗಳ ಸಂತೆ' ಕತೆಯ ಅಜ್ಜಿಯ ಪಾತ್ರ ಆಕರ್ಷಿತವಾಗುವುದು ಮೊಮ್ಮಗಳ ಮೂಲಕ. ಮೊಮ್ಮಗನ ಚಿತ್ರಣ ಅವರ ಕತೆಗಳಲ್ಲಿ ಕಾಣಬರುವುದಿಲ್ಲ. ಲೇಖಕಿ ತನ್ನ ಬದುಕಿನ ಮೇಲೆ ಪ್ರಭಾವ ಬೀರಿದ ಅಂಶಗಳನ್ನು ಮತ್ತೆ ಮತ್ತೆ ಸಹಜವಾಗಿಯೇ ಚಿತ್ರಿಸುತ್ತಾರೆ.

ಉ. ಕತೆಗಳ ಶೀರ್ಷಿಕೆ :

ಕಥಾ ವಸ್ತುವಿನ ಇಡೀ ಸಾರವನ್ನು ಶೀರ್ಷಿಕೆ ಹಿಡಿದಿಡುತ್ತದೆ. ಆದ್ದರಿಂದ ಶೀರ್ಷಿಕೆಗಳನ್ನು ಗಮನಿಸಬೇಕಾಗುತ್ತದೆ. ಕಮಲಾದಾಸ್ ಕತೆಗಳಲ್ಲಿ ಮೂಡಿ ಬಂದಿರುವ ತಲ್ಲಣಗಳನ್ನು ಶೀರ್ಷಿಕೆಗಳಲ್ಲಿ ಕಾಣಲಾಗುವುದಿಲ್ಲ. ಏಕೆಂದರೆ ಇವರ ಕತೆಗಳ ಶೀರ್ಷಿಕೆ ಬಹು ಸರಳಯುತವಾದದ್ದು. ಅನುವಾದದ ಮಿತಿಯಲ್ಲಿ ನನ್ನ ಅಧ್ಯಯನ ಮುಂದುವರೆಸಿರುವುದರಿಂದ ಹೀಗೆನಿಸಿರಬಹುದು. ಕಥನಶಕ್ತಿಯೇ ಸತ್ವಯುತವಾದದ್ದಾಗಿದೆ. ಕಥೆ ಹೆಣೆಯುವುದಕ್ಕೆ ನೀಡಿದ ಪ್ರಾಧಾನ್ಯತೆ ಶೀರ್ಷಿಕೆಗೆ ಸರಳ ಆಯ್ಕೆ ಮಾಡಿರುವುದು ಸ್ಪಷ್ಟವಾಗುತ್ತದೆ. ಶೀರ್ಷಿಕೆಗಳನ್ನು ಗಮನಿಸುತ್ತಾ ಹೊರಟರೆ ಕಳೆದುಕೊಂಡದ್ದನ್ನು ಹುಡುಕುವ ಭಯ ಆತಂಕಗಳಿವೆ. ಹೆಣ್ಣು ತೊಡುವ ಬಳೆಗಳು, ಆಭರಣ, ಮೆಹಂದಿ, ಹಸಿರು ರೇಷ್ಮೆ ಸೀರೆಯನ್ನು ತೊಡುವ ಕೆಂಪುಲಂಗವೇ ಶೀರ್ಷಿಕೆಗಳಾಗಿವೆ. ಪದ್ಮಾವತಿ, ಕಲ್ಯಾಣಿ ಮಂಜು, ಮಾಧವಿ, ಸನಾತನ ಚೌದರಿ, ಅಮ್ಮಾಳು ಕಟ್ಟಿ, ವೇಲಾಯುಧ, ನೀಲಾಂಬರಿ ಬಾಬು ಈ ಹೆಸರುಗಳು ಶೀರ್ಷಿಕೆಯಲ್ಲಿ ಬಳಕೆಯಾಗಿವೆ. ಕಾಡುವ 'ನೆನಪುಗಳು', 'ಗೂಡುಗಳಾಗಿ', 'ತುಪ್ಪದ ಪಾಯಸ'ವಾಗಿ 'ಜಿಜ್ಞಾಸೆ'ಯ, 'ಹೆಜ್ಜೆ ಸದ್ದು'ಗಳನ್ನು ಮಾಡುತ್ತಾ 'ಮತಿಭ್ರಮಣೆಯಿಂದ, 'ಪ್ರಭಾತದ ರಹಸ್ಯ' ಹುಡುಕುತ್ತಾ 'ಶಿಕ್ಷೆ'ಯ ಕಡೆ ಮುಖಮಾಡಿದೆ.

ಕಮಲಾದಾಸ್ ಕಥನ ತಂತ್ರ-ಶೈಲಿ :

ಕಮಲಾದಾಸ್ ಕತೆಗಳು ಅತಿವೇಗದ ನಿರೂಪಣೆಯಾಗಿವೆ. ಅರ್ಧ ಪುಟದ ಒಂದು ಪುಟದ ಸಣ್ಣಕತೆಗಳನ್ನು ಒಳಗೊಂಡಿದೆ. ಇದ್ದಕ್ಕಿದ್ದಂತೆ ಆರಂಭ ಕಂಡು ಬಹು ದೊಡ್ಡ ವಸ್ತುವೊಂದನ್ನು ಪ್ರಸ್ತುತ ಪಡಿಸಿ ಅಂತ್ಯ ಕಾಣುವ ಕತೆಗಳು ಇದಾಗಿದೆ. ಹಲವು ಕಡೆಗಳಲ್ಲಿ ಸ್ವಗತ ಕತೆಯನ್ನು ನಿರೂಪಿಸುತ್ತಾ ಸಾಗುತ್ತವೆ. ಉದಾಹರಣೆಗೆ 'ಹೆಣ್ಣು', 'ನೆನಪುಗಳು' ಕತೆಯನ್ನು ನೆನಪಿಸಿಕೊಳ್ಳಬಹುದು. ಇವರ ಕಥನದಲ್ಲಿ ದಿನಚರಿಯ ಬಗೆಗಿನ ಕಾಳಜಿಯನ್ನು ಕಾಣಬಹುದು. ಅಂದರೆ ನಿತ್ಯ ನಡೆಯುವ ಕ್ರಿಯೆಯ ಜೊತೆಗೆ ಕಥನವನ್ನು ಬೆಳೆಸಿರುವ ಕ್ರಮ ಇವರದ್ದು.

ಅಧ್ಯಾಯ ೭

ಲೇಖಕಿಯರ ಆತ್ಮಕಥನದ ನೆಲೆಗಳು

ಅಧ್ಯಾಯ – 7

ಲೇಖಕಿಯರ ಆತ್ಮಕಥನದ ನೆಲೆಗಳು

ಆತ್ಮಕಥೆ ಎಂದರೆ ಬದುಕಿನ ಕತೆ, ಬದುಕಿ ಬಾಳಿ ಅನುಭವಿಸಿದ ಹಲವು ಘಟನೆಗಳ ಜೋಡಣೆಯಾಗಿದೆ. ಘಟನೆಗಳ ಜೋಡಣೆ ಎಂದೊಡನೆ ನಡೆದ ಕತೆ ಹೇಳುವುದೆಂದಲ್ಲ, ಲೇಖಕಿ/ಲೇಖಕ ಬದುಕನ್ನು ಗ್ರಹಿಸಿರುವ ಕ್ರಮವಾಗಿ ಆತ್ಮಕಥೆ ಸಾಹಿತ್ಯ ಪ್ರಕಾರಗಳಲ್ಲಿ ಬಹು ಶಕ್ತ ಹಾಗೂ ಮುಕ್ತ ಅಭಿವ್ಯಕ್ತ ಮಾಧ್ಯಮವಾಗಿದೆ. ಬದುಕನ್ನು ಗ್ರಹಿಸುವುದರ ಜೊತೆಗೆ ಆ ಕಾಲದ ಸಾಂಸ್ಕೃತಿಕ ಚಿತ್ರಣವೂ ಕಾಣಸಿಗುತ್ತದೆ. ಅವ್ಯಕ್ತಗೊಳಿಸಲಾದ ಎಷ್ಟೋ ಭಾವಗಳು ಆತ್ಮಕಥೆಯ ಮೂಲಕ ಬಿತ್ತರಗೊಳ್ಳುತ್ತದೆ. ಹೆಣ್ಣು ಲೇಖನಿ ಹಿಡಿದು ಬರೆಯಲು ಆರಂಭಿಸಿದ್ದೇ ಚಾರಿತ್ರಿಕ ಸಂಗತಿ. ಸಾಮಾಜಿಕ ಬದುಕಿನಲ್ಲಿ ಸ್ಥಾನ ಗಿಟ್ಟಿಸುವ ಹಂಬಲ ಒಂದು ಕಡೆಯಾದರೆ, ಖಾಸಗಿ ಬದುಕನ್ನು ತೆರೆದಿಡುವ ಪ್ರಯತ್ನ ಸವಾಲಿನದಾಗಿರುತ್ತದೆ. ಈ ಸವಾಲನ್ನು ನಿಷ್ಠವಾಗಿ, ಆತ್ಮವಿಶ್ವಾಸದಿಂದ ನಿರ್ವಹಿಸುವಲ್ಲಿ ಲೇಖಕಿಯರು ಹೆಜ್ಜೆ ಹಾಕುತ್ತಿರುವುದನ್ನು ಗಮನಿಸುವಲ್ಲಿ ಕೆಲವು ಉದಾಹರಣೆಗಳನ್ನು ಕಾಣಬಹುದು.

ಮಲಯಾಳದ ಲೇಖಕಿ 'ಲಲಿತಾಂಬಿಕಾ ಅಂತರ್ಜನಂ' ರವರ ಆತ್ಮಕಥೆ 'ಆಥ್ಮಕಥೆಗೊಂದು ಮುನ್ನುಡಿ' (1979) ಈಕೆ ಸ್ವಾತಂತ್ರ್ಯ ಪೂರ್ವದ ಕತೆಗಾರ್ತಿ, ತಮ್ಮ ಬದುಕಿನ ಹಾಗೂ ಬರವಣಿಗೆಯ ಬದುಕಿಗೆ ಹೆಣ್ಣಿಗಿದ್ದ ಅಡೆತಡೆಗಳನ್ನು ಕುರಿತು ಆತ್ಮಕಥೆಯಲ್ಲಿ ಚರ್ಚಿಸಿದ್ದಾರೆ. "ತಮ್ಮ ಬದುಕಿನಲ್ಲಿ ಓರ್ವ ಬರಹಗಾರ್ತಿಯಾಗಿ ತಾವು ಎದುರಿಸಿದ ಕಷ್ಟ–ಸಂಕಷ್ಟಗಳು, ನಂಬೂದರಿ ಸಮಾಜದಲ್ಲಿ ಸಂಪ್ರದಾಯಗತವಾಗಿ ಹರಿದು ಬಂದ ಪುರುಷ ದೌರ್ಜನ್ಯ ಮತ್ತು ಸ್ತ್ರೀಯರ ಅಸಹಾಯಕ ಸ್ಥಿತಿಗಳನ್ನು ಅವರು ಇಲ್ಲಿ ಮನಮುಟ್ಟುವಂತೆ ವರ್ಣಿಸುತ್ತಾರೆ. ಮಾತ್ರವಲ್ಲ ಸಮಾಜದಲ್ಲಿ ಒಟ್ಟಾರೆ ಸ್ತ್ರೀಯರು ಪಡುತ್ತಿದ್ದ ಬವಣೆಗಳನ್ನು ವಿಶ್ಲೇಷಿಸುತ್ತಾರೆ. ಮನೆಗೆಲಸ ಗಂಡ, ಮಕ್ಕಳು, ಆಗಮಿಸುವ ಅಸಂಖ್ಯ ಅತಿಥಿಗಳನ್ನು ಸತ್ಕರಿಸುವುದರಲ್ಲಿ ಓರ್ವ ಮಹಿಳೆ ಅದೆಷ್ಟು ಒದ್ದಾಡ ಬೇಕಾಗುತ್ತದೆ ಎಂಬ ಕಟು ಸತ್ಯವನ್ನು ಅಂತರ್ಜನಂ ಅವರು ತಮ್ಮ ಸ್ವಂತ ಅನುಭವಗಳ ಮೂಲಕ ಪ್ರಕಟಪಡಿಸುತ್ತಾರೆ" (ಮಹಿಳಾ ಚಿಂತನೆಯ ವಿಭಿನ್ನ ನೆಲೆಗಳು:130)

ಪುರುಷರಿಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಮಹಿಳಾ ಅಭಿವ್ಯಕ್ತಿ ಸಾಮರ್ಥ್ಯ, ಪರಿಸರವೇ ಭಿನ್ನ. ಅವಳಿಗಿರುವ ಒತ್ತಡಗಳೇ ಅವಳ ಬರವಣಿಗೆಗೆ ಮಿತಿಯಾಗುತ್ತದೆ, ಅದನ್ನು ಮೀರುವ ಕ್ರಮವನ್ನು ಆಕೆ ಬರವಣಿಗೆಯ ಮೂಲಕ ವ್ಯಕ್ತಪಡಿಸುತ್ತಿದ್ದಾಳೆ ಎಂಬುದನ್ನು ಅಂತರ್ಜನಂ ತಮ್ಮ ಆತ್ಮಕಥೆಯಲ್ಲಿ ತಿಳಿಸುತ್ತಾರೆ.

ಕನ್ನಡದ ಸಂದರ್ಭದಲ್ಲಿ ಸೃಜನಶೀಲ ಸಾಹಿತ್ಯದಲ್ಲಿ ಕೃಷಿ ಮಾಡಿದ ಸಾಹಿತಿಗಳಾದ ಲಂಕೇಶ, ಅನಂತಮೂರ್ತಿ, ಎ.ಎನ್. ಮೂರ್ತಿರಾಯರು, ಶಿವರಾಮ ಕಾರಂತ, ಎಸ್.ಎಲ್. ಭೈರಪ್ಪ, ಅರವಿಂದ ಮಾಲಗತ್ತಿ, ಸಿದ್ಧಲಿಂಗಯ್ಯ ಇವರುಗಳು ತಮ್ಮ ಬದುಕಿನ ಅನುಭವಗಳನ್ನು ಆತ್ಮಕಥನದ ರೂಪದಲ್ಲಿ ಹೊರತಂದಿದ್ದಾರೆ. ಇವರುಗಳಲ್ಲದೆ ತಮ್ಮ ವೃತ್ತಿಜೀವನದ ಅನುಭವ ದಾಖಲಿಸಿರುವ ಆತ್ಮಕಥನಗಳು ಈ ನಿಟ್ಟಿನಲ್ಲಿ ನಮ್ಮ ಗಮನ ಸೆಳೆಯುತ್ತದೆ.

ಮಹಿಳಾ ಅಭಿವ್ಯಕ್ತಿಯು ಹಲವು ಸಂದರ್ಭದಲ್ಲಿ ಸೀಮಿತ ನೆಲೆಯುಳ್ಳದ್ದು ಎನ್ನವಂತ ಟೀಕೆಗೊಳಗಾಗಿದ್ದರೂ ಜನಪದ ಮಹಾಕಾವ್ಯಗಳಲ್ಲಿ ಮಹಿಳಾ ಸ್ವಗತಗಳು, ಆಕೆಯ ಮನೋಲೋಕದ ಚಿತ್ರಣಗಳನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಹಿಂದಿನಿಂದಲೂ ಹೆಣ್ಣಿಗೆ ಒಂದು ಮಿತಿ ಇದೆ. ಕಷ್ಟ ಸುಖಗಳನ್ನು ಹಂಚಿಕೊಳ್ಳಬಾರದು, ನೋವು ನುಂಗಿ ತಾಳ್ಮೆಯಿಂದ ನಡೆಯಬೇಕು. ತನ್ನ ನಿತ್ಯ ಬವಣೆಯನ್ನೇ ಇತರರೊಂದಿಗೆ ಹಂಚಿಕೊಳ್ಳದ ಹೆಣ್ಣು, ತಲೆಮಾರುಗಳಿಂದ ಅನುಭವಿಸಿದ ಯಾತನೆಯನ್ನು, ವ್ಯವಸ್ಥೆ ತನ್ನ ಮೇಲೆ ಹೇರಿರುವ ಹೇರಿಕೆಯ ಫಲಿತವನ್ನು ಸುಲಭವಾಗಿ ವ್ಯಕ್ತಪಡಿಸಲಾಗುವುದೇ ಎಂಬ ಅಂಶ ನಮ್ಮನ್ನು ಕಾಡುತ್ತದೆ. ಈ ಕಾಡುವಿಕೆಗೆ ಪ್ರತಿಕ್ರಿಯೆ ಎನ್ನುವಂತೆ ಮಹಿಳಾ ಆತ್ಮಕಥೆಗಳು ಕಳೆದ 5–6 ದಶಕಗಳಿಂದ ಹೆಚ್ಚಾಗಿ ಪ್ರಕಟಗೊಳ್ಳುತ್ತಿದೆ. ಹಾಗಾದರೆ ಮಹಿಳಾ ಆತ್ಮಕಥನದ ವೈಶಿಷ್ಟ್ಯವೇನು? ಪುರುಷ ಅಭಿವ್ಯಕ್ತಿಗಿಂತ ಅದು ಹೇಗೆ ಭಿನ್ನ ಎನ್ನುವುದನ್ನು ವಿವರಿಸಿಕೊಳ್ಳಲು ಡಾ. ಎಂ.ಎಸ್. ಆಶಾದೇವಿಯವರ ಈ ಮಾತುಗಳನ್ನು ಉಲ್ಲೇಖಿಸಬಹುದು. "ಬೇರೆ ಬೇರೆ ವಿವರಗಳಿಗೆ ದಕ್ಕದಿರುವ ಸಂಗತಿಗಳನ್ನು ಮಹಿಳಾ ಆತ್ಮಕಥನಗಳು ಸೂಕ್ಷ್ಮವಾಗಿ ಗ್ರಹಿಸಿ ಚಿತ್ರಿಸಿವೆ. ಮಹಿಳಾ ಆತ್ಮಕಥೆಗಳು ಆತ್ಮವನ್ನು ಸೃಷ್ಟಿಮಾಡಿಕೊಳ್ಳುತ್ತವೆ. ಜೊತೆಗೆ ಆತ್ಮಕ್ಕೆ ಹೇಳಿಕೊಳ್ಳುವ ಸ್ವಗತಗಳಾಗಿವೆ. ಅಪಾರ ಶ್ರಮ ಪ್ರೀತಿಯಿಂದ ಕಟ್ಟಿಕೊಳ್ಳುವ ಆತ್ಮಕಥನಗಳಾಗಿವೆ." (vijayakarnatakaindia-times.com ಹೆಗ್ಗೋಡಿನ ನಿನಾಸಂ ಸಂಸ್ಕೃತಿ ಶಿಬಿರ – ಮಹಿಳಾ ಆತ್ಮಕಥೆಗಳಲ್ಲಿ ಸೀಮೋಲ್ಲಂಘನ – ಭಾಷೆ. ಅಕ್ಟೋಬರ್ 12, 2012.

20ನೇ ಶತಮಾನದಲ್ಲಿ ಕಥನ ಪ್ರಕಾರ ಮಹಿಳೆಯರ ಅಭಿವ್ಯಕ್ತಿಯನ್ನು ದಾಖಲಿಸಲು ಬಹು ಮುಖ್ಯ ವೇದಿಕೆಯಾಯಿತು. ಪಾತ್ರಗಳ ಮೂಲಕ ತಮ್ಮ ಅನುಭವವನ್ನು ಬಿಂಬಿಸಿದರು. ಆದರೆ ಆತ್ಮ ಕಥನಗಳು ತೆರೆದ ಹಾಳೆಯಂತೆ, ಅಭಿವ್ಯಕ್ತಿಗೆ ಅಡೆತಡೆಯಿಲ್ಲದೆ, ನಿಖರವಾಗಿ ತಮಗೆ ಅನಿಸಿದುದನ್ನು, ಅಭಿವ್ಯಕ್ತಿಸಿದುದನ್ನು, ವ್ಯಕ್ತಿಪಡಿಸಲು ಅವಕಾಶ ಮಾಡಿಕೊಟ್ಟಿದೆ. ಪೂರ್ಣ ವಿವರಗಳೊಂದಿಗೆ ಅಪೂರ್ಣ ಸಂಗತಿಗಳನ್ನು ಸ್ಪಷ್ಟವಾಗಿ ದಾಖಲು ಮಾಡಲು ಅವಕಾಶವಿರುವ ಪ್ರಕಾರ ಇದಾಗಿದೆ.

ಕೇರಳದಲ್ಲಿ 1870 ರಲ್ಲಿ 'ವೈಕ್ಕಂಪಾಚ್ಚು ಮಾತತು' ಇವರು ತಮ್ಮ ಸ್ವಂತ ಜೀವನ ಘಟನೆಯನ್ನು ಕೃತಿ ರೂಪದಲ್ಲಿ ಹೊರತಂದದ್ದು ಆತ್ಮಕಥೆಯ ಮೊದಲ ದೃಷ್ಟಾಂತವೆನ್ನುವುದು 'ಮಲಯಾಳಂ ಸಾಹಿತ್ಯ ಚರಿತ್ರೆ'ಯ ಅಧ್ಯಯನದಿಂದ ತಿಳಿದು ಬಂದಿರುವ ಸಂಗತಿಯಾಗಿದೆ. ಬಿ. ಕಲ್ಯಾಣಿ ಅಮ್ಮ ಅವರ 'ವ್ಯಾಳವಟ್ಟ ಸ್ಮರಣಗಳ್', ಈ.ವಿ. ಕೃಷ್ಣ ಪಿಳ್ಳೈಯವರ 'ಸ್ಮರಣ ಮಂಡಲ' ಕೆ.ಎಂ. ಪಣಿಕ್ಕರರ 'ಆತ್ಮಕಥ', ಸಿ. ಕೇಶವನ್‌ರವರ 'ಜೀವಿತ ಸಮರಂ', ಕೆ.ಪಿ. ಕೇಶವಮೆನನ್ನರ 'ಕಳಿಞ್ಞಕಾಲಂ' ಹೀಗೆ ಈ ಹಲವು ಆತ್ಮಕಥನಗಳು ಆರಂಭದ ಹಂತದಲ್ಲಿ ಬಂದದ್ದಾಗಿದೆ. 1970ರ ದಶಕದ ನಂತರ ಮಲಯಾಳಂ ಮಹಿಳಾ ಆತ್ಮಕಥನದ ವೈವಿಧ್ಯತೆಯನ್ನು ಕಾಣಬಹುದಾಗಿದೆ.

'ಆ್ಯನಿತಯ್ಯಿಲ್ ರವರ 'ಇಡಞ್ಞಳಿಯಲೆ ಕುಂಶು' (ಸೇರಿನೊಳ ಗಣ ಶಿಲುಬೆ) ಈ ಆತ್ಮಕಥೆಯಲ್ಲಿ ಚರ್ಚಿನ ಸಾಂಪ್ರದಾಯಿಕ ನೀತಿಗಳು ಹಾಗೂ ಪುರುಷ ಪ್ರಧಾನಧಾರೆಗಳು ಆಕೆಯನ್ನು ಹಿಂಸಿಸಿದ ವಿವರವನ್ನು ನೀಡುತ್ತಾರೆ. ಚರ್ಚಿನಿಂದ ಬಹಿಷ್ಕೃತಳಾದ ಒಬ್ಬ ಲೇಖಕಿಯ ಜೀವನ ಚಿತ್ರಣ ಅಲ್ಲಿ ಕಾಣಬರುತ್ತದೆ.

ನಕ್ಸಲ್ ಬಾರಿ ಚಳುವಳಿಯಲ್ಲಿ ಭಾಗವಹಿಸಿದ ಅಜಿತಾ ಅವರು ಓರ್ವ ಕ್ರಾಂತಿಕಾರಿ ಮಹಿಳೆ. ಅವರು ಅನುಭವಿಸಿದ ಜೈಲುಶಿಕ್ಷೆ, ಜೈಲಿನೊಳಗೆ ಅನುಭವಿಸಿದ ದಬ್ಬಾಳಿಕೆ, ಮಹಿಳಾ ಕೈದಿಗಳ ಮೇಲಿನ ದಬ್ಬಾಳಿಕೆಯನ್ನು 'ಓರ್ಮಕ್ಕುರಿಪ್ಪುಗಳ್' (ನೆನಪಿನ ಬರಹಗಳು) ಹೆಸರಿನಲ್ಲಿ 1982ರಲ್ಲೇ ಪ್ರಕಟಗೊಳಿಸಿದ್ದಾರೆ.

ಮಲಯಾಳಂನ 'ನಳಿನಿ ಜಮೀಲಾ' ಅವರ ಆತ್ಮಕಥೆ 'ಒರು ಲೈಂಗಿಕ ತೊಳಿಲಾಳಿಯುಡೆ ಆತ್ಮಕಥೆ' (ಲೈಂಗಿಕ ವೃತ್ತಿನಿರತಳೊಬ್ಬಳ ಆತ್ಮಕಥನ) ಸ್ವತಃ ವೇಶ್ಯೆಯಾಗಿದ್ದು ಕೊಂಡ ಈಕೆ ಆತ್ಮಕಥನವನ್ನು ರಚಿಸಿದ್ದಾರೆ. ಕೆ. ನಾರಾಯಣಸ್ವಾಮಿ, ಗೌರಿಬಿದನೂರು ಅವರು ಈ ಆತ್ಮಕಥನವನ್ನು 'ಸೆಕ್ಸ್‌ವರ್ಕರ್ ಒಬ್ಬಳ ಆತ್ಮಕಥನ' ಎಂದು ಕನ್ನಡಕ್ಕೆ ಅನುವಾದಿಸಿ ಸೃಷ್ಟಿ

ಪಬ್ಲಿಕೇಷನ್‌ರವರ ಮೂಲಕ ಪ್ರಕಟಿಸಿದ್ದಾರೆ. ಈ ಪುಸ್ತಕದ ಅನುವಾದದ ಸಂದರ್ಭದ ಅನುವಾದಕರ ಮಾತುಗಳು ಇಂತಿವೆ. "ಕನ್ನಡ ಸಾಹಿತ್ಯದ ಪ್ರಗತಿಶೀಲರು ತಮ್ಮ ಕತೆ, ಕಾದಂಬರಿಗಳಲ್ಲಿ ವೇಶ್ಯೆಯರ ಬರಹ ಅವರ ಬದುಕಿನ ಬಗ್ಗೆ ಅನುಕಂಪದಿಂದ ಬರೆದರಾದರೂ ಅಲ್ಲಿ ಎದ್ದು ಕಾಣುವುದು ಅನುಕಂಪ ಮಾತ್ರ, ಆದರೆ ಆ ಬದುಕನ್ನೇ ಅನುಭವಿಸಿದ ದಾರುಣತೆ ನಮಗೆ ಸಿಗುವುದು ಸೆಕ್ಸ್‌ವರ್ಕರ್ ಒಬ್ಬಳ ಆತ್ಮಕಥನದಲ್ಲಿ ಮಾತ್ರ" (beta.sampada.net) ಎನ್ನುತ್ತಾರೆ.

'ಮಾಧವಿಕುಟ್ಟಿ ಎಂಬ ಅಂಕಿತನಾಮದಿಂದ ಮಲಯಾಳದಲ್ಲಿ ಕಥೆ, ಕಾದಂಬರಿಗಳನ್ನು ಬರೆದ ಇಂಗ್ಲಿಷ್‌ನ ಪ್ರಸಿದ್ಧ ಕವಯತ್ರಿ ಕಮಲಾದಾಸ್ ಅವರು ತಮ್ಮ ಬಹುವಿವಾದಿತ ಆತ್ಮಕಥೆ 'My story' ಯ ನಂತರ ತಮ್ಮ ಬದುಕಿನ ಬೇರೆ ಬೇರೆ ಘಟ್ಟಗಳ ಕುರಿತು ಐದು ಬೇರೆ ಬೇರೆ ಕೃತಿಗಳಲ್ಲಿ ನಿರೂಪಿಸಿದ್ದಾರೆ. 'ಬಾಲ್ಯಕಾಲ ಸ್ಮರಣಗಳ್' (ಬಾಲ್ಯಕಾಲದ ಸ್ಮರಣೆಗಳು) 'ವರ್ಷಙ್ಙಳ್ಕು ಮುಂಬ್' (ವರ್ಷಗಳ ಹಿಂದೆ) 'ನೀರ್‌ಮಾದಳಂಪೂತ್ತಕಾಲಂ' (ನೀರ್‌ಮಾದಳ ಹೂ ಬಿಟ್ಟ ಕಾಲ) ಒಟ್ಟಯಡಿ ಪಾದ (ಕಾಲುದಾರಿ) ಮತ್ತು ಡೈರಿಕ್ಕುರಿಪ್ಪುಗಳ್ (ಡೈರಿ ಬರಹಗಳು) ಇವೇ ಆ ಐದು ಕೃತಿಗಳು'

ಪ್ರಸ್ತುತ ಪ್ರಬಂಧ ರಚನೆಯ ಸಂದರ್ಭದಲ್ಲಿ ಕಮಲಾದಾಸ್‌ರವರ ಮೂರು ಪ್ರಾತಿನಿಧಿಕ ಆತ್ಮಕಥನಗಳನ್ನು ಪರಿಗಣಿಸಿ ಕಮಲಾದಾಸ್‌ರವರ ಹುಟ್ಟು, ಬಾಲ್ಯ, ಶಿಕ್ಷಣ, ಬರವಣಿಗೆಗೆ ಇದ್ದ ಪ್ರೇರಣೆ-ಪ್ರತಿಕ್ರಿಯೆ ಈ ಅಂಶಗಳನ್ನು ಗಮನಹರಿಸಲಾಗುವುದು. ಅಧ್ಯಯನಕ್ಕೊಳಪಡಿಸಿರುವ ಕನ್ನಡದ ಮತ್ತೊಬ್ಬ ಲೇಖಕಿಯಾದ ವೀಣಾಶಾಂತೇಶ್ವರ ಅವರ ಆತ್ಮಕಥನವು ರಚನೆಯಾಗಿಲ್ಲ, ಬದಲಿಗೆ 'ಲೇಖ-ಲೋಕ' 2 (ಮಹಿಳಾ ಸಾಹಿತ್ಯ : ಒಂದು ಆತ್ಮಕಥಾನಕ) ನಾಗಮಣಿ ಎಸ್.ರಾವ್‌ರವರ ಈ ಪುಸ್ತಕವು ಕರ್ನಾಟಕ ಲೇಖಕಿಯರ ಸಂಘದಿಂದ ಪ್ರಕಟಗೊಂಡಿದೆ. ವೀಣಾರವರ ಅಭಿನಂದನಾ ಗ್ರಂಥ ನಿರ್ದಿಗಂತ ಹಾಗೂ ಐದಿನೆಯ ಕರ್ನಾಟಕ ಲೇಖಕಿಯ ಸಮ್ಮೇಳನ ಅಧ್ಯಕ್ಷರಾದ ವೀಣಾಶಾಂತೇಶ್ವರ ಅವರ ಪರಿಚಯ ಪುಸ್ತಕ 'ವಿಶೇಷ ಲೇಖಕಿ' ಪುಸ್ತಕವನ್ನು ಗಮನಿಸಿ ಅವರ ಬದುಕಿನ ಬರವಣಿಗೆಯನ್ನು ತೌಲನಿಕವಾಗಿ ನೋಡುವ ಪ್ರಯತ್ನ ಮಾಡಿದ್ದೇನೆ. ಕಮಲಾದಾಸ್‌ರವರ ಬಾಲ್ಯಕಾಲದ ಸ್ಮರಣೆಗಳು, ಬಹುಚರ್ಚೆಗೊಳಗಾದ 'ನನ್ನ ಕಥೆ' ಹಾಗೂ ಹದಿಹರೆಯದ ಹಂತದ ಆತ್ಮಕಥನದ 'ನೀರ್‌ಮಾದಾಳ ಹೂ ಬಿಟ್ಟ ಕಾಲ'ವನ್ನು ವಿಶ್ಲೇಷಿಸುತ್ತಿದ್ದೇನೆ.

ಕುಟುಂಬ, ಬಾಲ್ಯ, ಶಿಕ್ಷಣ :

ಉಭಯ ಲೇಖಕಿಯರು ಕನ್ನಡ ಮತ್ತು ಮಲಯಾಳಂ ಸಾಹಿತ್ಯ ಸಂದರ್ಭದಲ್ಲಿ ಏಕಕಾಲಘಟ್ಟದಲ್ಲಿ ಬರೆದವರು. ವೀಣಾ ಶಾಂತೇಶ್ವರ ಅವರೇ ಹೇಳಿಕೊಳ್ಳುವಂತೆ "ನನ್ನ ಕೌಟುಂಬಿಕ ಹಿನ್ನೆಲೆ, ಬಾಲ್ಯ, ಶಿಕ್ಷಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರ, ಇವುಗಳ ಬಗ್ಗೆ ಹಿಂದಿರುಗಿ ನೋಡಿದಾಗೆಲ್ಲ ನನಗೆ ನನ್ನ ಅನೇಕ ಸಮಕಾಲೀನ ಹೆಣ್ಣು ಮಕ್ಕಳಿಗಿಂತ ನಾನು ಬಹಳಷ್ಟು ಹೆಚ್ಚಿನ ಅನುಕೂಲಗಳನ್ನು ಹೊಂದಿದ್ದೆ ಅನ್ನಿಸುವುದು." (ಲೇಖಾಲೋಕ:106) ಸುಸಜ್ಜಿತ ಬಾಲ್ಯ ಇಬ್ಬರೂ ಲೇಖಕಿಯರಿಗೂ ಒದಗಿ ಬಂದಿದ್ದು ಜೀವನ ಚಿತ್ರಣದಿಂದ ತಿಳಿದು ಬರುತ್ತದೆ.

ಕಮಲಾದಾಸ್ 1934 ಮಾರ್ಚ್ 31 ರಂದು ಕೇರಳದ ಫಾಲ್ಘಾಟ್ ಜಿಲ್ಲೆಯ ಪುನ್ನಯೂರ್ಕುಳದಲ್ಲಿ ಇವರು ಜನಿಸಿದರು. ಹಳೆಯ ತಲೆಮಾರಿನ ಪ್ರಸಿದ್ಧ ಕವಯತ್ರಿ ಬಾಲಮಣಿಯಮ್ಮ ಮತ್ತು ಎಂ.ವಿ. ನಾಯರ್‌ರವರ ಪುತ್ರಿ. ಕಮಲಾದಾಸ್ ತಮ್ಮ ಹದಿನೈದನೆ ವಯಸ್ಸಿನಲ್ಲೇ ರಿಸರ್ವ್ ಬ್ಯಾಂಕ್ ಉದ್ಯೋಗಿಯಾಗಿದ್ದ ಮಾಧವ ದಾಸ್ ಅವರನ್ನು ಮದುವೆಯಾದರು. ಅಜ್ಜಿಯ ಪ್ರೀತಿ, ನಾಲಪ್ಪಾಟು ಮನೆಯ ಅನುಭವ ಲೋಕ, ಸಣ್ಣ ವಯಸ್ಸಿನಲ್ಲೇ ಕಮಲಾ ಲೋಕವನ್ನು ಗ್ರಹಿಸಿದ ರೀತಿ, ಸಾಹಿತ್ಯದಲ್ಲಿ ಸೂಕ್ಷ್ಮತೆಯನ್ನು ತರಲು ಕಾರಣವಾಯಿತು.

ವಸಾಹತೋತ್ತರ ಸಂದರ್ಭದಲ್ಲಿ ಬಾಳಿ ಬದುಕಿದ ದ್ರಾವಿಡದ ಬಹುಮುಖ್ಯ ಭಾಷಿಗರ ಸಂಕ್ರಮಣ ಕಾಲದ ದಟ್ಟ ಅನುಭವ ಇಬ್ಬರು ಲೇಖಕಿಯರಲ್ಲೂ ಮೂಡಿ ಬಂದಿದೆ. ಆಧುನಿಕತೆ, ನವೋದಯ ಪ್ರಜ್ಞೆಯ ತಾಕಲಾಟ, ವಸಾಹತೀಕರಣದ ಸಂದರ್ಭದಲ್ಲಿನ ಬಾಲ್ಯ, ಸಂಪ್ರದಾಯದ ದ್ವಂದ್ವ ಇವೆಲ್ಲವನ್ನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿದ ಬದುಕು ಲೇಖಕಿಯರದು. ಕೌಟುಂಬಿಕ ಹಿನ್ನಲೆ, ಪ್ರಗತಿಪರ ಆಲೋಚನೆ, ಬದುಕನ್ನು ಗ್ರಹಿಸಿದ ರೀತಿ, ಬರವಣಿಗೆಗೆ ಪ್ರೇರಣೆ ನೀಡಿದೆ.

ಹೆಣ್ಣಿನ ಬದುಕು ಜೀವನ ಕ್ರಮವನ್ನು ಸೂಕ್ಷ್ಮವಾಗಿ ಗಮನಿಸುವ ಪ್ರಜ್ಞೆ ವೀಣಾ ಅವರಿಗೆ ಆರಂಭದಿಂದಲೇ ರಕ್ತಗತವಾಗಿ ಬಂದದ್ದು, ಅದೇ ರೀತಿ ಕಮಲಾದಾಸ್‌ರವರ ಬಾಲ್ಯ ವಿಭಿನ್ನ ಲೋಕಾನುಭವ, ನಾಲಪ್ಪಾಟ ಕುಟುಂಬದಲ್ಲಿ ಕಂಡ ಹೆಣ್ಣಿನ ಜೀವನ ಚಿತ್ರಗಳು. ಅಜ್ಜಿಯ ಜೊತೆಗಿನ ಒಡನಾಟ, ಬದುಕಿಗೆ ತಮ್ಮನ್ನು ಅರ್ಪಿಸಿಕೊಂಡ ರೀತಿ ಕಮಲಾದಾಸ್ ಬರವಣಿಗೆ ಹೊಸ ಲಯವನ್ನು ತಂದಿತೆನ್ನಬಹುದು.

ಪ್ರತಿಭೆ ಬಾಲ್ಯದಿಂದಲೇ ಮೈಗೂಡಿರುವುದಕ್ಕೆ ಸಾಕ್ಷಿಯಾಗಿ ವೀಣಾರವರು ತಮ್ಮ ನಾಲ್ಕನೇ ವಯಸ್ಸಿನಲ್ಲಿ ಸಾಹಸಿ ರಾಜಕುಮಾರಿಯ ಕತೆ ಬರೆದರು. ರಾಕ್ಷಸನೊಬ್ಬನ ಬಳಿ ರಾಜಕುಮಾರ ಬಂದಿಯಾಗಿದ್ದ. ಆತನನ್ನು ಬಿಡಿಸಿಕೊಂಡು ಬಂದವಳು ರಾಜಕುಮಾರಿ. ಆರಂಭದಲ್ಲಿ ವೀಣಾ ಅವರು ಸಾಹಸಿ ಹೆಣ್ಣಿನ ಕತೆಗಳನ್ನು ಬರೆದಿದ್ದಾರೆ. ನಂತರ ದಿನಗಳಲ್ಲಿ ಮಾಸ್ತಿ, ನಿರಂಜನ, ಅಡಿಗರು, ದೇಸಾಯಿ, ಇಬ್ಸನ್, ಎಲಿಯಟ್, ಸಾರ್ತೆ, ಕಮು ಇತ್ಯಾದಿ ಲೇಖಕರ ಪ್ರಭಾವಕ್ಕೊಳಗಾದರು. ಮುಂದಿನ ದಿನಗಳಲ್ಲಿ ಹೆಣ್ಣಿನ ಬದುಕಿನ ನಿರ್ವಚನದ ಕಡೆಗೆ ಅವರ ಗಮನ ಹರಿಯಿತು, ಸಾಮಾಜಿಕವಾಗಿ, ಕೌಟುಂಬಿಕವಾಗಿ ಹೆಣ್ಣಿನ ಬದುಕಿಗಿದ್ದ ಅಡೆತಡೆಗಳು ಕತೆಗಳಲ್ಲಿ ವ್ಯಕ್ತಗೊಂಡವು.

ಕಮಲಾದಾಸರ 'ಅವಳ ಹಣೆ ಬರಹ' ಕತೆಯು ಅವರ ಹತ್ತನೇ ವಯಸ್ಸಿನಲ್ಲಿ ಬದುಕನ್ನು ಗ್ರಹಿಸಿದ ರೀತಿಯನ್ನು ಕಾಣಬಹುದು. ಸುಮುಖಿ ಆಶ್ವಾಸನರ ಪ್ರೇಮ, ವಿಧಿಯ ಕೈಯಲ್ಲಿ ನಮ್ಮ ಬದುಕು ಎತ್ತ ಕಡೆಯಾದರೂ ಕೊಂಡೊಯ್ಯಬಹುದೆಂಬ ಜೀವನಾನುಭವದ ಸತ್ಯವನ್ನು ಬಾಲ್ಯದಲ್ಲೇ ಕತೆಯ ಮೂಲಕ ಚಿತ್ರಿಸಿರುವುದು ಗಮನಿಸಬಹುದಾದ ಸಂಗತಿಯಾಗಿದೆ. ಕಮಲಾ ಮನಸಿನಲ್ಲಿ ಮೂಡುವ ಹಲವು ಪ್ರಶ್ನೆಗಳಿಗೆ ಉತ್ತರ ಸಿಗುತ್ತಿದ್ದುದು ತಂದೆ, ತಾಯಿಯಿಂದಲ್ಲ. ಬ್ರಿಟೀಷ್ ಕಂಪನಿಯ ದೊಡ್ಡ ಹುದ್ದೆಯ ಕಾರ್ಯ ನಿರ್ವಹಿಸುತ್ತಿದ್ದ ಅಪ್ಪನಿಗಾಗಲೀ, ಸದಾ ಬೋರಲು ಮಲಗಿ ಕಾವ್ಯ ರಚಿಸುತ್ತ ಪರಂಪರೆಯೊಳಗಿನ ಹೆಣ್ಣಿನ ಚಿತ್ರಣ ಕಟ್ಟಿಕೊಡುತ್ತಿದ್ದ ಅಮ್ಮನಿಂದಾಗಲೀ ಅಲ್ಲ. ಕಮಲಾಳ ಭಾವುಕಲೋಕದ ಪರಿಚಯವಿರುವಂತೆ ಕಂಡಿಲ್ಲ ಬದಲಿಗೆ ಅವಳಿಗೆ ಜೊತೆಯಾಗಿ ಸಿಗುತ್ತಿದ್ದವರು ಅವರನ್ನು ನೋಡಿಕೊಳ್ಳುತ್ತಿದ್ದ ಆಯಾ ತ್ರಿಪುರ, ಅಡುಗೆಯ ನಾರಾಯಣ ನಾಯರ್, ಜವಾನ ಕುಞ್ಞತ್ತು, ಆಯಾ ಪಾರುಕುಟ್ಟಿ, ಡ್ರೈವರ್ ನರೇಶ್ ಇವರುಗಳು ಕಮಲಾಳ ಬಾಲ್ಯದ ಎಲ್ಲಾ ಕುತೂಹಲಗಳಿಗೆ ಉತ್ತರ ನೀಡಿದವರು ನಾಲಪ್ಪಾಟ್ ಮನೆ ಅದರ ಸುತ್ತಲಿನ ಲೋಕದ ಅನುಭವ ಕಮಲಾ ಅವರನ್ನು ಕಾಡಿತ್ತು. ಕಮಲಾದಾಸ್ ಅತಿ ಭಾವುಕರು, ಅವರ ಭಾವುಕತೆಗೆ ಸಾಕ್ಷಿ ಅವರನ್ನೇ ಅಳಿಸಿದ ಅವರ ಕವನಗಳು, ಆಕೆ ಆರು ವರ್ಷದವಳಿದ್ದಾಗ ಆಕೆಯ ಸೋದರನಿಗೆ ಹಸ್ತಪ್ರತಿ ಹೊರಡಿಸುವ ಯೋಚನೆ ಮೂಡಿತು. "ತಲೆಕಳೆದುಕೊಂಡ ಅನಂತ ಕಾಲದವರೆಗೂ ಹಾಗೆಯೇ ಇರಬೇಕಾದ ಗೊಂಬೆಗಳ ಕುರಿತು ದುಃಖ ಕವನಗಳನ್ನು ಬರೆದೆ, ನನ್ನ ಪ್ರತಿಯೊಂದು ಕವನವೂ ನನ್ನನ್ನು ಅಳಿಸಿತು." (ನನ್ನ ಕಥೆ:15) ಎನ್ನುತ್ತಾರೆ.

ಅಲಕ್ಷಿಸಲ್ಪಟ್ಟ ಬಾಲ್ಯದಲ್ಲಿ ಅಪಾರ ಅನುಭವಗಳ ಲೋಕದ ಕಮಲಾದಾಸ್ ಬರವಣಿಗೆಯಲ್ಲಿ ತೊಡಗಿದರೆ, ಸುರಕ್ಷಿತ ಬಾಲ್ಯದಲ್ಲಿ, ಪ್ರಗತಿಪರ ವಿಚಾರಗಳಿಂದ ಪ್ರಭಾವಿತರಾದ ವೀಣಾರವರು ಬರೆಯ ತೊಡಗಿದ ಸಂದರ್ಭವೇ ಬೇರೆಯಾಗಿತ್ತು. ಮೇಲ್ನೋಟಕ್ಕೆ ಸೌಲಭ್ಯಯುತವಾದ ಬಾಲ್ಯ ಎಂದು ಕಮಲಾದಾಸ್‌ರವರಿಗೆ ಎನಿಸಿದರೂ, ಭಾವುಕರಾಗಿ ಕಮಲಾದಾಸ್ ವಿಶಿಷ್ಟವಾಗಿ ಕಾಣಬರುತ್ತಾರೆ. ಬದುಕಿನಲ್ಲಿ ಎದುರಾಗುವ ಅಪೂರ್ಣತೆ ಅವರನ್ನು ಕಾಡಿದೆ.

ವೀಣಾರವರ ತಂದೆ ಕರ್ನಾಟಕದವರು, ತಾಯಿ ಮಹಾರಾಷ್ಟ್ರದವರಾಗಿದ್ದರು. ತಂದೆ ಕೆಮಿಸ್ಟ್ರಿ ಪ್ರೊಫೆಸರ್, ಉಚ್ಚ ಬ್ರಾಹ್ಮಣಕುಲದ ಪರಂಪರೆಯೊಂದಿಗೆ ಸುಸಂಸ್ಕೃತರಾಗಿ ಬೆಳೆದವರು. ಕೇವಲ ಮರಾಠಿ ಭಾಷೆ ತಿಳಿದಿದ್ದ ತಾಯಿ ಮದುವೆಯ ನಂತರ ಕನ್ನಡ, ಇಂಗ್ಲಿಷ್‌ನ್ನು ಕಲಿತರು. ವೀಣಾರವರೇ ಹೇಳಿಕೊಳ್ಳುವ ಹಾಗೆ ಓದಿನ ಬಗ್ಗೆ ಬಾಲ್ಯದಲ್ಲಿ ಪ್ರೀತಿ ಹುಟ್ಟಿಸಿ ಪ್ರಗತಿಪರ ವಿಚಾರಗಳನ್ನು ಮುಂದೆ ಶೈಕ್ಷಣಿಕ ಸಾಧನೆಗೆ ಪೂರಕವಾದ ವಾತಾವರಣವೇ ಇದ್ದುದರಿಂದ ಎಂ.ಎ, ಎಂ.ಲಿಟ್, ಪಿಎಚ್.ಡಿ. ಪದವಿಯನ್ನು ಗಳಿಸಿದರು. ಹಿಂದಿಯಲ್ಲಿ ರಾಷ್ಟ್ರಭಾಷಾ ವಿಶಾರದ ಮತ್ತು ಫ್ರೆಂಚ್ ಭಾಷೆಯನ್ನು ಕಲಿತರು. "ಮಹಿಳೆ ಸ್ವಯಂ ಪರಿಪೂರ್ಣಳಾಗಿ, ಧೈರ್ಯವಂತಳಾಗಿ ತನ್ನ ಅಸ್ತಿತ್ವದ ಉಳಿವಿಗಾಗಿ ಹೋರಾಡಬೇಕು ಎಂದು ಹೇಳುತ್ತಿದ್ದ ತಾಯಿ, ಬುದ್ಧಿ, ಚಾರಿತ್ರಿಕ ವಿದ್ಯೆ, ಮಾನವೀಯ ಮೌಲ್ಯಗಳಲ್ಲಿ ಹೆಣ್ಣೇ ಗಂಡಿಗಿಂತ ಉತ್ತಮಳು ಎಂದು ಹೇಳುತ್ತಿದ್ದ ತಂದೆ. ಇಂತಹ ಪರಿಸರದಲ್ಲಿ ಬೆಳೆದ ವೀಣಾ ಬದುಕು ಹಾಗೂ ಬರಹಗಳಲ್ಲಿ ಮಹಿಳಾ ಸ್ವಾತಂತ್ರ್ಯ ಹಾಗೂ ಸಮಾನತೆಯಲ್ಲಿ ಗಾಢ ನಂಬಿಕೆ ಬೆಳೆಸಿಕೊಂಡು." (ವಿಶೇಷ ಲೇಖಕಿ) ಶೈಕ್ಷಣಿಕವಾಗಿ, ಮಾನಸಿಕವಾಗಿ ವೀಣಾ ಅವರಿಗೆ ಮಹಿಳಾ ಬರವಣಿಗೆಯ ಕಡೆಗೆ ಒಲವು ತೋರುವ ಎಲ್ಲಾ ಪೂರಕ ಸಂದರ್ಭವೂ ಒದಗಿಬಂದಿತು. ಸಂಪ್ರದಾಯವನ್ನು ಎದುರಿಸುವ ಎಲ್ಲಾ ಹೆಣ್ಣಿನ ವಿವಿಧ ಸಂದರ್ಭವನ್ನು ಸಾಹಿತ್ಯದಲ್ಲಿ ಮೂಡಿಸಿದರು.

ಕಮಲಾದಾಸ್ ಅವರು ಬಾಲ್ಯದಲ್ಲೇ ಗಾಂಧೀಜಿಯವರ ಪ್ರಭಾವವನ್ನು ಕಣ್ಣಾರೆ ಕಂಡವರು. ಅಪ್ಪ, ಅಮ್ಮನಿಗೆ ಖಾದಿ ತೊಡಲು ಹೇಳುತ್ತಿದ್ದರು. ಕಮಲಾದಾಸ್‌ರವರ ತಂದೆ ಆಕೆಗೆ ಒಂಭತ್ತನೇ ವಯಸ್ಸಿದ್ದಾಗಲೇ ಬೋರ್ಡಿಂಗ್ ಸ್ಕೂಲಿಗೆ ಸೇರಿಸಿದರು. ಸಿಸ್ಟರ್ ಫಿಲೋಮಿನಾ ಜೊತೆಗೆ ಒಳಹೋದಾಗ ಅದುವೇ ಆಕೆಗೆ ಭಿನ್ನ ಅನುಭವಲೋಕವಾಗಿತ್ತು. ಬಾಲ್ಯದ ಆರಂಭದ ದಿನದಲ್ಲಿ ನಾಲಪ್ಪಾಟ್ ಮನೆಯ ಒಡನಾಟ, ಬೋರ್ಡಿಂಗ್ ಸ್ಕೂಲ್, ಕುತೂಹಲವಾದ ಬದುಕನ್ನು ಗ್ರಹಿಸಲು ಹೊರಟ ಕಮಲಾದಾಸ್‌ರವರಿಗೆ ಪ್ರತಿ ಹಂತದಲ್ಲೂ ಹೆಣ್ಣಿನ ಬದುಕಿನ ಜೀವನ ವಿಧಾನ

ಗಮನಕ್ಕೆ ಬರುತ್ತಿತ್ತು. ಆದರೆ ಇವರು ಸ್ತ್ರೀಪರ ಕಾಳಜಿಯಲ್ಲೇ ಬರೆಯಬೇಕೆಂದು ಹೊರಟವರಲ್ಲ, ಜೀವನ ಪ್ರೀತಿಯ ಲೇಖಕಿ ಕಮಲಾದಾಸ್ ಉಪನ್ಯಾಸಕಿಯಾಗಿ ವೀಣಾಶಾಂತೇಶ್ವರ ಅವರು ವೃತ್ತಿ ಜೀವನ ಹಾಗೂ ಕೌಟುಂಬಿಕ ಜೀವನದ ಜೊತೆಗೆ ಬರವಣಿಗೆಗೆ ತೊಡಗಿದವರು. ಕಮಲಾದಾಸ್ ತಮ್ಮ ಹದಿನೈದನೆಯ ವಯಸ್ಸಿನಲ್ಲಿ ವಿವಾಹವಾದರು. ಅವರ ಮತ್ತು ದಾಸ್ ಜೊತೆಗಿನ ಒಡನಾಟ ಫಲಕಾರಿಯಾಗಿರಲಿಲ್ಲ. ಹಾಗೆಂದು ಅವರ ದಾಂಪತ್ಯ ಮುರಿದು ಹೋಗುವಂತದ್ದು ಆಗಿರಲಿಲ್ಲ. ಈ ಮಾನಸಿಕ ತಹತಹಿಕೆ, ಪ್ರೀತಿಗಾಗಿ ನಡೆಸಿದ ಹುಡುಕಾಟವೇ ಸಾಹಿತ್ಯವಾಯಿತು. ಬದುಕನ್ನು ಆತ್ಮೀಯವಾಗಿ ಕಂಡವರು ಕಮಲಾದಾಸ್. ಇಬ್ಬರ ಕಥನದಲ್ಲೂ ಶೋಷಿತ ಸ್ತ್ರೀತ್ವದ ವರ್ಣನೆ ಇದೆ. ಹೆಣ್ಣು ಅನುಭವಿಸುವ ಮಾನಸಿಕ / ದೈಹಿಕ ಯಾತನೆಯನ್ನು ಇಬ್ಬರು ಲೇಖಕಿಯರು ಪಾರದರ್ಶಕವಾಗಿ ಚಿತ್ರಿಸಿದ್ದಾರೆ.

"ಮೌನ ಬಂಗಾರದಾಭರಣ ತೊಟ್ಟು
ತೂಗಿ ಆಡುವ ಮಾತು
ತುಟಿಜಾರದೆಚ್ಚರ ಹೆಜ್ಜೆ
ಇಟ್ಟಡೆಯಲ್ಲಿ ತನ್ನತನ ಛಾಪೊತ್ತಿ
ಹೆಣ್ಣು ಮೃದು ದನಿಯಲ್ಲೇ ಗಂಡಿನಾಳಿಕೆ
ಜರೆದ ಸ್ತ್ರೀಕುಲ ಪಕ್ಷಪಾತಿ"
(ನಿರ್ದಿಗಂತ:03)
ಸುಮಿತ್ರಾ ಮೋತಿಲಾಲ ಹವಲಾಯಿ

ಈ ಸಾಲುಗಳು ಇಡೀ ಭಾರತೀಯ ಸ್ತ್ರೀ ಬರವಣಿಗೆಯ ಪ್ರತೀಕವಾಗಿದೆ. ಕಮಲಾದಾಸ್ ಒಮ್ಮೆ ಶಾಲಾ ಪ್ರವಾಸಕ್ಕೆ ತೆರಳಿದಾಗ ಸಿಂಹದ ಬೋನಿನೊಳಗೆ ಹೋಗಿ ಬರಬೇಕಾದ ಪ್ರಸಂಗ ಬರುತ್ತದೆ. ಹೊಟ್ಟೆ ತುಂಬಿದ ಸಿಂಹ ನಮ್ಮನ್ನು ಏನು ಮಾಡಲಾರದೆಂಬ ಧೈರ್ಯ ಅವರದು. ಅಂತೆಯೇ ಇಬ್ಬರು ಲೇಖಕಿಯರು ಸ್ತ್ರೀ ಬರವಣಿಗೆಯ ಬಗೆಗಿನ ಹಸಿವೆ ನೀಗಿಸಲು ಸಾಹಿತ್ಯದ ಮೂಲಕ ಪ್ರಯತ್ನ ಪಟ್ಟವರು. ಸ್ತ್ರೀ ಅಸಮಾನತೆಯ ಬಗೆಗೆ ಮೂಡಿದ ಅಸಮತೋಲನದ ಬಗ್ಗೆ ಎಚ್ಚರವಹಿಸುವಂತೆ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ.

ವೀಣಾ ಹಾಗೂ ಕಮಲಾ ಇಬ್ಬರೂ ಪ್ರತಿಭೆಯುಳ್ಳವರು ಬಾಲ್ಯದಲ್ಲಿಯೇ ರಂಗಕ್ರಿಯೆಯ ಮೂಲಕ ಸಹೃದಯರನ್ನು ಸೆಳೆದ ಕಲಾವಿದರು. ವೀಣಾ ಅವರಿಗೆ ಚಿತ್ರಕಲೆ, ನಾಟಕ, ಸಂಗೀತ ಮತ್ತು ಕೊಳಲು ನುಡಿಸುವುದರಲ್ಲಿ ಆಸಕ್ತಿ ಹಾಗೆಯೇ ಕಮಲಾ ಅವರಿಗೂ ಅಭಿನಯದಲ್ಲಿ ಆಸ್ಥೆಯಿತ್ತು. ಇದಕ್ಕಾಗಿ ಕಮಲಾದಾಸ್‌ರವರ ಸೋದರ ಮತ್ತು ಸ್ನೇಹಿತರ ಸಹಾಯದಿಂದ 'ಛೆನ್ನರಿ

ಮಕ್ಕಳ ಡ್ರಾಮೇಟಿಕ್ ಸೊಸೈಟಿಯನ್ನು ಸ್ಥಾಪಿಸಿದರು. ನಾಲಪ್ಪಾಟ್ ಮನೆಯಲ್ಲೇ ನಾಟಕಗಳನ್ನು ಆಡಿದರು. ಕಮಲಾ ಅಭಿನಯಿಸಿದ ಮೊದಲ ನಾಟಕ 'ವಿಕ್ಟರ್ ಹ್ಯಾಗೋ' ಬರೆದ 'ಲೇ ಮಿಸ್ಟರ್ ಬಲ್ಸನ್' ಇದರಲ್ಲಿ ಅಹಂಕಾರಿ ಮಗಳಾಗಿ 'ಎಪೊನ್ಯೆನ್‌ಳ ಪಾತ್ರ ವಹಿಸಿದ್ದರು.

ವೀಣಾ ಕಾಲೇಜಿನಲ್ಲಿ Golden Jubilee ಸಂದರ್ಭದಲ್ಲಿ ಡಾ. ಕಲಘಟಿಯವರ ನೇತೃತ್ವದಲ್ಲಿ 'The Refund' ಎಂಬ ಇಂಗ್ಲಿಷ್ ನಾಟಕ ಮಾಡಲು ತಯಾರಿಗಿತ್ತು. ಕನ್ನಡದ ಒಂದು ಪ್ರಯೋಗ ಮಾಡಬೇಕೆಂಬ ಛಲದಿಂದ 'ವರಪರೀಕ್ಷೆ' ಎಂಬ ನಾಟಕವಾಡಲಾಯಿತು. ಇದರಲ್ಲಿ ವೀಣಾ 'ವಧು'ವಾಗಿ ನಟಿಸಿದ ಪ್ರಸಂಗವನ್ನು ಡಾ. ಸರೋಜಿನಿ ಶಿಂತ್ರಿ ನಿರ್ದಿಗಂತದಲ್ಲಿ ನೆನಪು ಮಾಡಿಕೊಳ್ಳುತ್ತಾರೆ.

ಕಮಲಾ ಅತ್ಯುತ್ತಮವಾಗಿ ಅಭಿನಯಿಸಿದ ಪಾತ್ರವೆಂದರೆ ಮೊಗಲ್‌ರಾಣಿ ನೂರ್ ಜಹಾನಳದ್ದು ಭೀಕರ ಯುದ್ಧದ ಬಳಿಕ ನೂರ್ ಜಹಾನ್ ರಣಭೂಮಿಗೆ ಬರುವ ದೃಶ್ಯ ಎಲ್ಲರ ಮನಸೆಳೆದಿತ್ತು. ನಂತರ ದ್ವಿಜೇಂದ್ರಲಾಲ್‌ರ ನಾಟಕಗಳ ಮಲಯಾಳೀ ಅನುವಾದಗಳ ಪ್ರಯೋಗ ಮಾಡಿದರು. ಅಜ್ಜಿ ಸಂಪೂರ್ಣವಾಗಿ ಕಮಲಾಳ ಆರೈಕೆ ಮಾಡುತ್ತಿದ್ದರು. ಕಮಲಾ ಅವರ ಅಜ್ಜಿಗೆ ಆಕೆಯ ಮೈ ಬಣ್ಣದ್ದೇ ಚಿಂತೆಯಾಗಿತ್ತು. ಅಜ್ಜಿ ಹಸೀ ಅರಿಶಿನ, ದಾಸವಾಳದ ಎಲೆಗಳಿಂದ ಮಾಡಿದ ಶ್ಯಾಂಪೂವಿನಿಂದ ಸ್ನಾನ ಮಾಡಿಸುತ್ತಿದ್ದರು. ಅನುಭವವು ಲೇಖಕಿಯರ ಬದುಕಿನ ಭಾಗವಾಗಿ ಮೂಡಿ ಬಂದಿರುವ ಅಂಶವಾಗಿದೆ.

ಬರಹ ಆರಂಭಿಸಿದ ಸಂದರ್ಭ ಪ್ರತಿಕ್ರಿಯೆ :

ಸ್ತ್ರೀ ಶಿಕ್ಷಣದ ಪೂರಕವಾದ ವಾತಾವರಣದಲ್ಲಿ ವೀಣಾರವರು ಮರಾಠಿ ಪತ್ರಿಕೆ, ಕತೆ, ಕಾದಂಬರಿಗಳನ್ನು ಓದುತ್ತಿದ್ದರು. ಪುರುಷ ಪ್ರಧಾನ ಸಮಾಜದ ಬಗ್ಗೆ ತಾಯಿಯ ಸೂಕ್ಷ್ಮ ಚಿಂತನೆಗಳು ವೀಣಾರವರ ಮೇಲೆ ಪ್ರಭಾವ ಬೀರಿತ್ತು. ಸಂಪ್ರದಾಯನಿಷ್ಠ ಸ್ವಭಾವ ಬದಲಾಗಬೇಕು. ತಲೆ ತಲಾಂತರದ ಪುರುಷ ಶೋಷಣೆಯ ವಿರುದ್ಧ ತಿರುಗಿ ಬೀಳಬೇಕೆಂಬ ಹಂಬಲವು ಇತ್ತು. ಹೈಸ್ಕೂಲಿನ ಮಧ್ಯಭಾಗದವರೆಗೆ ಬರೆದ ವೀಣಾರವರ ಕತೆಗಳು, ಸಂಯುಕ್ತ ಕರ್ನಾಟಕ, ಕರ್ಮವೀರ, ಕತೆಗಾರ ಪತ್ರಿಕೆಗಳು ಸ್ಕೂಲ್ ಮ್ಯಾಗಝೀನ್‌ಗಳಲ್ಲಿ ಪ್ರಕಟಗೊಂಡಿದ್ದವು. ದೇಸಾಯಿಯವರ 'ಮುಕ್ತಿ' ಕಾದಂಬರಿಯ ನಿರೂಪಣಾ ವಿಧಾನ, ತಂತ್ರ ರಚನೆ, ಪಾತ್ರ ಸೃಷ್ಟಿ, ವಿಚಾರ ಪ್ರತಿಪಾದನೆ, ಕಲಾತ್ಮಕತೆಯನ್ನು ಸೃಷ್ಟಿಸಿಕೊಳ್ಳಬಹುದೆಂಬ ಅಂಶವನ್ನು ಕಲಿತೆ ಎಂದು ಸ್ವತಃ ತಾವೇ ಹೇಳಿಕೊಳ್ಳುತ್ತಾರೆ. ಸಂಕಟದಿಂದ ಬಿಡುಗಡೆಗೊಳಿಸುವ ಹೆಣ್ಣಿನ ಪಾತ್ರವೇ

ಮುಖ್ಯವಾಗಿ ನಿರೂಪಿಸಲು ಲೇಖಕಿ ಮುಂದಾದರು. ತಮಗನಿಸಿದ್ದನ್ನು ಮುಕ್ತವಾಗಿ ಕತೆಯ ಪಾತ್ರಗಳ ಮೂಲಕ ವ್ಯಕ್ತಪಡಿಸಿದರು.

ಕಮಲಾದಾಸ್‌ರವರು ಬಾಲ್ಯ ಮತ್ತು ಕಿಶೋರಾವಸ್ಥೆಯಲ್ಲಿ ಹಲವು ತೆರನಾದ ಮನುಷ್ಯ ಸಂಬಂಧಗಳನ್ನು ಬೆರಗುಗಣ್ಣಿನಿಂದ ಕಂಡವರಾಗಿದ್ದರು. ಅನುಭವ ತೀವ್ರತೆಯೇ ಇವರ ಸಾಹಿತ್ಯಕ್ಕೆ ಆಕರವಾಯಿತು. ಮಾನಸಿಕ ಬಿಡುಗಡೆಯೇ ಕಮಲಾದಾಸ್‌ರವರ ಬರವಣಿಗೆಗೆ ಕಾರಣವಾಯಿತು. "ದೀಪ ಹಚ್ಚಿ ಕಳಂಕರಹಿತ ಭವಿಷ್ಯ ಮತ್ತು ಹೊಸ ಬದುಕಿನ ಬಗ್ಗೆ ಬರೆಯಹತ್ತಿದೆ. ಮರುದಿನ ಬೆಳಿಗ್ಗೆ ಕವನವನ್ನು ಭಾರತೀಯ ಪಿ.ಇ.ಎನ್. ಪತ್ರಿಕೆಗೆ ಕಳುಹಿಸಿದೆ. ಬಿಳಿ ಹಾಳೆಗಳ ಮೇಲೆ ನನ್ನ ನೋವು ಮೂಡಿತು. ನನ್ನ ನೋವುಗಳ ಮುಂಗಾರು ಮೋಡ ಬಾನಿನಲ್ಲಿ ತೇಲಿದಂತೆ ಪತ್ರಿಕೆಗಳ ಪುಟಗಳಲ್ಲಿ ಪ್ರಕಟವಾಯಿತು." (ನನ್ನ ಕಥೆ:103) ಹೀಗೆ ಸಾಹಿತ್ಯ ಬಿಡುಗಡೆಯ ಮಾಧ್ಯಮವಾಯಿತು.

ಕತೆಯ ವಿಷಯಗಳು ಎಲ್ಲಿಂದಲೋ ಒದಗಿ ಬರುವುದಿಲ್ಲ. ಬದುಕಿನಲ್ಲಿ ನಿತ್ಯ ನಡೆಯುವ ಘಟನೆಗಳು, ತಮ್ಮ ನಿತ್ಯ ಜೀವನದ ಅನುಭವಕ್ಕೆ ಸಿಲುಕುವ ಸಂದರ್ಭಗಳೇ ಕಥನದ ವಸ್ತುವಾಗಿರುತ್ತದೆ, ನಿರಂತರ ಪ್ರೀತಿಯ ಹುಡುಕಾಟದಲ್ಲಿ ಕಮಲಾದಾಸ್‌ರವರ ಕಥನ ಸಾಹಿತ್ಯ ಬೆಳೆಯುತ್ತಾ ಸಾಗುತ್ತದೆ.

1967ರಲ್ಲಿ ವೀಣಾಶಾಂತೇಶ್ವರ ಅವರ ಮೊದಲ ಕಥಾ ಸಂಕಲನ 'ಮುಳ್ಳುಗಳು' ಪ್ರಕಟಗೊಂಡಾಗ ಹಲವು ರೀತಿಯ ಪ್ರತಿಕ್ರಿಯೆ ಕೇಳಿ ಬಂದವು. ಡಾ. ಶಾಂತಿನಾಥ ದೇಸಾಯಿ, ಅನಂತಮೂರ್ತಿ, ಲಂಕೇಶ್, ಸುಮತೀಂದ್ರ ನಾಡಿಗರು ಕತೆಗಳನ್ನು ಮೆಚ್ಚಿಕೊಂಡರು. ಡಾ.ವ್ಹಿ.ಎಂ. ಇನಾಂದಾರರಂಥವರು ಅವರ ವಿಷಯಗಳನ್ನು ಟೀಕಿಸಿದ್ದು ಉಂಟು. ಮಾನಗೆಟ್ಟ ಬರವಣಿಗೆ ಎಂಬ ವಿರೋಧವೂ ಕೇಳಿಬಂತು. ಎಷ್ಟೋ ಬಾರಿ ಕತೆಗಳ ಪಾತ್ರದೊಟ್ಟಿಗೆ ವೀಣಾರವರ ಬದುಕನ್ನು ಥಳುಕು ಹಾಕಿ ನೋಡಿದ್ದೂ ಇದೆ.

ಕಮಲಾದಾಸ್ ಕೂಡ ಇಂತಹ ಸಂದರ್ಭದಿಂದ ಹೊರತಾಗಿಲ್ಲ ಸಂಬಂಧಿಕರಿಂದ ಹಿಡಿದು ಊರ ಶ್ರೀಮಂತರವರೆವಿಗೂ ಕಮಲಾದಾಸ್‌ರ ಬರವಣಿಗೆಯನ್ನು ವಿರೋಧಿಸಿದವರು, ಗುಮಾನಿಯಿಂದ ನೋಡಿದವರು ಇದ್ದಾರೆ. ವೈರುಧ್ಯದ ನಡುವೆ ಮೆಚ್ಚುಗೆಯನ್ನು ಗಳಿಸಿದ ಬದುಕ ಪ್ರೀತಿಸಿದ ಲೇಖಕಿ ಕಮಲಾದಾಸ್. ವೀಣಾ ಶಾಂತೇಶ್ವರ ಮತ್ತು ಕಮಲಾದಾಸ್ ಬರವಣಿಗೆ ಪರಸ್ಪರ ಎರಡೂ ಸಂದರ್ಭಗಳಲ್ಲಿ ಸಾಹಿತ್ಯದ ಸಂಚಲನವನ್ನು ತಂದಿದೆ. ಬದಲಾವಣೆ ಕಡೆ ಮುಖಮಾಡಿದೆ. ಮಾತೃ ಪರಂಪರೆಯ ಪತನದ ನಂತರದ ಸಂದರ್ಭದಲ್ಲಿ ಪುರುಷ

ಪ್ರಧಾನಧಾರೆಯ ದ್ವಂದ್ವವನ್ನು ಲೇಖಕಿ ಅರಗಿಸಿಕೊಂಡು ಬರವಣಿಗೆ ನಡೆಸಿದ್ದಾರೆ. ಪಿತೃ ಪ್ರಧಾನ ನೆಲೆಯನ್ನು ಒಪ್ಪಿ ನಡೆಯುವ ಸಂದರ್ಭವವೂ ಕರ್ನಾಟಕದಲ್ಲಿಯೂ ಇದೆ. ಈ ಭಿನ್ನತೆ ಮೂಡಿ ಬಂದಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ನಿರ್ದಿಗಂತ ಕುರಿತು :

ವೀಣಾ ಅವರ ಗುರುಗಳಾದ ಜಿ.ಎಸ್. ಆಮೂರ ಅವರಿಂದ ಇಂಗ್ಲಿಷ್ ಸಾಹಿತ್ಯ ಕಲಿತದ್ದು 'ನಡದದ್ದೇ ದಾರಿ' ಸಮಗ್ರ ಕಥಾ ಸಂಗ್ರಹಕ್ಕೆ ಗುರುಗಳಾದ ಆಮೂರ ಅವರ ಮುನ್ನುಡಿಯ ಸಾಲುಗಳನ್ನು ವೀಣಾ ಅವರು ಗಿಟ್ಟಿಸಿಕೊಂಡಿದ್ದಾರೆ. ಸಂಪ್ರದಾಯದ ಕಟ್ಟುಪಾಡಿನಿಂದ ಹೊರಬಂದು ತನ್ನದೇ ಹೊಸ ಮಾರ್ಗದಲ್ಲಿ ನಡೆದ ವೀಣಾ ಅವರನ್ನು ಡಾ. ಸರೋಜಿನಿ ಶಿಂತ್ರಿಯವರು ಜೀವನದ ಸಂಧ್ಯಾಕಾಲದಲ್ಲಿ ನೆನಹುಗಳೇ ಆಶಾಕಿರಣ ಎನ್ನುತ್ತಾರೆ.

ವೀಣಾಶಾಂತೇಶ್ವರ ಅವರಿಗೆ ಸಿತಾರ ಬಹು ಪ್ರಿಯವಾದದ್ದು. ಕಾಲೇಜಿನ ದಿನಗಳಲ್ಲಿ ವೀಣಾ ಬರೆದ ಸಾಲುಗಳಿಗೆ ತನ್ನ ಹೆಸರು, ವಿಳಾಸ ಬರೆಯುತ್ತಿರಲಿಲ್ಲ, ಬದಲಿಗೆ ವೀಣೆಯ ಚಿತ್ರ ಬಿಡಿಸುತ್ತಿದ್ದರು. ಅಪಾರ ಸಂಕಷ್ಟಗಳ ನಡುವೆಯೂ ವೀಣಾ ಧಾರವಾಡದ ಕರ್ನಾಟಕ ಕಾಲೇಜನ್ನು ಉನ್ನತಸ್ಥಾನಕ್ಕೇರಿಸುವ ಪ್ರಯತ್ನ ಮಾಡಿದರು, ಎನ್ನುತ್ತಾರೆ ಸಿದ್ಧಲಿಂಗ ಪಟ್ಟಣಶೆಟ್ಟಿಯವರು. ಕಿಶೋರಾವಸ್ಥೆಯಿಂದ ಎಂ.ಎ.ವರೆವಿಗೂ ವೀಣಾ ಅವರ ಶೈಕ್ಷಣಿಕ ಜೀವನದ ಚಿತ್ರಣವನ್ನು ಡಾ. ಗುರುಲಿಂಗ ಕಾಪಸೆ ಅವರು ವಿವರಿಸುತ್ತಾರೆ.

'ಆಡದೆ ಮಾಡುವವನು ರೂಢಿಯೊಳಗುತ್ತಮನು' ಎಂದು ಮೌನವಾಗಿ ವೀಣಾ ಶಾಂತೇಶ್ವರ ಅವರ ವೃತ್ತಿ ಜೀವನವನ್ನು ಪ್ರೊ. ಹಸನಬಿ ಬೀಳಗಿ ಅವರು ತಿಳಿಸಿದ್ದಾರೆ. ಕರ್ನಾಟಕ ಕಾಲೇಜಿಗೆ ಪ್ರಾಂಶುಪಾಲರಾದ ಮೇಲೆ ವೀಣಾಶಾಂತೇಶ್ವರ ಅವರು ಸಮಸ್ಯೆಯ ಸರಮಾಲೆಯನ್ನು ಹಾಕಿಕೊಂಡಿದ್ದರು. ಅವರ ವ್ಯಕ್ತಿತ್ವದಿಂದ ಎಲ್ಲ ಕೆಲಸಗಳು ಸುಗಮವಾಗಿ ನಡೆಯುತ್ತಿತ್ತೆಂಬುದನ್ನು ವೇಣಿಮಾಧವ ಶಾಸ್ತ್ರಿ ಜೋಶಿ ಅವರು ತಿಳಿಸುತ್ತಾರೆ.

ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರು ವಿದ್ಯಾರ್ಥಿ ದೆಸೆ ಇದ್ದಾಗಿನಿಂದ ವೀಣಾಶಾಂತೇಶ್ವರ ಅವರನ್ನು ಕಂಡಿದ್ದಾರೆ. ದಕ್ಷ ಆಡಳಿತಗಾರ್ತಿಯಾಗಿ ಶಿಕ್ಷಣ ತಜ್ಞೆಯಾಗಿ, ಅಪೂರ್ವ ಸಂಘಟಕಿಯಾಗಿ, ಪ್ರಾಚಾರ್ಯರಾಗಿ ವಾಸ್ತವ ನೆಲೆಯ ಕತೆಗಾರ್ತಿಯಾಗಿ ವೀಣಾ ಕಂಡು ಬಂದಿರುವ ಕ್ರಮವನ್ನು ವಿವರಿಸಿದ್ದಾರೆ. ಡಾ. ಶಿರಗಾನಹಳ್ಳಿ ಶಾಂತನಾಯ್ಕ ಅವರು ಇಂಗ್ಲಿಷ್ ಉಪನ್ಯಾಸಕರಾದ ವೀಣಾ ಅವರು ಇಂಗ್ಲಿಷ್ ಛಂದಸ್ಸನ್ನು ಬೋಧಿಸುತ್ತಿದ್ದ ಶೈಲಿ ನೆನಪು ಮಾಡಿಕೊಳ್ಳುತ್ತಾರೆ. ಶಕುಂತಲಾ ದುರಗಿ ಗುಲಬರ್ಗಾ ಇವರು ವೀಣಾ ಶಾಂತೇಶ್ವರ ಅವರ ಗೆಳತಿ,

1966 – ವೀಣಾಶಾಂತೇಶ್ವರ ಅವರು ಸ್ವತಃ 'ಯಮರಾಯನ ದರ್ಭಾರ' ಎಂಬ ದೊಡ್ಡಾಟವನ್ನು ಬರೆದರು, ಆ ಮೂಲಕ ಎಲ್ಲರ ನೆನಪಿನಲ್ಲಿ ಉಳಿವಂತೆ ಮಾಡಿದರು. ವೀಣಾ–ನಾನು–ಶಕುಂತಲಾ ಕುಂದೂರು ಧಾರವಾಡದಲ್ಲಿ ಸೇರಿದಾಗ ಈ ನೆನಪುಗಳನ್ನು ಮೆಲುಕು ಹಾಕಿದ್ದನ್ನು ನೆನಪು ಮಾಡಿಕೊಂಡೆವು. ವೀಣಾರವರ ಮಗಳಾದ ಡಾ. ಮೀರಾರಾವ್, ಅಣ್ಣ ರಾಘವೇಂದ್ರ ಎಲಬುರ್ಗಿ, ಡಾ. ವಿ.ಬಿ. ಎಲಬುರ್ಗಿಯವರ ಸಹ ಲೇಖನಗಳನ್ನು ನಿರ್ದಿಗಂತಕ್ಕೆ ಅರ್ಪಿಸಿದ್ದಾರೆ. ಈ ಸಂದರ್ಭದಲ್ಲಿ ಡಾ. ವಿ.ಬಿ. ಯಲಬುರ್ಗಿಯವರು ಈ ಸಾಲುಗಳನ್ನು ಉಲ್ಲಖಿಸುತ್ತಾರೆ.

"A sister is a gift to the heart
A friend to the spirit
A golden thread to the meaning of life."
(ನಿರ್ದಿಗಂತ:61)

Isa dora Ja...

ಹೀಗೆ ವೀಣಾಶಾಂತೇಶ್ವರ ಅಕ್ಕ, ತಂಗಿಯಾಗಿ, ಗೆಳತಿಯಾಗಿ ಅರ್ಥಪೂರ್ಣವಾಗಿ ಬಾಳಿದ ಶೈಕ್ಷಣಿಕ ಸಾಧನೆಗೈದ ವೀಣಾರವರನ್ನು ಕುರಿತ ಚರ್ಚೆ ಮಹತ್ವದ್ದಾಗಿದೆ.

ಇದಾವುದೇ ಶೈಕ್ಷಣಿಕ ಸಾಧನೆಗೈಯದೆ ಬರವಣಿಗೆಯನ್ನೇ ಕರಗತ ಮಾಡಿಕೊಂಡ ಕಮಲಾದಾಸ್‌ರವರ ಬಾಲ್ಯಕಾಲದ ಸ್ಮರಣೆಗಳು, ಹದಿಹರೆಯದ ಆತ್ಮಕಥನವಾದ 'ನೀರ್‌ಮಾದಾಳ ಹೂ ಬಿಟ್ಟ ಕಾಲ' ಮತ್ತು ಪ್ರಸಿದ್ಧಿ ಪಡೆದ ಮತ್ತೊಂದು ಕಥನ 'ನನ್ನ ಕಥೆ'ಯನ್ನು ಕುರಿತಾದ ಚರ್ಚೆ ನಡೆಸಿದ್ದೇನೆ.

ಅ) ಬಾಲ್ಯದ ನೆನಪುಗಳು

ಬದುಕನ್ನು ಜೀವಂತವಾಗಿಸುವಲ್ಲಿ ಆತ್ಮಕಥನಗಳು ಪ್ರಮುಖ ಪಾತ್ರವಹಿಸುತ್ತದೆ. ಸ್ಮೃತಿ ಪಟಲದಲ್ಲಿ ಅಡಗಿದ್ದ ಬಾಲ್ಯದ ನೆನಪಿಗೆ ಇಲ್ಲಿ ಬರಹ ರೂಪ ನೀಡಲಾಗಿದೆ. ವಸಾಹತುಶಾಹಿಯ ಬಾಲ್ಯದ ಸಂದರ್ಭವನ್ನು ಲೇಖಕಿ ನಿರೂಪಿಸುತ್ತಾರೆ. ಲೇಖಕಿ ಬದುಕನ್ನು ಗ್ರಹಿಸಿದ ಕ್ರಮವು ಈ ಮೂಲಕ ತಿಳಿದುಬರುತ್ತದೆ. ಬಾಲ್ಯದ ಪ್ರತಿ ಘಟನೆಗಳು ಸರಾಗವಾಗಿ ಬರವಣಿಗೆಯಲ್ಲಿ ಮೂಡಿ ಬಂದಿದೆ. ಸೂಕ್ಷ್ಮವಾಗಿ ಬದುಕನ್ನು ಅರ್ಥೈಸಿಕೊಂಡಿರುವುದಕ್ಕೆ ಆತ್ಮಕಥನದ ಸಣ್ಣ ಸಣ್ಣ ಪ್ರಸಂಗಗಳು ಸಾಕ್ಷಿಯಾಗಿವೆ. ಬೇಸಿಗೆ ರಜೆಯಲ್ಲಿ ಅಜ್ಜಿಯ ಮನೆಯಲ್ಲಿ ಕಳೆದ ದಿನಗಳ ಬಾಲ್ಯದ ಚಿತ್ರಣವಿದೆ. ಕಮಲಾಳ ಪ್ರತಿ ಸಂಶಯಗಳಿಗೂ ಸೂಕ್ತ ರೀತಿಯಲ್ಲಿ ಉತ್ತರ ನೀಡುತ್ತಿದ್ದವರು ಅಜ್ಜಿ. ಕಮಲಾದಾಸ್‌ರವರ ಬದುಕಿನ ಅನುಭವದ ಹಲವು ಉದಾಹರಣೆಗಳನ್ನು ಈ ಮೂಲಕ ಚರ್ಚೆ ನಡೆಸಲಾಗಿದೆ.

ಬಾಲ್ಯದಲ್ಲಿ ಅಚ್ಚೊತ್ತಿದ್ದ ಜಾತಿ ವ್ಯವಸ್ಥೆಯ ನಿರೂಪಣೆಗೆ ಕಮಲಾದಾಸ್ ಮೊಟ್ಟ ಮೊದಲ ಬಾರಿಗೆ ಅರಮನೆಯನ್ನು ಕಂಡ ಪ್ರಸಂಗವನ್ನು ಉದಾಹರಿಸಬಹುದು. ಅಸ್ಪೃಶ್ಯತೆ ಎಂಬುದು ಹೇಗಿತ್ತು ಎಂಬುದು ಅರಮನೆಯ ನೈಯಪ್ಪ ತಿಂದು ಹಿಂತಿರುಗುತ್ತಿದ್ದಾಗ ತಿಳಿಯಿತು. ಜಾತಿ ಶ್ರೇಣೀಕರಣವನ್ನು ಕಮಲಾಗೆ ಅಜ್ಜಿ ಹೀಗೆ ತಿಳಿಸಿದರು. ಮೊದಲು ನಂಬೂದಿರಿಗಳು, ನಂತರ ತುಂಬುರಾನ್‌ರು ಅವರ ಕೆಳಗೆ ನಾಯರ್, ಬಿಲ್ಲವರು, ಮಲೆಕುಡಿಯರು, ಹೊಲೆಯರು, ಕೊರಗರು, ಬೇಟೆ ಕುರುಬರು ಮುಂತಾದವರು. ಕೇವಲ ಜಾತಿ ಪದ್ಧತಿ ರೂಢಿಯಲ್ಲಿಲ್ಲದ ಗುಲಾಮ ಪದ್ಧತಿಯು ರೂಢಿಯಲ್ಲಿ ಇದ್ದ ಕಾಲ ಅದಾಗಿತ್ತು. ಗುಲಾಮಿ ವಳ್ಳಿಯ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ನಾಲಪ್ಪಾಟಿನ ಹೆಂಗಸರ ದಿನಚರಿಯು ಈ ಮೂಲಕ ತಿಳಿಯುತ್ತದೆ. ಯಾವತ್ತೂ ಅಡುಗೆಯವರಿದ್ದದ್ದರಿಂದ ಹೆಂಗಸರು ಪಾಕಶಾಸ್ತ್ರ ಪ್ರವೀಣೆಯರಾಗಿರಲಿಲ್ಲ ಎಂದು ಪ್ರಸ್ತಾಪಿಸುತ್ತಾರೆ. ಇಂದಿಗೂ ನಾಶವಾಗದ, ಅಳಿಯದೆ ಉಳಿದಿರುವ ಹೆಂಗಸರ ಮುಟ್ಟಿನ ಮೈಲಿಗೆಯ ದಿನಗಳ ಚಿತ್ರಣ ಕಾಣಬರುತ್ತದೆ. ಮುಟ್ಟಾದ ಹೆಂಗಸರು ದೇವಾಲಯ ಪ್ರವೇಶಿಸಿ ಅಪವಿತ್ರಗೊಳಿಸಿ ಬಿಡುವರೆಂಬ ಸಂದೇಹ ಅಜ್ಜಿಗೆ ಇತ್ತು. ಮುಟ್ಟಾದ ಹೆಂಗಸರು ನಾಲಪ್ಪಾಟ್ಟಿನ ದಕ್ಷಿಣದ ಚಾವಡಿಗೆ ಸರಿಯುತ್ತಿದ್ದರು. ಸಮಯ ಕಳೆಯಲಿಕ್ಕಾಗಿ ಹಳೆಯ ಮಾಸ ಪತ್ರಿಕೆಗಳಾದ ಆತ್ಮಪೋಷಿಣಿ, ಕೈರಳಿ, ಮಹಿಳೆ ಮೊದಲಾದವುಗಳಾಗಿದ್ದವು. ಬದಲಿಗೆ ಆ ಕಾಲದ ಪ್ರತಿಷ್ಠಿತ

ಲೇಖಕರುಗಳಾದ ಚೆಂಙ್ಙಮುಳೆಯವರ ರಮಣನ್, ಕುಮಾರನ್ ಆಶಾನರ ನಳಿನಿಯೂ ಲೀಲೆಯೂ ಕಪ್ಪನ ಕೃಷ್ಣ ಮನೋನರ ಕಾದಂಬರಿಗಳೂ ಆ ಹೆಂಗಸರಿಗೆ ಲಭ್ಯವಿರಲಿಲ್ಲ.

ದೀಪಕ್ಕೆ ಬತ್ತಿ ಹೊಸೆಯುವ ಕೆಲಸ, ಸಂಜೆ ದೀಪ ಉರಿಯುವ ಕೆಲಸ, ಬಿಲ್ವಪತ್ರೆಯ ಕಟ್ಟೆಯ ಮೇಲೂ, ನಾಗಬನದಲ್ಲೂ ನಾಲ್ಕು ಚಾವಡಿಗಳಲ್ಲೂ ದೀಪ ಹೊತ್ತಿಸಿ ಇಡುವುದು, ಭತ್ತ ಬೇಯಿಸಲೆಂದು ಕಣಜದಲ್ಲಿ ಅಳತೆ ಮಾಡುವುದು, ಪೂಜಾ ಸಾಮಾಗ್ರಿ ತೊಳೆದಿಡುವುದು ಈ ಕೆಲಸಗಳನ್ನು ಹೆಂಗಸರು ಮಾಡಬೇಕಿತ್ತು. ಆಧುನಿಕತೆಯ ಆಗಮನದ ಜೊತೆ ನಡೆಯುವ ಎಲ್ಲ ಮಹಿಳಾ ಜೀವನದ ಆ ಕಾಲದ ಬದಲಾವಣೆ ತಿಳಿದು ಬರುತ್ತದೆ. ಜೊತೆಗೆ ಸೂಕ್ಷ್ಮ ಮನಸ್ಸಿನಿಂದ ಲೇಖಕಿ ಘಟನೆಗಳನ್ನು ಗಮನಿಸಿದ್ದರು. ಕೇರಳದ ಮಹಿಳೆಯರ ಸ್ಥಿತಿ ಮನಸ್ಥಿತಿ ಇಲ್ಲಿ ತಿಳಿದು ಬರುತ್ತದೆ. ಸಾಂಪ್ರದಾಯಿಕ ಬದುಕಿನ ತಲ್ಲಣಗಳು ಅಂದು ರೂಢಿಯಲ್ಲಿದ್ದ ನಿಯಮಗಳು, ಕಮಲಾದಾಸರ ಅಜ್ಜಿಯ ನಾಲಪ್ಪಾಟಿನ ಬದುಕಿಗೂ (ತಲೆಮಾರು) ಕಮಲಾಳ ಬದುಕಿಗೂ ಆದ ಬದಲಾವಣೆಯು ತಿಳಿದು ಬರುತ್ತದೆ.

ಕಮಲಾದಾಸ್ ತಮ್ಮ ಬಾಲ್ಯದಲ್ಲಿ ಅನುಭವಿಸಿದ ಒಂಟಿತನ ಗುಲಾಮತನ ಮನಸ್ಥಿತಿಯನ್ನು ಕುರಿತು ಹೇಳಿಕೊಳ್ಳುತ್ತಾರೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪೂರ್ಣ ಕಡಿವಾಣ ಹಾಕಿರುವ ತಂದೆಯವರ ಕ್ರಮವನ್ನು ಮನಸ್ಸಿನಲ್ಲೇ ಖಂಡಿಸಿದ್ದಾರೆ. ಜ್ವಾಲಾಮುಖಿಯಂತೆ ಒಳಗೆ ಕುದಿವ ಬೇಗುದಿ ಬಾಲ್ಯದ ನೆನಪುಗಳ ಮೂಲಕ ಹೊರಬರುತ್ತದೆ. ಕಲ್ಕತ್ತಾದ ನಾಲ್ಕು ಶಾಪ್ಪಿಂಗ್ ಕಾಂಪ್ಲೆಕ್ಸುಗಳಲ್ಲಿ ತಂದೆಯ ಜೊತೆ ಹೋಗುತ್ತಿದ್ದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾ, ಅವರಿಗೆ (ತಂದೆಗೆ) ಶಾಪ್ಪಿಂಗಿಗೆ ಹೋಗುವುದು ತ್ರಾಸದಾಯಕ ವ್ಯಾಯಾಮವಾಗಿತ್ತು. ಮಕ್ಕಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಅವಕಾಶವಿರಲಿಲ್ಲ. ಅಂತಹ ಸಂದರ್ಭದಲ್ಲಿ ತನ್ನೊಳಗೆ ಬಾಲ್ಯದಲ್ಲಿ ಅನುಭವಿಸಿದ ಏಕಾಂಗಿತನವನ್ನು, ಗುಲಾಮಿತನವನ್ನು ಸಹಿಸಿ ಬದುಕಿದ ಅಂಶ ಸ್ಪಷ್ಟವಾಗುತ್ತದೆ. ತಂದೆ ಗೆಳೆಯರ ಜೊತೆಗಿನ ಒಡನಾಟವನ್ನು ನೆನಪಿಸಿಕೊಳ್ಳುತ್ತಾರೆ. ಅನಾಥ ನಾಯಿಗಳಂತೆ, ಕೀಳರಿಮೆಯಿಂದ ಬಳಲಿದ ಅಣ್ಣನ ಜೊತೆಗಿನ ಒಡನಾಟವೂ ಲೇಖಕಿಗೆ ಮುಖ್ಯವಾದುದಾಗಿದೆ.

'ಮರುಮಕ್ಕತ್ತಾಯ' ಪದ್ಧತಿ ರೂಢಿಯಲ್ಲಿದ್ದ ಕೇರಳ ಸಮಾಜದಲ್ಲಿ ನಂಜತೇಲಿ ಬ್ರಾಹ್ಮಣಿಯಮ್ಮ ಕ್ರಾಂತಿಯನ್ನು ಉಂಟು ಮಾಡಿದರು. ಯೌವನಕ್ಕೆ ಬರಬೇಕಿದ್ದರೇನೇ ಆಕೆ ರವಿಕೆ ತೊಡಲು ಪ್ರಾರಂಭಿಸಿದ್ದಳು. "ಆ ದಿನಗಳಲ್ಲಿ ಸಮಾಜ ರವಿಕೆ ಧರಿಸುವವರನ್ನು ಪರಿಷ್ಕಾರದ ಭೂತಗಳಾಗಿ ಭಾವಿಸಿದ್ದರು." (ಬಾಲ್ಯದ ನೆನಪುಗಳು:13) ನಡವಳಿಕೆಯನ್ನು ಹತ್ತಿರದಿಂದ ಕಂಡ ಲೇಖಕಿ ಬಾಲ್ಯದಲ್ಲಿ ಒಡಮೂಡಿದ ಪರಿಣಾಮ ಕುತೂಹಲವನ್ನು ಗಮನಿಸಬಹುದು. ಅಜ್ಜಿ

ಕೂಡಿಟ್ಟ ಹಣದಲ್ಲಿ ಲೋಲಾಕು, ಮಾಲೆ ಮಾಡಿಸಿದರು. ಸ್ವಾತಂತ್ರ್ಯ ಚಳವಳಿಯಲ್ಲಿ ತೊಟ್ಟ ಆಭರಣವನ್ನೆಲ್ಲಾ ಕೇರಳದ ಮಹಿಳೆಯರು ಗಾಂಧೀಜಿಯವರಿಗೆ ಕೊಟ್ಟರು. ಸಣ್ಣ ಸಣ್ಣ ಅನೇಕ ಘಟನೆಗಳು ಸರಮಾಲೆಯಂತೆ ನಿರೂಪಣೆಗೊಂಡಿವೆ. ಅಜ್ಜಿ ಕಮಲಾದಾಸ್‌ರವರ ಬದುಕಿನ ಬಹುಮುಖ್ಯ ಒಡನಾಡಿಗಳಲ್ಲಿ ಒಬ್ಬರು. ಅಜ್ಜಿಯೂ ನಿಯಮಬದ್ಧವಾಗಿ ವಿಧವಾ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. "ಓರ್ವ ವಿಧವೆಗೆ ವಿಧಿಸಿರುವ ಎಲ್ಲಾ ತ್ಯಾಗಗಳನ್ನೂ ಅವರು ಅನುಸರಿಸುತ್ತಿದ್ದರು." (ಬಾಲ್ಯದ ನೆನಪುಗಳು:24)

ನಾಲಪ್ಪಾಟಿನ ಅನುಭವ ಲೋಕವೇ ಕಮಲಾದಾಸ್ ಕತೆಗಳಿಗೆ ಪ್ರೇರಣೆಯಾಗಿದೆ. ಅವರ ಬದುಕಿನ ಅನುಭವದ ಎಳೆಗಳು ಕಥನದಲ್ಲೂ ವ್ಯಕ್ತಗೊಳ್ಳುತ್ತದೆ. ಬಾಲಕಿಯೊಬ್ಬಳು, ಕಿಶೋರಾವಸ್ಥೆಯಿಂದ ಬದಲಾದ ಸಂದರ್ಭವನ್ನು ಆತ್ಮಕಥನ ವ್ಯಕ್ತಪಡಿಸುತ್ತದೆ. ಆಧುನಿಕತೆ ಮತ್ತು ಸಾಂಪ್ರದಾಯಿಕತೆಯ ಸಂಕ್ರಮಣದ ದಟ್ಟ ಚಿತ್ರಣ ಈ ಮೂಲಕ ಅಭಿವ್ಯಕ್ತಗೊಂಡಿದೆ. ಪಿತೃ ಪ್ರಧಾನ ನಿಲುವುಗಳಿಗೆ ಸೂಕ್ಷ್ಮವಾಗಿ ಸ್ಪಂದಿಸಿದ ಅನೇಕ ಉದಾಹರಣೆ ಇದೆ. ಜಾತಿಯ, ಅಸ್ಪೃಶ್ಯತೆಯ ಪ್ರಶ್ನೆಯೂ ಕಾಡಿದೆ. ಕೂಡು ಕುಟುಂಬ ವ್ಯವಸ್ಥೆಯ ಚಿತ್ರಣವಿದೆ.

ಪ್ರತಿಯೊಬ್ಬರ ಜೀವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ಅವರ ವ್ಯಕ್ತಿತ್ವವನ್ನು ರೂಪಿಸುತ್ತದೆ. ಬಾಲ್ಯದ ಶಿಕ್ಷಣ ಕ್ರಮ, ರೀತಿ, ನೀತಿ, ಶಿಕ್ಷಕರ ನೆನಪುಗಳು ಆತ್ಮಕಥನದಲ್ಲಿ ಮೂಡಿ ಬಂದಿದೆ. ಬಾಲ್ಯದಲ್ಲಿ ನೋಡಿದ 'ಯಾಚಕಿ' ಎಂಬ ನಾಟಕ ಲೇಖಕಿಯ ಪರಿಣಾಮ ಬೀರಿದೆ. ದೃಶ್ಯ ಮಾಧ್ಯಮ ಪರಿಣಾಮಕಾರಿಯಾಗಿ ಮನಸಿನಲ್ಲಿ ಮೂಡಬಲ್ಲದು ಎಂಬುದು ಈ ಮೂಲಕ ಸಾಬೀತಾಗಿದೆ. "ಭಿಕ್ಷುಕರಲ್ಲೇ ಭಿಕ್ಷುಕರಾದ ಭಿಕ್ಷುಕರು ನಾವು" (ಬಾಲ್ಯದ ನೆನಪುಗಳು:49) ನಾಟಕದ ಈ ಸಾಲು ಕಮಲಾದಾಸರ ಮೇಲೆ ಪ್ರಭಾವ ಬೀರಿತ್ತು.

ತಂದೆಯ ಕುಟುಂಬದ ನೆನಪಿಗಿಂತ ಅಜ್ಜಿಯ ಜೊತೆಗಿನ ಅನುಭವವೇ ಆತ್ಮಕಥನದಲ್ಲಿ ಚಿತ್ರಣಗೊಂಡಿದೆ. ತಂದೆಯ ಕುಟುಂಬವಾದ ವಾಡೇಕರ ಮನೆಯಲ್ಲಿನ ಕಾಡು ಮಲ್ಲಿಗೆ, ಸಂಧ್ಯಾ ಪುಷ್ಪವೂ, ಶಂಖ ಪುಷ್ಪವು ಬಿರಿದು ಬೆಳೆದು ನಿಂತಿತ್ತು. ಆದರೆ ನಾಲಪ್ಪಾಟ್ಟಿನ ಮನೆಯು ಅನೇಕ ಜನರಿಗೆ ಆಶ್ರಯವಾಗಿತ್ತು. ಊಟೋಪಚಾರಗಳು ನಡೆವ ಸಂದರ್ಭಕ್ಕೆ ಅನೇಕ ವಿಭಿನ್ನ ರೀತಿಯ ಜನರು ಆಗಮಿಸುತ್ತಿದ್ದರು. ಹುಚ್ಚ ತಾಮಿ, ಹೊಟ್ಟೆ ಬಾಕ ರಾಮನಾಯರ್, ಕುರುಡ ಭಾಗವತರು, ಮೂಕಿ ಹುಡುಕಿ, ಧರ್ಮಾಂದನೆಂಬ ಕಳ್ಳ ಸನ್ಯಾಸಿ ಇವರೆಲ್ಲರು ಕಮಲಾದಾಸ್‌ರ ನೆನಪಿನ ಪಟಲದಲ್ಲಿ ಉಳಿದವರು. ಬಾಲ್ಯದ ಹಸಿ-ಹಸಿ ನೆನಪುಗಳು ಅಕ್ಷರ ರೂಪ ಕಂಡಿವೆ. ಉದಾಹರಣೆಗೆ ಡಾಕ್ಟರು ಹಲ್ಲು ಕಿತ್ತಾಗ, ದೇವಕಿಯ ಹೀಗೆ ಹೇಳಿದಳು. "ಸೆಗಣಿಯಲ್ಲಿ ಮುದ್ದೆ

ಮಾಡಿ ಮನೆ ಮಾಡಿಗೆ ಬಿಸಾಡದಿದ್ದರೆ ಮಗೂಗೆ ಕೋರೆ ಹಲ್ಲು ಬಂದೀತು" (ಬಾಲ್ಯದ ನೆನಪುಗಳು:64) ಕಮಲ ದುಃಖಿಸುತ್ತಾ ಹಲ್ಲನ್ನು ಅಂಗಳದಲ್ಲಿ ಹುಡುಕಿದಳು. ಅಜ್ಜಿ ಆಕೆಯನ್ನು ಸಮಾಧಾನ ಪಡಿಸಿದಳು.

ಕಮಲಾಳ ತಂದೆ ಆಕೆಯ ಕೂದಲನ್ನು ಕತ್ತರಿಸಿ ಬಾಬ್ ಮಾಡಿ ಕಲ್ಕತ್ತಾ ಶಾಲೆಗೆ ಸೇರಿಸಲು ಮುಂದಾದರು. ಅಜ್ಜಿಯ ಆರೈಕೆಯಲ್ಲಿ ಹಸನಾಗಿ ಬೆಳೆದ ಕೂದಲು ಕತ್ತರಿಸಿ ಹೋಯಿತು. ಕಮಲಾಳ ಆಸೆಗೆ ತಣ್ಣೀರೆರಚಿದಂತಾಯಿತು. ಕಮಲಾದಾಸ್ 7ನೇ ವಯಸ್ಸಿನಲ್ಲಿನ ಘಟನೆಗಳನ್ನು ವಿವರಿಸುತ್ತಾರೆ. ಮಧ್ಯವಯಸ್ಸಿಗೆ ಬಂದಾಗ ಚೇರಪ್ಪನ್ ಬಳಿ ಬಳೆ ತೊಟ್ಟುಕೊಂಡ ನೆನಪನ್ನು ಹಂಚಿಕೊಳ್ಳುತ್ತಾರೆ. ನೆನಪಿನ ಲಹರಿಯಿಂದ ಹಲವು ಘಟನೆಗಳು ಮೂಡಿಬಂದಿದೆ.

ಪ್ರತಿ ಜೀವಿಯ ಬದುಕು ಅಪಾರ ಅನುಭವದ ಆಗರ. ಆಯಸ್ಸು ತೀರುವ ತನಕವೂ ಕಲಿವ ನಿರಂತರ ಪಾಠ. ಅದರ ದಾಖಲೆಯೇ ಈ ಆತ್ಮಕಥನ. "ಅಜ್ಜಿ ಸ್ತ್ರೀವಾದಿಯಾಗಿರಲಿಲ್ಲ. ಆದರೆ ಅತಿ ಹೆಚ್ಚು ಸ್ತ್ರೀತ್ವ ಉಳ್ಳವರಾಗಿದ್ದರು." (ಬಾಲ್ಯದ ನೆನಪುಗಳು:80) ಅಜ್ಜಿ ಅವರವರ ಗಂಡಂದಿರೊಂದಿಗೆ ಅಪ್ರಿಯವಾದದ್ದನ್ನು ಹೇಳಬಾರದು ಎನ್ನುತ್ತಿದ್ದರು. ಅತೃಪ್ತಿ, ಅಪೂರ್ಣತೆಯಲ್ಲಿಯೇ ಇದ್ದವರು ಅಜ್ಜಿ. ಕಮಲಾರವರ ವ್ಯಕ್ತಿತ್ವ ಹೀಗೆ ರೂಪುಗೊಂಡಿತ್ತು. "ಸ್ವಂತ ಮನಃಸಾಕ್ಷಿಗೆ ಮಾತ್ರ ಉತ್ತರ ಹೇಳಬೇಕಾದವಳಾಗಿ ನಾನು ಬೆಳೆದೆ" (ಬಾಲ್ಯದ ದಿನಗಳು:83) ಎಂದು ಲೇಖಕಿ ಹೇಳಿಕೊಳ್ಳುತ್ತಾರೆ.

ಕಾಲಾತೀತವಾದ ಸತ್ಯ ಸಂಗತಿಗಳ ಸರಮಾಲೆಯಾಗಿ ಪುರುಷರ ಕ್ರೌರ್ಯ ಮೂಡಿ ಬರುತ್ತಿತ್ತು ಎಂಬುದರ ಸಾಕ್ಷಿಯಾಗಿ ಕಿಬ್ಬೊಟ್ಟೆ ಉಬ್ಬಿದ ಹೆಣಗಳು ಬಾವಿ-ಕೆರೆಗಳಲ್ಲಿ ತೇಲಿ ಒಂದದ್ದನ್ನು ಉದಾಹರಿಸುತ್ತಾರೆ. ಕಮಲಾದಾಸ್ ಹೇಳುವ ಹಾಗೆ "ಇಂದು ಕಾರ್ಮೋಡಗಳು ಹರಿದು ಹೋದ ನೀಲಾಕಾಶವನ್ನು ನಾನು ಕಾಣುತ್ತಿದ್ದೇನೆ. ಇಂದಿನ ಹೆಣ್ಣು ಮಕ್ಕಳು ಅದೃಷ್ಟವಂತೆಯರು. ಅವರನ್ನು ಅವಮಾನಿಸುವುದಕ್ಕೆ ಯಾವೊಬ್ಬ 'ಸದಾಚಾರಿಗೂ' ಇಂದು ಧೈರ್ಯ ಬರಲಿಕ್ಕಿಲ್ಲ. ಕಾರಣ, ಈ ರಾಜ್ಯದಲ್ಲಿರುವ ಎಲ್ಲ ಯುವಕರೂ ಅವರ ರಕ್ಷಕರು, ಸೋದರರು, ಅವರಿಗೆ ಧನಬಲವಿರಲಿಕ್ಕಿಲ್ಲ, ಉದ್ಯೋಗವಿರಲಿಕ್ಕಿಲ್ಲ, ಆದರೆ, ಮೃಗಸದೃಶನಾದ ಒಬ್ಬನ ಕತ್ತು ಹಿಚುಕುವುದಕ್ಕೆ ಬೇಕಾದ ಶಕ್ತಿ ಅವರ ಕೈಗಳಿಗೆ ಕಂಡಿತವಾಗಿಯೂ ಇದೆ" (ಬಾಲ್ಯದ ದಿನಗಳು:85) ಹೀಗೆ ಹೆಣ್ಣಿಗೆ ಸುರಕ್ಷತೆಗಾಗಿ ಮುಂದಿನ ದಿನಗಳ ಸಕಾರಾತ್ಮಕ ಆಶಯವನ್ನು ವ್ಯಕ್ತಪಡಿಸುತ್ತಾರೆ.

ಮನುಷ್ಯನ ಮನದಾಳದ ಅನೇಕ ಸಂಗತಿಗಳನ್ನು ಆತ್ಮಕಥನ ತೆರೆದಿಡುತ್ತದೆ. ಸಾಮಾಜಿಕ ಸಂಗತಿಗಳು ಸಹ ನಿರೂಪಿತಗೊಳ್ಳುತ್ತಾ ಹೋಗಿವೆ. ಎರಡನೇ ಮಹಾಯುದ್ಧದ ಸಂದರ್ಭದ ನೆನಪುಗಳು ಬಾಲ್ಯದ ನೆನಪುಗಳಲ್ಲಿದೆ. ಅಮೇರಿಕನ್ ಪತ್ರಿಕೆ, ಅಮೇರಿಕನ್ ನೆರೆಮನೆಯ ಮಕ್ಕಳ ಚಿತ್ರಣವೂ ಇದೆ. ಬಾಲ್ಯ ಕಳೆದು ಯುವತಿಯಾಗಿ ಬದಲಾಗುವಾಗ, ಭಾರತದ ಸಾಮಾಜಿಕ ಸಂದರ್ಭದ ಬದಲಾದ ಸ್ಥಿತಿಯೂ ದಾಖಲೆಯಾಗಿದೆ. ಅಜ್ಜಿಯಿಂದ ಕಮಲಾ ಒಳಕಚ್ಚೆ ಉಡುವುದನ್ನು ಕಲಿಯುವ ನೆನಪು ಚಿತ್ರಣಗೊಂಡಿದೆ. ನಾಯರ್ ಆಗಿ ಹುಟ್ಟಿದರೆ, ಸೋಂಟ ಒಪ್ಪವಾಗ್ಲಿಕ್ಕೆ ಒಳಕಚ್ಚೆ ಉಡಲೇ ಬೇಕೆಂದು ಅಜ್ಜಿ ಹೇಳುತ್ತಾರೆ.

ಕಥನ ಸಾಹಿತ್ಯ, ಕಥನ ಕಲೆಯ ಸೃಷ್ಟಿಗೆ ನೇರವಾಗಿ ಸಹಾಯಕವಾಗುವಂತದ್ದು. ಹೆಣ್ಣಿನ ಅರಿವಿನ ವಿಸ್ತಾರಕ್ಕೆ ಕಥನ ಪ್ರಕಾರ ಬಹುದೊಡ್ಡ ಕಾಣಿಕೆಯಾಗಿದೆ. ಕಥನಕಲೆ ಕರಗತಗೊಳ್ಳುವುದು ಕತೆಯನ್ನು ಕೇಳುತ್ತಲೇ, ಲೇಖಕಿ ಈ ಕುರಿತು ಹೀಗೆ ಹೇಳುತ್ತಾರೆ. "ನಾನು ಕಥೆಗಳನ್ನು ಕೇಳುತ್ತ ಬೆಳೆದವಳು. ನನ್ನ ಅಮ್ಮ ಯುರೋಪ್ಯನ್ ಸಾಹಿತ್ಯ ಕೃತಿಗಳಿಂದ ಆಯ್ದು ಕಥೆಗಳನ್ನು ನನಗೂ ಅಣ್ಣನಿಗೂ ಹೇಳಿಕೊಟ್ಟರು. ಮುತ್ತಜ್ಜಿಯಿಂದಿರು ಏಕಾದಶಿ ಮಹಾತ್ಮ್ಯೆ, ಭಾರತ, ಭಾಗವತ, ರಾಮಾಯಣ ಮುಂತಾದವುಗಳನ್ನು ಸಂಜೆಯ ಹೊತ್ತಿಗೆ ಹೇಳಿಕೊಟ್ಟರು." (ಬಾಲ್ಯದ ನೆನಪುಗಳು:146) ಜೊತೆಗೆ ಚಿಕ್ಕಮ್ಮ, ತಮಿಳಿನ ಮೀನಾಕ್ಷಿಯಕ್ಕ ಹೇಳಿದ ಕತೆಗಳು ಲೇಖಕಿಯ ಮೇಲೆ ಪರಿಣಾಮವನ್ನು ಬೀರಿತ್ತು. ಈ ಮೂಲಕ ಲೇಖಕಿಯ 'ಬಾಲ್ಯದ ನೆನಪುಗಳು' ಕೌತುಕದಿಂದ ಕೂಡಿದ ನಿರೂಪಣೆಯಾಗಿ ಅಕ್ಷರರೂಪ ಪಡೆದಿದೆ.

ಆ) **ನೀರ್‌ಮಾದಳ ಹೂ ಬಿಟ್ಟ ಕಾಲ :**

"ನೀರ್‌ಮಾದಳ ಹೂಗಳ ಸುಗಂಧವು ಗಾಳಿ ಹೊತ್ತು ತರುವ ಮೃದು ಮಧುರವಾದ ಒಂದು ಹಾಡಿನ ತುಣುಕಿನಂತೆ, ಚಂಡೆಯ ಪೆಟ್ಟಿನಂತೆ ಮತ್ತು ವೀಣೆಯ ಧ್ವನಿಯಂತೆಯುಳ್ಳ ಸುಗಂಧವು ಬೇರೆ ಪುಷ್ಪಗಳಿಗೂ ಇರಬಹುದು" (ನೀರ್‌ಮಾದಳ ಹೂ ಬಿಟ್ಟ ಕಾಲ:37) ಕಮಲಾದಾಸ್ ಅವರಿಗೆ ನೀರ್‌ಮಾದಾಳ ಹೂವಿನ ನೆನಪು ಮೃದು ಮಧುರ ಭಾವದಂತೆ, ಹಾಡಿನ ತುಣುಕಿನಂತೆ, ಒಮ್ಮೊಮ್ಮೆ ಚಂಡೆಯ ಪೆಟ್ಟಿನಂತೆ ನೆನಪಿನ ಸುಳಿಯಲ್ಲಿ ನುಸುಳುವ ಎಷ್ಟೋ ಘಟನೆಗಳು ಸುಗಂಧ ಸೂಸುವ ಪುಷ್ಪದಂತೆ ನೆನಪುಗಳ ಲಹರಿ. ಈ ಕೃತಿಯು 1997ರಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು. ಲೇಖಕಿ ತಮ್ಮ 60ನೇ ವಯಸ್ಸಿನಲ್ಲಿ ಹದಿಮೂರು–ಹದಿನಾಲ್ಕು ವರ್ಷ ವಯಸ್ಸಿನ ನೆನಪನ್ನು ಹಸಿರಾಗಿರುವಂತೆ ದಾಖಲಿಸುತ್ತಾರೆ. ಅವರ ಬಾಲ್ಯ, ನಾಲಪ್ಪಾಟ್ ಮನೆಯ ಲೋಕ, ನಾಯರ್ ಸ್ತ್ರೀಯರಿಗಿದ್ದ ಕಟ್ಟುಪಾಡುಗಳು, ತನ್ನ ಮನಸಿನ ಆಸೆಗಳು, ಅಜ್ಜಿಯ ಜೊತೆಗಿನ ಒಡನಾಟ ಬೋರ್ಡಿಂಗ್ ಸ್ಕೂಲಿನ ನೆನಪುಗಳು, ಸ್ವತಂತ್ರ ಚಳವಳಿಯ ಸಂದರ್ಭ ಎಲ್ಲ ಅಂಶಗಳು ಆತ್ಮಕಥನದಲ್ಲಿ ಅಡಗಿವೆ.

ನಾಲಪ್ಪಾಟು ಮನೆಯ ವಂಶವೃಕ್ಷ ಅಜ್ಜಿಯ ಅಜ್ಜಿಯ ಅಮ್ಮ ಕುಂಜಿಯಮ್ಮನಿಂದ ಹಿಡಿದು ತನ್ನ ತಂದೆಯ ಕುಟುಂಬದ ಪರಿಚಯವನ್ನು ಕಮಲಾದಾಸ್ ನೀಡುತ್ತಾರೆ. ಅತಿ ಕಿರಿಯ ವಯಸ್ಸಿಗೆ ಮದುವೆಯಾಗುತ್ತಿದ್ದ ಆ ಕಾಲದಲ್ಲಿ ಅತಿ ಬೇಗ ವಿಧವೆಯರಾಗುತ್ತಿದ್ದ ಅಜ್ಜಿಗೆ ಹದಿಮೂರು ವರ್ಷ ವಯಸ್ಸಿನಲ್ಲೇ ಮದುವೆಯಾಗಿತ್ತು. ಹದಿನೈದರ ಪ್ರಾಯದಲ್ಲಿ ಮಗುವನ್ನು ಹಡೆದಳು. ತನ್ನ 37ನೇ ವಯಸ್ಸಿನಲ್ಲಿ ಅಜ್ಜಿ ಪತಿಯನ್ನು ಕಳೆದುಕೊಂಡರು. ಅಜ್ಜಿ ತನ್ನ ದಾಂಪತ್ಯದ ಕತೆಗಳನ್ನು ಹಂಚಿಕೊಂಡರೆ ಆ ಕತೆಯನ್ನು ಕಮಲಾರವರು ಬಾಲಿಶವೆಂಬಂತೆ ಪರಿಗಣಿಸಿದ್ದರು. ಪುಟ್ಟ ಬಾಲಕಿ ಕಮಲಾ ಕಣ್ಣುಗಳಲ್ಲಿ ವಿದುರನಾದ ಮಾವ, ಎರಡನೆ ಹೆಂಡತಿ ಕುಟ್ಟಿಯಕ್ಕಳ ನೆನಪನ್ನು ಹಂಚಿಕೊಳ್ಳುತ್ತಾರೆ.

ತೆಂಗಿನಕಾಯಿ ಕದ್ದ ಪ್ರಸಂಗವನ್ನು ವಿವರಿಸುತ್ತ ಬಡವ ಶ್ರೀಮಂತನನ್ನು ಕೇವಲ ಒಂದು ಮೃಗವಾಗಿ ಮಾತ್ರ ಪರಿಗಣಿಸುತ್ತಿದ್ದ ರೀತಿಯನ್ನು ವಿವರಿಸುತ್ತಾರೆ. ಸಾಮಾಜಿಕ ಸ್ಥಿತಿಯನ್ನು ಅನಾವರಣ ಮಾಡುತ್ತಾರೆ. ಉದ್ದಲಂಗ ಧರಿಸಿ ಪ್ರೌಡಿಮೆ ಮೆರೆದ ನೆನಪು ಸಹ ವ್ಯಕ್ತವಾಗಿದೆ. ಅಜ್ಜಿ ಶಕುಂತಲೆ ಕತೆಯನ್ನು ಹೇಳಿದಾಗ ಅದರಿಂದ ಉತ್ಸುಕಳಾಗಿ ಕಮಲಾ ಲೈಬ್ರರಿಯಿಂದ ವಳ್ಳತ್ತೋಳರ 'ಅಭಿಜ್ಞಾನ ಶಾಕುಂತಳ' ಹುಡುಕಿ ತಂದು ಓದುತ್ತಾಳೆ. ಭಕ್ತ ದ್ರುವನ ಕತೆಯನ್ನು

ಕೇಳುವ ಕಮಲಾ ಒಂದು ದಿನ ತನ್ನೊಳಗೇ ತನ್ನ ಬದುಕಿನ ಹತ್ತಾರು ಕತೆಗಳನ್ನು ಹುದುಗಿಸಿ ಮರೆ ಮಾಚುವಂತೆ ಬೆಳೆಯುತ್ತಾಳೆ.

ಮಲಬಾರ್ ಪ್ರದೇಶದ ಸ್ತ್ರೀಯರು ಸೌಂದರ್ಯವತಿಯರು, ಆದರೆ ಅಲ್ಲಿನ ರೂಢಿಯಂತೆ ಸ್ತನಗಳ ಪ್ರದರ್ಶನವೆಂದರೆ ವಿನಯವಂತಿಕೆಯ ಪ್ರಕಟಣೆ, ಅದನ್ನು ಮೀರಿ ಕ್ರಿಶ್ಚಿಯನ್ ಮುಸಲ್ಮಾನರು ಮಾತ್ರ ರವಿಕೆ ಧರಿಸುತ್ತಿದ್ದರು. ಹಲವು ಮಜಲುಗಳಲ್ಲಿ ನಡೆದ ಹೋರಾಟದ ನಂತರ ಈ ಪದ್ಧತಿ ನಿಲ್ಲಿಸಲ್ಪಟ್ಟಿತ್ತು.

ಹಳ್ಳಿ ಜೀವನ ಶೈಲಿಯಿಂದ ಮುಕ್ತವಾಗಬೇಕೆಂದು ಅಪ್ಪ ಪ್ರಯತ್ನಿಸುತ್ತಿದ್ದರು. ಲ್ಯಾನ್ಸ್ ಡೌನ್ ರೋಡಿನ ಮನೆ, ಅಮ್ಮನ ಮನೋರೋಗ, ಮನೆಯ ಜೊತೆಗೆ ಸಿಕ್ಕ ಆಯಾ ತ್ರಿಪುರ ವರದಂತೆ ಆದಳು. ತಂದೆಯವರಿಗೆ ಮಾವನ ಮಂತ್ರವಾದದಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಸಾಮರ್ಥ್ಯವಿಲ್ಲದವರ ಬಳಿ ಹಣದೋಚುವ ವಂಚನೆಯ ವಿದ್ಯೆ ಇದು ಎಂದು ಕಮಲಾ ಅವರ ತಂದೆ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಕಿಶೋರಾವಸ್ಥೆಯಲ್ಲಿ ಕಮಲಾಳಲ್ಲಿ ಮೂಡಿದ ಪ್ರಶ್ನೆಗಳಿಗೆ ತ್ರಿಪುರ ಉತ್ತರ ಕೊಡುತ್ತಿದ್ದಳು. ತ್ರಿಪುರಾಳ ರೂಪ, ಬಾಲ್ಯದಲ್ಲಿ ಅವಳಿದ್ದ ರೀತಿಗೂ ಈಗಿನ ರೀತಿಗೂ ಭಿನ್ನತೆಯನ್ನು ಗಮನಿಸಿದಳು. ತ್ರಿಪುರಾಳೊಂದಿಗೆ ಕಾಳಿಘಾಟಿಗೆ ಹೋಗಿ ಬಂದಳು. ಕಮಲಾಳ ತಂದೆಗೆ ಆಕೆಯನ್ನು ಸುಸಂಸ್ಕೃತಳನ್ನಾಗಿ ಮಾಡಬೇಕೆಂಬ ಹಂಬಲವಿತ್ತು. ಸ್ತ್ರೀ ಶಿಕ್ಷಣದ ಬಗ್ಗೆ ಅವಳಿಗೆ ಆಸಕ್ತಿ ಇರಲಿಲ್ಲ. ಕಮಲಾಳನ್ನು ಮದುವೆ ಮಾಡಿ ಕಳಿಸಬೇಕೆಂಬ ಹಂಬಲವಿತ್ತು. ಸಾಮಾನ್ಯ ಪೋಷಕರ ಆಲೋಚನೆಯಂತೆ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಬೇಕೆಂಬ ಹಂಬಲ ಅವರದಾಗಿತ್ತು. ಕಮಲಾಳ ಟೀಚರ್ ಲೀಸಾ ಚೆಕ್ ಎಂಬ ಇಂಗ್ಲಿಷ್ ಟೀಚರನ ಮಗ ಓಟ್ಟೋ ಕೈಯಲ್ಲಿ ಹತ್ತು ರೂಪಾಯಿ ನೋಟು ಕೊಟ್ಟು ಐಸ್‌ಕ್ರೀಂ ತಿನ್ನಲು ಕಳುಹಿಸಿದರು. ಅಪ್ಪನಿಂದ ಆ ದಿನ ಸತ್ಯ ಮುಚ್ಚಿಟ್ಟು ನಂತರ ಕಮಲಾ ಆ ಘಟನೆಯನ್ನು ತಿಳಿಸಿದಳು. ದೊಡ್ಡವಳಾದೆನೆಂದು ಹೆಮ್ಮೆ ಕಮಲಾಳನ್ನು ಸಾರಿ ಹೇಳುತ್ತಿತ್ತು. ತೈಲ ಚಿತ್ರಕಾರರಾದ ದಾಸ್ ಮಾಮ ತಿಳಿ ಹಸಿರು ಬಣ್ಣದ ಸೀರೆಯನ್ನು ಕೊಂಡು ಬಣ್ಣ ತುಂಬಿ ಕಳುಹಿಸಿದ್ದರು. ಪ್ರೌಢತೆಯ ಹಂಬಲ ಕಮಲಾರವರ ಸುತ್ತ ಹೀಗೆ ಸುಳಿದಿತ್ತು.

ಬಾಲ್ಯದಿಂದ ಕೌಮಾರ್ಯವಸ್ಥೆಗೆ ತೆರಳುತ್ತಿದ್ದ ಆ ಕಾಲ. ನೀರ್‌ಮಾದಾಳ ಹೂ ಬಿಡುವಂತೆ. ನೀರ್‌ಮಾದಾಳ ಹೂ ಬಿಡುವುದು ವರ್ಷಕ್ಕೆ ಒಂದು ವಾರ ಮಾತ್ರ ಹಾಗೆ ಬದುಕಿನ ಪ್ರತಿ ಘಟ್ಟವೂ. ಕೆರೆಯ ಸ್ನಾನವೆಂದರೆ ಕಮಲಾಳಿಗೆ ಪ್ರೀತಿ. ಅಂಗಾತ ಮಲಗಿ ಕೆರೆಯ ಎಳೆ

ಬಿಸಿಲಿನಲ್ಲಿ ಈಜುವ ಪರಿ ಆಕೆಗೆ ಹಿತವಾದದ್ದು. ಅಜ್ಜಿಯ ಆರೈಕೆಯ ಜೊತೆ ಮಜ್ಜನ ಜೀವನದ ಪ್ರತಿ ಸಣ್ಣ ಅನುಭವವನ್ನು ಕಮಲಾದಾಸ್ ಅನುಭವಿಸಿದ ರೀತಿ ಬರವಣಿಗೆಗೆ ತಂದಿರುವುದು ತಿಳಿದು ಬರುತ್ತದೆ.

ಬೃಜಬಾಷಿ ತಿರುಗಣಿ ಹುಡುಕಿಕೊಟ್ಟ ಮೂಕಿ, ಅತ್ತಿಗೆ ಕಲ್ಯಾಣಿಯಮ್ಮ ಗಂಡನ ಪ್ರೀತಿರಹಿತ ಸ್ವಭಾವವನ್ನು ವಿವರಿಸಿದ ಬಗ್ಗೆ ಕಮಲಾದಾಸ್‌ರವರ ಮನಸಿನಲ್ಲಿ ಅಚ್ಚಳಿಯದೆ ನಿಂತ ಪಾತ್ರಗಳಾಗಿವೆ. ಬ್ರಿಟೀಷರು ಭಾರತ ಬಿಟ್ಟು ಹೋಗುವಾಗ ಭಾರತೀಯರು ಕೆಲಸಕ್ಕಾಗಿ ಅಮೇರಿಕಾಕ್ಕೆ ತೆರಳುವ ಪ್ರಸಂಗವೊಂದನ್ನು ಚಿತ್ರಿಸುತ್ತಾರೆ. ಕಮಲಾ ಅವರ ತಂದೆ ಮಗಳಿಗೆ ಪಾಶ್ಚಾತ್ಯ ಜೀವನದ ಅನಭವವಾಗಬೇಕೆಂದು ಹಂಬಲಿಸುತ್ತಾರೆ. ಆದರೆ ಹಳ್ಳಿಯ ಜೀವನ ಮತ್ತು ನಗರ ಜೀವನ ಶೈಲಿಯ ನಡುವಿನ ತೊಳಲಾಟದ ಬದುಕು ಅವರಿಗೆ ಒದಗಿ ಬರುತ್ತದೆ.

ನರ್ತಕಿಯಾದ ಇಸಂಡೋರಾ ಡಂಕನಳ ಆತ್ಮಕತೆಯನ್ನು ಓದಿದ ಕಮಲಾ "ಸ್ತ್ರೀಯರು ಹುಟ್ಟುವುದೇ ಪ್ರೇಮ ಬಂಧಗಳಿಗಾಗಿಯೇನೋ" (ನೀರ್‌ಮಾದಳ ಹೂ ಬಿಟ್ಟ ಕಾಲ:178) ಎನಿಸಿತ್ತಂತೆ. ಪ್ರೀತಿಯ ಹುಡುಕಾಟದ ಅಂಕುಶಕ್ಕೆ ಈ ಓದು ಕಾರಣವಾಗಿರಬಹುದು.

ಕೃಷ್ಣನೆಂಬಂತೆ ತಂಗಿಯ ಜೊತೆಗೆ ಆಟವಾಡಿದ ರೀತಿ, ಹಣಕ್ಕಾಗಿ ಕುಂಜಾತ್ತು ಹೆಂಡತಿಯ ಅನಾರೋಗ್ಯದಿಂದ ಸಾಯುವುದೇ ಲೇಸು ಎಂದ ಮಾತು ಕಮಲಾಳ ವಿವರಣೆಯಲ್ಲಿದೆ. ಸರೋಜ ಚಲನಚಿತ್ರ ನೋಡುತ್ತಾಳೆಂಬ ಹಟದ ಮೇಲೆ ಅಣ್ಣನೊಡನೆ ಎಚ್.ಜಿ.ವೆಲ್ಸ್‌ನ 'ಥಿಂಗ್ಸ್ ಟು ಕಂ' ಎಂಬ ಚಿತ್ರವನ್ನು ಕಮಲಾ ನೋಡುತ್ತಾಳೆ. ಸಿನಿಮಾ ನಟಿಯರ ಬಗೆಗಿನ ಗುಮಾನಿಯ ನೋಟಗಳು ಅಂದು ಹೆಚ್ಚಾಗಿರುತ್ತಿತ್ತು. ನಟಿಯಾಗ ಹೊರಟ ಕಿಶೋರಾವಸ್ಥೆಯಲ್ಲಿರುವವ ಕಮಲಾ ತ್ರಿಪುರ ಜೊತೆಗೆ ನಿರ್ದೇಶಕ ಮೊಜುಂದಾರ್ ಬಾಬೂ ಮನೆಗೆ ಹೋದಾಗ ಆಗುವ ಅನುಭವದಿಂದ ನಟಿಯಾಗುವುದು ಬೇಡವೆಂದು ಮರಳಿ ಬರುತ್ತಾಳೆ.

ಕಥನದುದ್ದಕ್ಕೂ ಹಲವು ಸಾವು ಬಾಲ್ಯದಲ್ಲೇ ಕಮಲಾ ಅವರನ್ನು ಕಾಡಿದ ರೀತಿಯನ್ನು ವಿವರಿಸುತ್ತಾರೆ. ಮಾವನ ಹೆಂಡತಿಯ ಸಾವು, ಮುತ್ತಜ್ಜಿಯ ಸಾವು, ಠಾಕೂರನ ಹೆಂಡತಿ ಹೀರಾಮಣಿಯ ಸಾವು, ನೀಪಾಳ ಅಮ್ಮನ ಸಾವು, ಮೆಲ್ಡಾ ಎಂಬ ಟೈಲರಳ ಸಾವು ಚಿತ್ರಿಸಲ್ಪಟ್ಟಿದೆ. ಬಾಲ್ಯದಲ್ಲೇ ಈ ಮೇಲಿನ ವ್ಯಕ್ತಿಗಳು ಅವರ ಬದುಕನ್ನು ಚಿತ್ರಿಸುವ ಪರಿಯು ವಿಶಿಷ್ಟವಾಗಿದೆ. ಸಾವು ಲೇಖಕಿಯನ್ನು ಕಾಡಿರುವ ಬಗೆಯನ್ನು ಇಲ್ಲಿ ಗ್ರಹಿಸಬಹುದಾಗಿದೆ.

ನಾಯರ್ ಸ್ತ್ರೀಯರ ಸಂದರ್ಭವೂ ಸಹ ಈ ಕಥಾನಕದಲ್ಲಿ ವ್ಯಕ್ತಗೊಂಡಿದೆ. ನಾಯರ್ ಸ್ತ್ರೀಯರಿಗೆ ಹುಟ್ಟಿದ ಮನೆಯಲ್ಲಿ ಗೌರವದ ಸ್ಥಾನವಿರುತ್ತಿತ್ತು. ಗಂಡನಿಗಿಂತ ಹೆಚ್ಚಾಗಿ ಅಣ್ಣನ ಬಳಿ ಹೆಚ್ಚು ಆತ್ಮೀಯತೆಯಿಂದ ಇರುತ್ತಿದ್ದರು. ಗಂಡನ ಶವದ ಹತ್ತಿರ ಕುಳಿತು ಅಳುವ ಅವಕಾಶವೂ ನಾಯರ್ ಸ್ತ್ರೀಗೆ ಇರಲಿಲ್ಲ, ಈ ಅವಕಾಶ ಇದ್ದದ್ದು ತಂಗಿಗೆ ಮಾತ್ರ. ಪುರುಷನನ್ನು ತಮ್ಮ ಸ್ವಂತ ಮಗನನ್ನು ವಿರೋಧಿಸುವ ಹಕ್ಕು ಮಾತ್ರ ಸ್ತ್ರೀಯರಿಗಿರಲಿಲ್ಲ. ಈ ಎಲ್ಲಾ ರೀತಿ ರಿವಾಜುಗಳು ನಾಯರ್ ಸ್ತ್ರೀಯರಿಗಿದ್ದದ್ದು ತಿಳಿದು ಬರುತ್ತದೆ.

ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ ಸೀರೆಯುಟ್ಟು ಅಜ್ಜಿಯ ಮುಂದೆ ನಿಂತಾಗ ಆಕೆಯಲ್ಲಿ ಮಹತ್ತರವಾದ ಬದಲಾವಣೆಯಾಗಿತ್ತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಕಮಲಾ ಸೂಕ್ಷ್ಮವಾಗಿ ಕಂಡಳು. ಆಕೆ ಅರಿಯದೇ ಹದಿಹರೆಯ ಹಂತಕ್ಕೆ ತಲುಪಿದ್ದು ಆತ್ಮಕಥನದಲ್ಲಿ ಆ ಪಲ್ಲಟವನ್ನು ಲೇಖಕಿ ತೀರಾ ಸಹಜವೆಂಬಂತೆ ಚಿತ್ರಿಸಿರುವುದು ವಿಶೇಷವಾಗಿ ಮೂಡಿ ಬಂದಿದೆ.

ಕಮಲಾದಾಸ್ ಬದುಕಿಗೆ ಎಂದೂ ವಿಮುಕರಾಗಿ ಸಾಗಿಲ್ಲ. ಪ್ರತಿ ಅನುಭವವೂ ಸಹಜವೆಂಬಂತೆ ಚಿತ್ರಿಸಿರುವ ಶೈಲಿ ಎಲ್ಲರನ್ನೂ ಸೆಳೆವಂತದ್ದು. ಸಹಜ ಬಾಲ್ಯ, ಕೌಮಾರ್ಯ, ಕಿಶೋರಾವಸ್ಥೆಯಿಂದ ಹದಿಹರೆಯದವಳಾಗಿ ಸಾಗುವ ಹಾದಿಯಲ್ಲಿ ಕಂಡು ಅನುಭವಿಸುವ ಎಲ್ಲಾ ಸೂಕ್ಷ್ಮ ಘಟನೆಗಳೂ ಬಿತ್ತರಗೊಂಡಿದೆ. ನೀರ್‌ಮಾದಳ ಹೂ ಅರಳುವಂತೆ ಕಮಲಾಳ ಜೀವನದ ಸಂಕ್ರಮಣವೂ ಆತ್ಮಕಥನದಲ್ಲಿ ವ್ಯಕ್ತವಾಗಿದೆ.

ಇಳಿವಯಸ್ಸಿನಲ್ಲೂ ಬಾಲ್ಯದ ಸ್ಮರಣವನ್ನು ಘಟನೆಗಳ ಮಾಲೆಯಲ್ಲಿ ಒಂದಕ್ಕೊಂದು ಬೆಸೆದು ಹೆಣೆದಿರುವ ಶೈಲಿ, ಬದುಕನ್ನು ಗ್ರಹಿಸಿರುವ ಭಾವುಕತೆ, ಸೂಕ್ಷ್ಮಪ್ರಜ್ಞೆ, ಸಂಬಂಧಗಳಲ್ಲಿನ ತವಕ, ಬದುಕು ಎದುರಾದಂತೆ ಪ್ರತಿಕ್ರಿಯಿಸಿರುವ ಕ್ರಮ ಈ ಆತ್ಮಕಥನದ್ದಾಗಿದೆ. ಅಬ್ಬರ ಆಡಂಬರಗಳಿಲ್ಲದ ಸಹಜ ಮನಸಿನ ಭಾವಗಳು ಅಕ್ಷರರೂಪ ಕಂಡಿವೆ.

ಇ) ಸಾವಿನ ಭೀತಿಯಿಂದ ವಿಮುಖಗೊಳಿಸಿದ – ನನ್ನ ಕಥೆ :

ಕಮಲಾದಾಸ್ ಅವರ 'ನನ್ನ ಕಥೆ' ಬಹು ಚರ್ಚಿತ ಕೃತಿಗಳಲ್ಲಿ ಒಂದಾದ ಆತ್ಮಕಥನ, ಮನುಷ್ಯ ಪ್ರೀತಿಯ ಪರಿತಪ್ತೆಯ ಆತ್ಮಕಥನ. ಅಧ್ಯಯನದ ಭಾಗವಾಗಿ ಆತ್ಮವೃತ್ತಾಂತವನ್ನು ಚರ್ಚೆ ನಡೆಸಲಾಗುವುದು. ಬದುಕ ಪ್ರೀತಿಸಿದ ಕಥನ. ಬದುಕು ಬರೀ ಕನಸು, ಸಾವು ಮಾತ್ರ ವಾಸ್ತವ ಎಂದು ನಂಬುವ ಸ್ಥಿತಿ ತಲುಪಿದ್ದೇನೆ ಎಂದು ಲೇಖಕಿ 'ನನ್ನ ಕಥೆ'ಯಲ್ಲಿ ಹೇಳಿಕೊಳ್ಳುತ್ತಾರೆ. ಲೇಖಕಿಯು ಬೆಳಕು ತುಂಬಿದ ಗಾಜಿನ ಪಾತ್ರೆಯಲ್ಲಿನ ಮೀನಿನಂತೆ. ಏನನ್ನೂ ಮುಚ್ಚಿಟ್ಟುಕೊಳ್ಳಲಾರಳು ಎಂದು ಹೇಳುತ್ತಾ ಪಾರದರ್ಶಕವಾಗಿ ಬದುಕಿನ ಮಾನಸಿಕ

ಬಿಡುಗಡೆಗೊಳಿಸಿಕೊಂಡ ಸಂದರ್ಭವಾಗಿದೆ. ತನ್ನತನದ ಹುಡುಕಾಟವೇ ಆತ್ಮಕಥನದ ಮೂಲ ಆಶಯವಾಗಿ ಮೂಡಿ ಬಂದಿದೆ.

'Kamala das has the courage and boldness to speak out her mind and withstand the excoriations of the male dominated society. Her life is an open book of controversies. Right from her childhood she is a kind of girl who resisted authrotiy and her father's autocratic ways and her husband's uncaring and unloving attitude in her our style. This is in fact a self revelation of the author where she unravels the secrets of her thought without any inhibitions. (www. Rjelal.com) ಎಲ್ಲಾ ಆತ್ಮಕಥನಗಳು ನೆನಪಿನ ಲಹರಿಯಿಂದ ಮೂಡಿ ಬಂದ ಅಕ್ಷರ ರೂಪ. ಬಾಲ್ಯದ ನೆನಪುಗಳಿಂದ ಆರಂಭಗೊಂಡು 40ನೇ ವಯಸ್ಸಿನಲ್ಲಿ ಹೃದಯಾಘಾತವಾಗುವ ತನಕವೂ ನಡೆದ ಬದುಕಿನ ಘಟನೆಗಳ ಸರಮಾಲೆ ಇದಾಗಿದೆ. ವಸಾಹತು ಸಂದರ್ಭ ಬಾಲ್ಯದ ಮೇಲೆ ಉಂಟು ಮಾಡಿದ ಪರಿಣಾಮ ಲೇಖಕಿಯನ್ನು ಬಹಳವಾಗಿ ಕಾಡಿತ್ತು. ಕಮಲಾದಾಸ್ ಬಾಲ್ಯ ಕಲ್ಕತ್ತಾದಲ್ಲಿ ಕಳೆದರು. ಮಲಬಾರಿನ ಅಜ್ಜಿಮನೆ ಅಪಾರ ಅನುಭವದ ಆಗರ. ಈಗಾಗಲೇ 'ನೀರ್‌ಮಾದಾಳ ಹೂ ಬಿಟ್ಟಕಾಲ' ಕೃತಿಯ ಚರ್ಚೆಯ ಸಂದರ್ಭದಲ್ಲಿ ಅದನ್ನು ಪ್ರಸ್ತಾಪಿಸಲಾಗುತ್ತಿದೆ. ಬಾಲ್ಯದಲ್ಲಿ ಕುಟುಂಬದಲ್ಲಿ ಅಲಕ್ಷ್ಯಕ್ಕೆ ಒಳಗಾದರು. ಶಾಲೆಯಲ್ಲಿ ವಸಾಹತು ಧೋರಣೆಯ ಪ್ರಸಂಗವೂ ಉದಾಹರಿಸಬಹುದು. ಇಂತಹ ಸಂದರ್ಭದಲ್ಲಿ ತಮ್ಮ ಅಸ್ಥಿತ್ವಕ್ಕಾಗಿ ಹುಡುಕಾಟ ನಡೆಸಿದ ಪ್ರಸಂಗವೂ ಇದೆ. ಸ್ವಂತಂತ್ರ ಚಳುವಳಿ, ಗಾಂಧಿ ಪ್ರಭಾವವೂ ಬಾಲ್ಯದ ದಿನಗಳಲ್ಲಾಗಿದೆ. ಮುಂದೊಂದು ದಿನ ಪ್ರೀತಿಯ ನಿರಂತರ ಹುಡುಕಾಟದಲ್ಲಿ ತೊಡಗಿದ ಲೇಖಕಿಗೆ ತನ್ನ ಅಪ್ಪ ಅಮ್ಮನ ದಾಂಪತ್ಯದ ಅಪರಿಪೂರ್ಣತೆಯ ಪರಿಣಾಮವೂ ನೆನಪಿದೆ. ಅಪ್ಪ–ಅಮ್ಮನ ದಾಂಪತ್ಯ ಕೇವಲ ಕೌಟುಂಬಿಕ ಸಾಮರಸ್ಯದ ತೋರಿದೆ ಎಂಬ ಗ್ರಹಿಕೆ ಬಾಲ್ಯದಲ್ಲೇ ಇತ್ತು. ಗೊಂಬೆಗಾಗಿ ಆಸೆ ಪಟ್ಟ ಬಾಲ್ಯದಲ್ಲಿ ಮೆನನ್ ಆ ಆಸೆಯನ್ನು ಪೂರೈಸಿದ ಸಂದರ್ಭ ಬಾಲ್ಯದ ಸಹಜ ಆಸೆಯನ್ನು ಈಡೇರಿಸಿಕೊಂಡಂತಿದೆ.

ಸಾವಿನಿಂದ ವಿಮುಖರಾಗಲು ಬರೆದ ಈ ಕತೆ ಲೇಖಕಿಯ ಬಾಲ್ಯದಲ್ಲಿ ಕಾಡಿದ ಸಮಾಧಿಯ ಪ್ರಸಂಗವನ್ನು ನೆನಪಿಸುತ್ತದೆ. ಕೇವಲ ಜೀವಂತ ಮಂಗಗಳ ನಡುವೆ ಸಮಾಧಿಯ ಬಳಿ ಕುಳಿತು ಎಲಿಜಬೆತ್, ರೋಜರ್‌ಲಿಪ್ಪನ್, ರೋಸ್‌ಮಂಡ್ ಯಾರು? ಅವರ ಜೀವಿತಾವಧಿಯ ಬಗೆಗಿನ ಪ್ರಶ್ನೆಗಳು ಕಮಲಾದಾಸ್‌ರವರನ್ನು ಕಾಡಿದೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭ ನಾಲಪ್ಪಾಟ್ ಮನೆಯವರೆಲ್ಲರನ್ನೂ ಆವರಿಸಿತ್ತು. ಆಳುಗಳು ಗಾಂಧಿಯ

ಅನುಯಾಯಿಗಳಾಗಿರುವುದಕ್ಕೆ ಸಾಕ್ಷಿಯಾಗಿ ಖಾದಿಯನ್ನು ಧರಿಸುತ್ತಿದ್ದರು. ಅಜ್ಜಿ ಗುರುವಾಯೂರಿಗೆ ಹೋಗಿದ್ದಾಗ ಗಾಂಧೀಜಿಯವರ ಹಿಂದಿ-ಇಂಗ್ಲಿಷ್ ಮಾತನ್ನು ಕೇಳಿ ಅರ್ಥವಾಗದಿದ್ದರೂ ಅವರ ನಗುವಿಗೆ ಸಮ್ಮೋಹನಗೊಳ್ಳುತ್ತಿದ್ದರು. ತಮ್ಮ ಆಭರಣವನ್ನೆಲ್ಲಾ ಗಾಂಧೀಜಿಗೆ ಕೊಟ್ಟು ಬಂದಿದ್ದರು.

ಅಮ್ಮ ಬಾಲಮಣಿಯಮ್ಮ ಕವಯತ್ರಿ ತಾತಾ ನಾರಾಯಣ ಮೆನನ್ ಕವಿ-ತತ್ವಜ್ಞಾನಿ ನಾಲಪ್ಪಾಟ್ ಮನೆಯಲ್ಲಿ ಓಲೆಗರಿಯ ಲೈಬ್ರರಿ, ಅಜ್ಜಿಯ ಅನುಭವ ಲೋಕ, ಕಮಲಾದಾಸ್ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರಿದೆ. ಮುತ್ತಜ್ಜಿಯ ಕಿರಿಯ ಸೋದರಿ ಅಮ್ಮಾವಿ ಕವಯತ್ರಿ, ಆಕೆ ಸತ್ತ 30 ವರ್ಷಗಳ ನಂತರ ಆಕೆಯ ಕವನಗಳನ್ನು ಓದಿದ್ದೆ ಎನ್ನುತ್ತಾರೆ ಕಮಲಾದಾಸ್. ಆಕೆಯ ಬರಹಗಳು ಅಮ್ಮಾವಿಯನ್ನು ಜೀವಂತವಾಗಿರಿಸಿದವು. "ಓ ಕೃಷ್ಣ, ನನ್ನ ಪರಿಶುದ್ಧತೆಯೊಂದು ನಿನಗೆ ನನ್ನ ಕಾಣಿಕೆ" (ನನ್ನ ಕಥೆ:24) ಎಂದು ಬರೆದ ರೀತಿ ಕಮಲಾದಾಸ್‌ರ ಮನಕಲಕಿತ್ತು. 6 ವರ್ಷದ ಬಾಲ್ಯದ ನೆನಪನ್ನು ಮಧ್ಯವಯಸ್ಸಿನಲ್ಲಿ ಪ್ರಸ್ತುತ ಪಡಿಸಿದ ರೀತಿ ಗಮನಾರ್ಹವಾದುದು.

ನಾಯರ್ ಕುಟುಂಬದ ಮದುವೆಯು ಇಂತಿದೆ. ವರ ವಧುವಿಗೆ ತುಂಡು ಬಟ್ಟೆಯೊಂದನ್ನು ಕೊಟ್ಟರೆ ಅದು ಮದುವೆಯಂತೆ, ಈ ಆಚಾರ ಭಿನ್ನವಾದುದಾಗಿದೆ. ಲೇಖಕಿ ಇಲ್ಲಿ ಕೇವಲ ತನ್ನ ಜೀವನಗಾಥೆಯನ್ನು ಹೇಳಿಕೊಳ್ಳುತ್ತಿಲ್ಲ. ಇದು ಆ ಕಾಲದ ಅವಳ ಸಾಂಸ್ಕೃತಿಕ ಚಿತ್ರಣ ಎನ್ನುವುದಕ್ಕೆ ಉದಾಹರಣೆಯಾಗಿದೆ. ಇಷ್ಟು ಸ್ವತಂತ್ರವಿರುವ ಸ್ತ್ರೀ ಪುರುಷ ಸಂಬಂಧಗಳಿದ್ದರೂ, ಉತ್ತಮ ನಾಯರ್ ಹೆಣ್ಣುಗಳು ಕಾಮದ ಬಗ್ಗೆ ಚಕಾರವೆತ್ತುವಂತಿರಲಿಲ್ಲ. ಅದೊಂದು ಫೋಬಿಯಾದಂತೆ ಇತ್ತು. ಸ್ವತಂತ್ರ ಸ್ಥಿತಿಯಲ್ಲೊಂದು ಆತಂಕದ ಸಂಬಂಧಗಳು ನಿರೂಪಿತವಾಗಿವೆ. ಇದು ಕೇವಲ ಕಮಲಾದಾಸ್‌ರ ಕತೆಯಲ್ಲ, ಪರಂಪರೆಯ, ಸಂಸ್ಕೃತಿಯ, ಆಚರಣೆಯ ಭಾಗವೂ ಆಗಿದೆ. ಇದಕ್ಕೆ ಸಾಕ್ಷಿಯಾಗಿ ನಾಲಪ್ಪಾಟ್ ಮನೆಯಲ್ಲಿ ಮಳೆಗಾಲದಲ್ಲಿ ಆಚರಿಸುತ್ತಿದ್ದ ಆಚರಣೆ 'ಒಟ್ಟಂತುಲ್ಲಾಲ್ ನೃತ್ಯಗಾರ ಡೋಲಿನೊಡನೆ ಮುಖಕ್ಕೆ ಹಸಿರು, ಕೆಂಪು ಬಣ್ಣಗಳನ್ನು ಹಚ್ಚಿ ಪ್ರದರ್ಶನ ತೋರುತ್ತಿದ್ದುದು ಉದಾಹರಣೆಯಾಗಿದೆ.

ಕಮಲಾದಾಸ್ ಆರು ವರ್ಷದವರಿದ್ದಾಗಲೇ ಭಾವುಕಳಾಗಿ ಬರೆದ ಕವನಗಳು 'ತಲೆ ಕಳೆದುಕೊಂಡು ಅನಂತ ಕಾಲದವರೆಗೂ ಹಾಗೆಯೇ ಇರಬೇಕಾದ ಗೊಂಬೆಗಳನ್ನು ಕುರಿತದ್ದು' ದುಃಖ ಕವನಗಳನ್ನು ರಚಿಸಿ ಆಕೆಯನ್ನೇ ಅಳಿಸಿದ ಕವನಗಳು ಅದಾಗಿತ್ತು. ಮತ್ತೊಮ್ಮೆ ಕಲಾವಂತಿಕೆಯನ್ನು ಸಾಬೀತು ಮಾಡಿದ್ದು ಅಭಿನೇತ್ರಿಯಾಗಿ. ಕಮಲಾದಾಸ್ ಮತ್ತು ಸೋದರ, ಸ್ನೇಹಿತರ ಸಹಕಾರದಿಂದ ಛನ್ನರಿ ಮಕ್ಕಳ ಡ್ರಾಮೇಟಿಕ್ ಸೊಸೈಟಿಯನ್ನು ಸ್ಥಾಪಿಸಿದೆವು. ಆಕೆ

ಅಭಿನಯಿಸಿದ ಪ್ರಥಮ ನಾಟಕ 'ವಿಕ್ಟರ್ ಹ್ಯೂಗೋ' ಬರೆದ 'ಲೇ ಮಿಸ್ಟರ್‌ಬಲ್ಸ್‌ನ' ಮಲಯಾಳೀ ರೂಪಾಂತರ ಅವರೇ ಹೇಳಿಕೊಳ್ಳುವಂತೆ ಅತ್ಯುತ್ತಮವಾಗಿ ಅಭಿನಯಿಸಿದ ಪಾತ್ರ ಮೊಗಲ್ ರಾಣಿ ನೂರ್ ಜಹಾನ್‌ಳದ್ದು. ಭೀಕರ ಯುದ್ಧದ ಬಳಿಕ ನೂರ್‌ಜಹಾನ್ ರಣಭೂಮಿಗೆ ಪ್ರವೇಶಿಸುವ ದೃಶ್ಯ ಮನೋಜ್ಞವಾದದ್ದಾಗಿತ್ತು. ಈ ಬಾಲ್ಯದ ಸಿಹಿ ನೆನಪಿನ ಹಿಂದೆ ಕಹಿ ಅನುಭವವೂ ಕಾದಿತ್ತು. ಕಮಲಾದಾಸ್ ಒಂಭತ್ತನೆ ವಯಸ್ಸಿನಲ್ಲಿ ಬೋರ್ಡಿಂಗ್ ಶಾಲೆಗೆ ಸೇರಿದ್ದು. ಬೋರ್ಡಿಂಗ್ ಸ್ಕೂಲಿನ ಅನುಭವ ಹರೆಯಕ್ಕೆ ಕಾಲಿಡುವ ಹುಡುಗಿಗೊಂದು ಸುಸಜ್ಜಿತ ಹಿನ್ನಲೆಯನ್ನೊದಗಿಸಿತ್ತು. ಬೋರ್ಡಿಂಗ್ ಸಿಸ್ಟರ್ ಫಿಲೋಮಿನಾ ರಾಜಿ, ಆ್ಯನಿ, ಶಾರದಾ ಮೆನನ್ ಇವರುಗಳ ಜೊತೆಗಿನ ಒಡನಾಟ ಬೇರೆಯದೇ ಅನುಭವ ನೀಡಿತು. ಹುಟ್ಟು ಹಬ್ಬಕ್ಕಾಗಿ ಹೊಸಬಟ್ಟೆಗಾಗಿ ಅಪ್ಪನಿಗೆ ಪತ್ರ ಬರೆದದ್ದು, ಒಂದು ತಿಂಗಳು ತಡವಾಗಿ ಪ್ರಾಕ್ ಕೈ ಸೇರಿತ್ತು. ಗೆಳತಿಯರು ನೀಡಿದ ಉಡುಗೊರೆ ಕಣ್ತುಂಬಿ ಬಂದಿತ್ತು. ಬದುಕು ಹಾಗೆ ಆ ಹೊತ್ತಿನ ಅಗತ್ಯಗಳಿಗಾಗಿ ಹಾತೊರೆಯುತ್ತಿರುತ್ತದೆ. ಸಿಗಲಾರದಕ್ಕೆ ಮಿತಿ ಮೀರಿದ ದುಃಖ ಅನುಭವಿಸಿದ ಮನಸ್ಸು ಮನುಷ್ಯರದಾಗಿರುತ್ತದೆ.

ಆ್ಯನಿಯ ಸ್ಫುರದ್ರೂಪಿ ಪ್ರೇಮಿಯ ಪತ್ರಗಳು ಸ್ವತಃ ಆಕೆಯೇ ಬರೆದದ್ದು, ಸ್ವನಿರ್ಮಿತ ಊಹಾ ಪ್ರಪಂಚದಲ್ಲಿ ಆಕೆ ವಿಹರಿಸುತ್ತಿದುದು ಕಮಲಾದಾಸ್‌ಗೊಂದು ವಿಚಿತ್ರ ಅನುಭವ ತಂದಿತ್ತು. ಪತ್ರ ಬರೆಯುವ ಪ್ರಕ್ರಿಯೆಯಲ್ಲಿ ನನ್‌ಗಳು ಒತ್ತಾಯಿಸುತ್ತಿದ್ದ ಕ್ರಮ ಗಮನಿಸಬೇಕಾದ ಸಂಗತಿಯಾಗಿದೆ. ತಾವು ಬರೆದ ಪತ್ರಗಳನ್ನು ಸೆನ್ಸಾರ್ ಮಾಡುತ್ತಾ 'ನಾವು ಬೋರ್ಡಿಂಗ್ ಸ್ಕೂಲ್‌ನಲ್ಲಿ ಸಂತೋಷವಾಗಿರುವೆವೆಂದೂ, ಪ್ರತಿದಿನ ಬಂಧುಗಳ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸುತ್ತಿರುವೆವೆಂದೂ ಬರೆಯಲು ನನ್‌ಗಳು ಒತ್ತಾಯಿಸುತ್ತಿದ್ದ ರೀತಿ, ಕ್ರಿಶ್ಚಿಯನ್ ಶಿಕ್ಷಕಿ ಕುಳ್ಳಗಿನ ಸಿಟ್ಟಿನವಳಾದ ಅವಿವಾಹಿತೆ ಸಿರಿಯನ್ ಕ್ರಿಶ್ಚನ್ ಈ ಸಂಗತಿಗಳು ಕ್ರೈಸ್ತ ಧರ್ಮದ ಪ್ರಭಾವವನ್ನು ಬಿಂಬಿಸುತ್ತದೆ.

ಕಮಲಾ ತನ್ನ ಮೊದಲ ಪ್ರೀತಿಯಾದದ್ದು ಹದಿಮೂರನೇ ವಯಸ್ಸಿನಲ್ಲಿ ಆತ ಒಬ್ಬ ವಿದ್ಯಾರ್ಥಿ ಮುಖಂಡನಾಗಿದ್ದ. ಆದರೆ ಆತನ ಆಸಕ್ತಿ ಕೇವಲ ರಾಜಕೀಯದ ಕಡೆಗೆ ಇದ್ದಿದರಿಂದ ಆಕೆಯ ಕಡೆ ಗಮನ ಹರಿಸಿರಲಿಲ್ಲ. ಅಜ್ಜಿಗೆ ಸೂಕ್ಷ್ಮವಾಗಿ ಈ ವಿಷಯ ತಿಳಿದಿತ್ತು. ಸರ್ಪದ ಕಣ್ಣಿನವರನ್ನು ನಂಬಬಾರದೆಂದು ಅಜ್ಜಿ ಹೇಳಿದ ಮಾತು ಕಮಲಾಳ ಸೂಕ್ಷ್ಮ ಬುದ್ಧಿಗೆ ತಿಳಿದಿತ್ತು. ಮನಸ್ಸಿನಲ್ಲೇ ಅವಿತಿಟ್ಟಿದ್ದ ಅದೆಷ್ಟೋ ಬಯಕೆಗಳು ಸಹಜವಾಗಿ ಚಿತ್ರಿಸಿದ ಲೇಖಕಿ ಇವರು. ಪ್ರಥಮ ಪ್ರೇಮವನ್ನು ನಿಷ್ಠೆಯಿಂದ ಬರೆದುಕೊಂಡಿದ್ದಾರೆ. ಇದು ಆಕರ್ಷಣೆಯೋ, ವ್ಯಾಮೋಹವೋ, ಆ ಕಾಲದ ಅಗತ್ಯವೋ ತಿಳಿಯದು. ಪ್ರೀತಿ ಬಯಸಿ ಹೋದ ಶಿಕ್ಷಕನ

ಮಮತೆಯ ಮೃದುತ್ವದ ನಡವಳಿಕೆಯನ್ನು ತನ್ಮಯತೆಯಿಂದ ನೆನಪಿಸಿಕೊಳ್ಳುತ್ತಾರಾದರೂ ಯೌವನದ ಮೊದಲ ಪ್ರೀತಿ ನಿರಾಶಾದಾಯಕವೆಂಬ ಅತೃಪ್ತಿ ಲೇಖಕಿಯನ್ನು ಕಾಡಿದೆ.

'ದಾಸ್' ನಿಶ್ಚಿತಾರ್ಥದ ನಂತರ ಕಮಲಾಳ ಮನಸ್ಥಿತಿ ವಿಫಲಗೊಂಡಿತ್ತು. ಯೋಚಿಸದೆ ಮದುವೆಗೆ ಒಪ್ಪಿದ್ದಳು. ಯೋಚಿಸುವ, ಚರ್ಚಿಸುವ ಯಾವ ಅವಕಾಶವೂ ಇಲ್ಲದೆ ಎಲ್ಲವೂ ನಿಶ್ಚಿತ, ಅರೆಮನಸಿನ ನಿಶ್ಚಯ ಅದಾಗಿತ್ತು. ನಾವು ಏಕಾಂತದಲ್ಲಿರುವುದಕ್ಕೆ ತಂದೆ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಆದರೆ ಅದು ನನ್ನ ಅಗತ್ಯವೆನಿಸಿರಲಿಲ್ಲ, ಅಪ್ಪ ಹಾಗೆ ತಿಳಿದಿರಬಹುದೆಂದು ಮನಸಿನೊಳಗೆ ಅನಿಸುತ್ತಿತ್ತು. ಗೌಪ್ಯವೆನಿಸುವ ಎಷ್ಟೋ ಸಂಗತಿಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ, ಕೇವಲ ಲೇಖಕಿಯ ಅನುಭವ ಇದಾಗುವುದಿಲ್ಲ. ಬಹುತೇಕ ಹೆಣ್ಣು ಮಕ್ಕಳು ಅರೆಮನಸ್ಸಿನಿಂದ ನಿಶ್ಚಯವಾಗಿರುವ ವಿವಾಹದ ಸ್ಥಿತಿ ಇದೆ. ಆದ್ದರಿಂದ ಈ ಆತ್ಮಕಥನದ ಶೀರ್ಷಿಕೆ 'ನನ್ನಕಥೆ' ಕೇವಲ ಆಕೆಯ ಕಥೆಯಲ್ಲ, ಇಡೀ ಸ್ತ್ರೀ ಸಮೂಹದ ದನಿಯಾಗಿ ಮೂಡಿ ಬಂದಿದೆ. ಪ್ರೀತಿಯ ಹುಡುಕಾಟದಲ್ಲಿ ಕಮಲಾದಾಸ್ ನಿರತರಾಗುತ್ತಾರೆ. ಪುರುಷ ಬಯಸುವ ದೇಹಕೇಂದ್ರಿತ ಪ್ರೀತಿಯನ್ನು ಕಮಲಾ ನಿರಾಕರಿಸುತ್ತಾರೆ.

ಪುರುಷರಿಗೆ ಕಾಮವೆಂಬುದು ದೈನಂದಿನ ಚಟುವಟಿಕೆಯಂತೆ ಮಾತ್ರ, ಭಾವುಕ ಲೋಕಸೀಮಿತವಾಗಿರುವುದು ಹೆಣ್ಣಿಗಾಗಿ, ಆಕೆ ಸಂಬಂಧವನ್ನು ಗಂಭೀರವಾಗಿ ಪರಿಗಣಿಸುವಷ್ಟು ಆತ ಪರಿಗಣಿಸುವುದಿಲ್ಲ. ಅದನ್ನು ಕಮಲಾದಾಸ್ ಹೀಗೆ ಹೇಳುತ್ತಾರೆ. ಅಲ್ಲ ವ್ಯಂಗ್ಯ, ನೋವು, ಪುರುಷ ಸ್ವಭಾವ ಇಂತದ್ದೇ ಎಂಬ ಸ್ಥಿತಪ್ರಜ್ಞೆಯೂ ಇದೆ. "ಗಂಡಸರಿಗೆ ನವಿರು ಪ್ರೇಮಕ್ಕಾಗಿ ಸಮಯವು ಇರಲಿಲ್ಲ, ಏಕೆಂದರೆ ಉಳುವುದು, ಬಿತ್ತುವುದು, ಸೌದೆ ಕಡಿಯುವುದು ಮತ್ತು ದನ-ಕರುಗಳಿಗೆ ಮೇವು ನೀಡುವುದು ಮುಂತಾದ ದೈನಂದಿನ ಮುಗಿಯಲಾರದ ಕೆಲಸಗಳಿರುತ್ತಿದ್ದವು." (ನನ್ನ ಕಥೆ:83) ಕೇವಲ ವೃಗಗಳಂತೆ ಹೆಣ್ಣನ್ನು ನಡೆಸಿಕೊಳ್ಳುತ್ತಿದ್ದ ಪುರುಷ ಪ್ರವೃತ್ತಿಗೆ ನಿರಾಕರಣೆ ತೋರುವ ಸಂದರ್ಭವೂ ಅದಾಗಿದೆ.

ಕಮಲಾದಾಸ್ ನಮಗೆ ಸಿಗಲಾರದ ಸಾಂಗತ್ಯದ ಅತೃಪ್ತಿಯನ್ನು ಹೀಗೆ ಹೇಳುತ್ತಾರೆ. "ನನಗೆ ಸಾಂಗತ್ಯ-ಸಂವಾದ-ಬೆಚ್ಚನೆಯ ಅನುಭವ ಬೇಕಿತ್ತು. ಕಾಮ ನನ್ನ ಯೋಚನೆಗಳಿಂದ ತುಂಬಾ ದೂರವಿತ್ತು. ನನ್ನ ಒಂಟಿತನವನ್ನು ಒಂದೇ ಬಾರಿ ನಿವಾರಿಸುತ್ತಾರೆಂದು ಆಶಿಸಿದ್ದೆ" (ನನ್ನ ಕಥೆ:84) ಅವಳ ಅಗತ್ಯವೇ ಬೇರೆ, ಒದಗಿಬಂದ ಸಂದರ್ಭವೇ ಬೇರೆ. ಮಾನಸಿಕ ಅತೃಪ್ತಿ ಸದಾ ಮನುಷ್ಯರನ್ನು ಬಾಧಿಸುತ್ತಿರುತ್ತದೆ. ಹಾಗಾದರೆ ಪ್ರೀತಿ ಎಂದರೆ ಏನು? ಮಾನಸಿಕ ಸಾಂಗತ್ಯವೆನ್ನುವುದಿದೆಯೇ? "ಸಂಗಾತಿ ಶಬ್ದ ತನ್ನ ಐಹಿಕ ಅರ್ಥಗಳಿಂದ ನನಗೆ

ಅಹಿತವೆನ್ನಿಸುತ್ತಿತ್ತು. ನನ್ನನ್ನೇ ನಾನು ಕಳೆದುಕೊಂಡಂತಾಗಿ ಅಸಂತುಷ್ಟಳಾದೆ. ಎಲ್ಲವೂ ಸುಖಕರವಾಗಿರುತ್ತದೆ ಎಂದು ಕಿವಿಯಲ್ಲಿ ಉದುರುವ ಧ್ವನಿ, ತಲೆಕೂದಲನ್ನು ಮೃದುವಾಗಿ ನೇವರಿಸುವ ಕೈ, ಈ ತೆರನಾದ ಶಾಂತ ಸಾಂಗತ್ಯ ಬೇಕಿತ್ತೆಂದು ಆಶಿಸಿದ್ದೆ ಎಂದು ತಂದೆಗೆ ಹೇಳುವಂತಿರಲಿಲ್ಲ. ನನ್ನ 'ಬ್ರಾ' ಹರಿಯುವ ನನ್ನ ಸ್ಕರ್ಟಿನೊಳಗೆ ಹರಿದಾಡುವ ಒರಟು ಕೈಗಳ ಅವಶ್ಯಕತೆ ನನಗಿರಲಿಲ್ಲ". (ನನ್ನ ಕಥೆ:84) ಮಾನಸಿಕ ಸಾಂಗತ್ಯವನ್ನು ನಿರಾಕರಿಸಿ ನಡೆಯುವ ಪುರುಷ ನಡವಳಿಕೆಗೆ ಬರವಣಿಗೆಯ ಮೂಲಕ ತೋರಿದ ಪ್ರತಿರೋಧ ಇದಾಗಿದೆ.

ಪ್ರೀತಿಯನ್ನು ಲೇಖಕಿ ಕಲ್ಪಿಸಿಕೊಂಡ ರೀತಿಯೇ ಬೇರೆಯಾಗಿತ್ತು. ಅಂತಹ ನವಿರುಭಾವವನ್ನು ಲೇಖಕಿ ಹಂಚಿಕೊಳ್ಳುತ್ತಾರೆ. "ನನಗೆ ಪ್ರೀತಿ ಎಂದಾಕ್ಷಣ ಕೂದಲು ಸಿಂಗರಿಸಿದ ಹೂಗಳು ಪರಿಚಿತ ಮುಖವನ್ನು ಬೆಳಗುವ ಹೊನ್ನ-ಬೆಳದಿಂಗಳು, ಕಿವಿಯಲ್ಲಿ ಉಸುರುವ ಮೇಲ್ನುಡಿಗಳು ಎಂಬ ಭಾವನೆ ಇತ್ತು." (ನನ್ನ ಕಥೆ:89) ಅದರ ಬದಲಿಗಿನ ಒರಟು ವರ್ತನೆ ಮುಗ್ಧತೆಯನ್ನು ಹಾಳು ಮಾಡಿತು. ಹಿಂಸೆಯನ್ನು ಒಗ್ಗಿಸಿಯೇ ಪಳಗಿದ ಪ್ರೀತಿಯ ಸೋಗಿನ ದಾಂಪತ್ಯಕ್ಕೆ ಇವರ ವಿರೋಧವಿತ್ತು. ಇದನ್ನು ಸ್ವತಃ ಲೇಖಕಿ ತಿರಸ್ಕರಿಸುತ್ತಾರೆ. ದಾಂಪತ್ಯದಲ್ಲಿನ ಅತೃಪ್ತಿಯನ್ನು ಕಮಲಾದಾಸ್ ತಾಯ್ತನದಲ್ಲಿ ದಕ್ಕಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಮಾನಸಿಕವಾಗಿ ಪ್ರೀತಿ ಇಲ್ಲದ ಸಖ್ಯವಿಲ್ಲದ ದಾಸ್‌ರನ್ನು ದೈಹಿಕವಾಗಿಯೂ ದೂರವಿಡುವ ಮೂಲಕ ತೋರಿದ ಪ್ರತಿರೋಧ ವ್ಯಕ್ತಗೊಂಡಿದೆ.

ಅಸಫಲ ದಾಂಪತ್ಯದಿಂದ ಅತೃಪ್ತಿಗೊಂಡ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಳ್ಳಲು ಆಯ್ಕೆ ಮಾಡಿಕೊಂಡ ಲೇಖಕಿಯ ಹಾದಿ ಸುಗಮವಾದದ್ದು ಬರವಣಿಗೆಯ ಮೂಲಕ. ಹೊಸ ಬದುಕಿನ, ಕನಸಿನ ಬೆಳಕಿನ ಭವಿಷ್ಯವನ್ನರಸುತ್ತಾ ಕವನಗಳನ್ನು ರಚಿಸಿದರು. ಅವರೇ ಹೇಳಿಕೊಳ್ಳುವಂತೆ ಅವರ ನೋವುಗಳು ಮುಂಗಾರು ಮೋಡ ಬಾನಿನಲ್ಲಿ ತೇಲಿದಂತೆ ಪತ್ರಿಕೆಗಳ ಪುಟಗಳಲ್ಲಿ ಪ್ರಕಟವಾಯಿತು. ದೈಹಿಕೆ ನಿಷ್ಠೆಗಿಂತ ಮಾನಸಿಕ ಸಖ್ಯವೇ ಪರಮ ಸತ್ಯವೆಂಬ ಮನೋಭಾವದ ಹಂಬಲದ ನಿರಂತರ ಹುಡುಕಾಟ ಲೇಖಕಿಯ ಬದುಕಿನ ಬರವಣಿಗೆಯ ಧ್ಯೇಯವೂ ಆಯಿತು. ಕಳೆದು ಹೋದ ತನ್ನನ್ನು ಸಾಹಿತ್ಯದಲ್ಲಿ ಹುಡುಕುವ ಪ್ರಯತ್ನ ಮಾಡಿದರು.

ಅಧ್ಯಾಯ ೮

ಫಲಿತಗಳ ಮಂಡನೆ

ಅಧ್ಯಾಯ – 8

ಫಲಿತಗಳ ಮಂಡನೆ

'ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ತೌಲನಿಕ ಅಧ್ಯಯನ' ಈ ಪ್ರಬಂಧದ ಶೀರ್ಷಿಕೆಯನ್ನು ಗಮನಿಸಿದರೆ ಇದು ತೌಲನಿಕ ಅಧ್ಯಯನವಾಗಿರುತ್ತದೆ. 'ತೌಲನಿಕ ಅಧ್ಯಯನ'ವೆಂದರೆ ಇಬ್ಬರು ಲೇಖಕಿಯರ ಕಥನವನ್ನು ಸಾಲಾಗಿಟ್ಟು ಸಮತೂಗಿಸುವುದೆಂದಲ್ಲ, ಅಲ್ಲಿ ಸಮಾನತೆಯೇ ಮುಖ್ಯ ಅಂಶವಾಗಿರುವುದಿಲ್ಲ. ಸಾದೃಶ್ಯ–ವೈದೃಶ್ಯಗಳ ಪತ್ತೆ ಹಚ್ಚುವ ಕಾರ್ಯವಲ್ಲ, ಸರಿ, ತಪ್ಪುಗಳನ್ನು ನಿಷ್ಕರ್ಶೆ ಮಾಡಿ ತೀರ್ಮಾನ ಕೈಗೊಂಡು ಬಿಡುವುದಲ್ಲ, ಹಾಗಾದರೆ ತೌಲನಿಕ ಅಧ್ಯಯನದ ಅಗತ್ಯವೇನು? ಅದರ ಸ್ವರೂಪ ಯಾವುದು? ಎಂಬುದು ಇಷ್ಟು ದಿನ ನಡೆದ ತೌಲನಿಕ ಅಧ್ಯಯನಗಳ ನಂತರವೂ ಅಮೂರ್ತವಾಗಿರುವ ಉತ್ತರಕಂಡುಕೊಳ್ಳಲಾರದ ಪ್ರಶ್ನೆಯಾಗಿದೆ. ಈ ನಡುವೆ ತೌಲನಿಕ ಅಧ್ಯಯನಗಳು ಸೃಷ್ಟಿಸುತ್ತಿರುವ ಸಾಧ್ಯತೆಗಳಾದರೂ ಏನು? ಅದು ವಸ್ತುನಿಷ್ಠವೋ? ವ್ಯಕ್ತಿನಿಷ್ಠವೋ? ಎನ್ನುವ ಪ್ರಶ್ನೆ ಹಾಕಿಕೊಂಡರೆ ವಸ್ತು, ವ್ಯಕ್ತಿ, ಆಶಯ, ಆಕೃತಿ, ವಿಶ್ಲೇಷಣೆ ಹೀಗೆ ಹಲವು ನೆಲೆಗಳನ್ನು ಮೀರಿದ ತಾತ್ವಿಕತೆಯ ಶೋಧವಾಗುವ ಕಡೆಗೆ ತೌಲನಿಕ ಅಧ್ಯಯನ ಸಾಗುತ್ತದೆ.

ಅಧ್ಯಯನ ವಿಷಯದ ಆಯ್ಕೆಯ ಸಂದರ್ಭದಲ್ಲಿ 'ವೀಣಾಶಾಂತೇಶ್ವರ' ಅವರೊಟ್ಟಿಗೆ ಭಿನ್ನ ಪರಿಸರದ ಲೇಖಕಿಯಾದಂತಹ 'ಕಮಲಾದಾಸ್'ರವರನ್ನು ಆರಿಸಿಕೊಳ್ಳಲಾಯಿತು. ಅಧ್ಯಯನ ಪೂರ್ವದಲ್ಲಿ ಯಾವುದೂ ಸ್ಪಷ್ಟವಲ್ಲ, ಕಲ್ಪನೆಗಳ ಬೆನ್ನೇರಿ ಹೊರಟರೆ ಅದು ವಾಸ್ತವವಲ್ಲ. ಹಾಗೆಂದೊಡನೆ ಊಹೆಯೊಂದಿಗೆ ಅನಿಶ್ಚಿತ ಉದ್ದೇಶಗಳ ಜೊತೆಗೆ ಅಧ್ಯಯನ ಆರಂಭಗೊಳ್ಳುತ್ತದೆ. ಹೆಣ್ಣು ಏಕೆ ಬರೆಯಲು ಆರಂಭಿಸಿದಳು? ಅವಳಿಗಿದ್ದ ಸಾಂಸ್ಕೃತಿಕ ಒತ್ತಡಗಳು ಯಾವುವು? ದೇಶ, ಕಾಲಾತೀತವಾದ ಪ್ರಶ್ನೆಯೊಂದು ಆಕೆಯನ್ನು ಕಾಡುತ್ತಿರುವ ಬಗೆಯಾದರೂ ಯಾವುದು? ಲಿಖಿತ ಸಾಹಿತ್ಯ ಚರಿತ್ರೆಯಲ್ಲಿ ನಿರ್ಲಕ್ಷಕ್ಕೆ ಒಳಗಾದ ಹೆಣ್ಣು ತನಗೆ ತಾನೆ ಸಾಹಿತ್ಯ ಚರಿತ್ರೆಯನ್ನು ನಿರ್ಮಿಸಿಕೊಳ್ಳಲು ಬೇಕಾದ ತಾತ್ವಿಕ ಅಂಶಗಳು ಯಾವುವು ಎಂಬ ಪ್ರಶ್ನೆ ಮತ್ತೆ ಮತ್ತೆ ಕಾಡುವ ಮೂಲಭೂತ ಸಂಗತಿಗಳಾಗಿವೆ.

ಮಹಿಳಾ ಸಾಹಿತ್ಯವೆಂಬ ವಿಂಗಡನೆ ಬೇಡವೆಂದಾದರೂ ಚಾರಿತ್ರಿಕವಾಗಿ ಹೆಣ್ಣಿಗೆ ಒದಗಿ ಬಂದಿರುವ ಸಂಗತಿಗಳು ಅವಳ ಪರಿಸ್ಥಿತಿಗೆ ಹಾಗೂ ಆ ಸಂದರ್ಭಕ್ಕೆ ಹೊಸ ಸವಾಲುಗಳ

ನಿರ್ಮಿತಿಗೆ ಕಾರಣವಾಗಿದೆ. ಭಿನ್ನ ಪರಿಸರದಲ್ಲಿ ಬಾಳಿ ಬದುಕಿ ಸಾಹಿತ್ಯ ಸೃಷ್ಟಿಗೆ ಕಾರಣವಾದ ಇಬ್ಬರು ಲೇಖಕಿಯರ ಅಧ್ಯಯನವನ್ನು ಪ್ರಬಂಧದ ವಿಷಯಕ್ಕೆ ಆಯ್ಕೆ ಮಾಡಿಕೊಂಡದ್ದಾಯಿತು. ಅವರಿಬ್ಬರ ಬರವಣಿಗೆಯ ಕ್ರಿಯೆ ಘಟಿಸಲು ಇದ್ದ ಎಲ್ಲಾ ಅಂಶಗಳನ್ನು ಗ್ರಹಿಸುವುದು ಪ್ರಬಂಧದ ಉದ್ದೇಶವಾಗಿತ್ತು. ಎಲ್ಲಾ ಗಡಿಗಳನ್ನು ಮೀರಿ ಬೆಳೆದ ಮಹಿಳಾ ಸಾಹಿತ್ಯದ ದಿಕ್ಕು ಚಲಿಸುತ್ತಿರುವುದು ಎತ್ತ ಕಡೆಗೆ ಎಂಬ ಅಂಶ ದಕ್ಕಬೇಕಾದರೆ ತೌಲನಿಕ ಅಧ್ಯಯನ ಪೂರಕವಾಗುತ್ತದೆ.

ಹೆಣ್ಣು ಅಸಹಾಯಕಳು, ಶೋಷಿತಳು, ಮಾನಸಿಕವಾಗಿ ಮತ್ತು ದೈಹಿಕವಾಗಿ ಶತಮಾನಗಳಿಂದ ಹಿಂಸಿಸಲ್ಪಟ್ಟವಳು ಎಂಬ ಆವೇಶದಲ್ಲಿ ಸಂಶೋಧನೆಯ ಫಲಿತ ಸಾಫಲ್ಯ ಹೊಂದುವುದಿಲ್ಲ. ಈಗಾಗಲೇ ನಿರ್ಮಿತಗೊಂಡಿರುವ ಆಕೆಯ ಸಂದರ್ಭ, ಇಂದಿನ ಅವಳ ಒತ್ತಡಗಳು, ಆಕೆಯನ್ನು ಕಾಡುತ್ತಿರುವ ಬಗೆ, ಆಕೆ ಇಂದು ಕಂಡುಕೊಳ್ಳಬೇಕಾದ ಪರಿಹಾರ, ಬಿಡುಗಡೆಗಾಗಿ ಬರೆಯುವ ಸಾಹಿತ್ಯ ಇವೆಲ್ಲವೂ ಮಹಿಳಾ ಬರವಣಿಗೆಯನ್ನು ಪ್ರಭಾವಿಸುತ್ತಿರುವ ಸಂಗತಿಯಾಗಿದೆ. ಈ ಸಂದರ್ಭದಲ್ಲಿ ಮಹಿಳಾ ಬರವಣಿಗೆಯ ನೆಲೆಯನ್ನು ಗುರುತಿಸುವ ಅಗತ್ಯವಿದೆ. ಸ್ತ್ರೀವಾದದ ಪ್ರಭಾವ, ಹೋರಾಟದ ತೀವ್ರತೆ, ಇದ್ಯಾವುದಕ್ಕೂ ಒಳಗಾಗದ ಇಬ್ಬರು ಲೇಖಕಿಯರು ಅಭಿವ್ಯಕ್ತಿಸಿದ್ದೇನನ್ನು? ಉಭಯ ಸಂಸ್ಕೃತಿಯಲ್ಲೂ ಮಹಿಳಾ ಪರಿಸರದ ಹುಟ್ಟಿಗೆ ಆಧುನಿಕತೆ ಕಾರಣವಾಗುವ ಬಗೆಯನ್ನು ಸಾಹಿತ್ಯದ ಮೂಲಕ ಚರ್ಚಿಸಲಾಗಿದೆ. ಅಸ್ಪಷ್ಟ ಧ್ಯೇಯದೊಂದಿಗೆ ಸಂಶೋಧನೆ ಬೆಳೆದು ಬರುವ ಸಂದರ್ಭದಲ್ಲಿ ಆಕರಗಳು ನಿರ್ಣಾಯಕ ಪಾತ್ರ ವಹಿಸುತ್ತದೆ. ವಿಭಿನ್ನ ಸಂದರ್ಭದಲ್ಲಿ ಹಲವು ವಸ್ತುಗಳು ನಿರೂಪಿತವಾಗಿರುವ ಸಮಯದಲ್ಲಿ ವ್ಯಕ್ತಗೊಂಡಿರುವ ಫಲಿತಗಳ ಮಂಡನೆಯನ್ನು ಸಂಗ್ರಹ ರೂಪದಲ್ಲಿ ತಿಳಿಸುತ್ತಿದ್ದೇನೆ.

ಮಹಿಳಾ ಸಾಹಿತ್ಯ ನಿರ್ಮಾಣಗೊಳ್ಳುವ ಸಂದರ್ಭದಲ್ಲಿ ವಸ್ತು–ವಿನ್ಯಾಸಗಳು ಪಲ್ಲಟಗೊಂಡಿರುವ ಬಗೆಯನ್ನು ಅರಿಯುವ ಸಾಮಾಗ್ರಿಯನ್ನು ಗ್ರಹಿಸಲು ಸಂಶೋಧನೆಯ ಅಗತ್ಯವಿದೆ. ಕನ್ನಡದಲ್ಲಿ ಕೇವಲ ಪರಿಚಯಾತ್ಮಕ ರೂಪ ಪಡೆದಿರುವ ಕಮಲಾದಾಸ್‌ರವರ ಸಾಹಿತ್ಯದ ಸೂಕ್ಷ್ಮತೆಯನ್ನು ಅರಿಯುವ ಮೂಲಕ ಸಾಧ್ಯವಾಗಿರುವ, ಕೇರಳದ ಮಹಿಳಾ ಬರವಣಿಗೆಯ ಸಂದರ್ಭವನ್ನು ತಿಳಿಯಬಹುದಾಗಿದೆ.

ಹೆಣ್ಣಿನ ಬದುಕಿನ ವೈಯಕ್ತಿಕ ಅನುಭವಗಳಿಗೆ ಹೊಸ ಮಾರ್ಗವು ದಕ್ಕಿತು. ಆಧುನಿಕೋತ್ತರ ಚಿಂತನೆಯ ಫಲವಾಗಿ ಅಕ್ಷರ ಜ್ಞಾನ ಗಳಿಸಿದ ಹೆಣ್ಣು ಬರವಣಿಗೆಯ ಮೊರೆ ಹೊಕ್ಕಳು. ಭಾರತ ದೇಶದ ಸಾಮಾಜಿಕ ರೂಪುರೇಷೆಗಳು ಪಿತೃಪ್ರಧಾನ ಮೌಲ್ಯಭರಿತವಾಗಿತ್ತು.

ಸಮಾಜದಲ್ಲಿದ್ದ ಮೌಲ್ಯಗಳು ಸ್ವಪ್ರಜ್ಞೆಯೊಡನೆ ಬೆರೆತು ಸಾಮಾಜಿಕ ಅರಿವಿನತ್ತ ಹೊರಳಿದ್ದು ಬಹುಮುಖ್ಯ ನಿಲುವಾಗಿದೆ. ಕೌಟುಂಬಿಕ ಸಂದರ್ಭದಿಂದ ಭಾವುಕತೆಯೆಡೆಗೆ ಸಾಹಿತ್ಯ ಪ್ರಜ್ಞೆ ಜಾರಿದ ನಂತರ ಹೆಣ್ಣಿನ ಸಂಕಷ್ಟಕ್ಕೊಂದು ವಿರಾಮ ಹಾಕುವ ಪ್ರಯತ್ನವಾಯಿತು. ಆರ್ಥಿಕ, ಸಾಮಾಜಿಕ ವಲಯಕ್ಕೂ ಹೆಣ್ಣು ಲಗ್ಗೆ ಇಟ್ಟಳೆಂಬ ಸಂಗತಿ ಮನವರಿಕೆಯಾಯಿತು. ಇದರ ಜೊತೆಗೆ ಹೊರಗಿನ ಮತ್ತು ಒಳಗಿನ ತಲ್ಲಣಗಳು ಹೆಣ್ಣಿಗೆ ಮತ್ತಷ್ಟು ಒತ್ತಡವನ್ನು ತಂದಿತು. ಹೆಣ್ಣಿನ ದೈನಂದಿನ ಬದುಕಿನ ಸ್ವರೂಪ ಬದಲಾಯಿತು. ಹೆಣ್ಣು ವೈಯಕ್ತಿಕ ಧ್ವನಿಯನ್ನು ಸಾಹಿತ್ಯದ ಮೂಲಕ ಪ್ರಶ್ನಿಸಿದರೆ ಪುರುಷ ತಾನೆ ನಿರ್ಮಿಸಿಕೊಂಡ ಬದುಕಿನಲ್ಲಿ ತನ್ನನ್ನು ಪುನರ್‌ಪ್ರತಿಷ್ಠಾಪಿಸಲು ಪ್ರಯತ್ನಿಸಿದ ಅರಿವು ಅಧ್ಯಯನದಿಂದ ತಿಳಿಯುತ್ತದೆ.

ಆ ಕಾಲದಲ್ಲಿ ಸೃಷ್ಟಿಯಾಗುತ್ತಿದ್ದ ಸ್ತ್ರೀ ಪಾತ್ರಗಳಲ್ಲಿ ಬದಲಾವಣೆಯಾಯಿತು. ಬದಲಾದ ಸ್ತ್ರೀ ಪ್ರತೀಕಕ್ಕೆ ಇಬ್ಬರು ಲೇಖಕಿಯರು ಕಾರಣವಾದರು. ಅಧೀನತ್ವದ ಕಲ್ಪನೆಯನ್ನು ಮೀರಿ ಬದುಕಲು ಯತ್ನಿಸಿದ ಪಾತ್ರಗಳು, ಪುರುಷ ಕ್ರೌರ್ಯವನ್ನು ಅನಾವರಣ ಮಾಡಲು ಪಾತ್ರಗಳ ಮೂಲಕ ಸಾಧ್ಯವಾಯಿತು. ಸಂಬಂಧಗಳು ಎಲ್ಲಾ ಸಿದ್ಧಾಂತಗಳನ್ನು ಮೀರಿದ್ದು ಎಂಬ ಅರಿವಾಯಿತು.

ಲಿಂಗಭೇದ, ಪಿತೃಪ್ರಧಾನ ಮೌಲ್ಯಗಳ ಸಂರಚನೆ, ವಸ್ತು ನಿರ್ವಹಣೆಯ ಸಂಗತಿಗಳು ಪ್ರಸ್ತಾಪಗೊಂಡಿತು. ಸಾಂಪ್ರದಾಯಿಕ ಬರವಣಿಗೆಯ ಸಂದರ್ಭದಲ್ಲಿ ತಟ್ಟನೇ ಆದ ಬದಲಾವಣೆಗೆ ಇಬ್ಬರು ಲೇಖಕಿಯರು ಸಾಹಿತ್ಯದ ಮೂಲಕ ಕಾರಣರಾಗಿರುತ್ತಾರೆ. ದೇಹಕೇಂದ್ರಿತವಾಗಿ ಸಮಾಜ ಹೆಣ್ಣನ್ನು ಕಾಣುವ ಬಗೆಗೆ ಪ್ರತಿರೋಧವಿದೆ. ಸಂಬಂಧದಲ್ಲಿ ಇಂತದ್ದೊಂದು ಅಸಮಾನತೆ ಇದೆ ಎಂದು ಅರಿಯದ ಸಂದರ್ಭದಲ್ಲಿ ಮುಕ್ತವಾಗಿ ವೀಣಾ ಚರ್ಚಿಸಿದ್ದು ಪ್ರಮುಖ ಸಂಗತಿಯಾಗಿದೆ. ಹೆಣ್ಣೆಂಬ ಮೈಲಿಗೆಯನ್ನು ಮೀರಿ ಸೃಷ್ಟಿಗೊಂಡ ಈ ಪಾತ್ರಗಳು ಸಮಾಜದಲ್ಲಿ ಸಂಚಲನ ಸೃಷ್ಟಿ ಮಾಡಿದವು. ಪ್ರೀತಿಯ ಹುಡುಕಾಟದ ನೆಪದಲ್ಲಿ ಪುರುಷ ಸ್ವಭಾವ ಶೋಧ ನಡೆದಿದೆ. ವೀಣಾಶಾಂತೇಶ್ವರ ಕಥನದ ಮೂಲಕ ಪ್ರೀತಿಯ ಹುಡುಕಾಟ ನಡೆಸಿದರೆ ಕಮಲಾದಾಸ್ ಸಂಬಂಧಗಳ ವೈವಿಧ್ಯತೆಯ ಮೂಲಕ ಪುರುಷ ಲೋಕ ಕಟ್ಟಿಕೊಡುತ್ತಾರೆ.

ಪುರುಷ ಲೋಕದಲ್ಲಿ ಅಪ್ರಜ್ಞಾಪೂರ್ವಕವಾಗಿ ಕ್ರೌರ್ಯ ಅಡಗಿದೆ. ಸಾಮಾಜಿಕ ಸಂರಚನೆಯಲ್ಲಿ ಸಹಜವೆಂಬಂತೆ ಮೂಡಿ ಬಂದಿರುವ ಕ್ರಮವಾಗಿದೆ. ಮಲಯಾಳಂ ಕಥನದಲ್ಲಿ ಪುರುಷ ಕ್ರೌರ್ಯವನ್ನು ದಟ್ಟವಾಗಿ ದಾಖಲು ಮಾಡಿದ್ದಾರೆ. ಕನ್ನಡ ಸಂದರ್ಭದಲ್ಲಿ ಪುರುಷ

ಜಗತ್ತಿನ ಚಿತ್ರಣ ಮೂಡಿ ಬಂದಿದೆ. ಮಲಯಾಳಂ ಕಥನದಲ್ಲಿ ಪುರುಷ ಲೋಕದ ಕ್ರೌರ್ಯ ಹೆಚ್ಚಾದರೆ ವೀಣಾಶಾಂತೇಶ್ವರ ಕಥೆಗಳಲ್ಲಿ ಭಾವುಕತೆ ಹೆಚ್ಚಾಗಿದೆ.

ನಾಯಕಿಯಿಂದ ನಿರೂಪಿತವಾದ ನಾಯಕರುಗಳ ಕಥನವಾಗಿದೆ. ಅತಿಭಾವುಕರಾಗಿರುವ ಹೆಣ್ಣು, ಸುರಕ್ಷಿತವಾಗಿ ಬದುಕ ಬಯಸುವ ಗಂಡಿನ ಚಿತ್ರಣಗಳು ಹೇರಳವಾಗಿದೆ. ಹೆಣ್ಣು ತನ್ನ ಸ್ಥಿತಿಯನ್ನು ಹೀಗೆ ವ್ಯಕ್ತ ಪಡಿಸಬೇಕೆಂದು ಮೂಡಿ ಬರಲಿದ್ದ ಒತ್ತಡಕ್ಕೆ ಕಾರಣವೇನೆಂಬ ಅಂಶ ಮುಖ್ಯವಾದುದಾಗಿದೆ. ಸೋತು ನಡೆಯಬೇಕೆಂಬ ಪುರುಷ ಲೋಕ ನಿರ್ಣಯಕ್ಕೆ ಬದಲಾಗಿ ತಮ್ಮ ಬದುಕಿನ ಆಯ್ಕೆಯನ್ನು ನಿರ್ಧಾರ ತೆಗೆದುಕೊಳ್ಳುವ ಸ್ವತಃ ಆಯ್ಕೆಯನ್ನು ತೀರ್ಮಾನಿಸುವ ಬದಲಾವಣೆ ಸಾಧ್ಯವಾಗಿದೆ. ಉದ್ಯೋಗಸ್ಥೆಯಾದರೂ ಸಾಮಾಜಿಕ ನೆಲೆಯಲ್ಲಿ ಕೌಟುಂಬಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಹೆಣ್ಣು ಎದುರಿಸುತ್ತಿರುವ ಸವಾಲು ಸತ್ಯ. ಸಮಾಜದ ಅಡೆತಡೆಗಳನ್ನು ಎದುರಿಸುವ ಭಿನ್ನ ಸ್ವರೂಪ ಸಾಹಿತ್ಯದಲ್ಲಿದೆ. ಸಂಬಂಧಗಳ ಪ್ರಶ್ನೆ ಹೆಣ್ಣಿಗೆ ಕಾಡಿದ್ದೇಕೆ? ಆಕೆ ಭಾವುಕಳಾಗುವಂತ ಒತ್ತಡವೇಕೆ? ಎನ್ನುವ ಅಂಶ ಮುಖ್ಯವಾಗುತ್ತದೆ. ಅನುಭೋಗಿ ಸರಕಿನಂತೆ ಕಾಣುವ ಮಹಿಳೆಯ ಚಿತ್ರಣವನ್ನು ನಿರಾಕರಿಸುವ ಪ್ರಕ್ರಿಯೆ ಉಭಯ ಲೇಖಕಿಯರ ಸಾಹಿತ್ಯದಿಂದ ಬಿತ್ತರಗೊಂಡಿದೆ.

ಕನ್ನಡ ಮತ್ತು ಮಲಯಾಳಂ ಮಹಿಳಾ ಸಾಹಿತ್ಯಕ ಪರಿಸರ ಎರಡೂ ಸಾಂಸ್ಕೃತಿಕವಾಗಿ ಭಿನ್ನತೆಯುಳ್ಳದ್ದಾಗಿದೆ. ಕನ್ನಡ ಮಹಿಳಾ ಬರವಣಿಗೆಗೊಂದು ಚರಿತ್ರೆಯಿದೆ. ಮಲಯಾಳಂ ಮಹಿಳಾ ಬರವಣಿಗೆಯಲ್ಲಿ ವೈವಿಧ್ಯತೆ ಹೆಚ್ಚಾಗಿ ಕಂಡುಬಂದದ್ದು 1930ರಿಂದ ಇತ್ತೀಚಿನ ಸಂಗತಿಯಾಗಿದೆ. ಮಲಯಾಳಂ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯ ಚರಿತ್ರೆಯಂತಹ ಲಿಖಿತ ದಾಖಲು ಬಂದಿಲ್ಲ ಬದಲಿಗೆ ಬಿಡಿಬಿಡಿಯಾಗಿ ಚರ್ಚೆಯಾಗಿದೆ. ಸ್ವಾತಂತ್ರ್ಯಾನಂತರ ದಕ್ಷಿಣ ಭಾರತದ ಪ್ರಮುಖ ಭಾಷೆಗಳಾದ ಕನ್ನಡ, ತಮಿಳು, ತೆಲುಗು, ಮಲಯಾಳಂ ನಾಲ್ಕು ಭಾಷೆಗಳಲ್ಲಿ ಮಹಿಳೆಯರು ಕಥನ ಪ್ರಕಾರವನ್ನು ಆಯ್ಕೆ ಮಾಡಿಕೊಂಡು ಬರೆಯಲು ಮಹಿಳಾ ಶಿಕ್ಷಣ, ಪತ್ರಿಕೋದ್ಯಮ, ಅಂದಿನ ಸಾಮಾಜಿಕ ಸಂದರ್ಭ ಪ್ರೇರಣೆಯಾಯಿತು.

ಕಥನಕ್ರಮ ಕೇವಲ ವಸ್ತುವಿನ ನಿರೂಪಣೆ, ವೈಯಕ್ತಿಕ ಆಶಯವನ್ನು ಹೇಳುವ ಹಂಬಲವಾಗಿರದೆ, ವ್ಯಕ್ತಿ ಪ್ರಜ್ಞೆಯ ಜೊತೆಗೆ ಸಾಮಾಜಿಕ ಅರಿವಿನ ಹೆಚ್ಚಳಕ್ಕೆ ಮಹಿಳಾ ಕಥನದ ಕೊಡುಗೆ ಅಪಾರವಾಗಿದೆ. ಕಥನಕ್ರಮದ ಜೊತೆಗೆ ಹೆಣ್ಣಿನ ಅರಿವಿನ ವಿಸ್ತಾರವೂ ಸಾಧ್ಯಗೊಂಡಿದೆ.

ಲೇಖಕಿಯರ ಕಥನ ಸಾಹಿತ್ಯವನ್ನು ಅಭ್ಯಸಿಸುವ ಸಂದರ್ಭದಲ್ಲಿ ಸ್ತ್ರೀ ಪಾತ್ರಗಳಲ್ಲಿ ಆದ ಬದಲಾವಣೆಯೂ ಅಧೀನತ್ವದ ಕಲ್ಪನೆಯನ್ನು ಮೀರಲು ನಡೆಸುವ ಯತ್ನವಾಗಿದೆ.

ಸಂಬಂಧಗಳು ಎಲ್ಲಾ ಸಿದ್ಧಾಂತವನ್ನು ಮೀರಿದ್ದು ಎಂದು, ಮಾನವೀಯತೆಯನ್ನು ಕಾಣುವ ಹಂಬಲವು ಕಥನದಲ್ಲಿದೆ. ಬದುಕಿನ ಸಣ್ಣ ಸಣ್ಣ ಆಸೆಗಳು ಸಾವಿನ ಸಂದರ್ಭದಲ್ಲಿ ಮುಖ್ಯವಾಗಿ ಕಾಡುವ ಸಂಗತಿಗಳು ಉಭಯ ಲೇಖಕಿಯರ ಕತೆಯಲ್ಲಿ ವ್ಯಕ್ತವಾಗಿದೆ.

ದೇಹಕೇಂದ್ರಿತವಾಗಿ ಸಮಾಜ ಹೆಣ್ಣನ್ನು ಕಾಣುವ ಕ್ರಮಕ್ಕಿಂತ ಹೆಣ್ಣು ಭಾವುಕವಾಗಿ ಬಯಸುವ ಸಾಂಗತ್ಯವು ಮುಖ್ಯವಾಗುತ್ತದೆ. ಹೆಣ್ಣಿಗೆ ಕಾಡುವ ಸಂಬಂಧಗಳು, ಬಾಂಧವ್ಯದ ಪ್ರಶ್ನೆ ಮುಖ್ಯವಾಗುತ್ತದೆ. ಇಂತಹ ಒತ್ತಡಕ್ಕಿದ್ದ ಕಾರಣವೂ ಮುಖ್ಯವಾಗುತ್ತದೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ.

ಪುರುಷ ಬರವಣಿಗೆಯಲ್ಲಿ ನಿರೂಪಿತವಾಗದ ಸ್ತ್ರೀಪರ ನಿಲುವುಗಳು, ಸಾಮಾಜಿಕ ಯಾತನೆ ಲೇಖಕಿಯರಿಂದ ಮೂಡಿ ಬಂದಿದೆ. ಕಾರಣ ಅದು ಮಹಿಳಾ ಅನುಭವ, ಅವಳ ಅಭಿವ್ಯಕ್ತ ಕ್ರಮವಾಗಿದೆ.

ಸೋತು ನಡೆಯಬೇಕೆಂಬ ಪ್ರಧಾನಧಾರೆಯ ನಿರ್ಣಯಕ್ಕೆ ಬದಲಾಗಿ ತಮ್ಮ ಬದುಕಿನ ಆಯ್ಕೆಯ ನಿರ್ಧಾರವನ್ನು ತೆಗೆದುಕೊಳ್ಳುವ, ಪ್ರಶ್ನೆ ಮಾಡುವ ವೈಖರಿ ವೀಣಾಶಾಂತೇಶ್ವರ ಕತೆಯಲ್ಲಿ ಕಂಡು ಬಂದರೆ, ಅಸಮಾತನೆಯ ಮೂಲವನ್ನು ಪ್ರಧಾನಧಾರೆಯ ಕ್ರೌರ್ಯದ ಸೂಕ್ಷ್ಮ ಸಂಗತಿಗಳನ್ನು ಕಮಲಾದಾಸ್‌ರವರ ಕತೆಗಳು ಚಿತ್ರಿಸುತ್ತವೆ.

ಹೆಣ್ಣಿನ ಅರಿವು ವಿಸ್ತಾರಗೊಂಡು ಜಗತ್ತಿನ ಅನೇಕ ವಿದ್ಯಾಮಾನಗಳು ತಿಳಿಯುವಂತಾಯಿತು. ಸಾಂಸ್ಕೃತಿಕ ಜಗತ್ತಿನ ಎಲ್ಲಾ ಚಟುವಟಿಕೆಗಳು ಕಣ್ಣೆದುರಿಗೆ ಬಂದವು. ಮಹಿಳಾ ಸಾಹಿತ್ಯ ಏನನ್ನು ಪ್ರತಿಪಾದಿಸುತ್ತಿದೆ ಎನ್ನುವುದರ ಕಡೆಗೆ ಗಮನ ಹರಿಸಲಾಯಿತು. ಉದಾರವಾದದ ಹೆಸರಿನಲ್ಲಿ ಹೆಣ್ಣಿನ ಬರವಣಿಗೆ ಪ್ರತಿಪಾದಿಸುತ್ತಿರುವುದು ಮನೋದೈಹಿಕ ಸಂಬಂಧಗಳು, ಕೌಟುಂಬಿಕ ಮೌಲ್ಯಗಳಾಚೆಗಿನ ಬದುಕು, ಸ್ವೇಚ್ಛೆಯ ಜೀವನವೋ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಅನುಮಾನಿಸಲಾಯಿತು. ಅದರಾಚೆಗಿನ ಹೆಣ್ಣಿನ ಮನೋಲೋಕದ ತುಡಿತವು ಶೋಧಿತವಾಯಿತು. ಮಾನವೀಯ ಸಂಬಂಧಗಳ ಮಹತ್ವವನ್ನು ಅರಿಯುವ ಪ್ರಯತ್ನವು ನಡೆಯಿತು. ಸಂಬಂಧಗಳು ಬಂಧನವಲ್ಲ ಎಂಬ ಅಂಶ ಮುಖ್ಯವಾಯಿತು. ಉಭಯ ಲೇಖಕಿಯರ ಕತೆಗಳು ಪ್ರೀತಿಯ ಹುಡುಕಾಟದ ನೆಪದಲ್ಲಿ ಬದುಕಿನ ಅನೇಕ ಸಹಜ ಸಂದರ್ಭಗಳನ್ನು ಚಿತ್ರಿಸಿವೆ. ಪ್ರಧಾನಧಾರೆಯ ಚಿಂತನೆಯಲ್ಲಿ ಉಡುಗಿ ಹೋಗಿದ್ದ ಎಷ್ಟೋ ಪ್ರಸಂಗಗಳು ಹೇರಿಕೆಗಳ ಮೂಲಕ ಹೆಣ್ಣಿನ ಮನೋಬಲವನ್ನು ಅಡಗಿಸುವ ಪ್ರಯತ್ನಕ್ಕೆ ತೋರುವ ಪ್ರತಿರೋಧವಾಗಿದೆ.

ನಿತ್ಯ ಬದುಕನ್ನು ನಡೆಸಲು, ಬದುಕು ಸಾಗಿಸುವ ಹವಣಿಕೆ ತೀವ್ರವಾಗಿದೆ. ಆಧುನಿಕತೆಯ ತಾಕಲಾಟಗಳ ಸಂದಿಗ್ಧತೆಯನ್ನು ಮೀರುವ ಪ್ರಯತ್ನವೂ ಸಾಹಿತ್ಯದ ಮೂಲಕ ನಡೆಯಿತು. ಕೌಟುಂಬಿಕೇತರ ಮೌಲ್ಯಗಳ ಆಚೆಗಿನ ನಿತ್ಯ ಬದುಕಿನ ಬವಣೆಯಲ್ಲಿ ಹೆಣ್ಣು ತೊಡಗಿರುವುದನ್ನು ಗಮನಿಸಬಹುದಾಗಿದೆ. ಬದುಕ ಸಾಗಿಸುವ, ಕುಟುಂಬವನ್ನು ಉಳಿಸಿ, ಪೋಷಿಸುವಲ್ಲಿನ ಹೆಣ್ಣಿನ ಸಂದರ್ಭವು ಮುಖ್ಯವಾದುದಾಗಿದೆ. ಕುಟುಂಬ ನಿಷ್ಠರಾಗಿರುವ ಸ್ತ್ರೀಯರು, ಬದುಕಲೆಣಿಸುವ ಚಿತ್ರಣ ಇಬ್ಬರೂ ಕತೆಗಾರ್ತಿಯಲ್ಲಿ ಕಾಣಬಂದಿದೆ.

ತನ್ನತನವನ್ನು ಉಳಿಸಿಕೊಂಡ ಸ್ವಕೇಂದ್ರಿತ ಕತೆಗಳು ಪರವಾಲಂಬಿಗಳಿಲ್ಲದ ವ್ಯಕ್ತಿತ್ವಗಳು ಕತೆಗಳಲ್ಲಿವೆ. ಆರ್ಥಿಕ ಸ್ವಾವಲಂಬನೆ ವೀಣಾರವರ ಕತೆಗಳಲ್ಲಿ ಸಹಜವೆಂಬಂತೆ ಮೂಡಿ ಬಂದರೆ, ಕಮಲಾದಾಸ್ ಕತೆಗಳಲ್ಲಿ ಹಿಂಸಾತ್ಮಕ ರೂಪ ಪಡೆದುಕೊಳ್ಳುವುದು ಕಾಣಬರುತ್ತದೆ. ಕಮಲಾದಾಸ್ ಕತೆಗಳಲ್ಲಿ ಪ್ರಶ್ನೆಗಳಿಲ್ಲ ಸಂದರ್ಭಗಳೇ ಪ್ರಶ್ನೆಗಳಾಗಿ ಕಾಡುತ್ತವೆ. ಬದುಕಿನ ಅನೇಕ ಅತೃಪ್ತಿಗಳು ಕತೆಗಳಲ್ಲಿವೆ. ವೀಣಾಶಾಂತೇಶ್ವರ ಕತೆಗಳಲ್ಲಿ ಹಲವು ಪ್ರಶ್ನೆಗಳು ಸಹಜವಾಗಿಯೇ ಮೂಡಿಬಂದಿವೆ.

ಹೆಣ್ಣಿನ ಬಗೆಗಿನ ಸಮಾಜದ ಎಲ್ಲಾ ಒಪ್ಪಿತ ಮಿತಿಯೊಳಗೆ ಕಮಲಾದಾಸ್ ಕತೆಗಳು ಇರುತ್ತಿದ್ದರೂ ಮನಸ್ಸು ಪರಿವರ್ತನೆಗೊಳಗಾಗುವ ನಾಯಕರಿದ್ದಾರೆ. ನಂಬಿಕೆ, ಮಾನವೀಯ ಮೌಲ್ಯಗಳೂ ಸಂಬಂಧಗಳನ್ನು ಉಳಿಸಿ ಪೋಷಿಸುತ್ತವೆ. ಇದ್ದ ರೂಢಿ ಮೌಲ್ಯಗಳನ್ನು ಅಂತೆಯೇ ಸ್ವೀಕರಿಸಿ ನಡೆಯುವ ತಾಳಿಕೆಯ ಅಗತ್ಯವನ್ನೂ ಮನವರಿಕೆ ಮಾಡುವ ಅರ್ಥವಿಲ್ಲದ, ಹೊಯ್ದಾಟಗಳು ಕತೆಯ ವಸ್ತುವಾಗಿದೆ.

"ಆತ್ಮಶೋಧದ ಬಗೆಗಿನ ಹಿಂಜರಿಕೆ ಅಸ್ಪೃಶ್ಯತೆ ಅದಮ್ಯ ಕುತೂಹಲ ಇವುಗಳು ವೀಣಾ ಅವರ ಕತೆಗಳಲ್ಲಿ ಮತ್ತೆ ಮತ್ತೆ ಅನುರಣಿತವಾಗುತ್ತಲೆ ಶೋಧದ ತೀವ್ರತೆಯನ್ನು ಹೆಚ್ಚಿಸಿಕೊಳ್ಳುವ ಇವರ ಕಥೆಗಳು ತಮ್ಮ ತೀವ್ರತೆ ಮತ್ತು ಪ್ರಾಮಾಣಿಕತೆಯಿಂದಾಗಿ ಲಿಂಗ ವ್ಯತ್ಯಾಸವನ್ನು ಮೀರಿದ ವ್ಯಕ್ತಿತ್ವದ ಹುಡುಕಾಟದ ಮತ್ತು ಅದನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯ ಪ್ರತಿಮೆಗಳು ಆಗುತ್ತದೆ." (ನಡುವೆ ಸುಳಿವ ಆತ್ಮ ಪು.ಸಂ. 93) ವೀಣಾಶಾಂತೇಶ್ವರ ಮತ್ತು ಕಮಲಾದಾಸ್ ಕಥನ ಸಾಹಿತ್ಯದ ಅಧ್ಯಯನ ಸ್ತ್ರೀ ಕೇಂದ್ರಿತವೇ, ಆದರೂ ಅವರಿಬ್ಬರೂ ಪ್ರತಿಪಾದಿಸುತ್ತಿರುವುದು ಹೆಣ್ಣು–ಗಂಡೆಂಬ ನಿಲುವನ್ನು ಮೀರಿ ಮಾನವೀಯ ನೆಲೆಯನ್ನು ಕಾಣುವ ಹಂಬಲವಾಗಿದೆ.

ಅಧ್ಯಯನದ ಸಾಧ್ಯತೆಗಳು :

ಮಹಿಳಾ ಕಥಾ ಸಾಹಿತ್ಯದಲ್ಲಿ ಬಿತ್ತರವಾಗಿರುವ ಹೆಣ್ಣಿಗೂ ಪುರುಷ ಬಿತ್ತರಿಸುವ ಹೆಣ್ಣಿಗೂ ಇರುವ ಸಾದೃಶ್ಯ – ವೈದೃಶ್ಯವನ್ನು ಗಮನಿಸಬಹುದಾಗಿದೆ. ಅಂದರೆ ಪಡಿಯಚ್ಚಿನ ಪಾತ್ರಗಳಿಗಿಂತ ಭಿನ್ನವಾಗಿ ಮಹಿಳಾ ಬರವಣಿಗೆ ಮೂಡಿಬಂದ ಕ್ರಮವನ್ನು ಗಮನಿಸಬಹುದು.

ದಕ್ಷಿಣ ಭಾರತದಲ್ಲಿ ಮಹಿಳಾ ಕಥನ ಪ್ರಕಾರ ಮುಖ್ಯವಗಿ ಬೆಳೆದ ಸಂದರ್ಭವನ್ನು ಉಳಿದ ಭಾಷೆಯಲ್ಲೂ ಆಗಿರುವ ಬೆಳವಣಿಗೆಯನ್ನು ಅಧ್ಯಯನ ನಡೆಸಬಹುದಾಗಿದೆ. ಭಾರತೀಯ ಸಾಹಿತ್ಯದಲ್ಲಿ ಕಥನ ಪ್ರಕಾರ ಮತ್ತು ಮಹಿಳಾ ಸಾಹಿತ್ಯದ ಬೆಳವಣಿಗೆ ಕ್ರಮದ ಸಾಧ್ಯತೆಯನ್ನು ಅರಿಯಬಹುದಾಗಿದೆ.

ಕಮಲಾದಾಸ್ ಸಮಗ್ರ ಸಾಹಿತ್ಯದ ಗ್ರಹಿಕೆ, ಮಲಯಾಳಂ ಮಹಿಳಾ ಬರವಣಿಗೆಯ ಕಡೆಗೆ ಅಧ್ಯಯನ ನಡೆಸಲು ಅವಕಾಶವಿದೆ.

ವೀಣಾಶಾಂತೇಶ್ವರ ಅವರ ಆತ್ಮಕಥನ ರಚಿತವಾಗಿರುವುದಿಲ್ಲವಾದ್ದರಿಂದ ಆತ್ಮಕಥಾನಕ ಅಂಶಗಳನ್ನು ಚರ್ಚಿಸಿದ್ದೇನೆ. 'ಬಾಲ್ಯಕಾಲದ ಸ್ಮರಣೆಗಳು', 'ನನ್ನಕತೆ', 'ನೀರ್‌ಮಾದಳ ಹೂ ಬಿಟ್ಟ ಕಾಲ' ಆತ್ಮಕಥನಗಳನ್ನು ಚರ್ಚಿಸಿದ್ದೇನೆ.

ಅನುವಾದದ ಮಿತಿಯಲ್ಲಿ ಕಮಲಾದಾಸ್‌ರವರ ಕಥನವನ್ನು ಪ್ರಾತಿನಿಧಿಕವಾಗಿ, ಪರಿಕಲ್ಪನೆಗೆ ಒಗ್ಗುವಂತೆ ಬಳಸಿಕೊಳ್ಳಲಾಗಿದೆ.

***

ಅನುಬಂಧ

I. ಪರಾಮರ್ಶನ ಗ್ರಂಥಗಳು

II. ಸಂದರ್ಶನ

III. ಲೇಖಕಿಯರ ಭಾವಚಿತ್ರಗಳು

I.

ಅ. ಪ್ರಾಥಮಿಕ ಆಕರಗಳು

ಆ. ಪರಾಮರ್ಶನ ಆಕರಗಳು

ಅನುಬಂಧ–1

I. ಪರಾಮರ್ಶನ ಗ್ರಂಥಗಳು :

ಅ. ಪ್ರಾಥಮಿಕ ಆಕರ

1. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ಮನೋಹರ ಮುದ್ರಣಾಲಯ, ಧಾರವಾಡ, 2006.
2. ಕಮಲಾದಾಸ್, ಕಮಲಾದಾಸ್‌ರವರ ಸಮಗ್ರ ಕತೆಗಳು, ಸಂಪುಟ–1, ಅನುವಾದ– ಕೆ.ಕೆ. ಗಂಗಾಧರನ್, ಹೇಮಂತ ಸಾಹಿತ್ಯ, ಬೆಂಗಳೂರು–2013.
3. ಕಮಲಾದಾಸ್, ನೀರ್‌ಮಾದಳ ಹೂ ಬಿಟ್ಟ ಕಾಲ, ಅನುವಾದ–ಪಾರ್ವತಿ ಜಿ. ಐತಾಳ, ಮನೋಹರ ಮುದ್ರಣಾಲಯ, ಧಾರವಾಡ, 2009.
4. ಕಮಲಾದಾಸ್, ನನ್ನ ಕಥೆ, ಅನುವಾದ, ಕೆ.ಪೂರ್ಣಿಮಾಭಟ್, ಹೇಮಂತ ಸಾಹಿತ್ಯ, ಬೆಂಗಳೂರು, 1995.
5. ಕಮಲಾದಾಸ್, ಬಾಲ್ಯದ ನೆನಪುಗಳು, ಅನುವಾದ, ನಾ.ದಾಮೋದರ ಶೆಟ್ಟಿ, ನ್ಯಾಷನಲ್ ಬುಕ್ ಟ್ರಸ್ಟ್, 2001.

ಆ. ಪರಾಮರ್ಶನ ಆಕರಗಳು

1. ಆಮೂರ ಜಿ.ಎಸ್., ಕನ್ನಡ ಕಥನ ಸಾಹಿತ್ಯ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಸಪ್ನ ಬುಕ್ ಹೌಸ್, 2006.
2. ಆರ್ಯಾಂಬ ಪಟ್ಟಾಭಿ (ಪ್ರ.ಸಂ.) ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, 2004.
3. ಆಶಾದೇವಿ ಎಂ.ಎಸ್. (ಸಂ), ಸ್ತ್ರೀ ಮತವನುತ್ತರಿಸಲಾಗದೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 2006.
4. ಆಶಾದೇವಿ ಎಂ.ಎಸ್. (ಸಂ), ವೀಣಾಶಾಂತೇಶ್ವರ ವಾಚಿಕೆ ನುಡಿ ಪುಸ್ತಕ, ಬೆಂಗಳೂರು 2011.
5. ಆಶಾದೇವಿ ಎಂ.ಎಸ್. (ಸಂ), ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ 2011.
6. ಆಶಾರಾಣಿ ಎಂ. ಚಿನಗುಂಡಿ, ಮಹಿಳೆ ಸಾಹಿತ್ಯ ಸಂಸ್ಕೃತಿ, ಕುಕ್ಕೆ ಶ್ರೀ ಪ್ರಕಾಶನ, ಬೆಂಗಳೂರು 2010.
7. ಇಂದಿರಾ ಜೈಪ್ರಕಾಶ್, ಸ್ತ್ರೀವಾದಿ ಮನೋವಿಜ್ಞಾನ, ಮಹಿಳಾ ಅಧ್ಯಯನ ಕೇಂದ್ರ, ಹಂಪಿ ವಿಶ್ವವಿದ್ಯಾಲಯ 2009.
8. ಒಡೆಯರ್ ಡಿ. ಹೆಗ್ಗಡೆ, ಮಹಿಳಾವಾದಿ ತತ್ವಜ್ಞಾನಿಗಳು ಮಾನವ ಅಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು 2007.
9. ಕಮಲೇಶ್ವರ (ಸಂ), ಆರ್.ಪಿ. ಹೆಗಡೆ, ಕಥಾ ಸಂಸ್ಕೃತಿ, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, 2007.
10. ಕರಿಗೌಡ ಬೀಚನಹಳ್ಳಿ, ಸಾಹಿತ್ಯ ವಿಸ್ತಾರ, ಅಜಂತ ಪ್ರಕಾಶನ, 2007.
11. ಗಾಯತ್ರಿ ಎನ್., ಮಹಿಳಾ ಚಳವಳಿಯ ಮಜಲುಗಳು, ಪ್ರಧಾನ ಸಂಪಾದಕರು, ರಾಮಕೃಷ್ಣ ಜಿ., ನವಕರ್ನಾಟಕ ಪ್ರಕಾಶನ, 1998.
12. ಗುಂಡಪ್ಪ ಎಲ್. (ಅನು), ವರದರಾಜನ್ ಮೂಲ, ತಮಿಳು ಸಾಹಿತ್ಯ ಚರಿತ್ರೆ, ದೆಹಲಿ 1980.

13. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, (ಸಂ) ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕ್ರೈಸ್ಟ್ ಕಾಲೇಜ್, ಕನ್ನಡ ಸಂಘ, 1994.

14. ನಾಗಮಣಿ ಎಸ್.ರಾವ್. ಲೇಖಾಲೋಕ–2, (ಮಹಿಳಾ ಸಾಹಿತ್ಯ : ಒಂದು ಆತ್ಮ ಕಥಾನಕ) ಸಂ, ಕರ್ನಾಟಕ ಲೇಖಕಿಯರ ಸಂಘ–1999.

15. ನಾಗಾರ್ಜುನ ಹಾ.ಮ., ಸ್ತ್ರೀವಾದಿ ಚಿಂತನೆಗಳು, ದೇಸಿ ಪುಸ್ತಕ, ವಿಜಯನಗರ, ಬೆಂಗಳೂರು 2010.

16. ನಾಯರ್ ಕೆ.ಕೆ. ಆಯ್ದ ಮಲಯಾಳಂ ಸಣ್ಣ ಕಥೆಗಳು, ಸಾಹಿತ್ಯ ಅಕಾಡೆಮಿ, ದೆಹಲಿ, 1989.

17. ಪರಮೇಶ್ವರ ನಾಯರ್, ಕೈಯಾರ ಕಿಞ್ಞಣ್ಣರೈ (ಅನು), ಮಲಯಾಳ ಸಾಹಿತ್ಯ ಚರಿತ್ರೆ, ಕೇಂದ್ರ ಸಾಹಿತ್ಯ ಅಕಾಡೆಮಿ, 1976.

18. ಪಾರ್ವತಿ ಜಿ. ಐತಾಳ್ (ಅನು), ಶ್ರೀದೇವಿ ಕೆ. ನಾಯರ್, ಮಲಯಾಳದ ಹತ್ತು ಕತೆಗಾರ್ತಿಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು 2004.

19. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ, 2002.

20. ಪುಟ್ಟಪ್ಪ ಕೆ.ವಿ. (ಪ್ರ.ಸಂ.) ಸುಂದರಂ ಆರ್.ವಿ.ಎಸ್., ತೆಲುಗು ಭಾಷೆ ಮತ್ತು ಸಾಹಿತ್ಯ, ಮೈಸೂರು ವಿಶ್ವವಿದ್ಯಾಲಯ, 1982.

21. ಮರುಳಯ್ಯ ಸಾ.ಶಿ., ಭಾರತೀಯ ಜ್ಞಾನಪೀಠ ಪುರಸ್ಕೃತರು, 1965–2002, ಸಪ್ನ ಬುಕ್ ಹೌಸ್, ಬೆಂಗಳೂರು 2006.

22. ಮೀರಾ ಎಲ್.ಜಿ., ಪೋಸ್ಟ್ ಡಾಕ್ಟರಲ್ ಪ್ರಬಂಧ, ದಕ್ಷಿಣ ಭಾರತೀಯ ಭಾಷೆಗಳಲ್ಲಿನ ಆಧುನಿಕ ಲೇಖಕಿಯರ ತೌಲನಿಕ ಸ್ತ್ರೀವಾದಿ ಅಧ್ಯಯನ (ಅಪ್ರಕಟಿತ ಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ–2007.

23. ಮೋಹನ್ ಕುಂಟಾರ್, ಕೇರಳ ಕಥನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

24. ಮೋಹನ್ ಕುಂಟಾರ್, ಕನ್ನಡ ಮಲಯಾಳಂ ಭಾಷಾಂತರ ಪ್ರಕ್ರಿಯೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.

25. ಮಂಗಳಾ ಪ್ರಿಯದರ್ಶಿನಿ ಡಿ., ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

26. ಬರಗೂರು ರಾಮಚಂದ್ರಪ್ಪ, (ಸಂ) ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, 1993.

27. ಬರಗೂರು ರಾಮಚಂದ್ರಪ್ಪ, (ಸಂ) ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, 1993.

28. ರಂಗಸ್ವಾಮಿ ಎಂ., ಕಂದಮಿಳ ನಾರಿನೋಟ, ವಿಷ್ಣುಪ್ರಿಯ ಪ್ರಕಾಶನ, 2012.

29. ವಿಶೇಷ ಲೇಖಕಿ, 5ನೆಯ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದ ನೆನಪಿನ ಸಂಚಿಕೆ, ಕರ್ನಾಟಕ ಲೇಖಕಿಯರ ಸಂಘ (ರಿ.), ಬೆಂಗಳೂರು 2003

30. ವೀಣಾಶಾಂತೇಶ್ವರ, ಕನ್ನಡ ಕಾದಂಬರಿ ಕಳೆದ ಕಾಲು ಶತಮಾನದಲ್ಲಿ, ಕನ್ನಡ ಸಾಹಿತ್ಯ ರಂಗ, ಯುಎಸ್ಎ, 2009.

31. ವೀಣಾಶಾಂತೇಶ್ವರ, ಇಲ್ಲಿಂದ ಮುಂದೆಲ್ಲಿಗೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009.

32. ಶಾಂತ ಇಮ್ರಾಪುರ (ಸಂ), ನಿರ್ದಿಗಂತ (ಸಂ–1) ಸುಂದರಂ ಪ್ರಕಾಶನ, ಧಾರವಾಡ, 2009.

33. ಶ್ರೀಮತಿ ಎಚ್.ಎಸ್., ಸ್ತ್ರೀವಾದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2003.

34. ಶ್ರೀಮತಿ ಎಚ್.ಎಸ್., ಹೆಣ್ಣು–ಹೆಂಗಸು, ಬ್ಯಾಲದಕೆರೆ ಪ್ರಕಾಶನ, 2004.

35. ಶ್ರೀಮತಿ ಎಚ್.ಎಸ್., ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

36. ಸಬೀಹಾ ಭೂಮಿಗೌಡ, ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, 2006.

37. ಸಬೀಹಾ ಭೂಮಿಗೌಡ, ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು, ಚಿಂತನ ಪುಸ್ತಕ, ಬೆಂಗಳೂರು 2012.

38. ಸುಜ್ಞಾನಮೂರ್ತಿ, ನಮಗೆ ಗೋಡೆಗಳಿಲ್ಲ–ಸ್ತ್ರೀವಾದ ಪರಿಚಯ, ಲಡಾಯಿ ಪ್ರಕಾಶನ, 2009.

39. ಹಾಲತಿ ಸೋಮಶೇಖರ್, ಮಹಿಳಾ ಚಳವಳಿ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, 2007.

ಇ. ನಿಯತಕಾಲಿಕೆಗಳು

40. ತುಷಾರ 2011 (ಕೇರಳ ವಿಶೇಷ ಮಾಲಿಕೆ)

41. ಶೂದ್ರ ಶ್ರೀನಿವಾಸ್, ಶೂದ್ರ, ಸೆಪ್ಟೆಂಬರ್–ಡಿಸೆಂಬರ್ (ತ್ರೈ), 2010.

ಈ. ಅಪ್ರಕಟಿತ ಲೇಖನ

ಪಾರ್ವತಿ ಜಿ. ಐತಾಳ್, ಕೇರಳದಲ್ಲಿ ಸ್ತ್ರೀಪರ ಹೋರಾಟ ನಡೆದುಬಂದ ದಾರಿ.

English Books :

a. Susie Tharu & K. Lalitha, Women Writing in India, 600 BC-Present, Volum-2, Oxford University, 6th Impression, 1993.

b. Singh K.S. (G.E.), People of India Kerala Part-2, Volume-XXVII, Affiliated East – West Press Pvt. Ltd., New Delhi, 2002.

c. The Peoples of India, The Malayali, Volume-21, Cosmo Publication, New Delhi, 2003.

ಉ. ಜಾಲತಾಣಗಳು :

1. wikipedia.org
2. poemhunter.com
3. www.rjelal.com
4. www.the_criterion.com
5. www.enotes.com
6. lincolon.ac.uk
7. blogspot.com
8. www.ijhssi.org
9. questia.com
10. vijayakarnataka.indiatimes.com
11. beta.sampada.net.

ಅನುಬಂಧ-2

ಸಂದರ್ಶನ

"ಮಲಯಾಳಂ ಮಹಿಳಾ ಬರವಣಿಗೆಯ ಕುರಿತಂತೆ ಕನ್ನಡ ಮತ್ತು ಮಲಯಾಳಂ ಅನುವಾದಕರಾದ ಪಾರ್ವತಿ ಜಿ. ಐತಾಳ್‌ರವರ ಜೊತೆಗಿನ ಸಂದರ್ಶನ".

ಪ್ರಶ್ನೆ 1 : ಕನ್ನಡದಲ್ಲಿರುವಂತೆ ಮಲಯಾಳಂ ಮಹಿಳಾ ಸಾಹಿತ್ಯ ಚರಿತ್ರೆ ಇದೆಯಾ? ಹೆಸರಿಸಿ.

ಮಲಯಾಳದಲ್ಲಿ 'ಮಹಿಳಾ ಸಾಹಿತ್ಯ ಚರಿತ್ರೆ' ಅಂತ ಇದುವರೆಗೆ ಬಂದಿಲ್ಲ. ಮಹಿಳಾ ಸಾಹಿತಿಗಳ ಕುರಿತು ಪುಸ್ತಕಗಳು ಬಂದಿವೆ ಅಷ್ಟೆ.

ಪ್ರಶ್ನೆ 2 : ನೀರ್‌ಮಾದಳ ಹೂ ಬಿಟ್ಟ ಕಾಲ ಕೃತಿಯ ಬಗೆಗಿನ ನಿಮ್ಮ ಅಭಿಪ್ರಾಯ.

ನೀರ್‌ಮಾದಳ ಹೂ ಬಿಟ್ಟ ಕಾಲ ಮಾಧವಿ ಕುಟ್ಟಿಯವರು ತಮ್ಮ ಹದಿಹರೆಯದ ಅನುಭವ ಆಲೋಚನೆಗಳನ್ನು ದಾಖಲಿಸಿರುವ ಆತ್ಮಚರಿತ್ರೆ ತುಂಬಾ ನವಿರಾಗಿ ಓದಿಸಿಕೊಂಡು ಹೋಗುತ್ತದೆ. ಅಲ್ಲಿ ಚಿತ್ರಿಸಿದ ಘಟನೆಗಳು ಲೇಖಕಿಯ ಕುತೂಹಲಭರಿತ ಕಣ್ಣುಗಳನ್ನೂ ಕೋಮಲ ಮನಸ್ಸನ್ನೂ ಬಡವರ ಮತ್ತು ಅಸಹಾಯಕರ ಬಗೆಗಿನ ಅವರ ಕರುಣಾ ಹೃದಯವನ್ನು ತೆರೆದಿಡುತ್ತವೆ. ಪ್ರೀತಿ-ಪ್ರೇಮಗಳ ಬಗ್ಗೆ ಯಾವುದೇ ಸ್ಪಷ್ಟ ಕಲ್ಪನೆಯಿಲ್ಲದ ಆ ಅವಧಿಯಲ್ಲಿ ಕಾಮವಾಸನೆಯ ಅರಿವಾಗುತ್ತಲೇ ಮಾರುದೂರ ಓಡಿಹೋಗುವ ಮನಸ್ಸು ಅವರದಾಗಿತ್ತು. ಒಟ್ಟಿನಲ್ಲಿ ತುಂಬಾ ಖುಷಿಯಿಂದ ಓದಿಸಿಕೊಂಡು ಹೋಗುವ ಕೃತಿ. ನನ್ನ ಅನುವಾದದ ಮುನ್ನುಡಿಯಲ್ಲಿ ಈ ಬಗ್ಗೆ ವಿವರವಾಗಿ ಬರೆದಿದ್ದೇನೆ. ನೀರ್‌ಮಾದಳ ಮರವು ವರ್ಷಕ್ಕೊಂದು ಬಾರಿ ಮಾತ್ರ ಒಂದು ವಾರ ಕಾಲ ಸುವಾಸನಾಭರಿತ ಹೂವು ನೀಡುತ್ತದೆ. ಬದುಕಿನಲ್ಲಿ ಯೌವ್ವನದ ಕಾಲದ ಹಾಗೆ.

ಪ್ರಶ್ನೆ 3 : ಮಾತೃಮೂಲ ಸಂಸ್ಕೃತಿಯ ಬಗ್ಗೆ ತಿಳಿಸಿ.

ಮಾತೃಮೂಲ ಸಂಸ್ಕೃತಿ ಕೇರಳಕ್ಕೆ ವಿಶಿಷ್ಟವಾದುದೇನೂ ಅಲ್ಲ. ನಮ್ಮ ದೇಶ ಮಾತ್ರವಲ್ಲ, ಪ್ರಪಂಚದಾದ್ಯಂತ ಇದೆಯಲ್ಲ? ತಾಯಿಗೂ ಹೆಣ್ಣುಮಕ್ಕಳಿಗೂ ಇಲ್ಲಿ ಪ್ರಾಧಾನ್ಯ ತಾಯಿಯ ಆಸ್ತಿಯ ಮೇಲೆ ಹೆಣ್ಣು ಮಕ್ಕಳಿಗೆ ಪೂರ್ತಿ ಹಕ್ಕು. ಗಂಡು ಮಕ್ಕಳಿಗಿಲ್ಲ. ಹೆಣ್ಣು ಮಕ್ಕಳು ಮದುವೆಯಾದ ನಂತರ ಗಂಡನ ಮನೆಗೆ ಹೋಗದೆ

ತಾಯಿ ಮನೆಯಲ್ಲೇ ಇರುತ್ತಾರೆ. ಗಂಡುಮಕ್ಕಳು ಹೆಂಡತಿಯ ತೌರುಮನೆಯಲ್ಲಿ ಇರುತ್ತಾರೆ.

ಪ್ರಶ್ನೆ 4 : ನಾಯರ್ ಜನಾಂಗದ ಮಹಿಳೆಯರ ಬಗೆಗಿನ ಮಾಹಿತಿಯನ್ನು ನೀಡಿ.

ನಾಯರ್ ಜನಾಂಗದಲ್ಲಿ ಹಿಂದೆ ಮಾತೃಮೂಲ ಸಂಸ್ಕೃತಿ ಇತ್ತು. ಗಂಡು ಮಕ್ಕಳಲ್ಲಿ ಹಿರಿಯವನು ಮಾತ್ರ ತನ್ನ ಸಹೋದರಿಯರು ಮತ್ತು ಅವರ ಮಕ್ಕಳೊಂದಿಗೆ ಮೂಲಮನೆ (ತರವಾಡು)ಯಲ್ಲಿ ವಾಸಿಸುತ್ತಾರೆ (ಆ ಹಿರಿಯನನ್ನು ಕಾರಣವರ್ ಅನ್ನುತ್ತಾರೆ) ನಾಯರ್ ಸಮುದಾಯದಲ್ಲಿ ಶಾಸ್ತ್ರೋಕ್ತ ಸಂಪ್ರದಾಯದ ಮದುವೆಗಳಿರುತ್ತಿರಲಿಲ್ಲ. ಸಂಬಂಧಂ ಅನ್ನುವ, ಯಾವುದೇ ಭದ್ರತೆಯಿಲ್ಲದ, ಕೂಡಿಕೆ ಮಾತ್ರ ಇರುತ್ತಿತ್ತು. ಹೆಣ್ಣುಮಕ್ಕಳು ಕೂಡಿಕೆಯ ನಂತರ ತರವಾಡು ಮನೆಯಲ್ಲೇ ಇರುತ್ತಿದ್ದರು. ಅವರವರ ಗಂಡ ಅವರವರ ಸಂಸಾರದ ಖರ್ಚಿಗೆ ಬೇಕಾದ್ದನ್ನು ತಂದು ಕೊಡಬೇಕಿತ್ತು. ಗಂಡಂದಿರು ದಿನದಲ್ಲಿ ದುಡಿದು ಸಂಧ್ಯಾಕಾಲದಲ್ಲಷ್ಟೇ ಬಂದು ರಾತ್ರಿ ತಮ್ಮ ಹೆಂಡತಿಯರನ್ನು ಕೂಡ ಬೆಳಗ್ಗೆ ಎದ್ದು ತಮ್ಮ ಮನೆಗೆ ಹೋಗಬೇಕಿತ್ತು. ಹೆಂಗಸರು ತಮ್ಮ ಗಂಡಂದಿರನ್ನು ಇಷ್ಟವಾಗದಿದ್ದರೆ ನಿರಾಕರಿಸಿ ಬೇರೆ ಗಂಡಸರನ್ನು ಕೂಡಬಹುದಾಗಿತ್ತು. ಒಟ್ಟಿನಲ್ಲಿ ಅದು ಒಂದು ರೀತಿಯ ಸ್ವೇಚ್ಛಾಚಾರದ ಬದುಕಾಗಿತ್ತು. ಆದರೆ ಹೆಣ್ಣುಮಕ್ಕಳ ಈ ಆಯ್ಕೆಯ ಸ್ವಾತಂತ್ರ್ಯವನ್ನು ಕಾರಣವರ್ ತನ್ನ ಸ್ವಾರ್ಥಕ್ಕಾಗಿ ಬಳಸಿ ಸೋದರಿಯರನ್ನು ಕ್ರೂರವಾಗಿ ಶೋಷಣೆಗೆ ಗುರಿಮಾಡುವುದೂ ಎಗ್ಗಿಲ್ಲದೆ ನಡೆಯುತ್ತಿತ್ತು. ಆದರೆ ನಂತರ ಬ್ರಿಟಿಷ್ ಕಾಲದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ Malabar Marriage Act ಬಂದ ನಂತರ ಈ ಪದ್ಧತಿ ನಿಂತುಹೋಯಿತು.

ಪ್ರಶ್ನೆ 5 : ಮಾಧವಿಕುಟ್ಟಿ ಬರವಣಿಗೆಯ ಬಗೆಗಿನ ಅಭಿಪ್ರಾಯ – ಅವರು ಇತರ ಲೇಖಕರಿಗಿಂತ ಹೇಗೆ ಭಿನ್ನ?

ಮಾಧವಿಕುಟ್ಟಿ ಬಹಳ ದಿಟ್ಟ ಲೇಖಕಿ. ಮುಖ್ಯವಾಗಿ ಪ್ರೀತಿ–ಪ್ರೇಮ, ವಿವಾಹ, ಗಂಡು ಹೆಣ್ಣುಗಳ ನಡುವಣ ಸಂಬಂಧಗಳ ಬಗ್ಗೆ ಇತರ ಲೇಖಕಿಯರು ಬರೆಯಲು ಹಿಂಜರಿಯುವಂಥ ವಿಚಾರಗಳನ್ನು ನೇರವಾಗಿ ಬರೆಯುತ್ತಾರೆ. ಸಾಮಾಜಿಕ ನೀತಿ–ನಿಯಮಗಳ ಕೃತಕತೆಯನ್ನು ಬಯಲಿಗೆಳೆಯುತ್ತಾರೆ. ಅವರ ಕಥೆಗಳು ನಿಜ ಪ್ರೀತಿಯ ಹುಡುಕಾಟವೇನೋ ಎಂಬಂತೆ ಭಾಸವಾಗುತ್ತವೆ.

ಪ್ರಶ್ನೆ 6 : ಮಲಯಾಳಂ ಮಹಿಳಾ ಬರವಣಿಗೆಗೆ ಪುರುಷ ಲೋಕದ ಪ್ರತಿಕ್ರಿಯೆ.

ಸ್ತ್ರೀವಾದಿ ಲೇಖಕಿಯರ ಕ್ರಾಂತಿಕಾರ ಬರವಣಿಗೆಗೆ ಪುರುಷರಿಂದ ಮಿಶ್ರ ಪ್ರತಿಕ್ರಿಯೆ ಇದೆ. ಇದು ಎಲ್ಲೆಡೆ ಇರುವ ಹಾಗೆಯೇ ಕೇರಳದಲ್ಲೂ ಇದೆ. ಪ್ರಜ್ಞಾವಚಿತ ಪುರುಷರು ಸ್ತ್ರೀವಾದವನ್ನು ಬೆಂಬಲಿಸುತ್ತಾರೆ. ಸ್ತ್ರೀಯರ ಬರವಣಿಗೆಯ ಗುಣಮಟ್ಟ ತೀರಾ ಸಾಮಾನ್ಯವಾಗಿದ್ದರೆ ಅದನ್ನು 'ಪೆಣ್ಣೆಳುತ್ತ್' (ಅಡುಗೆ ಮನೆ ಸಾಹಿತ್ಯ) ಎಂದು ಗೇಲಿ ಮಾಡುತ್ತಾರೆ. ಸ್ತ್ರೀವಾದದ ಅತಿರೇಕಗಳಿಂದಾಗಿ ಸ್ತ್ರೀವಾದವನ್ನೇ ಅನುಮಾನದಿಂದ ನೋಡುವವರೂ ಇದ್ದಾರೆ. ಕಮಲಾದಾಸ್‌ರ 'ಮೈ ಸ್ಟೋರಿ' ಓದಿ ರೊಚ್ಚಿಗೆದ್ದು ಅವರನ್ನು 'ಬಿಚ್' ಅಂತ ಕರೆದ ಒಂದು ಉದಾಹರಣೆ ಇದೆ.

ಪ್ರಶ್ನೆ 7 : ಇತ್ತೀಚೆಗೆ ಮಲಯಾಳಂ ಭಾಷೆಯಲ್ಲಿ ಬರೆಯುತ್ತಿರುವ ಲೇಖಕಿಯರ ಬಗ್ಗೆ ತಿಳಿಸಿ.

ನಾನು ಅನುವಾದಿಸಿದ 'ಮಲಯಾಳದ 10 ಕಥೆಗಾರ್ತಿಯರು' ಕೃತಿಯಲ್ಲಿ ಬಂದಿರುವ ಸಿತಾರಾ, ಪ್ರಿಯಾ ಎಂ.ಎಸ್. ಯುವ ಕಥೆಗಾರ್ತಿಯರು. ಶೀಬಾ ಇ.ಕೆ., ಶಾಹಿನಾ ಇ.ಕೆ. ಸಹೋದರಿಯರು ಇತ್ತೀಚೆಗೆ ಕಾಣಿಸಿಕೊಂಡ ಪ್ರತಿಭಾನ್ವಿತ ಕಥೆಗಾರ್ತಿಯರು. ಹಳೆಯ ತಲೆಮಾರಿನ ಮಾನಸಿ ಬಹಳ ಸಶಕ್ತ ಸ್ತ್ರೀವಾದಿ ಲೇಖಕಿ. ಕೆ.ಆರ್. ಮೀರಾ ಅವರ 'ಆರಾಚ್ಚಾರ್' (ಕೊಲೆಗಡುಕಿ) ಅನ್ನುವ ಬೃಹತ್ ಕಾದಂಬರಿ ದೇಶದಾದ್ಯಂತ ಸುದ್ಧಿಯಾಗಿದೆ. ಪುರುಷರಿಗೆ ಮೀಸಲಾಗಿದ್ದ ಆ ಕ್ಷೇತ್ರಕ್ಕೆ ಕಾಲಿರಿಸಿದ ಓರ್ವ ಹೆಣ್ಣಿನ ಅನುಭವದ ಸುತ್ತ ಹೆಣೆದ ಕಾದಂಬರಿಯದು. ಅನೇಕ ಮಹಿಳಾ ಕಥೆ-ಕಾದಂಬರಿಗಳು ಮಲಯಾಳದಿಂದ ಕನ್ನಡಕ್ಕೆ ಅನುವಾದವಾಗಿ ಬಂದಿವೆ.

ಪ್ರಶ್ನೆ 8 : ನೀವು ಕಂಡಂತೆ ಕಮಲಾದಾಸ್.

ಕಮಲಾದಾಸ್ ಅವರು ಪುಣೆಯಲ್ಲಿ ವಾಸಿಸಲು ಹೋಗುವ ಮೊದಲು ಕೊಚ್ಚಿಯಲ್ಲಿದ್ದಾಗ ನಾನು ಮತ್ತು ಲೇಖಕಿ ಎಲ್.ಸಿ. ಸುಮಿತ್ರಾ ಅವರನ್ನು ನೋಡಲು ಹೋಗಿದ್ದೆವು. ಡಿಸೆಂಬರ್ 2007ರಲ್ಲಿ. ಅವರು ಆ ದಿನ ಅಸೌಖ್ಯತೆಯಿಂದ ಹಾಸಿಗೆಯಲ್ಲಿದ್ದರು. ಆದರೂ ತುಂಬು ಪ್ರೀತಿಯಿಂದ ಮಾತನಾಡಿಸಿದರು. ಬೆಂಗಳೂರಿಗೆ ಬಂದಿದ್ದಾಗ ಕನ್ನಡ ಸಮಾರಂಭಗಳಲ್ಲಿ ಭಾಗವಹಿಸಿದ ಬಗ್ಗೆ ಹೇಳಿದರು. ಮಲಯಾಳಿಗಳಂತೆ ಕನ್ನಡದ ಪ್ರಸಿದ್ಧ ಲೇಖಕರು ಸರಳರಲ್ಲ, ಬಹಳ ಫ್ಯಾಷನ್ ಪ್ರಿಯರು ಅಂದರು. ಕಮಲಾದಾಸ್ ಜತೆಗೆ ನಾವು ಫೋಟೋ ತೆಗೆಸಿ ಕೊಳ್ಳಬೇಕು ಅಂದುಕೊಂಡಿದ್ದೆವು. ಅವರ ಅಸೌಖ್ಯತೆಯಿಂದಾಗಿ ಅದು

ಸಾಧ್ಯವಾಗಲಿಲ್ಲ. ತಮ್ಮ 'ನೀರ್‌ಮಾದಳಂ ಪೂತ್ರಕಾಲಂ' ಕೃತಿಯನ್ನು 'ಅನುವಾದಿಸಲು ನೀನೇ ಸೂಕ್ತ ವ್ಯಕ್ತಿ' ಎಂದು ಆಶೀರ್ವದಿಸಿ ತಮ್ಮ ಒಪ್ಪಿಗೆ ಪತ್ರವನ್ನು ಮಲಗಿದ್ದಲ್ಲಿಂದಲೇ ಬರೆದುಕೊಟ್ಟದ್ದು ನನ್ನ ಅವಿಸ್ಮರಣೀಯ ಅನುಭವ.

***


ಅನುಬಂಧ-3

ಲೇಖಕಿಯರ ಭಾವಚಿತ್ರಗಳು

ವೀಣಾಶಾಂತೇಶ್ವರ














24/04/2013 00:21

ಕಮಲಾದಾಸ್

